ಮೈಸೂರು ಮಕ್ಕಳು

ಆಳಿದ ಮಹಾಸ್ವಾಮಿ ಶ್ರೀ ಚಾಮರಾಜ ಒಡೆಯರ್ ಬಹದ್ದೂರವರು.

ಆಳಿದ ಮಹಾಸ್ವಾಮಿ ಶ್ರೀಮನ್ ಮಹಾರಾಜ ಶ್ರೀ ಚಾಮರಾಜ ಒಡೆಯರವರು.

ಮಗೂ, ಇದುವರೆಗೆ ನಾನು ನಿನಗೆ ಕೆಲವರು ಮೈಸೂರು ಮಕ್ಕಳ ಪರಿಚಯವನ್ನು ಮಾಡಿಕೊಟ್ಟಿರುವೆನು. ಇನ್ನೂ ಎಂತಹ ಮಹನೀಯರನ್ನು ಈ ನಮ್ಮ ತಾಯ್ನಾಡು ಪಡೆದಿದ್ದಳೆಂದು ನಿನಗೆ ತೋರಿಸಲು ಗತಿಸಿರುವ ಕೆಲವರು ಮೈಸೂರು ಮಕ್ಕಳ ವಿಷಯವಾಗಿ ಬರೆಯಬೇಕೆಂದಿದ್ದೇನೆ. ಈ ಸಲ, ಸುಪ್ರಸಿದ್ಧರೂ, ಪ್ರಖ್ಯಾತರೂ ಆಗಿದ್ದ ಆಳಿದ ಮಹಾಸ್ವಾಮಿ ಚಾಮರಾಜ ಒಡೆಯರವರ ವಿಷಯವಾಗಿ ನಿನಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ.

ಮಗೂ ಆಳಿದ ಮಹಾಸ್ವಾಮಿಯವರು ಬಹು ಪ್ರಖ್ಯಾತವಾದ ವಂಶದಲ್ಲಿ ಹುಟ್ಟಿದರು. ಜೆಟ್ಟಿದಕೋಟೆಯ ವಂಶೀಕರು ಯಾವಾಗಲೂ ಮಹಾ ಗುಣವಂತರೆಂದೂ, ಶೂರರೆಂದೂ ಹೆಸರುಪಡೆದಿದ್ದರು. ಈ ವಂಶದಲ್ಲಿ ಈಗ್ಗೆ ಸುಮಾರು 65 ವರ್ಷಗಳ ಹಿಂದೆ ಶ್ರೀ ಚಾಮರಾಜ ಒಡೆಯರವರು ಹುಟ್ಟಿದರು. ಆಗ ಆಳುತ್ತಿದ್ದ ಶ್ರೀ ಮುಮ್ಮುಡಿ ಕೃಷ್ಣರಾಜ ಒಡೆಯರವರಿಗೆ ಸಂತಾನವಿರಲಿಲ್ಲ. ಅವರು ಚಾಮರಾಜ ಒಡೆಯರಿಗೆ ಸುಮಾರು ಐದೂವರೆ ವರ್ಷವು ತುಂಬಿದ ಮೇಲೆ ದತ್ತುವನ್ನಾಗಿ ಮಾಡಿಕೊಂಡರು. ಹಾಗೆ ರಾಜಮನೆತನವಲ್ಲದ ಯಾವುದೋ ಒಂದು ವಂಶದಲ್ಲಿ ಹುಟ್ಟಿದರೂ ಭಗವಂತನ ಕೃಪೆಯಿಂದ ಈ ಪ್ರಖ್ಯಾತ ಶಿಶುವು ರಾಜಶಿಶುವಾಯಿತು.

ಚಾಮರಾಜ ಒಡೆಯರವರ ದತ್ತು ಸ್ವೀಕಾರವಾದ ಕೆಲವು ತಿಂಗಳುಗಳಲ್ಲಿಯೇ ಶ್ರೀ ಮುಮ್ಮುಡಿ ಕೃಷ್ಣರಾಜರು ಸ್ವರ್ಗಸ್ಥರಾದರು. ಆದರೆ ಸಾರ್ವಭೌಮಸರಕಾರದವರು ಆರ್ಹೇಯವಾಗಿ ನಡೆದು ಬಂದ ಮೈಸೂರು ಸಿಂಹಾಸನವನ್ನು ಕಾಪಿಟ್ಟು ಚಾಮರಾಜ ಒಡೆಯರವರು ಹದಿನೆಂಟುವರ್ಷದವರಾದ ಕೂಡಲೇ ಸಂಸ್ಥಾನದ ರಾಜ್ಯಭಾರವನ್ನು ವಹಿಸಿಕೊಟ್ಟರು. ಈ ಕಾಲದಲ್ಲಿ ಚಾಮರಾಜಒಡೆಯರವರು ಪ್ರಖ್ಯಾತರಾದ ದೇಶೀಯ ಮತ್ತು ಪರಕೀಯ ಉಪಾಧ್ಯಾಯರುಗಳ ಕೈಲಿ ಶಿಕ್ಷಣವನ್ನು ಪಡೆದರು. ಕೇವಲ ಬಾಲಕರಾಗಿದ್ದಾಗಲೇ ಅವರು ಇಂಗ್ಲಿಷ್, ಕನ್ನಡ, ಹಿಂದೂಸ್ಥಾನಿ ಈ ಭಾಷೆಗಳಲ್ಲಿ ಸುಲಭವಾಗಿ ಓದುವುದಕ್ಕೂ ಬರೆಯುವುದಕ್ಕೂ ಕಲಿತಿದ್ದರು.

ಚಾಮರಾಜಒಡೆಯರವರಿಗೆ ಅವರ 16 ನೆಯ ವರ್ಷದಲ್ಲಿ ಸಕ್ಕ ಲಸ್ಯಸೂತ್ರರೂ ಸಕಲಗುಣಪರಿಪೂರ್ಣರೂ, ವಿದ್ಯಾವಿನಯಸಂಪನ್ನರೂ, ಸೌಂದರ್ಯ ಸಾಕೀಲ್ಯಗಳಿಂದ ಒಡಗೂಡಿದವರೂ ಆದ ಕೆಂಪುನಂಜಮ್ಮ ಣ್ಣಿಯವರನ್ನು ಕೊಟ್ಟು ವಿವಾಹವಾಯಿತು. ಆದಾದ ಒಂಬತ್ತು ವರ್ಷಗಳ ನಂತರ ಚಾಮರಾಜಒಡೆಯರವರು ಸಂಸ್ಥಾನದ ರಾಜ್ಯಭಾರವನ್ನು ಕೈಗೆ ಕೊಂಡರು.

ಚಾಮರಾಜಒಡೆಯರವರು ಭರತಖಂಡವನ್ನೆಲ್ಲಾ ಸಂಚರಿಸಿ ಅತಿ ಪ್ರಖ್ಯಾತವಾದ ಪುಣ್ಯಸ್ಥಳಗಳನ್ನೂ ಸರಾಂಬಸಿದ್ದರು. ದೇಶದೇಶದ ಸಂಸ್ಥಾನಿಗೂ ಮಹಾಸ್ವಾಮಿಯವರಲ್ಲಿ ಬಹಳ ಪ್ರೇಮವೂ ಅಭಿಮಾನವೂ ಇದ್ದಿತು. ಇವರು ಪ್ರಜೆಗಳಿಗೆ ಹೇಗೆ ರಾಜರಾಗಿ ಪ್ರಖ್ಯಾತಿಯನ್ನು ಹೊಂದಿದರೋ ಹಾಗೆಯೇ ರಾಜಕುಟುಂಬದಲ್ಲಿಯೂ ಎಲ್ಲರ ಪ್ರೇಮಪಾತ್ರರಾಗಿದ್ದರೆಂದು ತಿಳಿಯಬರುತ್ತದೆ. ಮೂವರು ಪುತ್ರಿಯರಿಂದಲೂ ಈರ್ವರು ಪುತ್ರರಿಂದಲೂ ಕೂಡಿದ್ದ ಈ ರಾಜಸಂಸಾರವು ಮಹಾಸ್ವಾಮಿಗಳಿಗೆ ಅತಿಶಯಸುಖದಾಯಕರಾಗಿರಬೇಕು. ಆದರೆ ತನ್ನ ಸಂಸಾರವು ಈ ಚಿಕ್ಕ ಸಂಸಾರವಲ್ಲವೆಂದೂ, ರಾಜ್ಯವೇ ತನ್ನ ಸಂಸಾರವೆಂದು ಮಹಾಸ್ವಾಮಿಯವರು ತಿಳಿದಿದ್ದರು.

ಪ್ರಜೆಗಳನ್ನು ತಮ್ಮ ಮಕ್ಕಳಿಗಿಂತಲೂ ಹೆಚ್ಚಾಗಿಲ್ಲದಿಂದ ಪರಿಪಾಲನಮಾಡಬೇಕೆಂದು ಸಂಕಲ್ಪಿಸಿ ಮಹಾರಾಜರು ರಾಜ್ಯದ ಆಡಳಿತಗಳಲ್ಲಿ ಅನೇಕ ಹೊಸ ವಿಧಾನುಗಳನ್ನು ಮಾಡಿದರು. ವಿದ್ಯಾಸಂಪತ್ತೇ ಅತಿ ಘನವಾದುದೆಂದು ದೇಶದಲ್ಲಿ ಪಾಠಶಾಲೆಗಳನ್ನು ವಿಶೇಷವಾಗಿ ಹೆಚ್ಚಿಸಿದರು. ಹೀಗೆ ಅತಿ ಪ್ರೇಮದಿಂದಲೂ ದಕ್ಷತೆಯಿಂದಲೂ ರಾಜ್ಯಭಾರವನ್ನು ನಿರ್ವಹಿಸುತ್ತಿದ್ದುದನ್ನು ಕಂಡು ಸಾರ್ವಭೌಮಸರಕಾರದವರು ಜಿ. ಸಿ. ಎಸ್. ಐ ಎಂಬುದೇ ಮೊದಲಾದ ಬಿರುದುಗಳಿಂದ ಮಹಾರಾಜರನ್ನು ಸತ್ಕರಿಸಿದರು.

ಹೀಗಿರಲು ನಮ್ಮೆಲ್ಲರ ದುರದೃಷ್ಟದಿಂದ ಮಹಾಸ್ವಾಮಿಯವರು ಕಲ್ಕತ್ತಾನಗರದಲ್ಲಿ 1898 ನೆಯ ಇಸವಿಯಲ್ಲಿ ಕ್ರೂರವಾದ ಗಂಟಲು ರೋಗದಿಂದ ಸ್ವರ್ಗಸ್ಥರಾದರು. ಆಗ್ಗೆ ಇವರಿಗೆ ಕೇವಲ ಮೂವತ್ತೇ ವರ್ಷ ವಯಸ್ಸಾಗಿತ್ತು. ಮಗೂ, ಅಷ್ಟು ಅಲ್ಪ ಆಯಸ್ಸು ಇದ್ದುದರಿಂದಲೇ ಏನೋ ಭಗವಂತನು ಸಾಧಾರಣರಿಗೆ ಶತಮಾನಗಳಲ್ಲಿಯೂ ಸಾಧ್ಯವಾಗದ ಕೆಲಸಗಳನ್ನು ಇವರ ಕೈಯಲ್ಲಿ ಮಾಡಿಸಿದನು. ಮಗೂ, ನೀನು ದೊಡ್ಡವನಾದ ಮೇಲೆ ಅವರ ಚರಿತ್ರೆಯನ್ನು ಓದಿ ತಿಳಿದುಕೊಳ್ಳಿ. ಆದರೆ ಅವರೆಂತಹ ದೈವಿಕಪುರುಷರೆಂದರೆ ಹೇಳುವುದಕ್ಕಾಗುವುದಿಲ್ಲ. ನೋಡು, ಮಗು, ಈಗ ನಮ್ಮ ದೇಶವಿದೆಯಲ್ಲ—ಈ ದೇಶವು ಇಷ್ಟು ಮುಂದುವರಿದು, ಎಲ್ಲರಿಗೂ ಆದರ್ಶಪ್ರಾಯವಾಗಿರುವಂತೆ ಮಾಡಿದವರೆಂದರೆ ಆಳಿದ ಮಹಾಸ್ವಾಮಿ ಚಾಮರಾಜ ಒಡೆಯರವರು. ಅವರು ನೆಟ್ಟ ಬೀಜವೇ ಕಲ್ಪವೃಕ್ಷವಾಗಿ ಬೆಳೆದು ಅಭಿವೃದ್ಧಿಯಾಗುತ್ತಿದೆ.

ನೀವು ಮೈಸೂರು ಮಕ್ಕಳು ಚಿತ್ರಮಾಲೆಯನ್ನು ತರಿಸಿಕೊಂಡಿಲ್ಲವೆ? ತಡಮಾಡಬೇಡಿ. ಕೂಡಲೇ ತರಿಸಿಕೊಳ್ಳಿ.

ನಮ್ಮ ನಾಯಕ

ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರವರು ಸ್ಕೌಟುಗಳಿಗೆ ದಯಪಾಲಿಸಿದ ಸಂದೇಶ.

ಭ್ರಾತೃಗಳೇ !

ಇಂದು ಮೈಸೂರು ಸಂಸ್ಥಾನದ ಸ್ಕೌಟು ಚಳುವಳಿಯ ಹತ್ತನೆಯ ವಾರ್ಷಿಕೋತ್ಸವ ಸಮಾರಂಭವಾಗಿರುತ್ತದೆ. ನಮ್ಮ ಸಂಸ್ಥಾನದಲ್ಲಿ ಈ ಚಳುವಳಿಯು ಇಷ್ಟು ಚಾಗ್ರತೆಯಾಗಿ ಅಭಿವೃದ್ಧಿಗೆ ಬಂದುದನ್ನು ನೋಡಿ ನನಗೆ ತುಂಬಾ ಸಂತೋಷವಾಗುತ್ತದೆ. ಈ ದಿನವೇ ಪ್ರಚಾರವಾಗುವ **ಮೈಸೂರು ಸ್ಕೌಟ್ ವಾರ್ಷಿಕ ವಹಿ**ಯಲ್ಲಿ ಪ್ರಕಟಿಸಿರುವ, ಈ ಸ್ಕೌಟು ಚಳುವಳಿಯ ಅಭಿವೃದ್ಧಿಯ ಚರಿತ್ರೆಯನ್ನು ನೀವೆಲ್ಲರೂ ಅತಿಶಯ ಆಸಕ್ತಿಯಿಂದಲೂ, ಅಭಿಮಾನದಿಂದಲೂ ಓದುವಿರೆಂದು ನಾನು ನಂಬುತ್ತೇನೆ. ಈ ಸುಸಮಯದಲ್ಲಿ ನಿಮ್ಮೆಲ್ಲರ ಉತ್ಸಾಹವನ್ನೂ, ದೃಢಮನಸ್ಸನ್ನೂ ಸಾಧ್ಯಮಾಡಿರುವ ಈ ಪ್ರತಿಫಲಕ್ಕೋಸ್ಕರವಾಗಿ ನಾನು ನಿಮ್ಮೆಲ್ಲರನ್ನೂ ಮನಃಪೂರ್ವಕವಾಗಿ ವಂದಿಸುತ್ತೇನೆ

ಈಗಾಗಲೇ ಹೊಂದಿರುವ ಪ್ರತಿಫಲಗಳಿಂದ ನೀವು ತೃಪ್ತರಾಗಬಾರದೆಂದು ನಾನು ಹಾರೈಸುತ್ತೇನೆ. ಸ್ಕೌಟುಗಳು ಯಾವಾಗಲೂ ನೆನಪಿರುವ—"ಉತ್ಕೃಷ್ಟವಾಗಿರುವುದು ಇನ್ನೂ ಬರುವುದಿದೆ"—ಎಂಬ ನಿಯಮವನ್ನು ಅನುಸರಿಸಿ, ನೀವು ಈಗಾಗಲೇ ಹೊಂದಿರುವ ಫಲಗಳಿಂದಲೇ ಉತ್ಸಾಹಿತರಾಗಿ, ಈ ಚಳುವಳಿಯ ಪ್ರಚಾರಕ್ಕಾಗಿಯೂ, ಘನತೆಗಾಗಿಯೂ ಇನ್ನೂ ಹೆಚ್ಚಿನ ಪ್ರಯತ್ನ ಪಡುವಿರೆಂದು ನಾನು ಆಶಿಸುತ್ತೇನೆ.

ಸಾಮ್ರಾಜ್ಯದ ದೇಶಗಳಲ್ಲಿ ಸ್ಕೌಟು ಚಳುವಳಿಯನ್ನೂ ಮತ್ತು ಅಂತಹ ಚಳುವಳಿಯನ್ನು ಸಾಧ್ಯವನ್ನಾಗಿ ಮಾಡುವ ಮತ್ತು ಉತ್ತಮೋತ್ತರನಾದ ಯೋಗ್ಯತೆಯ ಹೆಗ್ಗುರುತುಗಳಾದ ಪ್ರಮಾಣಾಕಾಂಕ್ಷೆ, ಸಹೃದಯತ್ವ ಮತ್ತು ಸುಶಿಕ್ಷಿತೆ ಎಂಬ ಈ ಗುಣಗಳನ್ನೂ ನೋಡಿ ನಾನು ಮನಗೊಂಡಿರುವೆನು. ಪಶ್ಚಿಮದೇಶಗಳಲ್ಲಿ ಈ ಚಳುವಳಿಯು ಹೇಗೆ ಫಲಪ್ರದವಾಗಿರುವುದೋ ಹಾಗೆಯೇ ನಮ್ಮ ದೇಶದಲ್ಲಿಯೂ ಫಲಪ್ರದವಾಗುವಂತೆ ಮಾಡಲು ನೀವೆಲ್ಲರೂ ಪ್ರಯತ್ನಿಸುವಿರೆಂದು ನಾನು ನಂಬಿರುತ್ತೇನೆ.

ನಮ್ಮದು, ಪ್ರೀತಿಶಕ್ತಿಯಿಂದಲೂ ಮತ್ತು ಗೌರವಯುಕ್ತವಾದ ಆದರದಿಂದಲೂ ಸಾಧಿಸಲ್ಪಟ್ಟ, ಪ್ರಪಂಚದ ಬೇರಾವ ಪರಿವಾರವೂ ಇಲ್ಲದಿರುವ ಭ್ರಾತೃತ್ವವಾಗಿದೆ. ನಮ್ಮ ಪರಮೋದ್ದೇಶವಾದ "**ಪರಸೇವೆ**" ಎಂಬುದೇ ನಮ್ಮ ಆತ್ಮಶಕ್ತಿಯ ಔದ್ಯೋಗಿಕ ಕವಚವು. ಬಾಲಕರ ಸೇವೆಯೆಂಬ ಉತ್ಕೃಷ್ಟಸಾಧನವನ್ನೂ ಮತ್ತು ಬಾಲಕರ ಧ್ಯೇಯವಾದ "**ಪರಸೇವೆ**" ಎಂಬುದನ್ನೂ ನಾವು ಅಗತ್ಯಾಭಿಸಬೇಕು. ನಮ್ಮ ಭ್ರಾತೃತ್ವದ ಧ್ಯೇಯವನ್ನು ಸಾಧಿಸುವುದಕ್ಕೂ ಮತ್ತು ಅದರ ಧರ್ಮವನ್ನು ಸಂಸ್ಥಾಪಿಸುವುದಕ್ಕೂ ಅವಶ್ಯವಾದ ನಮ್ಮವರಿಗೆ ಕಾರ್ಯಶಕ್ತಿಯನ್ನೂ ಮನೋಶಕ್ತಿಯನ್ನೂ ಕೊಡಲೆಂದು ನಾನು ಪ್ರಾರ್ಥಿಸುತ್ತೇನೆ.

(ಸಹಿ) **ಕೆ. ಎಸ್. ಆರ್. ಒಡೆಯರ್.**

ಕಥೆಗಳ ಕಟ್ಟು

೧೧. ದೇವದೂತ ಕಚ.

ದೇವತೆಗಳ ಗುರುವು ಯಾರು ? ಬೃಹಸ್ಪತಿಯು. ಬೃಹಸ್ಪತಿಗೆ ಕಚನೆಂಬ ಒಬ್ಬ ಮಗನಿದ್ದನು. ಬೃಹಸ್ಪತಿಯು ತಾನೇ ಮಗನಿಗೆ ಬಲ್ಲಾ ವಿದ್ಯೆಯನ್ನೂ ಹೇಳಿಕೊಟ್ಟನು. ಮುಖ್ಯವಾಗಿ ಕಚನಿಗೆ ತನ್ನ ಬ್ರಹ್ಮಚರ್ಯವನ್ನು ಕಾಪಾಡಿಕೊಂಡಿರಬೇಕೆಂದು ಹೇಳಿದ್ದನು. ಯಾಕೆಂದರೆ ಯಾವನು ಬ್ರಹ್ಮಚರ್ಯವನ್ನು ಕಾಪಾಡಿಕೊಂಡಿರುವನೋ ಅವನು ವಜ್ರದೇಹಿಯು.

ಹೀಗಿರುವಲ್ಲಿ ದೇವತೆಗಳಿಗೂ ರಾಕ್ಷಸರಿಗೂ ಯುದ್ಧವು ಸಾರಂ ಪಾಯಿತು. ರಾಕ್ಷಸರಿಗೆ ಯಾವ ತೊಂದರೆಯೂ ಯುದ್ಧದಲ್ಲಿ ಸಂಭವಿ ಸುತ್ತಿರಲಿಲ್ಲ. ಯಾಕೆಂದರೆ ರಾಕ್ಷಸರಲ್ಲಿ ಯಾರಾದರೂ ಸತ್ತರೆಂದರೆ ಕೂಡಲೇ ರಾಕ್ಷಸರ ಗುರುವಾದ ಶುಕ್ರಾಚಾರ್ಯನು ಅವರನ್ನು ಬದು ಕಿಸಿಬಿಡುತ್ತಿದ್ದನು. ಶುಕ್ರಾಚಾರ್ಯನಿಗೆ ಸತ್ತವರನ್ನು ಒದುಕಿಸುವ ಸಂಜೀವನೀ ವಿದ್ಯೆಯು ಬರುತ್ತಿದ್ದಿತು. ಅದುದರಿಂದ ದೇವತೆಗಳಿಗೆ ಬಹಳ ತೊಂದರೆಯಾಗುತ್ತಿತ್ತು. ಹೇಗಾದರೂ ಮಾಡಿ ಆ ಶುಕ್ರಾಚಾ ರ್ಯನಿಂದ ಸಂಜೀವನೀ ವಿದ್ಯೆಯನ್ನು ಕಲಿತುಕೊಂಡು ಬಂದರೆ ಸಾಕೆಂದು ದೇವತೆಗಳು ಯೋಚಿಸುತ್ತಿದ್ದರು. ಆದರೆ ಶುಕ್ರಾಚಾರ್ಯನು ಶತ್ರುಗಳಾದ ದೇವತೆಗಳಿಗೆ ಎಂದಿತವಾಗಿಯೂ ವಿದ್ಯೆಯನ್ನು ಹೇಳಿ ಕೊಡುವುದಿಲ್ಲವೆಂದು ಎಲ್ಲರಿಗೂ ಗೊತ್ತಿತ್ತು.

ಆಗ ಕಚನು 'ತಾನು ಹೋಗಿ ಕಲಿತುಕೊಂಡು ಒರುತ್ತೇನೆ' ಎಂದನು ಅದಕ್ಕೆ ಅನುಸಾರವಾಗಿ ರಾಕ್ಷಸರಂತೆ ವೇಷವನ್ನು ಹಾಕಿ ಕೊಂಡು ಶುಕ್ರಾಚಾರ್ಯರಲ್ಲಿಗೆ ಹೋಗಿ ವಿದ್ಯೆಯನ್ನು ಕಲಿಯಲು ಪ್ರಾರಂಭಿಸಿದನು. ಆಚಾರ್ಯರಿಗೆ ಇವನ ಬುದ್ಧಿಶಕ್ತಿಯನ್ನು ನೋಡಿ ಬಹಳ ಸಂತೋಷವಾಯಿತು. ಇವರು ಸಂಜೀವನೀ ವಿದ್ಯೆಯೊಂದನ್ನು ಹೊರತು ಬಾಕಿಯಿದನ್ನೆಲ್ಲಾ ಹೇಳಿಕೊಟ್ಟರು. ಹೀಗಿರುವಾಗ ಈ ಕಚ ನಲ್ಲಿ ಶುಕ್ರಾಚಾರ್ಯರ ಮಗಳಾದ ದೇವಯಾನಿ ಎಂಬ ಹುಡುಗಿಗೆ ಬಹಳ ಪ್ರೇಮವುಂಟಾಯಿತು. ಅವಳಿಗೆ ಇವನನ್ನು ಕಂಡರೆ ಪ್ರಾಣ. ಆದರೆ ಅಲ್ಲಿದ್ದ ರಾಕ್ಷಸರಿಗೆ ಇವನ ಮೇಲೆ ಹೊಟ್ಟೆಕಿಚ್ಚು ಹೆಚ್ಚಾಯಿತು. ಅವರು ಇವನನ್ನು ಕೊಲ್ಲಬೇಕೆಂದು ಹವಣಿಸುತ್ತಿದ್ದರು.

ಒಂದು ದಿನ ಕಚನು ಗುರುಗಳ ಪಶುಗಳನ್ನು ಮೇಯಿಸುವ ಸಲ್ಲ ಹೋಗಿರುವಾಗ ರಾಕ್ಷಸರಲ್ಲಿ ಕೆಲವರು ಇವನನ್ನು ಕೊಂದು ಕಾಡುಮೃಗಗಳಿಗೆ ಹಂಚಿದರು. ಸಾಯಂಕಾಲ ಇವನು ಬರದೇ ಇದ್ದು ದನ್ನು ನೋಡಿ ದೇವಯಾನಿಯು ತಂದೆಯನ್ನು ಕುರಿತು ಬಹಳವಾಗಿ ಗೋಳಾಡಲು ಪ್ರಾರಂಭಿಸಿದಳು. ಆಗ ಶುಕ್ರಾಚಾರ್ಯರು ಸಂಜೀವನೀ ವಿದ್ಯೆಯ ಸಹಾಯದಿಂದ ಇವನನ್ನು ಬದುಕಿಸಲು ಇವನು ಮೃಗಗಳ ಹೊಟ್ಟೆಯನ್ನು ಬಗೆದುಕೊಂಡು ಹೊರಗೆ ಬಂದನು. ಮತ್ತೊಂದು ದಿನವೂ ಹೀಗೆಯೇ ಆಯಿತು. ಕಚನು ದೇವಯಾನಿಗೋಸ್ಕರ ಹೂವು ಕೊಯ್ಯಲು ಹೋಗಿದ್ದನು. ಆಗ ರಾಕ್ಷಸರು ಕೆಲವರು ಇವನನ್ನು ಕೊಂದು ಸುಟ್ಟು ಬೂದಿಯನ್ನು ಮದ್ಯದಲ್ಲಿ ಕದಡಿ ಶುಕ್ರಾಚಾರ್ಯರಿಗೆ ಕುಡಿಯಲು ಕೊಟ್ಟರು. ಶುಕ್ರಾಚಾರ್ಯರು ಅದನ್ನು ಕುಡಿಯಲು ಕಚನು ಅವರ ಹೊಟ್ಟೆಯಲ್ಲಿ ಸೇರಿದನು. ಅಂದೂ ಸಾಯಂಕಾಲ ಕಚನು ಬರದಿರಲು ದೇವಯಾನಿಯು ಗೊಳಿಡಲು ಪ್ರಾರಂಭಿಸಿದಳು. ಶುಕ್ರಾಚಾ ರ್ಯರು ಸಮಾಚಾರವೆಲ್ಲವನ್ನೂ ತಿಳಿದುಕೊಂಡು. ಮೊದಲು ಹೊಟ್ಟೆಯ ಲ್ಲಿದ್ದ ಕಚನಿಗೆ ಸಂಜೀವನೀ ವಿದ್ಯೆಯನ್ನು ಉಪದೇಶಿಸಿ, ಆ ಮೇಲೆ ಅವ ನನ್ನು ಬದುಕಿಸಿದರು. ಅವನು ಇವರ ಹೊಟ್ಟೆಯನ್ನು ಒಗೆದುಕೊಂಡು ಹೊರಗೆ ಬಂದನು. ಆಗ ಶುಕ್ರಾಚಾರ್ಯರು ಸತ್ತುಹೋದರು. ಕಚನು ಸಂಜೀವನೀ ವಿದ್ಯೆಯ ಸಹಾಯದಿಂದ ಆಚಾರ್ಯರನ್ನು ಬದುಕಿಸಿದನು

ಇದಾದ ಕೆಲವು ದಿನಗಳ ಮೇಲೆ ಕಚನು ಊರಿಗೆ ಹೋಗು ತ್ತೇನೆಂದು ಹೇಳಿದನು. ಆಗ ದೇವಯಾನಿಯು ತನ್ನ ಮನಸ್ಸನ್ನು ಬಚ್ಚಿ, ಕಚನನ್ನು ತಾನು ಪ್ರೀತಿಸುತ್ತಿರುವುದಾಗಿ ಹೇಳಿದಳು. ಅವರ ಕಚನು ತಂದೆಯು 'ಬ್ರಹ್ಮಚರ್ಯವನ್ನು ಕಾಪಾಡಿಕೊಂಡು ಬಾ' ಎಂಬುದಾಗಿ ಹೇಳಿದ್ದನ್ನು ಜ್ಞಾಪಿಸಿಕೊಂಡು ದೇವಯಾನಿಯೊಡನೆ ಲಗ್ನಕ್ಕೆ ಒಪ್ಪಲಿಲ್ಲ. ಎಲ್ಲರೂ ಬಲವಂತಮಾಡಿದರು. ಆದರೆ ಕಚನಿಗೆ ತಾನು ಆಡಿದ ಮಾತೇ ಹೆಚ್ಚಾಗಿ ತೋರಿತೇ ವಿನಾ ಇವರ ಆಗತ್ಯವು ಅಷ್ಟು ಪ್ರಬಲನೆನಿಸಲಿಲ್ಲ. ಆದುದರಿಂದ ಅವನು ಖಂಡಿತವಾಗಿಯೂ ಲಗ್ನವನ್ನು ಮಾಡಿಕೊಳ್ಳುವುದಿಲ್ಲವೆಂದೂ ಗುರುಪುತ್ರಿಯಾದ ದೇವ ಯಾನಿಯು ತನಗೆ ಸೋದರಿಯೆಂದೂ ತಾನೂ ಸಹ ಶುಕ್ರಾಚಾರ್ಯರ ಹೊಟ್ಟೆಯಿಂದ ಪುನಃ ಬದುಕಿಬಂದವನಾದುದರಿಂದ ಅವರಿಗೆ ಮಗನಾದ ನೆಂದೂ ಹೇಳಿದನು. ಅದನ್ನು ಕೇಳಿ ದೇವಯಾನಿಯು ಸಿಟ್ಟಿನಿಂದ "ನೀನು ಮೋಸಗಾರ. ನೀನು ಕಲಿತ ಈ ಸಂಜೀವನೀ ವಿದ್ಯೆಯು ನಿನಗೆ ಏನೂ ವ್ಯಯೋಜನವಾಗದಿರಲಿ" ಎಂದು ಶಾಪಕೊಟ್ಟಳು.

ಕಚನು ಪುನಃ ದೇವಲೋಕಕ್ಕೆ ಬಂದನು. ದೇವತೆಗಳೆಲ್ಲಾ 'ಏನನ್ನಾ, ಸಂಜೀವನೀ ವಿದ್ಯೆಯನ್ನು ಕಲಿತುಕೊಂಡು ಒಂದೆಯಾ ಎಂದು ಕೇಳಿದರು. ಕಚನು ನಡೆದ ಸಂಗತಿಯನ್ನೆಲ್ಲಾ ಹೇಳಿದನು. ಆಗ ಬೃಹಸ್ಪತಿಯು "ವರವಾಗಿಲ್ಲ, ಮಗೂ ವಿದ್ಯೆಯಿಂದ ನಿನಗೆ ಶ್ರೇಯೋ ಜನವಾಗದಿದ್ದರೂ ಆಡಿದ ಮಾತಿಗೆ ತಪ್ಪದೆ ಎಂತಹ ಕಷ್ಟದಲ್ಲಿಯೂ ನೀನಾಡಿದ ಮಾತನ್ನು ಉಳಿಸಿಕೊಂಡೆಯಲ್ಲ, ಆದುದರಿಂದ ನೀನು ಕೇಳಿ ಕೊಟ್ಟವರಿಗೆ ಈ ವಿದ್ಯೆ ಫಲಿಸುತ್ತದೆ" ಎಂದನು.

ಅಜ್ಜನ ಕನ್ನಡಕ.

(ಒಂದು ಸಣ್ಣ ಕಥೆ)

ಬೆಂಗಳೂರಿನಲ್ಲಿ ವಿಶ್ವೇಶ್ವರಪುರವಿದೆಯಲ್ಲ—ಅಲ್ಲಿ ರಾಮಪ್ಪನವರು ಎಂಬ ಒಬ್ಬ ಮುದುಕರಿದ್ದರು. ಇವರು ಮುದುಕರಾಗಿದ್ದರೂ ಕಣ್ಣಿಗೆ ಹೆಚ್ಚು ಕೆಟ್ಟಿರಲಿಲ್ಲ. ಇವರು ದೂರ ನೋಡಬೇಕಾದರೆ ಮಾತ್ರ ಕನ್ನಡಕವನ್ನು ಹಾಕಿಕೊಳ್ಳುತ್ತಿದ್ದರು. ಇವರು ಓದುವಾಗ ಮಾತ್ರ ಹಾಕಿಕೊಂಡ ಕನ್ನಡಕವನ್ನು ಹಾಗೆಯೇ ಹಣೆಯ ಮೇಲಕ್ಕೆ ಸರಿಸಿಕೊಳ್ಳುತ್ತಿದ್ದರು. ಹೀಗೆ ಮೂಡುವುದು ಇವರಿಗೆ ವಾಡಿಕೆಯಾಗಿ ಬಂದುಬಿಟ್ಟಿತು ಒಂದು ದಿನ ಇವರು ಏನನ್ನೋ ಓದಬೇಕಾಗಿತ್ತು. ಆವಾಗ ಕನ್ನಡಕವನ್ನು ಹಣೆಯಮೇಲೆ ಇಟ್ಟುಕೊಂಡಿದ್ದರು. ಇವರಿಗೆ ಬಹಳ ಮರವು. ಅದನ್ನು ಹಾಗೆ ಇಟ್ಟುಕೊಂಡಿದ್ದನ್ನು ಮರೆತುಬಿಟ್ಟರು.

ಓದಿ ಆಯಿತು. ಕನ್ನಡಕಕ್ಕೆಂದು ಹತ್ತಿರವೆಲ್ಲಾ ಹುಡುಕಿದರು. ಅವರಿಗಲ್ಲೇನು ಸಿಗುತ್ತೆ? ದೇವರಮನೆಯಲ್ಲಿ ಹುಡುಕಿದರು, ಸಿಗಲಿಲ್ಲ. ಸ್ನಾನಮಾಡಿದ ಜಾಗದಲ್ಲಿ ಹುಡುಕಿದರು, ಸಿಗಲಿಲ್ಲ. ಮಂಚದಮೇಲೆ ಹುಡುಕಿದರು, ಅಲ್ಲಿಯೂ ಸಿಗಲಿಲ್ಲ. ಇವರಿಗೆ ನಾಲ್ಕು ಜನ ಮೊಮ್ಮಕ್ಕಳಿದ್ದರು. ಅವರ ಹೆಸರು ರಾಮು, ಕೃಷ್ಣಮೂರ್ತಿ, ನರಸಿಂಹ, ಶಂಕರ ಎಂದು. ರಾಮಪ್ಪನವರು ಏನುಮಾಡಿದರು ಅಂದರೆ, ನಾಕು (ನಾಲ್ಕು) ಜನರಲ್ಲಿ ಯಾರು ಅದನ್ನು ಹುಡುಕಿಕೊಡುವರೊ ಅವರಿಗೆ ಒಂದು ರೂಪಾಯಿಯನ್ನು ಕೊಡುತ್ತೀನೆಂದು ಹೇಳಿದರು. ಆವರಲ್ಲಿ ಚಿಕ್ಕವನಾದ ಶಂಕರನು ಹೊರತು ಇನ್ನೆಲ್ಲರೂ ಹುಡುಕಿದರು. ಆ ಮೂರು ಜನರೂ "ನಾನು ಹುಡುಕುತ್ತೀನೆ" "ನಾನು ಹುಡುಕುತ್ತೀನೆ" ಎಂದು ರಾಮಪ್ಪನವರ ಹಣೆಯನ್ನೇ ನೋಡದೆ ಬಿಡಿದರು. ಶಂಕರ ಅದನ್ನು ಕಂಡನು. ಅವರೆಲ್ಲರೂ ಹುಡುಕುವುದಕ್ಕೆ ಹೋದಮೇಲೆ ಇವನು "ನನಗೆ ಕನ್ನಡಕ ಸಿಕ್ಕಿತು!" ಎಂದನು. ಅದಕ್ಕೆ ರಾಮಪ್ಪನವರು "ಎಲ್ಲಿ ಕೊಡು" ಎಂದರು. ಅದಕ್ಕೆ ಶಂಕರನು "ರೂಪಾಯಿ ಕೊಡು, ನಾನು ಆಗ ಕನ್ನಡಕ ಕೊಡುತ್ತೀನೆ" ಎಂದನು. ಆಗ ಅವರು ರೂಪಾಯಿ ಕೊಟ್ಟರು. ಇವನು "ಅಗೋ ನೋಡು, ಅಜ್ಜ! ನಿನ್ನ ಹಣೆಯ ಮೇಲೆ ಇದೆ" ಎಂದನು. ಎಲ್ಲರೂ ಸಂತೋಷಪಟ್ಟರು.

ಎ. ಎಸ್. ನಾಗರಾಜ (೫ನೆಯ ಕ್ಲಾಸ್ ಮಯಸ್ಸು)
|| ಚರ್ಚೆದ ತರಗತಿ, ಶಿವಮೊಗ್ಗ.

[ಸೂಚನೆ:—ನಮ್ಮ ಚಾಚಕರಲ್ಲಿ ಬಾಲಕರು ಈ ರೀತಿ ಸ್ವಾರಸ್ಯವಾದ ಪುಟ್ಟ ಕಥೆಗಳನ್ನು ಬರೆದು ಕಳುಹಿಸಬೇಕೆಂದು ಬಸಂತಿ. ಕಥೆಯೊಡನೆ ನಿಮ್ಮ ಹೆಸರು, ತರಗತಿ, ವಯಸ್ಸು ಇವೆಲ್ಲವನ್ನೂ ಬರೆದು ಕಳುಹಿಸಬೇಕು. ಕಾಲಕ್ರಮೇಣ ಸೊಗಸಾದ ಕಥೆಯನ್ನು ಬರೆದವರಿಗೆ ಬಹುಮಾನವನ್ನು ಕೊಡುತ್ತೇವೆ. ಸಂಪಾದಕರು.]

ಆಟದ ಬೈಲು.

ಅಳಿಲಿನ ಆಟ.

ಗುಂಪಿನ ಬಾಲಕರೆಲ್ಲರನ್ನೂ ಐದೈದು ಬಾಲಕರ ಗುಂಪಿನಂತೆ ಚಿಕ್ಕ ಚಿಕ್ಕ ಗುಂಪುಗಳಾಗಿ ನಿಂಗಡಿಸಬೇಕು. ಆಟದಬೈಲಿನಲ್ಲಿ ಸುತ್ತಲೂ ಒಂದೊಂದು ಚಿಕ್ಕ ಗುಂಪು ನಿಂತುಕೊಳ್ಳಬೇಕು. ಬಳಿಕ ಆಟದ ಬೈಲಿನ ಮಧ್ಯದಲ್ಲಿ ಒಬ್ಬನು ನಿಂತುಕೊಳ್ಳಬೇಕು. ಈಗ ಈ ಚಿತ್ರದಲ್ಲಿ ನಕ್ಷತ್ರದ ಗುರುತುಗಳು ಚಿಕ್ಕ ಚಿಕ್ಕ ಗುಂಪಿನಲ್ಲಿರುವ ಬಾಲಕರನ್ನು ಸೂಚಿಸುತ್ತವೆ. ಆದುದರಿಂದ ಪ್ರತಿಯೊಂದು ಚಿಕ್ಕಗುಂಪಿನಲ್ಲಿಯೂ ನಾಲ್ಕು ಜನರು ನಾಲ್ಕು ಮೂಲೆಯಲ್ಲಿ ನಿಂತುಕೊಳ್ಳುವರು, ಒಬ್ಬನು ಮಧ್ಯದಲ್ಲಿ ನಿಂತುಕೊಳ್ಳುವನು. ಚಿತ್ರದಲ್ಲಿ ಇವನನ್ನು "ಅ" ಎಂದು ಗುರುತಿಸಿದೆ. ನಕ್ಷತ್ರದ ಗುರುತುಗಳಿರುವ ಸ್ಥಳದಲ್ಲಿ ನಿಂತುಕೊಳ್ಳುವರೆಲ್ಲಾ ಹಾಗೆಯೇ ನಿಂತುಕೊಂಡಿರಬೇಕೇ ಏನಾ ಜಲಿಸಬಾರದು. ನಮ್ಮ ಚಿತ್ರದಲ್ಲಿ ನಾಲ್ಕು ಚಿಕ್ಕ ಗುಂಪಿರುವ ಒಂದು ಬಾಲಕರ ಗುಂಪನ್ನು ಸೂಚಿಸಿದ್ದೇವೆ. ಈಗ ಅ-ಆ-ಇ-ಈ-ಐ, ಈ ಐವರೂ, ಶೀಟಿಯನ್ನು ಊದಿದಕೂಡಲೇ ತಮ್ಮ ಸ್ಥಳವನ್ನು ಬಿಟ್ಟು ಓಡಬೇಕು. ಹಾಗೆ ಓಡಿ ಬೇರೆ ಸ್ಥಾನದಲ್ಲಿ ಹೋಗಿ ನಿಂತುಕೊಳ್ಳಬೇಕು. ಅಂದರೆ, ಈ ಚಿಕ್ಕ ಚಿಕ್ಕ ಗುಂಪುಗಳೇ ಪಂಜರಗಳು. ಅ-ಆ-ಇ-ಈ ಎಂಬ ನಾಲ್ಕು ಅಳಿಲುಗಳು ಆ ಪಂಜರಗಳಲ್ಲಿವೆ. ಐ ಎಂಬ ಅಳಿಲಿಗೆ ಸ್ಥಳವಿಲ್ಲ. ಆದುದರಿಂದ ಶೀಟಿಯನ್ನು ಊದಿದೊಡನೆಯೇ ಎಲ್ಲಾ ಅಳಿಲುಗಳೂ ತಮ್ಮ ತಮ್ಮ ಜಾಗವನ್ನು ಬಿಟ್ಟು ಬೇರೆ ಸ್ಥಳವೆಲ್ಲಿ ಸಿಗುತ್ತೊ ಅಲ್ಲಿಗೆ ಹೋಗಬೇಕು. ಇರುವುದು ನಾಲ್ಕು ಪಂಜರಗಳು ಮಾತ್ರ, ಅಳಿಲುಗಳಾದರೋ ಐದು. ಆದುದರಿಂದ ಎಲ್ಲರಿಗಿಂತಲೂ ನಿಧಾನವಾಗಿರುವವನು ಹೊರಗೆ ಬೀಳುವನು. ಇವನು 'ಐ' ಸ್ಥಳದಲ್ಲಿ ನಿಲ್ಲಬೇಕು. ಪುನಃ ಮೊದಲಿನಂತೆಯೇ ಆಟವಾಗಬೇಕು.

[ಈ ಆಟವನ್ನು ಲಕ್ಷ್ಮೀಪುರಂ ಪ್ರೈಮರಿ ಪಾಠಶಾಲೆಯಲ್ಲಿ ಹಿರಿಯಣ್ಣರಾದ ಮ|| ಬಿ. ಎಸ್. ವೆಂಕಟರಾಮಯ್ಯನವರು ಮತ್ತು ಮ|| ರಾಜೀವರಸಿನವರು ತಮ್ಮ ಗುಂಪಿನಲ್ಲಿ ಮೊದಲು ಆಡಿಸಿರುವರು. ಹೀಗೆಯೇ ಸ್ವಾರಸ್ಯವಾದ ಕೆಲವು ಆಟಗಳನ್ನು ಇವರು ಬರೆದು ಕಳುಹಿಸುವುದಾಗಿ ಹೇಳಿರುತ್ತಾರೆ. ಸಂಪಾದಕರು.]

ಕಬ್ಬಗಳೊಡನೆ ನಮ್ಮದೊಂದು ಹರಟೆ.

ಸಂಕೇತ ಸಂಜ್ಞೆಗಳು.

ಸುಗೂ—ಹಿಂದೊಂದು ಸಲ ನೀನು ಕಲಯಬೇಕಾದ ಕೆಲವು ವಿಷಯಂಗಳನ್ನು ಹೇಳುವಾಗ ಸಂಕೇತ ಸಂಜ್ಞೆಗಳನ್ನು ತಿಳಿಸಿದ್ದೇನೆ. ಅದರ ಉಪಯೋಗವೇನೆಂದು ನೀನು ಕೇಳಿದ್ದಿ, ಈಗ ಈ ಹರಟೆಯನ್ನು ಅದಕ್ಕಾಗಿ ಒರೆಯುತ್ತೀನೆ.

"ಒಂಟೆಯೂ, ದುರ್ಭೀಕ್ಷನು" ಎಂಬ ಅರಬ್ಬೀ ಕಥೆಯನ್ನು ನಿಮ್ಮ ಪಿರಿಯಣ್ಣನು ನಿನಗೆ ಹೇಳಿರಬೇಕು. ಇಲ್ಲದಿದ್ದರೆ, ಕೇಳು ಹೇಳುತ್ತಾನೆ. ಒಂದು ಒಂಟೆಯು ತಪ್ಪಿಸಿಕೊಂಡು ಹೋಗಿರುತ್ತದೆ. ಅದನ್ನು ನೋಡದೆಯೇ ಇದ್ದ ಒಬ್ಬ ಸನ್ಯಾಸಿಯು ಅದರ ಚಹರೆಯನ್ನು ಹೇಳಿದ್ದನ್ನು ಕೇಳಿ ಒಂಟೆಯವರು ಅವನೇ ಕಳ್ಳನೆಂದು ಅವನನ್ನು ಖಾಜಿಯ ಬಳಿ ಕರೆದುಕೊಂಡುಹೋದರು. ಆಗ ಅವನು ಒಂಟೆಯು ಓಡಿಹೋದಾಗ ಒಬ್ಬ ಗುರ್ತುಗಳಿಂದ ತಿಳಿದನೆಂದು ಹೇಳಿ ಅವುಗಳನ್ನು ವಿವರಿಸಿದನು. ಇದೆಲ್ಲವೂ ಅವನು ತನ್ನ ಕಣ್ಣನ್ನು ತೆರೆದುನೋಡಿ ಬುದ್ಧಿಯಿಂದ ವಿಚಾರಮಾಡಲಾಗಿ ತಿಳಿದುಬಂದಿತಲ್ಲವೆ?

ಇದೇ ರೀತಿಯಲ್ಲಿ ಕಬ್ಬಗಳೂ ಸಹ ತಮ್ಮ ಕಣ್ಣುಮುಂದಿರುವುದನ್ನೆಲ್ಲಾ ಸರಿಯಾಗಿ ನೋಡಿ ವಿಚಾರಮಾಡಬೇಕು. ಅನೇಕರು ಕಣ್ಣುಗಳನ್ನು ತೆರದು ನೋಡುತ್ತಿದ್ದರೂ ಕುರುಡರಂತೆ ತಮ್ಮ ಕಣ್ಣಿಗೆ ಅದು ಬೀಳಲೇ ಇಲ್ಲವೆನ್ನುತ್ತಾರೆ. ಕಬ್ಬಗಳು ಅಂತಹವರಲ್ಲ.

ರಾಬಿನ್‌ಸನ್ ಕ್ರೂಸೋವಿನ ಕಥೆಯನ್ನು ಪಿರಿಯಣ್ಣನಿಂದ ಕೇಳಿ ತಿಳಿದುಕೊ. ಅದರಲ್ಲಿ ಹೊಸತ್ತೇ ವಾಸವಾಗಿಲ್ಲದ ದ್ವೀಪದಲ್ಲಿ ತಾನೊಬ್ಬನೇ ಇದ್ದ ಕ್ರೂಸೋವು ತನ್ನ ಹೆಜ್ಜೆಯ ಗುರ್ತಿಗೆ ವ್ಯತ್ಯಾಸವಾಗಿದ್ದ ಒಂದು ಹೆಜ್ಜೆಯ ಗುರ್ತನ್ನು ಕಂಡನು. ಅದನ್ನು ಚಿತ್ರದಲ್ಲಿ ನೋಡು. ನಿಮ್ಮ ಗೆಳೆಯರ ಹೆಜ್ಜೆಯ ಗುರ್ತುಗಳನ್ನೆಲ್ಲವನ್ನೂ ಹೋಲಿಸಿ ನೋಡು. ಒಬ್ಬೊಬ್ಬರದೂ ಎಷ್ಟು ವ್ಯತ್ಯಾಸವಾಗಿರುತ್ತದೆಂದು.

ಶಿಕಾರಿಮಾಡತಕ್ಕವರೂ ಸಹ ಪ್ರಾಣಿಗಳ ಹೆಜ್ಜೆ ಗುರ್ತುಗಳನ್ನು ನೋಡಿ ಅಭ್ಯಾಸಮಾಡಿಕೊಂಡಿರುವುದರಿಂದ ಪ್ರಾಣಿಗಳ ಜಾಡನ್ನು ಸುಲಭವಾಗಿ ಗುರ್ತಿಸುತ್ತಾರೆ.

ಇಷ್ಟೇ ಅಲ್ಲ—ವಾಸನೆಗಳಿಂದಲೂ ವಿಚಾರಗಳು ಸಹಜಕ್ಕೆ ತಿಳಿಯದವುಗಳಾಗಿದ್ದರೂ ತಿಳಿಯಬಹುದು. ಮೂಕಪ್ರಾಣಿಗಳು ತಮ್ಮ ಜಾತಿಯವುಗಳನ್ನು ವಾಸನೆಯಿಂದಲೇ ತಿಳಿಯುತ್ತವೆ. ಮಕ್ಕಳೂ ಸಹ ತಮ್ಮ ತಾಯಿಯರ ಗುರ್ತನ್ನು ವಾಸನೆಯಿಂದಲೇ ತಿಳಿಯುತ್ತವೆ.

ಪೋಲೀಸಿನವರು ಕಳ್ಳರನ್ನು ಪತ್ತೆಮಾಡಲು ಕಳ್ಳರು ಒಬ್ಬ ಹೋಗಿರುವ ಸಾಮಾನುಗಳಿಂದಲೂ, ಅದರ ಮೇಲೆ ಇರುವ ಅಥವಾ ಇತರ ಗುರ್ತುಗಳಿಂದಲೂ, ಕಳ್ಳರನ್ನು ಪತ್ತೆಮಾಡುತ್ತಾರೆ. ಬುದ್ಧಿಯನ್ನು ಪಯೋಗಿಸದ ಹೊರ್ತು ಇವುಗಳನ್ನು ತಿಳಿಯುವುದಕ್ಕೆ ಬೇರೆ ವುದೇ ಇಲ್ಲ.

ನಿನ್ನ ಕಿವಿಗಳನ್ನೂ ಸಹ ಸರಿಯಾಗಿ ಉಪಯೋಗಮಾಡಿ ಶಬ್ದಗಳ ಭೇದವನ್ನೂ ಅವುಗಳ ಅರ್ಥಗಳನ್ನೂ ಚೆನ್ನಾಗಿ ಅಭ್ಯಾಸಮಾಡಬೇಕು.

ಸಂಕೇತಗಳನ್ನೂ, ಸಂಜ್ಞೆಗಳನ್ನೂ, ಕಣ್ಣು, ಮೂಗು, ಕಿವಿಗಳ ಉಪಯೋಗವನ್ನೂ ಮಾಡುವ ಆಟಗಳನ್ನು ಪಿರಿಯಣ್ಣನಿಂದ ಕಲಿತು ತಿಳಿದುಕೊ.

ರಾಬಿನ್‌ಸನ್ ಕ್ರೂಸೋವು ಹೆಜ್ಜೆಯ ಗುರ್ತುಗಳು.

ಹಿರಿಯಣ್ಣಂದಿರಿಗಾಗಿ.

ಅಂಕ ೫.

ದೀಕ್ಷಾವಿಧಿ.

ದೀಕ್ಷಾವಿಧಿಯಕಾಲದಲ್ಲಿ ಬಾಲಕರು ಕಬ್ ಭಾಷೆಯನ್ನು ಕೊಡಬೇಕು. ದೀಕ್ಷೆಯನ್ನು ಕೊಡತಕ್ಕ ಕಾಲವು ಗಂಭೀರವಾಗಿರಬೇಕು. ಕಬ್ ಭಾಷೆ ಮತ್ತು ಪ್ರತಿಜ್ಞೆಗಳ ಅರ್ಥವನ್ನು ಸರಿಯಾಗಿ ಹೇಳಿಕೊಟ್ಟಲ್ಲದೆ ಬಾಲಕರಿಗೆ ದೀಕ್ಷೆಯ ಮಹತ್ವವನ್ನು ತಿಳಿಯವುದಿಲ್ಲ.

ಬಾಲಕರು ತಮ್ಮ ದೀಕ್ಷೆಯನ್ನು ತೆಗೆದುಕೊಂಡ ಕೂಡಲೆ— ಹಿರಿಯಣ್ಣನು ಅಥವಾ ದೀಕ್ಷೆಯನ್ನು ಕೊಡುವುದಕ್ಕೆ ಬಂದ ಹಿರಿಯರು, ಬಾಲಕರನ್ನು ಕುರಿತು ಒಂದೆರಡು ಮಾತುಗಳನ್ನು ಸಮಯೋಚಿತವಾಗಿ ಹೇಳಬೇಕಾಗಿದೆ. ದೀಕ್ಷೆಯಾದನಂತರ ಆ ಬಾಲಕರು ನಿಜವಾದ ಕಬ್‌ಗಳೆಂದೂ, ಪ್ರಪಂಚದ ಎಲ್ಲಾ ಭಾಗದ ಸಾವಿರಾರುಜನ ಬಾಲಕರೊಡನೆ ಅವರೂ ಸಹ ಆದಿನ ಹೊಸದಾಗಿ ಸೇರಿ ಅಣ್ಣತಮ್ಮಂದಿರ ಗುಂಪನ್ನು ಹೊಡ್ಡದನ್ನಾಗಿ ಮಾಡಿರುವರೆಂದೂ, ಕಬ್‌ಗಳಾಗಿ ಕೂಡ ಸಂಸ್ಥೆಗೆ ಯಾವರೀತಿಯಲ್ಲಿಯೂ ಕಳ್ಬಟ್ಟೆಹೆಸರನ್ನು ತರದಂತೆ ಇರಬೇಕೆಂದೂ, ಅಂದಿನಿಂದ ಕಬ್ ಉಡುಪನ್ನು ಧರಿಸಲು ಅರ್ಹತೆಯೂ ಅವರಿಗೆ ದೊರಕಿರುವುದಾಗಿಯೂ, ಆ ಉಡುಪನ್ನು ಮೊಗಟದಂತೆ ಕಾಪಾಡಿಕೊಂಡು, ಮೊಗಟವನ್ನು ಕ್ಷಿಪ್ರಕಾಲದಲ್ಲಿಯೂ, ದೇಸಕಾರ್ಯದತಿರಿಕ್ತ ಘನಕಾರ್ಯಗಳಲ್ಲಿಯೂ ಉಪಯೋಗಿಸುವಂತೆಯೂ, ಹಿರಿಯಣ್ಣನ ಆಜ್ಞೆಯಂತೆ ಉಪಯೋಗಿಸಬೇಕೆಂದೂ ಹೇಳತಕ್ಕದ್ದಾಗಿದೆ.

೧ನೇ ದರ್ಜೆಯ ಕೆಲಸ.

ಕೋಪುಲ ಸಾದದ ಶಿಕ್ಷಣವು ಮುಗಿದ ತರುವಾಯ ದೀಕ್ಷೆಯನ್ನು ಸಹಿಸುತ್ತಾರೆಂದರೆ, ೧ನೇ ದರ್ಜೆಯ ಕೆಲಸಕ್ಕೆ ಪ್ರಾರಂಭಿಸಬೇಕು. ಸಾಧಾರಣವಾಗಿ ಈ ಕೆಲಸವು ಸುಮಾರು ತಿಂಗಳಕಾಲ ಹಿಡಿಯುತ್ತದೆ. ಬಾಲನಾಯಕರನ್ನು ಅವರ ಜೊತೆಯಲ್ಲಿ ಅವರವರ ಗುಂಪಿಗೆ ಒಂದೊಂದರಂತೆ ಸೇರಿಸಿ ಕಲಿಸಿಕೊಡಲಸೇ ದರ್ಜೆಯ ಶಿಕ್ಷಣವನ್ನು ಕೊಡಬೇಕು. ಸಂತರ ಬಾಲನಾಯಕನು ತನ್ನ ಕೆಲಸವನ್ನು ಗುಂಪಿಗೆ ಹೇಳಿಕೊಡಬೇಕು. ಬಾಲನಾಯಕರು ಹೊಸಬಾಲರಿಗೆ ಹೇಳುತ್ತಿರುವಾಗ ಹಿರಿಯಣ್ಣನು ಅವರೊಡನೆ ಸೇರಿ ತಮ್ಮ ಶಿಕ್ಷಣವು ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ಸಂಶೋಧಿಸಬೇಕು. ಹೀಗೆ ಮಾಡುವುದರಿಂದ ಹಿರಿಯಣ್ಣನು ಮುಂದಿನ ಬಾಲನಾಯಕರನ್ನು ತಯಾರುಮಾಡುತ್ತಿರುತ್ತಾನೆ. ಅಲ್ಲದೆ ಬಾಲನಾಯಕರ ನಾಯಕತ್ವಕ್ಕೆ ಒಂದು ಘನತೆಯನ್ನು ಕೊಟ್ಟಂತಾಯಿತು. ಬಾಲಕರ ನಾಯಕನಿಗೆ, ಉಪಾಧ್ಯನೂ, ಏಳೇಯಂತೆಯೂ ಉತ್ಸಾಹವನ್ನೂ ಬಾಲಕರು ತಾಳುತ್ತಾರೆ.

ಮುಂಚಿನಿಂದಲೂ ಹಿರಿಯಣ್ಣನು ಆಯಾ ದಿವಸದಲ್ಲಿ ತಾನು ಮಾಡಬೇಕೆಂದಿರುವ ಕೆಲಸಗಳನ್ನು ಗುರ್ತುಹಾಕಿಕೊಂಡು ಒಂದಿರಬೇಕು ಆ ಪಟ್ಟಿಯಲ್ಲಿ ಆಯಾದಿನದಲ್ಲಿ ಎಷ್ಟು ಕೆಲಸವು ಜರಗಿತೆಂದೂ ಗುರ್ತುಹಾಕಿಕೊಳ್ಳಬೇಕು ಈ ಎರಡು ಪುಸ್ತಕಗಳೇ ಹಿರಿಯಣ್ಣನಿಗೆ ಮುಖ್ಯವಾದ ವುಗಳು. ಗುರ್ತು ಹಾಕಿಕೊಂಡು ಬರದೇ ಇದ್ದಲ್ಲಿ, ಹಿರಿಯಣ್ಣನು ತನ್ನ ಕ್ಲಾಸುಗಳಲ್ಲಿ "ಮುಂದೆ ಇನ್ನೇನು ಮಾಡುವ" ಎಂದು ಬಾಲಕರನ್ನು ಪದೇ ಪದೇ ಕೇಳುತ್ತಿರುತ್ತಾನೆ. ಅಲ್ಲವೆ? ಆದರೆ ಆ ಪ್ರಶ್ನೆಯನ್ನು ಕೇಳಬೇಕಾದ ಸಂದರ್ಭವೂ ಬರುವುದುಂಟು. ಯಾವ ಕಾಲದಲ್ಲಿ ಬಾಲಕರೇ ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಿರುತ್ತಾರೆಯೋ, ಯಾವ ಸಂದರ್ಭದಲ್ಲಿ ಹಿರಿಯಣ್ಣನು ಅಕಸ್ಮಾತ್ತಾಗಿ ಬಾಲಕರೊಡನೆ ಸೇರಬೇಕಾಗುತ್ತದೆಯೋ ಆಗ ಅಲ್ಲಿನ ಕೆಲಸಗಳನ್ನೂ ಆಟಗಳನ್ನೂ ಬಾಲಕರೇ ನಡಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಹಿರಿಯಣ್ಣನು ತನ್ನ ಬುದ್ಧಿಯನ್ನು ಪಯೋಗಿಸಿ ಹಳೇಸರಕನ್ನು ಹೊರಗೆ ತೆಗೆಯಬೇಕಾಗುತ್ತದೆ.

ಕಾಲು ಗಂಟೆಗಿಂತಲೂ ಹೆಚ್ಚಾಗಿ ಯಾವ ವಿಚಾರವನ್ನೂ ಹೇಳಬೇಡಿ ಕಾಲು ಕಾಲು ಗಂಟೆಯಕಾಲ, ಆಟ, ಪಾಟ, ಕಥೆ ಮುಂತಾದವುಗಳನ್ನು ಹೇಳಿದರೆ ಸಾಕು. ಇದರಿಂದ ಬಾಲಕರು ವಿವಿಧವಿಷಯದಲ್ಲಿಯೂ ತರಪೇತಾಗುತ್ತಾರೆ. ಒಂದೇ ವಿಷಯವನ್ನು ಆ ಗಂಟೆಯಲ್ಲಾ ಹೇಳುತಿದ್ದರೆ ಬಾಲಕರಿಗೆ ಬೇಜಾರುಂಟಾಗುತ್ತದೆ. ಕ್ಲಿಪ್ತ ಕಾಲಕ್ಕೆ ಸರಿಯಾಗಿ ನಡೆಯಲು ಅವಕಾಶವೂ ಸಿಕ್ಕುವಂತಾಗುತ್ತದೆ.

ಆದರ ಸ್ವೀಕಾರ.

ಪತ್ರಿಕೆಗಳು.

ಹುಬ್ಬಳ್ಳಿ—ಜಯ, ಭೋಧಾಮೃತ.
ಬೆಂಗಳೂರು—ಪ್ರಬುದ್ಧಕರ್ನಾಟಕ. ಮಕ್ಕಳ ಪುಸ್ತಕ.
ಬ್ರಹ್ಮಚರ್ಯ (ಇಂಗ್ಲೀಷ್)
ಶಿವಮೊಗ್ಗ— ಅರುಣ.
ಶೃಂಗೇರಿ—ಧನ್ವಂತರಿ.
ಪಾಪಸ—Lotus.
ಮಡಿಕೇರಿ—ಕೊಡಗು.
ಮೈಸೂರು—ಶ್ರೀ ಕೃಷ್ಣ.

ವಿನಂತಿ.

ನಮ್ಮ ಪತ್ರಿಕೆಗೆ ಯಾವ ತಿಂಗಳಲ್ಲಿ ಬೇಕಾದರೂ ಚಂದಾದಾರರಾಗಬಹುದು. ಆದರೆ ಇಂತಹ ತಿಂಗಳಿಂದ ಚಂದಾ ಲೆಕ್ಕವನ್ನು ಜಾರಿಕೊಳ್ಳಬೇಕೆಂದು ನಮಗೆ ತಿಳಿಸಬೇಕು. ಇಲ್ಲದಿದ್ದಲ್ಲಿ ನಾವು ಆ ವರ್ಷದ ಹಿಂದಿನ ಸಂಚಿಕೆಗಳನ್ನು ಕಳುಹಿಸಿ ಆ ವರ್ಷಕ್ಕೆ ಪೂರ್ತಿ ಚಂದಾದಾರರೆಂದು ಭಾವಿಸುತ್ತೇವೆ. ಸಂಪಾದಕರು.

ಹಿರಿಯಣ್ಣಂದಿರಿಗಾಗಿ.

ಅಂಕ ೫.

ದೀಕ್ಷಾವಿಧಿ.

ದೀಕ್ಷಾವಿಧಿಯಕಾಲದಲ್ಲಿ ಬಾಲಕರು ಕಬ್ ಭಾಷೆಯನ್ನು ಕೊಡಬೇಕು. ದೀಕ್ಷೆಯನ್ನು ಕೊಡತಕ್ಕ ಕಾಲವು ಗಂಭೀರವಾಗಿರಬೇಕು. ಕಬ್ ಭಾಷೆ ಮತ್ತು ಪ್ರತಿಜ್ಞೆಗಳ ಅರ್ಥವನ್ನು ಸರಿಯಾಗಿ ಹೇಳಿಕೊಟ್ಟಲ್ಲದೆ ಬಾಲಕರಿಗೆ ದೀಕ್ಷೆಯ ಮಹತ್ವವನ್ನು ತಿಳಿಯುವುದಿಲ್ಲ.

ಬಾಲಕರು ತಮ್ಮ ದೀಕ್ಷೆಯನ್ನು ತೆಗೆದುಕೊಂಡ ಕೂಡಲೆ— ಹಿರಿಯಣ್ಣನು ಅಥವಾ ದೀಕ್ಷೆಯನ್ನು ಕೊಡುವುದಕ್ಕೆ ಬಂದ ಹಿರಿಯರು, ಬಾಲಕರನ್ನು ಕುರಿತು ಒಂದೆರಡು ಮಾತುಗಳನ್ನು ಸಮಯೋಚಿತವಾಗಿ ಹೇಳಬೇಕಾಗಿದೆ. ದೀಕ್ಷೆಯಾದನಂತರ ಆ ಬಾಲಕರು ನಿಜವಾದ ಕಬ್ ಗಳೆಂದೂ, ಪ್ರಪಂಚದ ಎಲ್ಲಾ ಭಾಗದ ಸಾವಿರಾರುಜನ ಬಾಲಕರೊಡನೆ ಅನಂತ ಸಖ ಆದಿನ ಹೊಸದಾಗಿ ಸೇರಿ ಅಣ್ಣತಮ್ಮಂದಿರ ಗುಂಪನ್ನು ದೊಡ್ಡದನ್ನಾಗಿ ಮಾಡಿರುವರೆಂದೂ, ಕಬ್‌ಗಳಾಗಿ ಕಬ್ ಸಂಸ್ಥೆಗೆ ಯಾವರೀತಿಯಲ್ಲಿಯೂ ಕೆಟ್ಟಹೆಸರನ್ನು ಕರದಂತೆ ಇರಬೇಕೆಂದೂ, ಅಂದಿನಿಂದ ಕಬ್ ಉಡುಪನ್ನು ಧರಿಸಲು ಅರ್ಹತೆಯು ಅವರಿಗೆ ದೊರಕಿರುವುದಾಗಿಯೂ, ಆ ಉಡುಪನ್ನು ಮೊಗಟದಂತೆ ಕಾಪಾಡಿಕೊಂಡು, ಮೊಗಟು ಪಸ್ಮ ಕ್ಷಿಪ್ತಕಾಲದಲ್ಲಿಯೂ, ದೇವಕಾರ್ಯದತಿರಿಕ್ತ ಘನಕಾರ್ಯಗಳಲ್ಲಿಯೇ ಉಪಯೋಗಿಸುವಂತೆಯೂ, ಹಿರಿಯಣ್ಣನ ಆಜ್ಞೆಯಂತೆ ಉಪಯೋಗಿಸಬೇಕೆಂದೂ ಹೇಳತಕ್ಕದ್ದಾಗಿದೆ.

ಗಸೇ ದರ್ಜೆಯ ಕೆಲಸ.

ಕೂಸುಮರಿಯಾದ ಶಿಕ್ಷಣವ್ರ ಮುಂದಿನ ತರಗತಿಯಾದ ದೀಕ್ಷೆಯ ಸಮಾಪ್ತಿಯಿಂದಲೆ, ಗಸೇ ದರ್ಜೆಯ ಕೆಲಸಕ್ಕೆ ಪ್ರಾರಂಭಿಸಬೇಕು. ಸಾಧಾರಣವಾಗಿ ಈ ಕೆಲಸವ್ರ ಮೂರು ತಿಂಗಳಕಾಲ ಪಿಡಿಯುತ್ತದೆ. ಬಾಲನಾಯಕರನ್ನೂ ಅವರ ಜೊತೆಯಲ್ಲಿ ಅವರವರ ಗುಂಪಿನವರಿಂದಲೂ ಸರ್ವಸ್ಮ ಕೆಲಸ ಮಾಡಲಸೇ ದರ್ಜೆಯ ಶಿಕ್ಷಣವನ್ನು ಕೊಡಬೇಕು. ಸಂತರ ಪಸ್ಮ ವಿಮರ್ಶನ ಆಗಾಗ ತಮ್ಮ ತಮ್ಮ ಗುಂಪ್ರಗಳಿಗೆ ಹೇಳಿಕೊಡಬೇಕು. ಅವರು ತಮ್ಮ ಜೊತೆಗಾರರಿಗೆ ಹೇಳುತ್ತಿರುವಾಗ ಹಿರಿಯಣ್ಣನು ಅವರೊ ನಾಮೋ ಇದ್ದು ಶಿಕ್ಷಣವ್ರ ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ನೋಡುತ್ತಿರಬೇಕು. ಹೀಗೆ ಮಾಡುವುದರಿಂದ ಹಿರಿಯಣ್ಣನು ಮುಂದಿನ ಹಿರಿಯಣ್ಣಂದಿರನ್ನು ತರಬೇತು ಮಾಡುತ್ತಿದ್ದಾನೆ. ಅಲ್ಲದೆ ಬಾಲನಾಯಕರ ನಾಯಕರಿಗೆ ಒಂದು ಘನತೆಯನ್ನು ಕೊಟ್ಟಂತಾಯಿತು. ಬಾಲಕರ ನಾಯಕನಿಗೆ, ಅನುಭವನ್ನೂ, ಬಧ್ಯತೆಯೆಯ ಉಜ್ಜ್ವಲ್ಯವನ್ನೂ ಬಾಲಕರು ಕಲಿತಂತಾಗುತ್ತದೆ.

ಮುಂಜಿನಿಂದಲೂ ಹಿರಿಯಣ್ಣನು ಆಯಾ ದಿವಸದಲ್ಲಿ ತಾನು ಮಾಡಬೇಕೆಂದಿರುವ ಕೆಲಸಗಳನ್ನು ಗುರ್ತುಹಾಕಿಕೊಂಡು ಒಂದಿರಬೇಕು ಆ ಪಟ್ಟಿಯಲ್ಲಿ ಆಯಾದಿನದಲ್ಲಿ ಎಷ್ಟು ಕೆಲಸವು ಜರಗಿತೆಂದೂ ಗುರ್ತುಹಾಕಿಕೊಳ್ಳಬೇಕು ಈ ಎರಡು ಪುಸ್ತಕಗಳೇ ಹಿರಿಯಣ್ಣನಿಗೆ ಮುಖ್ಯವಾದ ವುಗಳು. ಗುರ್ತ ಹಾಕಿಕೊಂಡು ಬರದೇ ಇದ್ದಲ್ಲಿ, ಹಿರಿಯಣ್ಣನು ತನ್ನ ಕ್ಲಾಸುಗಳಲ್ಲಿ "ಮುಂದೆ ಇನ್ನೇನು ಮಾಡುವ" ಎಂದು ಬಾಲಕರನ್ನು ಪದೇ ಪದೇ ಕೇಳುತ್ತಿರುತ್ತಾನೆ. ಅಲ್ಲವೆ? ಆದರೆ ಆ ಪ್ರಶ್ನೆಯನ್ನು ಕೇಳಬೇಕಾದ ಸಂದರ್ಭವೂ ಬರುವುದುಂಟು. ಯಾವ ಕಾಲದಲ್ಲಿ ಬಾಲಕರೇ ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಿರುತ್ತಾರೆಯೋ, ಯಾವ ಸಂದರ್ಭದಲ್ಲಿ ಹಿರಿಯಣ್ಣನು ಅಕಸ್ಮಾತ್ತಾಗಿ ಬಾಲಕರೊಡನೆ ಸೇರಬೇಕಾಗುತ್ತದೆಯೋ ಆಗ ಅಲ್ಲಿನ ಕೆಲಸಗಳನ್ನೂ ಆಟಗಳನ್ನೂ ಬಾಲಕರೇ ನಡಿಸಿಕೊಳ್ಳಬೇಕಾಗುತ್ತದೆ. ಇಲ್ಲ ಹಿರಿಯಣ್ಣನು ತನ್ನ ಬುದ್ಧಿಯನ್ನು ಪಯೋಗಿಸಿ ಹಳೇಸರಕನ್ನು ಹೊರಗೆ ತೆಗೆಯಬೇಕಾಗುತ್ತದೆ.

ಕಾಲು ಗಂಟೆಗಿಂತಲೂ ಹೆಚ್ಚಾಗಿ ಯಾವ ವಿಚಾರವನ್ನೂ ಹೇಳಬೇಡಿ ಕಾಲು ಕಾಲು ಗಂಟೆಯಕಾಲ, ಆಟ, ಪಾಟ, ಕಥೆ ಮುಂತಾದವುಗಳನ್ನು ಹೇಳಿದರೆ ಸಾಕು. ಇದರಿಂದ ಬಾಲಕರು ವಿವಿಧವಿಷಯದಲ್ಲಿಯೂ ತರಬೇತಾಗುತ್ತಾರೆ. ಒಂದೇ ವಿಷಯವನ್ನು ಆ ಗಂಟೆಯಲ್ಲಾ ಹೇಳುತಿದ್ದರೆ ಬಾಲಕರಿಗೆ ಬೇಜಾರುಂಟಾಗುತ್ತದೆ. ಕ್ಲಿಪ್ತ ಕಾಲಕ್ಕೆ ಸರಿಯಾಗಿ ನಡೆಯಲು ಅವಕಾಶವೂ ಸಿಕ್ಕುವಂತಾಗುತ್ತದೆ.

ಆದರ ಸ್ವೀಕಾರ.

ಪತ್ರಿಕೆಗಳು.

ಹುಬ್ಳಿ—ಜಯ, ಧೋಧಾಮೃತ.
ಬೆಂಗಳೂರು—ಪ್ರಬುದ್ಧಕರ್ನಾಟಕ. ಮಕ್ಕಳ ಪುಸ್ತಕ.
ಬ್ರಹ್ಮಚರ್ಯ (ಇಂಗ್ಲೀಷ್)
ತಿಪಟೂರು— ಅರುಣ.
ಶೃಂಗೇರಿ—ಧನ್ವಂತರಿ.
ಹಾಸನ—Lotus.
ಮಡಕೇರಿ—ಕೊಡಗು.
ಮೈಸೂರು—ಶ್ರೀ ಕೃಷ್ಣ.

ವಿನಂತಿ.

ನಮ್ಮ ಪತ್ರಿಕೆಗೆ ಯಾವ ತಿಂಗಳಲ್ಲಿ ಬೇಕಾದರೂ ಚಂದಾದಾರರಾಗಬಹುದು. ಆದರೆ ಇಂತಹ ತಿಂಗಳಿಂದ ಚಂದಾ ಲೆಖ್ಖವನ್ನು ಪಾಕಿಕೊಳ್ಳಬೇಕೆಂದು ನಮಗೆ ತಿಳಿಸಬೇಕು. ಇಲ್ಲದಿದ್ದಲ್ಲಿ ನಾವು ಆ ವರ್ಷದ ಹಿಂದಿನ ಸಂಚಿಕೆಗಳನ್ನು ಕಳುಹಿಸಿ ಆ ವರ್ಷಕ್ಕೆ ಮೊತಾ ಚಂದಾದಾರರೆಂದು ಭಾವಿಸುತ್ತೇವೆ.

ಸಂಪಾದಕರು.

ಕಬ್ಬಿಗಳು ಕಲಿಯಬೇಕಾದುದು.

ಆರೋಗ್ಯಸಾಧನೆ ; ಆಟವೇ ಅದರ ಉಪಾಯ.

ಮಗೂ—ಮೊದಲನೆಯದರ್ಜೆಯ ವಿಷಯಗಳಲ್ಲಿ ಕಬ್ಬಿಗಳು, ಕೆಲವು ಆಟಗಳನ್ನು ಕಲಿಯಲೇಬೇಕೆಂದು ಹಿರಿಯರು ನಿರ್ಧರಿಸಿರುತ್ತಾರೆ. ಅದೇತಕ್ಕಂದರೆ, ನಿನ್ನ ರಕ್ತವು ಶುದ್ಧಿಯಾಗಿ ನೀನು ಆರೋಗ್ಯವಂತ ನಾಗಬೇಕಾದರೆ ನೀನು ಆಟಗಳನ್ನೇ ಆಡಬೇಕು. ಇದರ ವಿಚಾರವಾಗಿ ನನ್ನ ಹಿರಿಯಳ್ಳಿ ಮತ್ತೊಮ್ಮೆ ಹೇಳುತ್ತೇನೆ.

ಹಗ್ಗದಿಂದ ಕುಣಿಯುವುದು—(Skipping)

ಹಗ್ಗವನ್ನು ಮುಂದಿನಿಂದ ತಂದು ಕುಣಿಯುವುದು ಸರಿಯಾದು ದಲ್ಲ. ಅದರಿಂದ ಬಳ್ಳಿಯದೂ ಆಗುವುದಿಲ್ಲ. ಕೆಡಕಾಗುವ ಸಂಭವವಿದೆ. ಹಗ್ಗವನ್ನು ಹಿಂದಿನಿಂದ ತಂದು ಕುಣಿಯಬೇಕು. ಇದುವರೆಗೂ, ನೀನು ಅದರ ಅಭ್ಯಾಸಮಾಡದಿದ್ದಲ್ಲಿ ಇನ್ನು ಮುಂದಾದರೂ ಮಾಡು.. ಪ್ರಯತ್ನ ಪಟ್ಟಾಗ್ಯೂ ನಿನಗೆ ಬರದಿದ್ದಲ್ಲಿ, ಇಬ್ಬರು ಸ್ನೇಹಿತರು ಹಗ್ಗವನ್ನು ಹಿಡಿ ದಿರುವಾಗ ನೀನು ಅದರ ಮೇಲೆ ಹಾರುವುದಕ್ಕೆ ಪ್ರಯತ್ನಪಡು. ಒಂದೆ ರಡು ದಿವಸಗಳಲ್ಲಿ ನಿನಗೆ ಬಂದು ಬಿಡುತ್ತದೆ. ಆ ಮೇಲೆ ನೀನೇ ಹಗ್ಗ ವನ್ನು ತಿರಿಗಿಸುತ್ತಾ ಪ್ರಯತ್ನಮಾಡು.. ಕುಣಿಯುವಾಗ ಕಾಲುಗಳನ್ನು ಜೋಡಿಸಿರಬೇಕು. ಶಬ್ದವಾಗುವಂತೆ ನೆಲದಮೇಲೆ ಕಾಲುಗಳನ್ನು ಬಡಿ ಯಬೇಡ. ಹಿಂದಿನಿಂದ ಮೂವತ್ತು ಸಲ, ಮುಂದಿನಿಂದ ಮೂವತ್ತು ಸೆಲ ಹಗ್ಗವನ್ನು ಹಾಸಿ ಕುಣಿಯಬೇಕು.

ಕುಪ್ಪಳಿಸುವುದು—ಪಲ್ಟೀ ಹೊಡೆಯುವುದು. (Leaf Frog and Somer saults)

ವ್ಯಾಯಾಮದಲ್ಲಿ ಬಾಲಕನು ತನಗಿಂತಲೂ ಎತ್ತರದಲ್ಲಿ ಚಿಕ್ಕವರಾ ಗಿರುವವನ ಮೇಲೆ ಕುಪ್ಪಳಿಸುವುದನ್ನು ಕಲಿಯಬೇಕು. ನಂತರ ತನ್ನ ಎತ್ತರದವನ ಮೇಲೆ, ನಂತರ ತನಗಿಂತ ಸ್ವಲ್ಪ ಎತ್ತರವಾಗಿರುವನ ಮೇಲೆ ಕುಪ್ಪಳಿಸುವುದನ್ನು ಅಭ್ಯಾಸಮಾಡಬೇಕು. ಬಾಲಕನು ಕುಪ್ಪಳಿ ಸುವಾಗ ಅವನ ಮುಂದಿನವನು ಇವನಿಗೆ ಅಡ್ಡಲಾಗಿನಿಂತು ಬಗ್ಗಿ ಕೊಂಡು ತನ್ನ ತಲೆಯನ್ನು ಒಳಗಡೆ ಬಗ್ಗಿಸಿರಬೇಕು. ಅಲ್ಲದೇ ತನ್ನ ಕೈ ಗಳಿಂದ ತನ್ನ ಕಾಲುಗಳನ್ನು ಒಲವಾಗಿ ಹಿಡಿದುಕೊಂಡಿರಬೇಕು. ಕುಪ್ಪ ಳಿಸುವಾಗ ಮೈ ಕೈ ಗಳನ್ನು ಅಲ್ಲಾಡಿಸದೇ ಇದ್ದು ನೋಡುವವರಿಗೆ ಸಂತೋಷವಾಗಿ ಕಾಣುವಾರದು. ಹಾರುವಾಗ ಇನ್ನೊಬ್ಬನ ಮೇಲೆ ಸ್ವಲ್ಪ ವೂ ಭಾರವನ್ನು ಹಾಕಬಾರದು.

ಪಲ್ಟಿ ಹೊಡೆಯುವಾಗ, ಯಾವುದಾದರೊಂದು ರೀತಿ ಪಲ್ಟಿ ಹೊಡೆ ಯಲಿ. ವಿಕಾರವಾಗಿರಬಾರದು. ನೋಡುವವರ ಸಂತೋಷವನ್ನು. ತಲೆ ಮೇಲೆ ಪಲ್ಟಿ ಹೊಡೆಯುವಾಗ ಕೈ ಗಳ ಉಪಯೋಗವಿಲ್ಲದೆ ಹೊಡೆಯಲಕ್ಕೇಳ ಬೇಕು.

ಪುಸ್ತಕಗಳ ವಿಮರ್ಶೆ.

ಶಿಶುಸಂರಕ್ಷಣೆ—ಬಟ್ಟಿಯಾಗಿ ಹಂಜಲ್ಪಡುತ್ತಿದೆ. ಲೆ||. ಜಿ. ಎಸ್. ಶೇಷಾದ್ರಿ ಹೆಲ್ತ್ ಆಫೀಸರ್. ಮೈಸೂರು. ಶಿಶುಗಳಪಾಲನೆ, ಶಿಶುಗಳ ಅಭಿವೃದ್ಧಿಗೆ ತಕ್ಕ ವಿಷಯಗಳನ್ನು ತಾಯಂದಿರಿಗೆ ತಿಳಿಸಿರುತ್ತಾರೆ. ವರ್ಷದೊಳಗೆಯೇ ಅನೇಕ ಮಕ್ಕಳು ಸಾಯುತ್ತಿವೆ. ಅದಕ್ಕೆ ಕಾರಣ ನಮ್ಮ ಅಜ್ಞಾನ. ನಮ್ಮ ಅಜ್ಞಾನವನ್ನು ಹೋಗಲಾಡಿಸಲು ಈ ಪುಸ್ತಕವು ಬಹಳಮಟ್ಟಿಗೆ ಸಹಕಾರಿಯಾಗಿರುತ್ತದೆ.

ಆತಂಕನಿಗ್ರಹಫಾರ್ಮಸಿಯವರ ಚಿತ್ರಮಾಲೆ—ಈ ಕಂಪ ನಿಯವರು 48 ವರ್ಷಕಾಲದಲ್ಲಿ ಮಾಡಿರುವ ವ್ಯಾಪಾರದಲ್ಲಿನ ಮುಖ್ಯವಿ ಚಾರಗಳನ್ನೂ, ಇವರ ಕೆಲಸವಾಗುವ 'ಕಾರ್ಖಾನೆಯೆ' ಮತ್ತು ಇತರ ಅನೇಕ ಶಾಖೆಗಳ ಚಿತ್ರಗಳನ್ನೂ ಮಾಲೀಕರುಗಳನ್ನೂ ಒಳಗೊಂಡಿರುವ ಚಿತ್ರಪುಸ್ತಕವನ್ನು ಕಳುಹಿಸಿರುತ್ತಾರೆ. ನಮ್ಮ ದೇಶದಲ್ಲಿ ವಾಣಿಜ್ಯವು ದಿನದಿನಕ್ಕೆ ಅಭಿವೃದ್ಧಿಯಾಗುತ್ತಿದೆ. ಎಂಬುದಕ್ಕೆ, ಒಂದಲ್ಲ, ಸುಮಾರು 20 ಅಂಗಡಿಗಳನ್ನು ದೇಶದ ಎಲ್ಲಾ ಭಾಗಗಳಲ್ಲಿ ಇಟ್ಟು ಇವರು ವ್ಯಾಪಾರಮಾಡುತ್ತಿರುವುದೇ ಸಾಕ್ಷಿ. ಇವರಿಗೆ ಬಂದ ಲಾಭದಲ್ಲಿ ಸರ್ವ ರಿಗೂ ಉಪಯೋಗವಾಗುವ ಧರ್ಮದ ಕೆಲಸಗಳನ್ನೂ ಮಾಡಿರುವುದು. ಸ್ತುತ್ಯ.

ನಗಬೇಕು.

ವಕೀಲ—ಇದು ನಿನ್ನ ಬರಹವಲ್ಲವೆಂದು ಪ್ರಮಾಣಮಾಡಿ ಹೇಳುವಿಯಾ?
ಕಾಳಪ್ಪ—ಹೌದು ನಿಜವಾಗಿಯೂ ಅದು ಬರೆದುದಲ್ಲ.
ವಕೀಲ—ನಿನ್ನ ಬರಹಕ್ಕೆ ಇದು ಹೋಲುವುದೋ?
ಕಾಳಪ್ಪ—ಎಂದಿಗೂ ಇಲ್ಲ.
ವಕೀಲ—ಅದಕ್ಕೆ ಪ್ರಮಾಣಮಾಡಿ ಹೇಳುವೆಯಾ?
ಕಾಳಪ್ಪ—ಅಗತ್ಯವಾಗಿ.
ವಕೀಲ—ಅದು ಯಾವ ಆಧಾರದಮೇಲೆ ಹೇಳುತ್ತಿ?
ಕಾಳಪ್ಪ—ನನಗೆ ಒರೆಯುವುದಕ್ಕೆ ಬರುವುದೇ ಇಲ್ಲ.

* * *

ದಸರಾಹಬ್ಬಕ್ಕಾಗಿ ನಾರಾಯಣನು ತನ್ನ ಊರಿಗೆ ಹೋಗು ತ್ತಿದ್ದನು. ಮದ್ದೂರಿನಲ್ಲಿ ಬಹಳ ಬಾಯಾರಿಕೆಯಾಯಿತು. ರೈಲುಹೊರ ಡುವುದಕ್ಕೆ ಸ್ವಲ್ಪವೇ ಹೊತ್ತು ಇದ್ದಿತು. ಅದಕ್ಕಾಗಿ ಗಾರ್ಡಿನ ಕೂಡೆ "ನಾಸಿಷ್ಟು ಕಾಫಿ ಕುಡಿದು ಬರಬಹುದಷ್ಟೆ" ಎಂದನು.

ಗಾರ್ಡು—ಧೈರ್ಯಕ್ಕಾಗಿ ನನನ್ನೂ ನಿನ್ನೊಡನೆ ಕರೆದು ಕೊಂಡು ಹೋಗಬಹುದಲ್ಲ.

ಅಧಿಕಾರಿ—ಎಲಾ, ನೀನು ತಪ್ಪುಗಾರನೆಂದು ನಿನಗೆ ಶಿಕ್ಷೆ ಯನ್ನು ಯಾತಕ್ಕೆ ವಿಧಿಸಬಾರದು?

ಉತ್ತರ ತಮಗೆ ಬುದ್ಧಿ ಇರುವುದರಿಂದ!

ಮೈಸೂರು ಸ್ಕೌಟ್ಸ್



ಶಿಬಿರಾಗ್ನಿ.

ಸ್ಕೌಟಿನ ಜೀವನದಲ್ಲಿ ಶಿಬಿರಾಗ್ನಿಯಂತಹ ಸುಸಮಯವು ಯಾವಾಗಲೂ ಸಿಗಬಾರದು ಬಾಲಕರು ಶಿಬಿರವನ್ನು ಸ್ಥಾಪಿಸಿರುವ ಕಾಲದಲ್ಲಿ ಸಾಧಾರಣವಾಗಿ ಪ್ರತಿರಾತ್ರಿಯಲ್ಲಿಯೂ ಶಿಬಿರಾಗ್ನಿಯು ಇರುವುದು. ಇಂಗ್ಲೀಷಿನಲ್ಲಿ ಶಿಬಿರಾಗ್ನಿಗೆ 'ಕ್ಯಾಂಪ್ ಫೈರ್' ಎನ್ನುತ್ತಾರೆ ಬಾಲಕರಲ್ಲಿ ಶಿಬಿರಾಗ್ನಿಯನ್ನು ನೋಡದವರಾಗಲಿ, ಅಥವ ಅದರಲ್ಲಿ ಭಾಗಿಗಳಾಗಿರದವರಾಗಲಿ ಯಾರೂ ಇರುವುದಿಲ್ಲ. ಶಿಬಿರದಲ್ಲಿ ನಮ್ಮ ಇತರ ಕಾರ್ಯಕಲಾಪದಲ್ಲಿ ಶಿಬಿರಾಗ್ನಿಯಷ್ಟು ಸಂತೋಷದಾಯಕವಾದ ಸಮಯವು ಇನ್ಯಾವುದೂ ಇರುವುದಿಲ್ಲ ಆದರೆ ಶಿಬಿರಾಗ್ನಿಯ ನಿಜವಾದ ಸ್ವಭಾವವನ್ನೂ ಅರ್ಥವನ್ನೂ ಅನೇಕರು ತಿಳಿದಿಲ್ಲವೆಂದು ಸಾವ್ರ ಎಂಬಿತವಾಗಿ ಹೇಳಬಹುದು.

ದಿನವೆಲ್ಲಾ ದುಡಿದು ಸಾಕಾಗಿರುವಾಗ ರಾತ್ರಿ ಉಟವಾದ ಮೇಲೆ ಶಿಬಿರಾಗ್ನಿಯನ್ನು ಸ್ಥಾಪಿಸಿ ಆ ಅಗ್ನಿಯ ಸುತ್ತಲೂ ಕುಳಿತು, ಮನಸ್ಸನ್ನು ತಣಿಸುವ ಹಾಸ್ಯ ಸಂಭೋದಗಳಿಂದಲೂ ಯುಕ್ತಿಯುಕ್ತವಾದ ನಾಟಕದೃಶ್ಯಗಳಿಂದಲೂ ಅನೇಕ ಸಮಯದಲ್ಲಿ ಸೀತಿಯನ್ನೂಳಗೊಂಡಿರುವ ಹಾಡುಗಳಿಂದಲೂ, ಕಾಲವನ್ನು ಕಳೆದು ಆಮೇಲೆ ಕೂಸಿನಲ್ಲಿ ಪ್ರಾರ್ಥನೆಯಿಂದ ಹಾಡುಬಿಂದಿರುವ ಆನಂದವನ್ನು ಪರ್ವತಸಮಾನವಾದ ಶಿಬಿರಾಗ್ನಿಸಂಬಂಧವನ್ನು ಅನುಭವಿಸಿ ನೋಡಬೇಕು—ಆಗ ಅನುಭವಿಸಿದವರಿಗೇ ಅದರ ಸ್ವಾತಂತ್ರ್ಯ ವ್ಯಕ್ತವಾಗುತ್ತದೆ.

ಶಿಬಿರಾಗ್ನಿಯಲ್ಲಿ ನಾಟಕರಂಗದಲ್ಲಿ ಮಾಡುವಂತೆ ಮುಖಕ್ಕೆ ಬಣ್ಣವನ್ನು ಹಚ್ಚಿಕೊಂಡು, ವೇಷಭೂಷಣಗಳ ಆಡಂಬರಗಳಿಂದ ದೃಶ್ಯಗಳನ್ನು ತೋರಿಸುವುದು ಸಾಧ್ಯವಿಲ್ಲ. ಆದುದರಿಂದ ಬಾಲಕನ ನಿಜವಾದ ಯೋಗ್ಯತೆಗೆ ಶಿಬಿರಾಗ್ನಿ ಸಮಯದಲ್ಲಿ ವರೆಹಚ್ಚಿದಂತೆ ಆಗುತ್ತದೆ. ಅಲ್ಲದೆ ಇದು ಗೆಳೆಯರ ಗುಂಪಾಗಿರುವುದರಿಂದ ಎಲ್ಲರೂ ಆನಂದದಲ್ಲಿ ಸೇರಿ ನಕ್ಕು ನಲಿಯಬಹುದು.

ನೋಡಿ, ಶಿಬಿರಾಗ್ನಿಯು ಯಾವಾಗ ಒಹಳ ಚೆನ್ನಾಗಿರುವುದೋ ಆಗ ಅಂದಿನ ಶಿಬಿರದ ಕಾರ್ಯಕಲಾಪನೆಲ್ಲವೂ ಸುಗಮವಾಗಿಯೂ ಸಂತೋಷದಾಯಕವಾಗಿಯೂ ನಡೆಯಿತೆಂದು ಅರ್ಥವಾಗುತ್ತದೆ. ಅಲ್ಲದೆ ಬಾಲಕರಲ್ಲಿರುವ ಕೆಲವು ಉತ್ಕೃಷ್ಟವಾದ ಗುಣಗಳು ಹೊರಜಿಗೆ ಬೇಕಾದರೆ ಶಿಬಿರಾಗ್ನಿಯೇ ಸರಿಯಾದ ಸಮಯವು.

ಶಿಬಿರಾಗ್ನಿಯು ನಕಲಿಯ ಕಾಲವೆಂದು ಕೇವರು ತಮ್ಮ ಮನಸ್ಸಿಗೆ ಒಂದಂತೆಯಲ್ಲಾ ವರ್ತಿಸುವರು. ಅಸಂಬದ್ಧವಾಗಿಯೂ ಅಯೋಗ್ಯವಾಗಿಯೂ, ಕೇವಲ ಕುತ್ಸಿತವಾಗಿಯೂ ಇರುವ ಮಾತುಗಳಿಂದಲೂ ಕಾರ್ಯಗಳಿಂದಲೂ ಆ ಕ್ಷಣದಲ್ಲಿ ಕೆಲವರನ್ನು ನಗಿಸುವಂತೆ ಮಾಡುವುದೇ ಶಿಬಿರಾಗ್ನಿಯ ಸ್ವಭಾವವೆಂದು ಕೆಲವರ ಭಾವನೆ ಆದರೆ ನಿಜವಾದ ಸ್ಕೌಟು ಅಂತಹದನ್ನು ಕಂಡರೆ ತಲೆ ತಗ್ಗಿಸುವನು. ಕೆಲವು ದಿನಗಳ ಹಿಂದೆ ಒಂದು ದಳದಲ್ಲಿ ಶಿಬಿರಾಗ್ನಿ ಸಮಯದಲ್ಲಿ ಒಬ್ಬನು ಪಟಿಂಗ ತನದ ಕೆಲವು ಮಾತುಗಳನ್ನು ಆಡಲು, ಕೆಲವರೇನೋ ನಕ್ಕರು. ಆದರೆ ಅಂದು ಯಾರಿಗೂಸ್ಕರ ಆಗ್ನಿ ಸ್ಥಾಪನೆಮಾಡಿದ್ದರೋ ಆ ಅತಿಥಿಯು ಸ್ತ್ರೀಯಾಗಿದ್ದಳು. ಆಕೆಯು ಅತಿಸಂಕಟದಿಂದ ತಲೆಯನ್ನು ತಗ್ಗಿಸಿದಳು

ಶಿಬಿರಾಗ್ನಿಯು ಅತಿಪವಿತ್ರವಾದುದು. ಅಗ್ನಿದೇವನು ಯಾವಾಗಲೂ ಎಲ್ಲಜನರಿಗೂ ಪವಿತ್ರನು. ನಮ್ಮ ಪ್ರೇಮಕ್ಕೂ ಹೆಮ್ಮೆಗೂ ಪಾತ್ರರಾಗಿರುವ ಹಿರಿಯಣ್ಣಂದಿರೆದುರಿಗೂ ಒಡನಾಡಿಗಳೆದುರಿಗೂ ಯಾವಾಗಲೂ ನಾವ್ರ ಗಾಂಭೀರದಿಂದಲೇ ವರ್ತಿಸಬೇಕು.

ಶಿಬಿರಾಗ್ನಿ ಉಷಯವ್ರ ಗಹನವಾದುದು. ಆಗಾಗ್ಗೆ ಇದರ ವಿಚಾರ ಒರೆಯುವೆವ್ರ.

ಒಂದು ಉತ್ತಮವಾದ ಸ್ಕೌಟು ದಳ; ಅದು ಹೇಗಿರಬಹುದು ?

(ಲಾರ್ಡ್ ಹ್ಯಾಂಪ್ಟನ್‌ರವರ ಪುಸ್ತಕದಿಂದ ಕದ್ದದ್ದು)

ಅನೇಕಾವೃತ್ತಿ ರ್ಯಾಲಿಯಲ್ಲಿ ನೋಡಿದ್ದೇನೆ—ನಾಲ್ಕು ನಾಲ್ಕು ಜನರು ಒಂದೊಂದು ಸಾಲಿನಂತೆ ಧ್ವಜಸ್ತಂಭದ ಬಳಿಯಲ್ಲಿ ಹಾದು ಹೋಗುತ್ತಿರುತ್ತಾರೆ. ಕೆಲವರು ದಳದವರು ಸೊಗಸಾದ ರೇಶ್ಮೆಯ ಬಟ್ಟೆಗಳನ್ನು ತೊಟ್ಟುಕೊಂಡು ತಮ್ಮ ಮುಂದೆ ಸೊಗಸಾದ ನಗಾರಿ ಬಾಜಾ ಮಾಡಿಕೊಂಡು ಸಿಪಾಯಿಗಳನ್ನು ಏರಿಸುವಂತೆ ಹೆಜ್ಜೆ ಹಾಕುತ್ತಾ ಹಾಸಿಹೋಗುತ್ತಿರುತ್ತಾರೆ. ಕೆಲವರು ಬಿಳಿ ಷರ್ಟುಗಳನ್ನು ತೊಟ್ಟು ಕೊಂಡು ಕಂಪು ಕೊರಳುಪಸ್ತ್ರವನ್ನು ಕಟ್ಟಿಕೊಂಡು ನೀಲಿನಿಕ್ಕರುಗಳನ್ನು ಹಾಕಿಕೊಂಡು, ಸಾಲದುದಕ್ಕೆ ಹಳದಿ ರುಮಾಲುಗಳನ್ನು ಸುತ್ತಿಕೊಂಡು ಬರುತ್ತಿರುತ್ತಾರೆ. ಇವರಿಗೆ ಬೇರೆ ರಂಗುಗಳೇ ಸಿಗಲಿಲ್ಲವೇನೋ ?

ಕೆಲವು ಸಲ 'ನೋಡಿ, ಸರ್, ಈ ದಳ ಬಹಳ ಸೊಗಸಾದುದು. ಇವರಲ್ಲಿರುವಂತಹ ಪುಟಾಜಾಲಾ ಗುಂಪು ಇನ್ಯಾರಲ್ಲೂ ಇಲ್ಲ.' ಎಂತ ಕೆಲವರು ಹೇಳಿದ್ದಾರೆ. ಕೆಲವ ಸ್ಕೌಟುಮಾಸ್ಟರುಗಳು 'ನಮ್ಮ ಹುಡುಗರನ್ನು ನೋಡಿ, ಎಲ್ಲಾ ಪಂಥ್ಯಗಳಲ್ಲೂ ಗೆಲ್ಲುತ್ತಾರೆ. ಆವರಲ್ಲೊಬ್ಬರು ಸಂಪಾದಿಸಿರುವ ಪ್ರವೀಣತೆಯ ಪದಕಗಳನ್ನೆಲ್ಲಾ ಜೋಡಿಸುವುದಕ್ಕೆ ಎರಡು ತೋಳೂ ಸಾಕಾಗುವುದಿಲ್ಲ' ಎಂದು ಹೇಳುತ್ತಾರೆ. ಇನ್ನೊಂದು ಗುಂಪು ನೋಡಿದರಂತೂ ಹತ್ತಿರದಲ್ಲಿದ್ದವರಿಗೆ ಗಾಭರಿಯಾಗುತ್ತದೆ. ಯಾಕೆಂದರೆ ಆ ಗುಂಪಿನ ಮುಂದುಗಡೆಬರುತ್ತಿರುವ ಬಾಜಾದವರಲ್ಲಿ ಆ ಮದ್ದಲೆಯನ್ನು ಬಡಿಯುವವನು ಕೈಯಲ್ಲಿ ಸುತ್ತಿಗೆಯಿಟ್ಟುಕೊಂಡು ಕೈಯನ್ನು ಆ ಕಡೆಗೂ ಈ ಕಡೆಗೂ ಬೀಸುತ್ತಿರುವನು. ನಿಸರ್ಗೇನೋ ಗಾಬರಿಯೇ ಸರಿ. ಅಹಾ ! ಈ ಗುಂಪೋ ? ದೇವರೇ ಗತಿ—ಕೆಲವರಿಗೆ ಪೋಷಾಕು ಸರಿಯಾಗಿದೆ. ಕೆಲವರು ಪಂಜೆಯನ್ನುಟ್ಟು ಷರ್ಟುಮಾತ್ರ ಹಾಕಿದ್ದಾರೆ. ಕೆಲವರು ನಿಕ್ಕರ್ ಹಾಕಿಕೊಂಡು, ಯಾವುದೋ ಕೋಟು ಹಾಕಿಕೊಂಡು ಇದ್ದಾರೆ; ಅವರ ನಡಿಗೆಯೋ—ದಸರಾದಲ್ಲಿ ಪಾಜು ಸೊಡ್ಡುವುದಕ್ಕೆ ಬರುತ್ತಾರಲ್ಲ—ಅಸಹಾಯಕ.

ಇವನ್ನೆಲ್ಲಾ ನೋಡುತ್ತ ನೋಡುತ್ತ ಹಾಗೇ ನನಗೆ ಅನ್ನಿಸುತ್ತೆ—ಏನೇನು ? ಸ್ಕೌಟುಧ್ಯೇಯವೆಲ್ಲಾ ಈ ಪಥವಾದ ಆಡಂಬರ, ಅವುಗಳಲ್ಲಿ ಮುಳುಗಿಹೋಯಿತೆ ? ಅಥವಾ ಸ್ಕೌಟಿಂಗೇ ಹೀಗೇನೆ ? ಸ್ಕೌಟಿಂಗು ಹೀಗಲ್ಲ. ಅದೆಲ್ಲಾ ನೇಪಗಳು—ಸುಣ್ಣ ತೊಡದಿರುವ ಗಾಗೆ ; ಸ್ವಲ್ಪ ಕೆಲಸವೊಂದಕ್ಕೆ ಬಳಸಿರುವ ನಿಜಸ್ಥಿತಿ ಗೊತ್ತಾಗುತ್ತೆ. ಸುಣ್ಣ ಹಾಗೆ ಸುಣ್ಣವಾಗಿಯೂ ಜೇಕು—ಬರಬೇಕು. ಸ್ವಲ್ಪ ಬಣ್ಣ, ಸುಣ್ಣ ರಂಗು—ಆವರಿಸಿರಬೇಕು—ಹುಡುಗರ ಮನಸ್ಸನ್ನು ಸಲ ಸುವುದಕ್ಕೂ ಸಾಧನವಾಗಿ ಬಳಕೆಯಾಗುವುದಕ್ಕೂ ಜೇಕು.—ಆದರೆ ಆದರಡಿಯಲ್ಲಿ ನಿಜವಾದ ಸ್ಕೌಟುಧ್ಯೇಯವು ಮೂರ್ತಿಗೊಂಡಿರಬೇಕು.

ಈಗ 10 ವರ್ಷದ ಹಿಂದಿನಮಾತು—ಆ ಸ್ಕೌಟುಗುಂಪಿನವರಿಗೆ ಸುಣ್ಣವೇ ತೊಡದಿರಲಿಲ್ಲ. ಸುಮಾರು 10-15 ಹುಡುಗರು, ಅವರ ಸ್ಕೌಟುಮಾಸ್ಟರೂ ಹುಡುಗನೇ ! ಅವರ 'ಗುಂಪಿನಗಲ' ಯೇ ಆ ಹಳ್ಳಿಯಲ್ಲಿದ್ದ ಒಂದು ಪಣತ (ಕಣಜದ ಮನೆ). ಹೀಗಿದ್ದಿದೂ ಆ ಹುಡುಗರು ಎಂತಹವರು? ಒಬ್ಬಬ್ಬನೂ ಒಬ್ಬ ರಣಧೀರ. ಜಗ್ಗಲಿಲ್ಲ—ಬಗ್ಗಲಿಲ್ಲ ಆಮನೆ ಸರಿಮಾಡಿಕೊಂಡರು—ನಾಲ್ಕೈದು ಪುಸ್ತಕಸಂಪಾದಿಸಿದರು, ಊರ ಶ್ಯಾನುಭೋಗರನ್ನು ಹಿಡಿದು ದಳಕ್ಕೆ ಅಧ್ಯಕ್ಷರನ್ನಾಗಿ ಮಾಡಿಕೊಂಡರು. ಆದರೆ ಪಾಪ ! ಹಳ್ಳಿ—ಬೇರೆ ಸ್ಕೌಟುದಳದವರ ದರ್ಶನವೇ ಇರುತ್ತಿರಲಿಲ್ಲ. ಆವಾಗ ದಸರಾರ್ಯಾಲಿಯಲ್ಲಿ ಮೈಸೂರಿಗೆ ಬಂದರು. ಸ್ವಲ್ಪ ಹಳ್ಳಿಯವರು ನೋಡಿ, ಎಷ್ಟಾದರೂ ! ಎಲ್ಲರೂ ನಗುವರೇ !! ಆದರೆ ಸೇತುವೆ ಕಟ್ಟುವುದರಲ್ಲಿಯೂ, ಗುಡಾರಹಾಕುವುದರಲ್ಲಿಯೂ ಇವರಿಗೆ ಮೊದಲನೆಯ ಬಹುಮಾನವು ದೊರೆಯಿತೆಂಬುದನ್ನು ಕೇಳಿ ಎಲ್ಲರೂ ಸುಮ್ಮನಾದರು. ಆದರಲ್ಲಂತೂ, ಬಹುಮಾನವನ್ನು ಹಂಚುವಾಗ ನಮ್ಮ ನಾಯಕರು ಶ್ರೀಮದ್ಯುವರಾಜರು ಆ ದಳದ ಮುಖಂಡನಿಗೆ ಹಸ್ತಲಾಘವನ್ನು ಕೊಟ್ಟಾಗ ಆ ಹಳ್ಳಿ ಹುಡುಗರಿಗೆ ಎಷ್ಟು ಹೆಮ್ಮೆಯಾಗಿರಬಹುದೆಂಬುದನ್ನು ನಾನು ಬೇರೆ ಹೇಳಲಾರೆ.

ಮೈಸೂರಿನಿಂದ ಊರಿಗೆ ಬಂದಾಗ ಹೇಗಾದರೂಮಾಡಿ ಒಂದು ಬಾಜಾ ಸಂಪಾದಿಸಬೇಕೆಂದು ಆ ಹುಡುಗರಿಗೆ ಮನಸ್ಸಾಯಿತು. ಆ ಸ್ಕೌಟುಮಾಸ್ಟರು ಬಹಳ ಬುದ್ಧಿವಂತ. ಮೂರು ರಾಗಮಾಲು ತರಿಸಿದ, ಅವರ ಮನೆಯದೇ ಒಂದು ಜೊತೆ ತಾಳ, ಬಿದಿರದ್ದು ಎರಡು ಕೊಳಲು, ಎಲ್ಲಾ ಸೇರಿಸಿ ಒಂದು ಬಾಜಾಮಾಡಿಸಿದ.

ಆ ದಳದವರಲ್ಲಿ ಬಹಳ ಧೈರ್ಯವಿತ್ತು—ಸ್ಥೈರ್ಯವಿತ್ತು. ಎಲ್ಲಕ್ಕೂ ಮುಖ್ಯವಾಗಿ ಧ್ಯೇಯವಿತ್ತು. ಅಂತಹ ದಳಗಳೇಕೋ ಅತಿ ವಿರಳವಾಗುತ್ತಿವೆಯಲ್ಲ ?

ಸ್ಕೌಟು ವಾರ್ಷಿಕ ಸಂಚಿಕೆ.

ಮೈಸೂರು ಸ್ಕೌಟು ಮಂಡಳಿಯವರು ಮುದ್ರಿಸಿರುವ ಸ್ಕೌಟು ವಾರ್ಷಿಕ ಸಂಚಿಕೆಯು ಈಗ ಹೊರಟಿದೆ. ಪ್ರಾರಂಭದಲ್ಲಿ ನಾಲ್ಕು ಬಣ್ಣಗಳುಳ್ಳ ನಮ್ಮ ಪ್ರಭುಗಳ ಚಿತ್ರವಿದೆ. ಇತರ ಚಿತ್ರಗಳು ನಮ್ಮ ನಾಯಕರು ಅವರ ಕುಮಾರರೂ, ದಿವಾನರವರೇ ಮುಂತಾದ ಪ್ರಮುಖರವರದೂ ಆಗಿದೆ. ಇದರಲ್ಲಿ ಸ್ಕೌಟುಮಂಡಳಿಯು ಈ ಹತ್ತು ವರ್ಷಗಳಲ್ಲಿ ನಡೆಸಿದ ಮುಖ್ಯ ಕಾರ್ಯಗಳು ಇವೆ. ಇದು ನಮ್ಮ ಭರತ ಖಂಡದ ಎಲ್ಲಾ ಭಾಗಗಳ ಮಂಡಳಿಗಳ ವರದಿಗಳನ್ನೂ ಅಲ್ಲಿಯ ಪ್ರಮುಖರ ಚಿತ್ರಗಳನ್ನೂ ಒಳಗೊಂಡಿದೆ.

ಸುಮಾರು ೨೦೦ ಪೇಜುಗಳನ್ನೊಳಗೊಂಡಿರುವ ಈ ಪುಸ್ತಕಕ್ಕೆ ಇಟ್ಟಿರುವ ಬೆಲೆಯು ಒಂದು ರೂಪಾಯಿಯು ತೀರ ಕಡಿಮೆ ಎನ್ನಬೇಕು.

ಗೃಹಶಿಕ್ಷಣ.

"ಗೃಹವೇ ಶಿಶುವಿಗೆ ಪ್ರಥಮ ಪಾಠಶಾಲೆ"—ಫ್ರೋಬೆಲ್.

(ಅಮೇರಿಕಾ ದೇಶದ ಕಿಂಡರ್ ಗಾರ್ಟನ್ ಸಂಘದವರ ಅನುಮತಿಯಿಂದ)

ಅಂಕ ೫.

ಮಕ್ಕಳೇನು ಮಂಗಗಳೇ ?

"ಮೊನ್ನೆ ಸರ್ಕಸ್ಸಿಗೆ ಏಕೆ ಬರಲಿಲ್ಲ. ಸಾಕಮ್ಮನವರೇ ? ನಾನು ಹೋಗಿದ್ದೆ ಆಫೀಕೇರಿಯಿಂದ ನಮ್ಮ ನಾದಿನಿ ಬಂದಿದ್ದಳು. ಬಹಳ ಚನ್ನಾಗಿತ್ತು. ಅಂದ್ರೆ, ಅದರಲ್ಲಂತೂ ಆ ಮಂಗಗಳು ಬಹಳ ಚನ್ನಾಗಿದ್ದವು. ನೋಡಿ, ಬಂದು ರಾಮು, ಬಂದು ಸೀತೆ. ಇನೆರಡೇನೋ ಸುಮಾರಾಗಿದ್ದವು. ಆದರೆ ಆ ಹನುಮಂತ ಎಂತ ಬಂದು ಬಂದಿತ್ತು. ನೋಡಿ. ಎಷ್ಟು ಚನ್ನಾಗಿ ಇದು ಮಾಡಿತು ಅಂತೀರಿ" ಎಂದರು ಸಾವಿತ್ರಮ್ಮನವರು. "ಚನ್ನಾಯಿತು ಬಿಡಿ, ಸಾವಿತ್ರಮ್ಮನವರೇ ನಾನು ಕೂಗಿ ಕೂಗಿ ಸಾಕಾಯಿತು. ನಿಮಗೆಲ್ಲ ಕೆವಿಯೇ ಕೇಳಿಸಲಿಲ್ಲವೇನೋ ? ಹೌದು, ಮಂಗಗಳು ಚನ್ನಾಗಿದ್ದವು. ಆದರೆ ಮನೆಗೆ ಬರುವಾಗ ನನಗೆ ಯೋಜನೆಯಾಯ್ತು ನೋಡಿ. ಏನು ಪ್ರಯೋಜನ ಇದರಿಂದ ನಾಲ್ಕು ದಿನ ಆ ಆಟದವನು ಆನ್ಮಗಳನ್ನು ತಯಾರಿಸಿದೆ ಬಿಟ್ಟರೆ ಎಲ್ಲಾ ಮನೆತು ಕೊಂಡು ಯಥಾಪ್ರಕಾರ ಬೀದಿ ಮಂಗಗಳ ಹಾಗೆ ಆಗುತ್ತವೆ ಅಲ್ಲವೆ, ಬಂದುಕೊಂಡೆ ಆ ಮೇಲೆ ಮನೆಗೆ ಒಂದಮೇಲೆ, ಎಲ್ಲರೂ ಊಟಕ್ಕೆ ಕುಳಿತರು. ನಮ್ಮ ಮಗು—ಮಕ್ಕಳಿಗೇನು ಗೊತ್ತು ಅಂದ್ರೆ—ಎಲ್ಲರೂ ಕುಳಿತುಕೊಳ್ಳುವುದರೊಳಗೆ ಅನ್ನಕ್ಕೆ ಕೈ ಹಾಕಿತು. "ಮುಟ್ಟಬೇಡ" ಎಂತ ಅವರು (ಅಂದರೆ ಅವರಗಂಡ) ಹೆದರಿಸಿದರು. ನಮ್ಮನೆ ಗಂಭೀರವಾಗಿ ಕುಳಿತುಕೊಂಡಿತು. ಆಗ ನನಗೆ ಅನ್ನಿಸಿತು. "ಇವರಿಗೂ ಆ ಮಂಗನಸ್ಸನ್ನ ಸಾಕುವವನಿಗೂ ಏನು ? ವ್ಯತ್ಯಾಸ ಅವನು ಮಂಗಗೆ ಕಲಿಸುತ್ತಾನೆ- ಇವರು ಮಗುವಿಗೆ ಕಲಿಸುತ್ತಾರೆಅಷ್ಟೆ" ಎಂದರು ಸೀತಮ್ಮನವರು.

"ನೆಂ, ಬಿಡಿ, ನೀವು ಹಾಗೆಂದರೆ ಮಕ್ಕಳೇನು ಮಂಗಗಳೇ ? ಒಪ್ಪಯ ಇಷ್ಟೇ ನೋಟ; ಮಂಗನಿಗೆ ವಿವೇಚನೆಯಿಲ್ಲ. ಇತ್ತಾದರೂ ಮಂಗ. ಆಟಗಾರ ಮಾಡುವ ಕೆಲವು ಸಂಜ್ಞೆಗಳಿಗೆ ಇವೂ ಕೂಡ ಬಂದು ಫಲವಾಗಿ ಆಡುತ್ತವೆ. ಮಂಗನಿಗೆ ಯೋಚನೆಮಾಡುವುದಕ್ಕೆ ಆಗುವುದಿಲ್ಲ (ಯಾಕನ್ನು ನಾವ್ರ ಸಂಬುನ್ನದಿಲ್ಲ.—ಸಂ.) ಬಂದು ಫಲದಲ್ಲಿ ನಡೆಯ ಬೇಕಂದು ಸಂಕಲ್ಪಿಸುವುದು ಅದಕ್ಕೆ ಆಗುವುದಿಲ್ಲ.

"ಆದರೆ ಮಕ್ಕಳ ವಿಚಾರ ಬೇರೆ. ನಡೆನುಡಿಗಳಲ್ಲಿ ನೆಲೆಯಾಗಿದ್ದಲ್ಲಿ ಒಷ್ಟು ಚನ್ನಾಗಿಯೂ ಗಂಭೀರವಾಗಿಯೂ ಇರುತ್ತದೆಂಬುನ್ನು ತಿಳಿದುಕೊಳ್ಳುವಂತೆ ಮಕ್ಕಳನ್ನು ತಿದ್ದಬಹುದು. ಹಾಗೆ ಮಾಡಿದರೆಂದರೆ ಪ್ರತಿಯೊಂದು ನಡತೆಯನ್ನೂ ಮಕ್ಕಳು ನೋಡಿ ಕಲಿತುಕೊಳ್ಳುತ್ತವೆ. ಕೆಲವರೇನೋ ಮಕ್ಕಳನ್ನು ಬಂದು ವಿಧವಾಗಿ ತಯಾರಿಸಿರುತ್ತಾರೆ ನಿಜ. 'ಹಂ' ಬಂದರೆ ಬಂದು ತರಹ, 'ಹುಂ' ಬಂದರೆ ಬಂದು ತರಹ ಮಕ್ಕಳು ಆಡುತ್ತಿರುತ್ತವೆ. ಅದೇನು ಪ್ರಯೋಜನ. ಯೋಗ್ಯವಾದ ನಡೆನುಡಿಗಳು ಚನ್ನಾಗಿರುತ್ತವೆಂಬುದನ್ನು ಮಕ್ಕಳೇ ತಿಳಿದುಕೊಳ್ಳಬೇಕು.

ಘನತೆಯ ರೀತಿಯ ಪೇಳ್ವೊಡೆ, ಅದು |
ಮೃದಕರ ರೀತಿಯೊಳ್, ಗಂಭೀರತೆಯ ತೋರ್ಪುದಲ್ತೆ, ಜಗದೊಳ್ ||

"ಅಲ್ಲದೆ, ನಾನೂ ಕೂಡ, ಮಕ್ಕಳಿಗೆ ಹಾಗೆ ಮಾಡಬಾರದು, ಹಾಗೆ ಮಾಡದಿರುವುದಕ್ಕೆ ಇವೇ ಕಾರಣಗಳು ಎಂದು ಹೇಳುತ್ತಿದ್ದೆ. ಆ ಮೇಲೆ ಅದು ಹುಚ್ಚುತನವೆಂದು ಗೊತ್ತಾಯಿತು. ಮಕ್ಕಳಿಗೆ ಬೇರೆಯವರು ಅದರಲ್ಲೂ ಬೇರೆ ಮಕ್ಕಳು ತಮ್ಮ ವಿಚಾರವಾಗಿ ಬೇರೊಂದು ವಿಧವಾಗಿ ತಿಳಿದುಕೊಂಡು ನಗುತ್ತಾರೆಂದು ಗೊತ್ತಾದರೆ ಅಂತಹ ದನ್ನು ಯಾವಾಗಲೂ ಮಾಡುವುದಿಲ್ಲ. ಈಗ ನೋಡಿ, ಸ್ಕೂಲಿಗೆ ಎಲ್ಲರೂ ಸರಿಯಾದ ಹೊತ್ತಿಗೆ ಹೋಗಿರುತ್ತಾರೆ. ಒಂದು ಮಗುವು ಮಾತ್ರ ಹೊತ್ತಾಗಿ ಹೋದರೆ ಎಲ್ಲರೂ ನಗುತ್ತಾರೆಂದು ಗೊತ್ತಾದರೆ ಯಾವ ಮಗುವೂ ತಾನಾಗಿ ಹೊತ್ತಾಗಿ ಹೋಗುವುದಕ್ಕೆ ಒಡಂಬಡುವುದಿಲ್ಲ. ಮಕ್ಕಳಿಗೆ ಹೊಗಳಿಕೆಯಲ್ಲಿ ಬಹಳ ಇಷ್ಟ. ಅದರಲ್ಲೂ ಸಮವಯಸ್ಕರಾದ ಇತರ ಬಾಲಕರ ಹೊಗಳಿಕೆಯಲ್ಲಂತೂ ಹೆಮ್ಮೆ ಬಹಳ ಇದೇ ಗುಟ್ಟು ಸೀತಮ್ಮನವರೇ ಮಕ್ಕಳ ಶಿಕ್ಷಣದಲ್ಲಿ ಮಕ್ಕಳ ಮನಸ್ಸನ್ನು ಅನುವರ್ತಿಸಿ ನಡೆದಷ್ಟೂ ಒಳ್ಳೆಯದು" ಎಂದರು ಸಾವಿತ್ರಮ್ಮನವರು.

"ಸರಿಯಮ್ಮ ನೀವೇನೋ ವಿದ್ಯಾವಂತರು. ಸ್ಕೂಲಿನಲ್ಲಿ ಓದಿದವರು ನಿಮಗೆ ಗೊತ್ತಿದೆ. ನನಗೇನು ಗೊತ್ತಾಗಬೇಕು ?" ಎಂದರು ಸೀತಮ್ಮನವರು.

"ಸಾಕು, ಬಿಡ್ರಿ ನೀವೇನು ಕಡಿಮೆ ? ನಿಮಗೇನು ಓದುವುದಕ್ಕೆ ಒರುವುದಿಲ್ಲವೋ ? ನನಗೆ ಮಾತ್ರ ಬರುತ್ತಿರುವುದೇನು ನಿಮಗೆ ಬರದೇ ಇರುವುದೇನು ? ಅದಲ್ಲದೆ ಇನ್ನೊಂದು ವಿಚಾರ ಇಲ್ಲಿ ಬನ್ನಿ ಕಿವಿಯಲ್ಲಿ ಹೇಳುತ್ತೇನೆ ನಿಮ್ಮ ಮನೆಯವರನ್ನು ಕೇಳಿ. ನನಗೂ ಈ ವಿಚಾರವೆಲ್ಲಾ ಮುಕ್ಕಾಲು ಮಾಸಿಯಲ್ಲಾ "ಅವರಿಂದ" ತಿಳಿದಿದ್ದೇ ತಗಿಬೆ. ನೀವೂ ಹಾಗೆ ಮಾಡಿ" ಎಂದರು ಸಾವಿತ್ರಮ್ಮನವರು.

ಮಕ್ಕಳ ಮನಸ್ಸನ್ನು ಅನುವರ್ತಿಸಿ ಶಿಕ್ಷಣ ಕೊಡಿ. ಮಕ್ಕಳು ಮಂಗಗಳಲ್ಲ.

ಹಿರಿಯಣ್ಣಂದಿರಲ್ಲೊಂದು ಫಂಥ್ಯ

ಕಬ್ಬಾಸಿಯಮು ಮತ್ತು ವಾಗ್ದಾನಗಳನ್ನು ಉದಹರಿಸುವ ನಾಟ್ಯ ರೂಪವಾದ ದೃಶ್ಯಗಳನ್ನು ಸಂಪಾದಕರಿಗೆ ನವೆಂಬರ್ 30 ನೇ ತಾರೀಖಿನಲ್ಲಿ ಕಳುಹಿಸಿಕೊಡಬೇಕು. ಯೋಗ್ಯವಾದುವುಗಳಿಗೆ ಬಹುಮಾನಗಳುಂಟು. ದೃಶ್ಯವನ್ನ ೧೦ ನಿಮಿಷಗಳಲ್ಲಿ ಮುಗಿಯುವಂತಿರಬೇಕು. ಭಾಷೆಯು ಮಕ್ಕಳಿಗೆ ತಿಳಿಯುವಂತಿರಬೇಕು.

ಬರವಣಿಗೆಯನ್ನು ಕಾಗದದ ಒಂದೇ ಬಾಗದಲ್ಲಿ ಬರೆಯಬೇಕು. ಈ ಸಂದರ್ಭದಲ್ಲಿ ಶಿಬಿರಾಗ್ನಿ ಎಂಬ 9 ನೇ ಪುಟದಲ್ಲಿರುವ ಲೇಖನವನ್ನು ಓದಬೇಕು.

—ಸಂಪಾದಕರು.

ಸ್ಕೌಟುಸುದ್ದಿಗಳು.

ವ್ಯಾಯಾಮವಿದ್ಯಾಪರಿಷತ್ತು

ಮಧುರೆಯಲ್ಲಿ ನಡೆದ ವ್ಯಾಯಾಮವಿದ್ಯಾಪರಿಷತ್ತಿನಲ್ಲಿ ಆಲ್ಲಿಯ ಸ್ಕೌಟುಕಮಿಷನರವರು ಒಂದು ಉಪನ್ಯಾಸವನ್ನು ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರು ತಮ್ಮ ಸಹಾಯವನ್ನು ಕೋರಿದ್ದೇ ಆದಲ್ಲಿ ಸ್ಕೌಟುಗುಂಪುಗಳನ್ನು ಸ್ಥಾಪಿಸಲು ತಮ್ಮ ಜಿಲ್ಲೆಯಲ್ಲಿ ತಲಬೆನ ಮೇಲೆ ನೇಮಕಮಾಡಲ್ಪಟ್ಟ ಒಬ್ಬ ಚತುರನಾದ ಸ್ಕೌಟುಮಾಸ್ಟರೊಬ್ಬರನ್ನು ತಾತ್ಕಾಲಕ್ಕೆ ಸಹಾಯಕ್ಕಾಗಿ ಕಳುಹಿಸಿಕೊಡಲು ಒಪ್ಪಿರುತ್ತಾರೆ. ಈ ರೀತಿಯಾಗಿ ಜಿಲ್ಲಾಬೋರ್ಡುಗಳು ತಮ್ಮ ಜಿಲ್ಲೆಯಲ್ಲಿನ ಸ್ಕೌಟುಕೆಲಸಗಳಿಗಾಗಿ ಒಬ್ಬನನ್ನು ನೇಮಕಮಾಡಿರುವುದು ಶ್ಲಾಘನೀಯವಾದುದು.

ಸ್ಕೌಟರುಗಳ ಪರಿಷತ್ತು — ಮದ್ರಾಸ್.

ಮದ್ರಾಸಿನಲ್ಲಿ ಒಂದು ಹಿರಿಯಣ್ಣಂದಿರ ಪರಿಷತ್ತು ಹೋದ ತಿಂಗಳಲ್ಲಿ ನಡೆಯಿತು. ಹಿರಿಯಣ್ಣಂದಿರಿಗೆ ಸ್ವಾಗತವನ್ನು ಬಯಸಿದವರು. ಸರ್ ಸಿ. ಪಿ. ರಾಮಸ್ವಾಮಿಅಯ್ಯರವರು. ನಂತರ ಅಧ್ಯಕ್ಷರು ಡಾ|| ಅಸಿಟಾ ಸಂಬರು.

ಸರ್ ಸಿ. ಪಿ. ರಾಮಸ್ವಾಮಿಅಯ್ಯರವರ ಭಾಷಣದಲ್ಲಿ ಕೆಲವು ಮುಖ್ಯಾಂಶಗಳನ್ನು ನಮ್ಮ ಹಿರಿಯಣ್ಣಂದಿರೂ ಯಾಚಿಸಬೇಕಾಗಿರುವುದು.

ಸ್ಕೌಟುಕೆಲಸವನ್ನು ಕಸರತ್ತಿನ ಭಾಗವೆಂದು ತಿಳಿದು, ಬರೀ ಕಸರತ್ತುಗಳ ಲ್ಲೇ ಕಾಲವನ್ನು ಕಳೆಯುವುದು ತಪ್ಪು. ಸ್ಕೌಟು ಕೆಲಸವನ್ನು ಫೂರ್ತಾಡ್ರಿಲ್ ಮಾಸ್ಟರುಗಿರ ಕೈಲಿ ಬಿಡುವುದು ತಪ್ಪು.

ಸರ್ಕಾರದ ಮುಖ್ಯಸ್ಥರ ಒತಾಟದಿಂದ ಇದು ಸರ್ಕಾರದವರ ಮಂಡಳಿ ಎಂದು ಜನರು ಕೈಬಿಟ್ಟಿರುತ್ತಾರೆ. ಈ ಭಾವನೆಯು ತಪ್ಪು. ಈಗ್ಗೆ ೧೨ ವರ್ಷಗಳ ಹಿಂದಿದ್ದ ಉತ್ಸಾಹವು ಈಗ ಜನಗಳಲ್ಲಿಲ್ಲ. ಈ ಮಂಡಳಿಯು ಜನಗಳದೇ ಎಂದು ಭಾವಿಸಿ ಹಿಂದಿನ ಉತ್ಸಾಹವನ್ನು ತೋರಿಸಬೇಕು.

ಹಿರಿಯಣ್ಣಂದಿರೊಬ್ಬರು ಇಂಗ್ಲೆಂಡಿಗೆ ಪ್ರಯಾಣ ಬೆಳಸಿದರು.

ಈಗ್ಗೆ ಮೂರು ತಿಂಗಳಹಿಂದೆ ಹೆಚ್ಚಿನ ಕೆಲಸಕ್ಕೆ ತಮ್ಮನ್ನಾಗಿ ನಿಗರ್ಾಯಿಸಲ್ಪಟ್ಟ ಶ್ರೀ ಕೆ. ಆರ್. ವೆಂಕಟೇಶಶಾಸ್ತ್ರಿ ಬಿ. ಎ. ಯವರು ನಮ್ಮ ಹಿರಿಯಣ್ಣಂದಿರ ಗುಂಪಿನಲ್ಲಿ ಆರೇಳು ವರುಷಗಳಿಂದ ಸೇವೆ ಮಾಡುತ್ತಿದ್ದಾರೆ. ಹೆಚ್ಚಿನ ವಿದ್ಯಾಭ್ಯಾಸಂಗಕ್ಕೆ ಇವರು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿರುತ್ತಾರೆ. ಇಂಗ್ಲೆಂಡಿಗೆ ಹೊರಡುವ ಪೂರ್ವ ಜಿಲ್ಲೆಯ ಹಿರಿಯಣ್ಣಂದಿರ ಸಂಘದವರು ಇವರನ್ನು ಕರೆಸಿ ಸತ್ಕರಿಸಿ ಕಳುಹಿಸಿದರು. ಇಂಗ್ಲೆಂಡಿನಲ್ಲಿರುವ ಗಲ್ಸ್ ಪಾಕರ್ಾ ಸ್ಕೌಟು ವಿಶ್ವವಿದ್ಯಾ ನಿಲಯದಲ್ಲಿಯೂ ಇವರು ಸ್ಕೌಟು ವಿದ್ಯೆಯನ್ನು ಕಲಿತು ಬರುತ್ತಾರೆಂದು ನಂಬುತ್ತೇವೆ. ಅಲ್ಲದೆ ಅಲ್ಲಿಯ ಸ್ಕೌಟು ಗುಂಪುಗಳ ಕೆಲಸಗಳನ್ನು ನಮಗೆ ಆ ಗಾಗ್ಗೆ ತಿಳಿಸುತ್ತಿರ ಬೇಕೆಂದು ಕೇಳಿಕೊಂಡಿರುತ್ತೇವೆ. ಭಗವಂತನು ಇವರಿಗೆ ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇವೆ.

ಸ್ಕೌಟು ಪ್ರದರ್ಶನ

ಅಕ್ಟೋಬರ್ 28 ನೇ ತಾರೀಖು ದಸರಾಪ್ರದರ್ಶನಾಲಯದಲ್ಲಿ ಕಬ್, ಸ್ಕೌಟು, ಮತ್ತು ರೋವರುಗಳ ಆಟಪಾಟಗಳು ನಡೆಯುತ್ತವೆ.

ಪಂಥ್ಯಗಳು

ಆಗಷ್ಟು ತಿಂಗಳ ಸಂಚಿಕೆಯಲ್ಲಿ ಒಗಟಿಗಳಿಗೆ ಉತ್ತರವನ್ನು ಕಳುಹಿಸಿದವರ ಹೆಸರುಗಳನ್ನು ಕ್ರಮದಲ್ಲಿ ಬರೆದಿರುತ್ತೇವೆ.

ಕುಮಾರಿ|| ಎಲ್. ಪದ್ಮಾವತಿಬಾಯಿ, ಹೈದರಾಬಾದ್.
ಕುಮಾರಿ|| ಆಶಾ, ರೋಷಾ ಬ್ಲೂಬರ್ಡ್, ಗದಗ್.
ಕಬ್ ಚಾಪಸ ಕಾತೀರಾಮು, ಕಬ್‌ಲೀಡರ್, ಗದಗ್.
ಸ್ಕೌಟ್ ಕೆ. ಶ್ರೀಕಂಠಯ್ಯ ಶ್ರೀರಾಮಗುಂಪು, ಅಮಸೂರು.
ಮು|| ಪಿ. ಎಸ್. ವೆಂಕಟರಾಮಯ್ಯ, ಕಬ್‌ಮಾಸ್ಟರ್, ಮೈಸೂರು.
ಕಬ್. ಎಂ. ಶ್ರೀಕಂಠಯ್ಯ, ಮಳವಳ್ಳಿ.
ಕಬ್. ಕೆ. ಆರ್. ವಿದ್ಯಾಶಂಕರ, ಮೈಸೂರು.
ಕಬ್ ಕೆ. ಎಸ್. ನಾಗೇಶರಾವ್, ಮಳವಳ್ಳಿ.
ಕಬ್ ಪಿ. ಆರ್. ಶೇಷಗಿರಿರಾವ್, ಮಳವಳ್ಳಿ.
ಕಬ್ ಯು. ಡಿ. ಗೋಪಾಲರಾವ್ ಮೈಸೂರು.
ಕಬ್ ಕೆ. ಪಿ. ಚಂದ್ರಶೇಖರಪ್ಪ, ಬೆಂಗಳೂರು.

ಹೊತ್ತಾಗಿ ಕಳುಹಿಸಿದವರು.

ಎಸ್. ಎಸ್. ವೆಂಕಟೇಶ್ವರ, ಹುಣಸೂರು.
ಪಿ. ಎಲ್. ಸುಬ್ಬರಾವ್, ,,
ಕೆ. ಪಿ. ರಾವ್. ,,
ಅನಂತರಾವ್ ,,

ಮೈಸೂರು ಸ್ಕೌಟು ಹಿರಿಯಣ್ಣಂದಿರ ಸಭೆ—

ಬೇಡರಹಳ್ಳಿಯಲ್ಲಿ ನಡೆಯಬೇಕಾಗಿದ್ದ ಸ್ಕೌಟು ಹಿರಿಯಣ್ಣಂದಿರ ಸಭೆಯು ಶ್ರೀರಂಗಪಟ್ಟಣಕ್ಕೆ ನಗರ್ಾಯಿಸಲ್ಪಟ್ಟಿತು. ಅಲ್ಲಿ ಸ್ಕೌಟುಹಿರಿಯಣ್ಣಂದಿರು ತಮ್ಮ ತಮ್ಮ ಅನುಭವಗಳನ್ನು ಕುರಿತು ಮಾತನಾಡಲು ಸನುಯವನ್ನು ಹುಡುಕಿಕೊಂಡಿದ್ದಾರೆ. ಈ ತಿಂಗಳು 19 ನೇ ತಾ|| ಈ ಸಭೆಯು ಪ್ರಾರಂಭವಾಗಿ ಉತ್ಸವವನ್ನು ಸ್ಕೌಟುಕಮಿಷನರವರಿಂದ ನಡೆಸಲ್ಪಟ್ಟಿತು. ಅಲ್ಲಿ ಜರ್ಜೆಗೆ ಬರುವ ಸಂಗತಿಗಳು ಸುಮಾರು ಆರವತ್ತು. ಈ ಸಭೆಯ ಠರಾವುಗಳು ಮಂಡಳಿಯವರಿಗೆ ಸಾಧಕವಾಗಿರುವುದರಲ್ಲಿ ಸಂದೇಹವಿಲ್ಲ.

ಮೈಸೂರು ಮಕ್ಕಳು

ಸುಲಭವೆಲೆ! ಅತ್ಯುತ್ತಮ ತರಹ ಫೌಂಟೆನ್ ಪೆನ್‌ಗಳು!! ತರಿಸಿ ಪರೀಕ್ಷಿಸಿರಿ!!!

1. ವರಲ್ಡ್ ವಂಡರ್ ಫೌಂಟೆನ್ ಪೆನ್ 1 ಕ್ಕೆ 3-0-0
2. ಡಿಟೋನಮೂನೆ ಸ್ಕ್ರೂಕ್ಯಾಪಿರುವ ಪೆನ್ 1 ಕ್ಕೆ 3-8-0
3. ಹಾರ್ಡ್‌ವೇರ್ ಫೌಂಟೆನ್ ಪೆನ್ 1 ಕ್ಕೆ 3-0-0
4. "ಸ್ಪಾಟ್" ಫೌಂಟೆನ್ ಪೆನ್ 1 ಕ್ಕೆ 7-0-0
5. ಬ್ಲಾಕ್‌ಬರ್ಡ್ ಫೌಂಟೆನ್ ಪೆನ್ 1ಕ್ಕೆ 3-8-0 ಮತ್ತು 3-12-0
6. "ವಾಟರ್‌ಮನ್" ಫೌಂಟೆನ್ ಪೆನ್ 1 ಕ್ಕೆ 8-8-0
7. "ವಾಟರ್‌ಮನ್" ಸೆಲ್ಫ್‌ಫಿಲಿಂಗ್ ಫೌಂಟೆನ್ ಪೆನ್ 1 ಕ್ಕೆ 12-0-0
8. "ವಾಟರ್‌ಮನ್" ಸೇಫ್ಟಿ ಫೌಂಟೆನ್ ಪೆನ್ 1 ಕ್ಕೆ 11-0-0

ಇನ್ನೂ ಅನೇಕತರಹ ಕಡಿಮೆಕ್ರಯದ ಪೆನ್‌ಗಳು ನಮ್ಮಲ್ಲಿ ಸಿಗುತ್ತವೆ. 6 ಸೈ ಸ್ಟಾಂಪ್ ರವಾನಿಸಿ ನಮ್ಮ ಕ್ಯಾಟಲಾಗ್ ತರಿಸಿನೋಡಿರಿ.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು, ಮೈಸೂರು.

THE MYSORE SCOUT

THE OFFICIAL ORGAN OF THE BOY SCOUTS OF MYSORE
A TEN YEAR OLD SCOUT MAGAZINE

SUBSCRIPTION RATES

To Students and Scouts, by Post — Re. 1 per annum.
To Patrons, Reaning Rooms, ect, — Rs. 2 per anuum.

THE MANAGER,
Tippu Sultan's Palace Fort Bangalore City.

MY SCINTIFIC SYSTEM OF GRADUATED
PHYSICAL CULTURE
6th Edition, Revised & Enlarged.

It is free—This will show you some of my remarkable achievements in Health—building exercises, many pages with nice photographs of myself and a number of my pupils. Read what they say about my system. All I ask is the price of postage 2 annas. Remember this does not obligate you in any way. So don't delay one minute. Order for a copy at once—now while it is in your mind—Prof. M. V. Krishna Rao, Post Basavangudi Bangalore City.

ಸಚಿತ್ರ] ಸುಬೋಧ [ಮಾಸಪತ್ರಿಕೆ

ಮೂರನೆಯ ಸಂಪುಟವು ೧೯೨೭ ಅಕ್ಟೋಬರ್ ತಿಂಗಳಿಂದ ಪ್ರಾರಂಭ.

ಇದರಲ್ಲಿ ಧಾರ್ಮಿಕ, ನೈತಿಕ, ಸಾಮಾಜಿಕ, ವಿದ್ಯಾವಿಷಯಕ ಮತ್ತು ಇತರ ಬೋಧಪರ ಲೇಖನಗಳು, ಸುಲಭವೂ ಮನೋಹರವೂ ಆದ ತಿಳಿಗನ್ನಡದಲ್ಲಿ ಕರ್ನಾಟಕದ ಸುಪ್ರಸಿದ್ಧ ಲೇಖಕರಿಂದ ಬರೆಯಲ್ಪಟ್ಟು ಪ್ರಕಟವಾಗುವುವು. ಅಲ್ಲದೆ ಆರ್ಷೇಯು ಕರ್ನಾಟಕದ ರಾಜ್ಯವಾದ ಹಳೇಬೀಡು ದ್ವಾರಸಮುದ್ರಗಳ ಚರಿತ್ರಾಂಶಗಳನ್ನು ವರ್ಣಿಸುವ 'ಶಾಂತಳಾ' ಎಂಬೊಂದು ಸುಮನೋಹರ ಕರ್ನಾಟಕ ನಾಟಕವೂ ಕ್ರಮಶಃ ಪ್ರಕಟವಾಗುತ್ತಿದೆ.

ಸ್ಯೂಪರ್‌ವೈಟ್, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ರೂ. ೧—೮—೦ (ಅಂಚೆವೆಚ್ಚ ಉಚಿತ)

ನಮ್ಮಲ್ಲಿ :—

ಎಲ್ಲಾ ತರಗತಿಗಳ ಪುಸ್ತಕಗಳೂ ಮತ್ತು ಸಮಸ್ತ ಸ್ಟೇಷನರಿ ಸಾಮಾನುಗಳೂ ಯಾವಾಗಲೂ ದೊರೆಯುತ್ತವೆ.

ಅಲ್ಲದೆ :—ಬೆಂಗಳೂರು ಪ್ರೆಸ್ಸಿನ ಸಾಮಾನುಗಳು ನಮ್ಮಲ್ಲಿವೆ.

ಚೌರಪ್ಪನವರ ಪುಸ್ತಕಗಳು ನಮ್ಮಲ್ಲಿವೆ.

ಮೈಸೂರು ಮಕ್ಕಳು ಮಾಸಪತ್ರಿಕೆಗೆ ಏಜಂಟರಾಗಿದ್ದೇವೆ.

ಕೆ. ವಿ. ರಾಮಶೆಟ್ಟಿ ಅಂಡ್ ಕೊ,
ಮೈಸೂರು.

ಕರ್ನಾಟಕ ಸ್ಕೌಟ್ ಮಾಸಪತ್ರಿಕೆ.

ವಾರ್ಷಿಕ ಚಂದಾ ೧—೮—೦.
ಪೋಷಕರಿಗೆ ,, ೩—೦—೦.

ವ್ಯಾಪಾರಸ್ಥರ ಜಾಹೀರಾತುಗಳ ದರಗಳ ವಿವರವನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕು.

ಮ್ಯಾನೇಜರ್
ಕರ್ನಾಟಕ ಸ್ಕೌಟ್, ಧಾರವಾಡ.

'ಮೈಸೂರು ಮಕ್ಕಳು' ಚಿತ್ರಮಾಲೆ
(Mysore Makkalu Pictorial)
1927-1928

ನುಣುಪಾದ ಕಾಗದದ ಮೇಲೆ ಎರಡು ರಂಗುಗಳಲ್ಲಿ ಮೈಸೂರು ಮಕ್ಕಳ ಚಿತ್ರಗಳನ್ನು ಮುದ್ರಿಸಿ ಪುಸ್ತಕರೂಪದಲ್ಲಿ ಹೊರಡಿಸಲಾಗಿದೆ.

ದಸರಾ ಕಾಲದಲ್ಲಿ ಮಕ್ಕಳಿಗೆ ಈ ಪುಸ್ತಕಗಳನ್ನು ಉಡುಗೆರೆಯಾಗಿ ಕೊಡಲು ಅನುಕೂಲವಾಗಿದೆ. ತಮ್ಮ ದೇಶ, ತಮ್ಮ ಜನವೆಂಬ ಸ್ವಾಭಿಮಾನವು ಮಕ್ಕಳಿಗಿರಬೇಕಾದರೆ ಇದೇ ಉಪಾಯ.

ನಮ್ಮ ಚಂದಾದಾರರಿಗೆ ಮಾತ್ರ ೦-೬-೦, ಇತರರಿಗೆ ೦-೮-೦ ವಿ.ಪಿ. ಖರ್ಚು ಪ್ರತ್ಯೇಕ. ವಿ.ಪಿ. ಅಪೇಕ್ಷಿಸುವವರು ೩ ಆಣೆ ಸ್ಟಾಂಪನ್ನು ಕಳುಹಿಸಬೇಕು. ಮೈಸೂರುಮಕ್ಕಳು ಆಫೀಸು, ಮೈಸೂರು.

ಜೀವನಾಧಾರ ಡಿಪೋ ಇವರ ಮೂರು ರತ್ನಗಳು

೧. ಜೀವನಾಧಾರ

ಸಣ್ಣ ಬಾಟ್ಲಿ 0—12—0 ದೊಡ್ಡ ಬಾಟ್ಲಿ 1—8—0 ವಿ. ಪಿ. ಚಾರ್ಜ್ ಪ್ರತ್ಯೇಕ.

೨೬-೧೦-೨೭ ಬೊಮ್ಮಗಟ್ಟ.

ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಅನೇಕ ವ್ಯಾಧಿಗಳಿಗೆ ಉಪಯೋಗಿಸಿದ್ದೇನೆ. ಮತ್ತು ಅದು ಗುಣಕೊಡುವ ವಿಷಯದಲ್ಲಿ ತುಂಬಾ ತೃಪ್ತಿಹೊಂದಿದ್ದೇನೆ. ನಿಜವಾಗಿ ಅದು ಉತ್ಕೃಷ್ಟ ಔಷಧವಿರುತ್ತದೆ. ಮತ್ತು ಅದು ಜಗತ್ತಿಗೆ ಒಂದು ಲಾಭವೇ ಆಗಿರುತ್ತದೆ. ಮೈಸೂರು ಪ್ರದರ್ಶನದಲ್ಲಿ ಜೀವನಾಧಾರವು ಬಹುಮಾನದ ಇನಾಮನ್ನು ಹೊಂದಿದ್ದನ್ನು ತಿಳಿಸಲು ಅತ್ಯಂತ ಸಂತೋಷಪಡುತ್ತೇನೆ. ಜೀವನಾಧಾರದ ಒಂದು ಸೀಸೆಯು ಪ್ರತಿಯೊಂದು ಮನೆಯಲ್ಲಿ ಇಡುವುದಕ್ಕೆ ನಾನು ಉಪದೇಶಮಾಡುವೆನು. ಕಠಿಣ ಪ್ರಸಂಗದಲ್ಲಿ ಒಬ್ಬ ಡಾಕ್ಟರನಂತೆ ಉಪಯೋಗಬೀಳುತ್ತದೆ.

ಬಿ. ಎಸ್. ರಾಮಚಂದ್ರರಾವ್,
ಜೇರಮನ್, ಗ್ರಾಮಪಂಚಾಯಿತ.

ಸಸ್ಯ ಕುದುರೆಯು ಮೈಗೀ ಎಂಬ ತ್ವಚರೋಗದಿಂದ ಪೀಡಿತವಾಗಿತ್ತು. ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಕಳೆದ ೧೫ ದಿವಸಗಳಿಂದ ಉಪಯೋಗಿಸುತ್ತಿರುವೆನು. ಮತ್ತು ಬಹಳೇ ಗುಣಕೊಟ್ಟಿರುವುದು.

೨-೧೧-೨೭,
ಮೈಸೂರು.

ಸಿದ್ಧರಾಜ ಅರಸು.
ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್.

೨. ಗಜಕರ್ಣದ ತೈಲ.

ಬಾಟ್ಲಿ ೧ ಕ್ಕೆ 0 12 0 ಪ್ಯಾಕಿಂಗ್ ಪೋಸ್ಟೇಜ್ ಪ್ರತ್ಯೇಕ.

ಧಾರವಾಡ, ೧೦-೨-೨೮.

ನಾನು ನಿಮ್ಮ ಗಜಕರ್ಣದ ತೈಲವನ್ನು ತಲೆಯಲ್ಲಿ ಕೂದಲುಗಳು ಉದುರಿರುವದಕ್ಕೆ (Pach of baldness) ಉಪಯೋಗಿಸುತ್ತಿದ್ದೇನೆ. ಅದು ಈಗಾಗಲೇ ಬಹಳ ಗುಣಕೊಟ್ಟಿರುವುದು. ಕಾರಣ ಈ ಪತ್ರಮುಟ್ಟಿದ ಕೂಡ್ಲೆ 2 ಬಾಟ್ಲಿ ಗಜಕರ್ಣದ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

ರಾಮರಾವ್ ಎನ್. ದೇಸಾಯಿ.

ಅನೇಕರು ಅನುಭವಿಸುತ್ತಿರುವ ನವೆ, ಗಜಕರ್ಣ, ಹುಳಕಡ್ಡಿ, ಕಜ್ಜಿ, ಉಗುರುಸುತ್ತು; ಹಳೇ ಇಸಬು, ಕತ್ತಿ ಘಾಯ, ಮತ್ತು ಎಲ್ಲಾ ತರಹದ ಚರ್ಮವ್ಯಾಧಿಗಳಿಗೆ ಗಜಕರ್ಣದ ತೈಲವನ್ನು ಹಚ್ಚಿದ 2-3 ದಿನಗಳಲ್ಲಿ ಗುಣಮಾಡಿಕೊಳ್ಳಬಹುದು, ಇದರಲ್ಲಿ ಮುಖ್ಯವಾದ ಗುಣವೇನೆಂದರೆ, ಗಾಯ ಅಥವಾ ಹುಣ್ಣಿನಿಂದ ಬರುವ ಕಲೆಗಳನ್ನು ತೆಗೆದುಹಾಕಿ ಪುನಃ ಮೊದಲಿನ ಚರ್ಮದ ಬಣ್ಣಕ್ಕೆ ತರುವದು.

೩. ಶತಮೂಲಿಕಾ ಸಮ್ಮೋಳನ ಭೃಂಗಾಮಲಕ ತೈಲ.

ಬಾಟ್ಲಿ 1ಕ್ಕೆ 0 ೮ 0. ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

ಈ ತೈಲವು ಆಯುರ್ವೇದ ಪಾರಂಪರ್ಯೋಕ್ತವಾದ ಶತಮೂಲಿಕಾಸಂಗ್ರಹವನ್ನು ಪಾಶ್ಚಾತ್ಯ ರಸಾಯನಶಾಸ್ತ್ರ ರೀತ್ಯಾ (Latest Scientific Process) ಶುದ್ಧಿಯಾದ ತೈಲದಲ್ಲಿ ಪಕ್ವಮಾಡಿ ವನಸ್ಪತಿ ದ್ರವ್ಯಗಳ ಪ್ರತಿಯೊಂದು ಗುಣಾಂಶವನ್ನೂ ಭಾವನೆಮಾಡಿ ತಯಾರಿಸಿದೆ. ಇದನ್ನು ಪ್ರತಿದಿವಸವೂ ತಲೆಗೆ ಲೇಪಿಸುವುದರಿಂದ ಜ್ಞಾನಶಕ್ತಿಯು ಅಭಿವೃದ್ಧಿಯಾಗಿ ಬುದ್ಧಿಭ್ರಮೆಯು ನಾಶವಾಗುತ್ತದೆ. ನೇತ್ರವಾತ ರೋಗಗಳು ಗುಣವಾಗಿ ಕಣ್ಣುಗಳಿಗೂ, ಮುಖಕ್ಕೂ ಕಾಂತಿಯು ಬರುವುದು.

ಮೈಸೂರು ಬ್ರಾಂಚು—ಇಮಾಮಲ್ ರೋಡು.

ಜೀವನಾಧಾರ ಡಿಪೋ, ಹುಬ್ಬಳ್ಳಿ.

ಸುಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ರಿ. ನಂ.—M. 2377.
ಮೈಸೂರು ಸ್ಕೌಟಿನ ಕನ್ನಡಭಾಗವು ಇದರೊಡನೆ ಸಮಾವಿಷ್ಟವಾಗಿದೆ.

ಮೈಸೂರು ಮಕ್ಕಳು

॥ ಓದುವ ಹೆಣ್ಗಳು ಗಂಡುಗಳುಲಿವರು, ಹರುಷವಬೀರುತ ಓಡ್ಯಾಡಿ ॥
॥ ನಾಲ್ವಡಿ ಕೃಷ್ಣನ ಕೊಂಡಾಡಿ ॥

೧ನೆಯ ವರ್ಷ.] ಸೆಪ್ಟಂಬರ್ ೧೯೨೮, ಮೈಸೂರು. [೧೨ನೆಯ ಹೆಜ್ಜೆ.

ಮೈಸೂರು ಸ್ಕೌಟುಮಂಡಳಿಯ ಕನ್ನಡ ಮಾಸಪತ್ರಿಕೆ.

ಈ ತಿಂಗಳಲ್ಲಿ ಏನಿವೆ!

೧ ಮೈಸೂರು ಮಕ್ಕಳ ಚಿತ್ರಪರಿಚಯ—
ಶ್ರೀ|| ಬಿ. ಎಂ. ಶ್ರೀಕಂಠಯ್ಯನವರು
೨ ಮೈಸೂರು ಮಕ್ಕಳ ಜೀವನಚರಿತ್ರೆ—
ಶ್ರೀ|| ಬಿ. ಎಂ. ಶ್ರೀಕಂಠಯ್ಯನವರು
೩ ನಮ್ಮ ದಸು, ಮಾತುಗಳು,
೪ ಕಪ್ಪೆಗಳ ಕಟ್ಟು—ತ್ಯಾಗಶೀಲಕರ್ಣ
೫ ಆಟದ ಬೈಲು
೬ ಕಬ್‌ಗಳು ಕಲಿಯಬೇಕಾದುದು
೭. ಹಿರಿಯಣ್ಣಂದಿರಿಗಾಗಿ
೮. ಕಬ್‌ಗಳೊಡನೆ ನಮ್ಮದೊಂದು ಹರಟೆ
೯ ಚಿಕ್ಕವರಿಗೆ ಒಂದು ಸಂದೇಶ—
ಶ್ರೀ|| ಎ ಆರ್ ವಾಡಿಯಾ
೧೦ ಪೋಲಿ—ಒಂದು ಕಪ್ಪೆ
೧೧. ಗೃಹಶಿಕ್ಷಣ—ಅಂಕ ೪
೧೨. ಸ್ಕೌಟು ಸುದ್ದಿಗಳು—ವಿಮರ್ಶೆ

ಅಲ್ಲಲ್ಲಿ ಕೆಲಕೆಲವು

ಸಂಪಾದಕರು.
ಎಸ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.
ಆರ್. ಕೆ. ಎಕ್ಕೂರ್

ವಾರ್ಷಿಕಚಂದಾ ೧—೪—೦
ಸ್ಕೂಲು ಮತ್ತು ವಾಚನಾಲಯ
ಗಳಿಗೆ ರೂ. ೨.

ಮೈಸೂರು ಮಕ್ಕಳು ಆಫೀಸ್,
ಮೈಸೂರು.

ಮೈಸೂರು ಮಕ್ಕಳು

ದೇವಭೂಜ.

ಈ ಮಾಸಪತ್ರಿಕೆಯಲ್ಲಿ ಪೌರಾಣಿಕ, ಐತಿಹಾಸಿಕ, ಕಾದಂಬರಿಗಳೂ, ಚಿಕ್ಕ ಕಥೆಗಳೂ, ವೈದ್ಯಭಾಗ, ಗೃಹಶಾಸ್ತ್ರ ಮುಂತಾದ ವಿಷಯಗಳೂ, ಉತ್ತಮ ಲೇಖಗಳೂ, ವರ್ತಮಾನಸಂಗ್ರಹವೂ, ಪ್ರತಿ ತಿಂಗಳದ ಕನ್ನಡ ಕ್ಯಾಲೇಂಡರವೂ ಕ್ರಮಶಃ ಪ್ರಕಟವಾಗುವವು.

ವಾರ್ಷಿಕಚಂದಾ—ಮುಂಗಡ ೧-೪-೦, ವಿ.ಪಿ.ಯಿಂದ ೧-೮-೦.

ವಿಳಾಸ:—"ದೇವಭೂಜ" ಆಫೀಸ,
ಪೋಸ್ಟ ಬೋಣ, ಡಿ|| ಧಾರವಾಡ.

ಕಥೆ! ಕಾದಂಬರಿ! ನಾಟಕ!
ಕವಿತೆ! ಲೇಖನ! ಹಾಸ್ಯ!

ದೊಡ್ಡ ಆಕಾರದ ೨೪ ಪುಟಗಳು!

ಸ ವಾ ಂ ಗ ಸು ಂ ದ ರ!

ವರ್ಷಾಂತ್ಯಕ್ಕೆ ವಿಶೇಷಾಂಕ!!

ಸ ಚಿ ತ್ರ ಮಾ ಸ ಪ ತ್ರಿ ಕೆ!!

ಉದಯ ಭಾರತ

ವಿಶೇಷಾಂಕ ರಹಿತ ೧-೮-೦

ವಿಶೇಷಾಂಕ ಸಹಿತ ೨-೦-೦

ಉದಯ ಭಾರತ ಕಾರ್ಯಾಲಯ,
ಕೊಡಿಯಾಲ್‌ಬೈಲ್

THE SCHOOL FOLK

(A BRIGHT LIVELY ENLIGHTENING MONTHLY FOR YOUNG AND OLD)

10th YEAR BEGINS FROM JUNE 1928.

SUBSCRIPTION :

Rupee 1—8—0 only per Year.

Apply to:—

THE MANAGER,
SCHOOL FOLK,
TUMKUR.

THE BOY SCOUT YEAR BOOK

The First of its Kind published in India.

A very **Intersting, Instructive** and **Useful** Book For all Scouts and Scouters—Contains a History of Scouting in India during the last decade, information about Youth Movements, Enjoyable Stories, Popular Scientific articles, discussion of problems on Scouting, Progress in the Provinces and States of India, How to make things at Home—**AND,**

MANY OTHER FEATURES.

Our contributors are among the most emminent People at Home and Abroad.

YES, YOU WILL LIKE THE BOOK.
ITS SUCCESS AND POPULARITY ARE GUARANTEED.

A Hundred Pictures and One or Two colour plates. All for Re. 1, (One Rupee) only—Postage extra. It is worth at least 10 times its value.

AN IDEAL DASARA, CHRISTMAS OR NEW YEAR PRESENTATION BOOK.

Make Sure of Your Copy :

Book your orders to-day, with,
The Organising Commissioner,
The Boy Scouts of Mysore,
Fort, Bangalore City.

ಕರ್ನಾಟಕ ಟಾಯಿಮ್ಸ್.

ವಾರಪತ್ರಿಕೆ

ಹಿಂದುಳಿದ ಜಾತಿಯವರ ಉನ್ನತಿಯು ಎಲ್ಲ ಬಗೆಯಿಂದಲೂ ಆಗ ಬೇಕೆಂದು ಹವಣಿಸುವ ಪತ್ರಿಕೆಯು ಕರ್ನಾಟಕದಲ್ಲಿ ಇದೇ ಒಂದು.

—ಸಂಪಾದಕರು—
ಶ್ರೀ|| ಎಚ್. ಎಸ್. ಶಿವಲಿಂಗಶಾಸ್ತ್ರಿಗಳು.

ವಾರ್ಷಿಕ ಚಂದಾ ೩—೮—೦. ವಿ. ಪಿ. ಯಿಂದ ೩—೧೨—೦.

—ವ್ಯವಸ್ಥಾಪಕರು—
ಕರ್ನಾಟಕ ಟಾಯಿಮ್ಸ್, ಧಾರವಾಡ.

ಮೈಸೂರು ಮಕ್ಕಳು

ಶ್ರೀ॥ ಬಿ. ಎಂ. ಶ್ರೀಕಂಠಯ್ಯನವರು.

ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು.

"ಲೋ! ಕಾಂ, ಅದೆಲ್ಲಾ ಆಗುವುದಿಲ್ಲವಪ್ಪ, ನೋಡು ಇಂಗ್ಲಿಷ್ ಪ್ರಪಂಚದಲ್ಲೆಲ್ಲಾ ಹರಡಿರುವ ಭಾಷೆ. ನಮಗೆಲ್ಲಾ ರಾಜ ಭಾಷೆ. ಅಲ್ಲದೆ, ಅದರಲ್ಲಿರುವ ಸ್ವಾರಸ್ಯ ಕನ್ನಡದಲ್ಲಿದೆಯೇನೋ? ನಮ್ಮ ನೆ ಕನ್ನಡಜಾಷೆಗೋಸ್ಕರ ಹಾಗೆ ಮಾಡಬೇಕು, ಹೀಗೆಮಾಡಬೇಕು ಅನ್ನುತ್ತ ಇದ್ದರೆ ಏನಾಗುತ್ತದೆ?"

"ಲೋ! ನೋಡು, ಕನ್ನಡದಲ್ಲಿ ಏನಿದೆ ಎಂಬುದನ್ನು ಕನ್ನಡವನ್ನು ಅಭ್ಯಾಸಮಾಡಿನೋಡಿದರೆ ತಾನೇ ಗೊತ್ತಾಗುತ್ತದೆ. ನರಿಯಾಗಿ ಶಬ್ದಾದರ್ಶವನ್ನೇ ಒದದಿರುವ ನಾವು ಹಾಗೆಲ್ಲಾ ಮಾತನಾಡಿದರೆ ನಮ್ಮ ಯೋಗ್ಯತೆ ಗೊತ್ತಾಗುತ್ತದೆ."

ಹೀಗೆಂದು ಇಬ್ಬರು ತರುಣರು ಕೆಲವು ವರ್ಷಗಳಹಿಂದೆ ಮದ್ರಾಸಿನಲ್ಲಿ ಸಮುದ್ರತೀರದಬಳಿ ಮರಳಿನ ದಿಬ್ಬದಮೇಲೆ ಮಲಗಿಕೊಂಡು ಒಂದು ಸಾಯಂಕಾಲ ಮಾತನಾಡುತ್ತಿದ್ದರು. ಇಬ್ಬರೂ ಕನ್ನಡಿಗರೇ, ಆದರೆ 'ಕಂ' ಎಂದು ಕರೆಯಿಸಿಕೊಂಡವನಿಗೆ ಇದ್ದಷ್ಟು ಕನ್ನಡದಲ್ಲಿ ಅಭಿಮಾನ ಇನ್ನೊಬ್ಬನಿಗೆ ಇದ್ದಂತೆ ತೋರಲಿಲ್ಲ. ಈಚೀಚೆಗೆ ತಾನೇ ಕನ್ನಡದಲ್ಲಿ ಬನರಿಗೆ ಸ್ವಲ್ಪ ಸ್ವಲ್ಪ ಅಭಿರುಚಿಯುಂಟಾಗುತ್ತಿದೆ. ಆಗಿನ ಕಾಲದಲ್ಲಿ ಕನ್ನಡದಲ್ಲಿ ಮಾತನಾಡುವುದೆಂದರೆ ಅವಮಾನಕರವೆಂದು ವಿದ್ಯಾವಂತರು ಭಾವಿಸುತ್ತಿದ್ದರು. ಸ್ವಲ್ಪ ಇಂಗ್ಲಿಷ್ ಓದುವುದಕ್ಕೆ ಪ್ರಾರಂಭಮಾಡಿದರೆಂದರೆ ಆಗಲೇ ಮನೆಯಲ್ಲಿ ಅಮ್ಮನೊಡನೆಯೂ ಸಹ 'ಟಿಪ' 'ಪಿಪ' ಎಂತ ಇಂಗ್ಲಿಷ್ ಪ್ರಾರಂಭಮಾಡಿಬಿಡುತ್ತಿದ್ದರು. ಅಂತಹ ಕಾಲದಲ್ಲಿ ನಮ್ಮ ಶ್ರೀಕಂಠಯ್ಯನವರಿಗೆ ಕನ್ನಡದಲ್ಲಿ ಪ್ರೇಮವೂ ಭಕ್ತಿಯೂ ಅತಿಶಯವಾಗಿ ತುಂಬಿದ್ದಿತು, ಕಂಠಿ ಎಂದು ಕರೆಯಿಸಿಕೊಂಡವರೇ ನಮ್ಮ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು.

ಇವರು 1884 ರಲ್ಲಿ ಹುಟ್ಟಿದರು. ಇವರ ತಂದೆಯು ಶ್ರೀ. ಬಿ. ಸೆಟ್ಟಿಲಾರಯ್ಯನವರು. ಇವರ ಬಾಲ್ಯದ ವಿದ್ಯಾಭ್ಯಾಸವೆಲ್ಲವೂ ಶ್ರೀರಂಗಪಟ್ಟಣದಲ್ಲಿ ನಡೆಯಿತು. ಆಮೇಲೆ ಪೌಢವಿದ್ಯಾಭ್ಯಾಸಕ್ಕೆ ಇವರು ಬೆಂಗಳೂರಿಗೆ ಹೋದರು. ಬೆಂಗಳೂರಿನಲ್ಲಿ ವಿದ್ಯಾಭ್ಯಾಸವು ಪೂರೈಸಿದ ಬಳಿಕ ಮದ್ರಾಸಿಗೆ ಹೋದರು. ಮದ್ರಾಸಿನಲ್ಲಿಯೇ ಇವರು ಎಂ. ಎ. ಪರೀಕ್ಷೆಯಲ್ಲಿಯೂ, ಬಿ. ಎಲ್. ಎಂಬ ವಕೀಲಿ ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು. ಬಿ. ಎ ಆದವರು ಸಾಧಾರಣವಾಗಿ ಸರೀಕ್ಷೆಯಾಗೊತನೆಯೇ ಎಂದು ವಕೀಲಿ ಕೆಲಸವನ್ನು ಪ್ರಾರಂಭಿಸುವರು, ಆದರೆ ಡೈಸನರವರಾತ್ ನಮ್ಮ ಶ್ರೀಕಂಠಯ್ಯನವರು ವಕೀಲರಾಗದೆ ಕಾಲೇಜಿನಲ್ಲಿ ಅಧ್ಯಾಪಕರಾದರು.

ನೀನು ಇವರನ್ನು ನೋಡಿದ್ದೀಯಾ, ಮಗು? ಎಷ್ಟು ಸೌಮ್ಯವಾಗಿದ್ದಾರೆ ಅಂತಮಾಡಿದ್ದಿ! ಹೊರಗೆ ನೋಡಿದರೆ ಮುಖದಲ್ಲಿರುವ ಕಳೆಯಿಂದ ಹೇಳಬೇಕೇ ಹೊರತು ಆಡಂಬರದಿಂದ ನಿಜವಾಗಿಯೂ ಇವರು ಇಂತಹ ಘೌಢ ವಿದ್ಯಾಭ್ಯಾಸಮಾಡಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದವರೆಂದು ಹೇಳುವದಕ್ಕೇ ಆಗುವುದಿಲ್ಲ. ತುಂಬದ ಕೊಡ, ಮಗು.

ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಇವರು ಕೆಲಸವನ್ನು ಪ್ರಾರಂಭಮಾಡಿದಾಗಿನಿಂದಲೂ, ಗಲಭೆಯಿಲ್ಲದೆ ಸ್ವಭಾಷಾ ಸೇವೆಯನ್ನು ಮಾಡುತ್ತಿದ್ದರು. ಗ್ರಂಥ ಪ್ರಪಂಚದಲ್ಲಿ ಇವರಿಗೆ 'ಶ್ರೀ' ಎಂದು ಹೆಸರು. ಶ್ರೀಯವರು ಕನ್ನಡಭಾಷೆಗೆ ಹೊಸದಾಗಿ ಒಂದು ಜೀವಕಳೆಯನ್ನು ಕೊಟ್ಟಿದ್ದಾರೆ. ಅಂದರೆ ಇಂಗ್ಲಿಷ್ ಭಾಷೆಯಲ್ಲಿರುವ ಸೊಬಗು ಕನ್ನಡದಲ್ಲಿಯೂ ಸಿಗುವದೆಂದು ತೋರಿಸಿದರು. ಆದರೆ ಇವರ ಮುಖ್ಯ ಸೇವೆ ಏನೆಂದರೆ ಕನ್ನಡದಲ್ಲಿ ಹೊಸಮಾದರಿಯ ಪದ್ಯಗಳನ್ನು ಬರೆಯುವುದನ್ನು ಕಲಿಯಿಸಿದುದು. ಅಂದರೆ ಕನ್ನಡದಲ್ಲಿ ಇನ್ನೂ ಜೀವವಿದೆ ಎಂದು ಇವರು ಸಾರಿದರು.

ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಇವರನ್ನು ವಿಶ್ವವಿದ್ಯಾನಿಲಯದ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿ ಸರ್ಕಾರದವರು ಕಾಲೇಜಿನಿಂದ ವರ್ಗಮಾಡಿದರು. ಅಲ್ಲಿಯೇ ವಿರಾಮವಿಲ್ಲದ ಕೆಲಸಗಳು ಆದರಲ್ಲಿಯೂ ವಿರಾಮಮಾಡಿಕೊಂಡು ಭಾಷೆಸೇವೆಯನ್ನು ಮಾಡುತ್ತಲೇ ಇದ್ದಾರೆ. ಮೊನ್ನೆ ಗುಲ್ಬರ್ಗದಲ್ಲಿ ಒಂದು ದೊಡ್ಡ ಸಭೆ ಸೇರಿದ್ದಿತು. ಅಲ್ಲಿ ಕನ್ನಡಭಾಷಾ ಪ್ರೇಮಿಗಳೆಲ್ಲರೂ ಕರ್ನಾಟಕದ ಎಲ್ಲಾ ಕಡೆಯಿಂದಲೂ ಬಂದಿದ್ದರು. ಆಗ ಯಾರನ್ನು ಸಭಾಧ್ಯಕ್ಷರನ್ನಾಗಿ ಮಾಡಬೇಕೆಂದು ಚರ್ಚೆಯು ಒಂತು. ಯಾಕೆಂದರೆ ಅದು ಅಪೂರ್ವ ಗೌರವ. ಕನ್ನಡ ರಾಷ್ಟ್ರದಲ್ಲೆಲ್ಲಾ ಪ್ರಖ್ಯಾತನಾದವನೇ ಅದಕ್ಕೆ ಯೋಗ್ಯನು. ಅಂತಹ ಅಪೂರ್ವ ಗೌರವಕ್ಕೆ ನಮ್ಮ ಶ್ರೀಕಂಠಯ್ಯನವರೇ ಅರ್ಹರೆಂದು ಎಲ್ಲರೂ ಸಾರಿದರು. ಶ್ರೀಯವರು ಎಷ್ಟು ಪ್ರಖ್ಯಾತರು!

ಮಕ್ಕಳಲ್ಲಿ ಎಷ್ಟು ಪ್ರೇಮವಿದೆನ್ನುತ್ತಿ! ಏಕೆಂದರೆ ಅವರ ಹೃದಯದ ಸರಳತೆಯೂ ಮಕ್ಕಳಂತಹುದೇ! ಮೈಸೂರು ಮಕ್ಕಳ ಸೇವೆ ಎಂದರೆ ಅವರಿಗೆ ಭಗವಂತನ ಸೇವೆಯೆಂದೇ ಭಾವನೆ. ನಮ್ಮ ನಾಡು, ನಮ್ಮ ಮಾತು, ನಮ್ಮ ಸಂಸ್ಕೃತಿ ಇವುಗಳ ಸೇವೆಗೆ ಅವರ ಉತ್ಸಾಹಕ್ಕೆ ಅನುಗುಣವಾಗಿ ಭಗವಂತನು ಅವರಿಗೆ ಅವಕಾಶಗಳನ್ನು ಕಲ್ಪಿಸಿಕೊಡಲಿ!

ಇನ್ನೊಂದು ಮಾತು, ನಮ್ಮ ಪತ್ರಿಕೆಗೆ "ಮೈಸೂರು ಮಕ್ಕಳು" ಎಂದು ಹೆಸರಿಡುವುದಕ್ಕೆ ಇವರೇ ಕಾರಣ. ಇವರು ಬರೆದಿರುವ ಆ ಹೆಸರಿನ ಪದ್ಯವೇ ನಮಗೆ ಈ ಉತ್ಸಾಹವನ್ನು ಕೊಟ್ಟಿತು. ಮಗು, ನೀನು ಆ ಪದ್ಯವನ್ನು ಇದುವರಿವಿಗೂ ಓದದೇ ಇದ್ದಲ್ಲಿ ಖಂಡಿತವಾಗಿಯೂ ಓದಲೇ ಬೇಕು. ಮರೆಯಬೇಡ.

[ಸಂ.]

ನಮ್ಮದಷ್ಟು ಮಾತು.

"ಮೈಸೂರು ಮಕ್ಕಳಿಗೆ" ಒಂದು ವರ್ಷ ತುಂಬಿತು.

ಈ ಸಂಚಿಕೆಯೊಡನೆ ನಮ್ಮ ಪುಟ್ಟ ಮಾಸಿಕಪತ್ರಿಕೆಯ ಮೊದಲನೆಯ ವರ್ಷವು ಪೂರೈಸಿದಂತಾಗುತ್ತದೆ. ಕಳೆದ ವರ್ಷದ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭಮಾಡಿ ತಿಂಗಳಿಗೆ ಒಂದರಂತೆ ಈ ವರೆಗೆ ಹನ್ನೆರಡು ಹೆಜ್ಜೆಗಳನ್ನು ಇಟ್ಟಿದ್ದೇವೆ. ಇದು ನಮಗೆ ಬಹಳ ಹೆಮ್ಮೆಯ ಸಂಗತಿ. ನಮ್ಮ ಮುಖ್ಯ ಕಬ್ಬಾದ ಶ್ರೀಮದ್ಯುವರಾಜಕುಮಾರರು ಕಬ್ ದೀಕ್ಷೆಯನ್ನು ವಹಿಸಿದ ಸಮಾರಂಭದ ಜ್ಞಾಪಕಕ್ಕೋಸ್ಕರವೆಂದು ಮೊದಲನೆಯ ಹೆಜ್ಜೆಯನ್ನಿಟ್ಟೆವು. ಆಮೇಲೆ ಅನೇಕರ ಭರವಸೆಗಳಿಂದಲೂ, ಉಪದೇಶ ದಿಂದಲೂ, ಆಶೀರ್ವಾದದಿಂದಲೂ ಒಂದು ಹೆಜ್ಜೆಯಿಟ್ಟ ಈ ಪುಟ್ಟನು ಹಾಗೆ ಇನ್ನೂ ಹನ್ನೊಂದು ಹೆಜ್ಜೆಗಳನ್ನಿಟ್ಟಿರುವನು.

ಗೆಳೆಯರಿಗೆರಡು ಮಾತು.

ಹಾಗೆಂದಮಾತ್ರಕ್ಕೆ ಇದು ನಮ್ಮ ಸ್ವವ್ಯವಸಾಯದಿಂದ ಸಾಧ್ಯವಾದ ಕೆಲಸವೆಂದು ನಾವು ಖಂಡಿತವಾಗಿಯೂ ಸಂಭುವಿಸಿಲ್ಲ. ತಪ್ಪು ಹೆಜ್ಜೆಯನ್ನಿಡುತ್ತಿದ್ದ ಈ ಪುಟ್ಟ ಕನ್ನಡಿಗುವರಸನ್ನು ಕೈಹಿಡಿದು ನಡೆಯಿಸಿದ ಮಹನೀಯರೇ ಈ ಕೆಲಸವನ್ನು ಆಗಮಾಡಿಸಿದವರು. ಕೆಲವರು ಪ್ರೋತ್ಸಾಹಿಸಿದವರಿದ್ದಾರೆ, ಕೆಲವರು ಉಪದೇಶಿಸಿದವರಿದ್ದಾರೆ, ಕೆಲವರು ಜೊತೆಯಲ್ಲಿ ಆಡಿಬಾಡಿ ಕುಣಿದವರಿದ್ದಾರೆ. ಇವರೆಲ್ಲರಿಗೂ ಈ ಮಗುವು ಎಷ್ಟು ಕೃತಜ್ಞನಾಗಿದ್ದರೂ ತೀರದು. ಆದರೆ ಇವರೆಲ್ಲರಲ್ಲದೆ ಇನ್ನೂ ಕೆಲವರಿದ್ದಾರೆ. ಅವರು ತಮ್ಮ ನಡುವೆ ಇನ್ನೊಬ್ಬ ಗೆಳೆಯನು ಬಂದನೆಂದು ಭಾವಿಸಿ ಈ ಮಾಸಪತ್ರಿಕೆಯನ್ನು ಬರಮಾಡಿಕೊಂಡು ಬೆನ್ನು ತಟ್ಟಿ ತಮ್ಮೊಡನೆ ಇದನ್ನೂ ಮುಂದಕ್ಕೆ ನಡೆಯಿಸಿಕೊಂಡು ಬಂದರು. ಇವರ್ಯಾರೆಂದರೆ ನಮ್ಮ ಚಂದಾದಾರರಾದ ಬಾಲಕರು. ಇವರೊಡನೆ ಸೇರಿ, ಕಲಿತು, ಕಲಿತು, ಓದ್ಯಾಡಿದುದರಿಂದ "ಮೈಸೂರು ಮಕ್ಕಳಿಗೆ" ಎಷ್ಟು ಜನವಾಗಿದೆಯೆಂಬುದು ಹೇಳಲಾಗುವುದಿಲ್ಲ.

ಪತ್ರಿಕಾಕರ್ತರುಗಳಿಗೆ ನಮ್ಮದೊಂದು ವಂದನೆ. ಪ್ರಾಯಶಃ ಕರ್ನಾಟಕರಾಷ್ಟ್ರದ ಎಲ್ಲಾ ಪತ್ರಿಕಾಕರ್ತರುಗಳು ತಮ್ಮ ಪತ್ರಿಕೆಗಳನ್ನು ವಿನಿಮಯರೂಪದಿಂದಲೋ ಅಥವಾ ಹಾಗೆಯೋ ನಮಗೆ ಕಳುಹಿಸುತ್ತಿರುತ್ತಾರೆ. ನಾವು ಯೋಚಿಸಿರುವ ವಾಚನಾಲಯದಲ್ಲಿ ಸಾಧಾರಣವಾಗಿ ಕರ್ನಾಟಕದ ವಿಶಿಷ್ಟ ಪತ್ರಿಕೆಗಳೂ ಇರಬೇಕೆಂದು ನಮ್ಮ ಆಭಿಲಾಷೆ. ಇದನ್ನು ಈಗಾಗಲೇ ಪೂರ್ಣಮಾಡಿರುವ ಸಹೃದಯರಾದ ಪತ್ರಿಕಾಕರ್ತರುಗಳಿಗೆ "ಮೈಸೂರು ಮಕ್ಕಳ" ಸವಿನಯವಂದನೆಗಳು.

ಪತ್ರಿಕಾಕರ್ತರು ಇನ್ನೊಂದು ವಿಧವಾಗಿಯೂ ನಮ್ಮನ್ನು ಋಣಿಗಳನ್ನಾಗಿ ಮಾಡಿರುವರು. ನಮ್ಮ ಹಾಗೆ ಬರಿಗೈಯ್ಯಲ್ಲಿ ಈ ವಿಧವಾದ ಮಕ್ಕಳ ಮಾಸಿಕವಹಿಯನ್ನು ಪ್ರಕಟಿಸಿರುವುದರಲ್ಲಿ ಸಾಧಾರಣವಾಗಿ ವಿಶೇಷವಾದ ದೋಷಗಳೂ ದೋಷಗಳೂ ಇದ್ದೇ ಇರಬೇಕು. ಆದರೆ ಉತ್ತರೋತ್ತರ ಸ್ವಲ್ಪವಾದರೂ ಮುಂದುವರಿಯಬಹುದೆಂದು ಬಹಳ ಉತ್ತೇಜನಕರವಾದ ವಿಮರ್ಶೆಗಳನ್ನು ನಮ್ಮ ಪತ್ರಿಕೆಯನ್ನು ಕುರಿತು ಬರೆದಿರುವರು. ಅದು ಅವರ ಔದಾರ್ಯವನ್ನು ತೋರಿಸುವುದೇ ಹೊರ್ತು ನಮ್ಮ ಯೋಗ್ಯತೆಯನ್ನು ಸೂಚಿಸಲಾರದು. ಅಂತಹ ಔದಾರ್ಯಕ್ಕೆ ಯೋಗ್ಯನಾಗಲು ಸಂಪೂರ್ಣ ಪ್ರಯತ್ನಪಡುವನೆಂದು ಈ ಬಾಲಕನು ಭರವಸೆಕೊಡುವನು.

ನಮ್ಮ ಪೋಷಕರೂ, ಚಂದಾದಾರರೂ.

ನಮ್ಮ ಮಾಸಿಕಸತ್ರವು ಸಾಂಗವಾಗಿ ನಡೆಯುವಂತೆ ಮಾಡಿದವರ ಗುಂಪಿಗೆ ನಮ್ಮ ಪೋಷಕರೂ, ಚಂದಾದಾರರೂ ಸೇರಿದವರು. ಇವರ ಸಹಾಯವು ಘನವಾದದ್ದೇ ಆಗಿದೆ. ಪೋಷಕರ ಪ್ರಥಮಸ್ಥಾನದಲ್ಲಿ ನಮ್ಮ ಪ್ರಭುಗಳೇ ಇರುತ್ತಾರೆ. ಅಲ್ಲದೇ ನಮ್ಮ ಪತ್ರಿಕೆಯು ಹೊರಟಾಗ ತಮ್ಮ ಸಹಾನುಭೂತಿಯನ್ನು ತೋರಿಸಿ, ಬೆನ್ನು ತಟ್ಟಿ ಮುಂದಕ್ಕೆ ಬಿಟ್ಟ ನಮ್ಮ ಮುಖ್ಯನಾಯಕರಿರುತ್ತಾರೆ. ಇವರೂ ಅಲ್ಲದೆ ದಿವಾನರೇ ಮೊದಲಾದ ಇತರ ದೊಡ್ಡ ಮಹನೀಯರುಗಳು ನಮ್ಮ ಪೋಷಕವರ್ಗಕ್ಕೆ ಸೇರಿರುತ್ತಾರೆಂದು ಹೇಳುವುದು ನಮ್ಮದೊಂದು ದೊಡ್ಡ ಹೆಮ್ಮೆ. ತಮ್ಮ ಆಶ್ರಯದಲ್ಲಿಯೇ ನಮ್ಮ ಪತ್ರಿಕೆಯನ್ನು ಹೊರಡಿಸಬೇಕೆಂದು ನಮಗೆ ದ್ರವ್ಯಸಹಾಯವನ್ನಿತ್ತ ಮೈಸೂರು ಸ್ಕೌಟುಮಂಡಳಿಯವರನ್ನೂ ಮೈಸೂರು ಜಿಲ್ಲಾ ಸ್ಕೌಟು ಸಂಘದವರನ್ನೂ ಸಂಪಾದಕರು ಮರೆಯಲಾರರು.

ನಮಗೆ ದೊರತ ಅನುಕೂಲಗಳನ್ನೂ, ಸಹಾಯವನ್ನೂ ಒಟ್ಟಿಗೆ ಯೋಗಿಸಿಗೊಂಡು ನಮಗೆ ತೋರಿದಷ್ಟುಮಟ್ಟಿಗೆ ಮೈಸೂರು—ಏಕೆ ಕರ್ನಾಟಕದ ಮಕ್ಕಳ ಸೇವೆಯನ್ನು ಮಾಡಿರುತ್ತೇವೆ. ಇನ್ನೂ ಹೆಚ್ಚಿನ ಸಲಹೆಗಳನ್ನು ನಮಗೆ ಕಳುಹಿಸಿ ಇನ್ನೂ ಹೆಚ್ಚು ಸೇವೆಯನ್ನು ನಮ್ಮಿಂದ ತೆಗೆದುಕೊಳ್ಳುವುದು ವಾಚಕವೃಂದದವರಲ್ಲಿದೆ.

ನಮ್ಮ ಫಲಾಪೇಕ್ಷೆ.

ನಮಗೆ ಇದರಿಂದ ಇನ್ನಾವ ಫಲಾಪೇಕ್ಷೆಯೂ ಇಲ್ಲ. ನಮ್ಮ ಪತ್ರಿಕೆಯಿಂದ ಕೆಲವು ಬಾಲಕರು ಮುಂದಕ್ಕೆ ಬಂದು ನಮ್ಮ ಜನಾಂಗದ ಸೇವೆಯನ್ನು ಕೈಕೊಂಡರೆಂದರೆ ನಮಗೆ ಅದರಿಂದಲೇ ಎಲ್ಲಾ ವಿಧವಾದ ಫಲಗಳೂ ಲಭಿಸಿದವೆಂದು ತಿಳಿದು ನಮ್ಮ ಕೆಲಸವು ಸಾರ್ಥಕವಾಯಿತೆಂದು ತೃಪ್ತಿಯನ್ನು ಹೊಂದುತ್ತೇವೆ.

ಸಂಪಾದಕರು.

ಕಥೆಗಳ ಕಟ್ಟು.

(ಕನಕಪಕುಂಜ)

೧೦. ತ್ಯಾಗಶೀಲಕರ್ಣ

ಮೊನ್ನೆ ಶನಿವಾರ ಈ ಊರಿನಲ್ಲಿ ಬಂದು ನಾಟಕವಾಡಿದರು. ನಾವೆಲ್ಲಾ ನೋಡುವುದಕ್ಕೆ ಹೋಗಿದ್ದೆವು. ನಾಟಕದ ಹೆಸರು "ದಾನ ಶೂರಕರ್ಣ" ಎಂತ ಇದ್ದಿತು. ಅದನ್ನು ನೋಡಿ ನಿಮಗೆಲ್ಲಾ ಕರ್ಣನ ಕಥೆಯನ್ನು ಹೇಳೋಣ ಎಂತ ಮನಸ್ಸಾಯಿತು,

ಕರ್ಣನೇನು ಸಾಮಾನ್ಯನೇ ? ಅವನೂ ಪ್ರಖ್ಯಾತನಾದ ರಾಜ ವಂಶದಲ್ಲಿಯೇ ಹುಟ್ಟಿದವನು. ಸೂರ್ಯದೇವನು ಕುಂತಿದೇವಿಗೆ ಕೊಟ್ಟ ವರದಿಂದ ಇವನು ಹುಟ್ಟಿದನು. ಆದುದರಿಂದಲೇ ಇವನಿಗೆ 'ರವಿಸುತ' 'ಸೂರ್ಯತನಯ' ಎಂಬ ಹೆಸರುಗಳು ಬಂದವು. ಪಾಂಡವರಿದ್ದಾರಲ್ಲ ಧರ್ಮರಾಯ, ಭೀಮ ಇವರೆಲ್ಲ ಇವರೆಲ್ಲರಿಗೂ ಹಿರಿಯವನು ಕರ್ಣ. ಏಕೆಂದರೆ ಕುಂತಿದೇವಿಯು ಪಾಂಡುರಾಯನನ್ನು ಲಗ್ನವಾಗುವುದಕ್ಕೆ ಮುಂಚೆಯೇ ಕರ್ಣನನ್ನು ಪಡೆದಳು. ಆದರೇನು ? ಕುಂತಿಯು ಆ ಮಗುವನ್ನು ಬಿಟ್ಟುಬಿಟ್ಟಳು. ಆ ಮಗುವನ್ನು ನೋಡಿ ರಾಧೆಯೆಂಬ ಪಳು ತನಗೆ ಸಾಕುಮಗುವೆಂದು ಹೇಳಿಕೊಂಡು ಅದನ್ನು ಸಾಕಿದಳು. ಅಂದಿನಿಂದ ಎಲ್ಲರಿಗೂ ಕರ್ಣನು ರಾಧೆಯ ಹುಡುಗನೆಂದೇ ನಂಬಿಕೆ.

ಕರ್ಣನಿಗೆ ವಯಸ್ಸಾಗುತ್ತಲೂ ಕೌರವರಾಜನಲ್ಲಿಗೆ ಬಂದು ಸೇರಿದನು. ಕೌರವನು ಇವನ ಬಿಲ್ಲುಗಾರಿಕೆಯನ್ನೂ ಶಕ್ತಿಯನ್ನೂ ನೋಡಿ "ಓಹೋ! ಅರ್ಜುನನ್ನು ಸೋಲಿಸುವುದಕ್ಕೆ ಇವನೇ ಸರಿ" ಎಂದು ಮನಸ್ಸಿನಲ್ಲಿ ಅಂದುಕೊಂಡು ಇವನನ್ನು ತನ್ನ ಸ್ನೇಹಿತನನ್ನಾಗಿ ಮಾಡಿಕೊಂಡು ಅಂಗರಾಜ್ಯಕ್ಕೆ ರಾಜನನ್ನಾಗಿಮಾಡಿದನು. ಇವನ ಶಕ್ತಿಯು ಬಹಳವಾಗಿದ್ದಿತು. ಯಾಕೆಂದರೆ ಇವನು ಹುಟ್ಟುವಾಗಲೇ ಸೂರ್ಯದೇವನ ವರದಿಂದ ಕಿವಿಯಲ್ಲಿ ರತ್ನದಕುಂಡಲಗಳೂ ಮೈಯಲ್ಲಿ ವರ್ಜಕವಚವೂ ಇದ್ದವು. ಇವು ಇವನಲ್ಲಿ ಇರುವವರೆಗೆ ಯಾವ ಆಯುಧದಿಂದಲೂ ಇವನಿಗೆ ಅಪಜಯವಾಗುತ್ತಿರಲಿಲ್ಲ.

ಇವನಿಗೆ ದಾನದಲ್ಲಿ ಒಹಳ ಆಸೆ. ಬಡವರು, ರೋಗಿಗಳು, ಕುಂಟರು ಅಥವಾ ಯಾರೇ ಆಗಲಿ ಭಿಕ್ಷೆಯನ್ನು ಕೇಳಿದಲ್ಲಿ ಅವರು ಕೇಳಿದನ್ನು ಕೊಡದೇ ಇರುತ್ತಿರಲಿಲ್ಲ. ಇವನ ದಾನದ ಖ್ಯಾತಿಯು ಸ್ವರ್ಗ ಪದಲ್ಲೆಲ್ಲಾ ತುಂಬಿತು. ಅಷ್ಟೇ ಅಲ್ಲದೆ ಮಾತುಕೊಟ್ಟಮೇಲೆ ಪ್ರಾಣ ಹೋದರೂ ಆ ಮಾತಿಗೆ ತಪ್ಪಿ ನಡೆಯುತ್ತಿರಲಿಲ್ಲ. ಆಹಾ ಎಂಥಹವನ್ನ, ಕರ್ಣ !

ಹೀಗಿರಲು ಮಹಾಭಾರತದ ಯುದ್ಧವು ಪ್ರಾರಂಭವಾಯಿತು. ಪಾಂಡವರೂ ಕೌರವರೂ ಎದುರುಬದುರಾಗಿ ನಿಂತು ಯುದ್ಧವಾಡಲು ಪ್ರಾರಂಭಿಸಿದರು. ಆಗ ಶ್ರೀ ಕೃಷ್ಣನಿಗೆ ಯೋಚನೆಯು ಪ್ರಾರಂಭವಾಯಿತು. ಯಾಕೆಂದರೆ, ಅರ್ಜುನನ ಎದುರಾಗಿ ಕರ್ಣನು ಬಂದರೆ ಅರ್ಜುನನು ಖಂಡಿತ ಸಾಯುವನು. ಇದನ್ನು ತಿಳಿದು ಶ್ರೀ ಕೃಷ್ಣನು ಕುಂತಿ ದೇವಿಯನ್ನು ಕರೆದು ಕರ್ಣನ ಒಳಿಗೆ ಹೋಗಿ "ತೊಟ್ಟ ಬಾಣವನ್ನು ಪುನಃ ತೊಡುವುದಿಲ್ಲವಾಗಿ" ವಾಗ್ದಾನವನ್ನು ತೆಗೆದುಕೊಂಡು ಒರು ವಂತೆ ಹೇಳಿದನು. ಆ ಕುಂತಿದೇವಿಯು ಕರ್ಣನಬಳಿಗೆ ಹೋಗಿ ಹಾಗೆ ಕೇಳಲಾಗಿ, ಕರ್ಣನು "ಇಗೋ ! ನಿನಗೆ ಮಾತುಕೊಡುತ್ತೇನೆ. ನಾನು ಬಂದಾವೃತ್ತಿ ಬಿಟ್ಟ ಬಾಣವನ್ನು ಮತ್ತೆ ಬಿಡುವುದಿಲ್ಲ" ಎಂಬುದಾಗಿ ಮಾತುಕೊಟ್ಟನು. ಯುದ್ಧದಲ್ಲಿ ಕರ್ಣನು ಅರ್ಜುನನಮೇಲೆ ನಾಗಾಸ್ತ್ರವನ್ನು ಬಿಟ್ಟಾಗ ಅದು ಅವನ ಕಿರೀಟವನ್ನು ಮಾತ್ರ ಹಾರಿಸಿ ಪುನಃ ಬಂದು ಕರ್ಣನಲ್ಲಿ ಇನ್ನೊಂದಾವೃತ್ತಿ ಬಿಟ್ಟರೆ ಅರ್ಜುನನ್ನು ಕೊಲ್ಲುತ್ತೇನೆಂದುಹೇಳಿತಂತೆ ಆದರೆ ಕರ್ಣನು ಕೊಟ್ಟಮಾತನ್ನು ಜ್ಞಾಪಿಸಿಕೊಂಡು ಆಗುವುದಿಲ್ಲವೆಂದನಂತೆ !

ಇವನಲ್ಲಿರುವ ಕುಂಡಲವನ್ನೂ ಕವಚವನ್ನೂ ತೆಗೆಯಿಸಬೇಕೆಂದು ಕೃಷ್ಣನು ದೇವೇಂದ್ರನನ್ನು ಕಳುಹಿಸಲು, ದೇವೇಂದ್ರನು ಬ್ರಾಹ್ಮಣ ರೂಪದಲ್ಲಿ ಬಂದು ಅವೆರಡನ್ನು ಯಾಚಿಸಿದನು. ಆಗ ತ್ಯಾಗಶೀಲನಾದ ಕರ್ಣನು ಇದರಿಂದುಂಟಾಗಬಹುದಾದ ಕಷ್ಟಕ್ಕೆ ಹೆದರದೆ ಅವೆರಡನ್ನೂ ತ್ಯಜಿಸಿಬಿಟ್ಟನು. ಆದುದರಿಂದಲೇ ಅರ್ಜುನನಿಗೆ ಯುದ್ಧದಲ್ಲಿ ಅವನನ್ನು ಸುಲಭವಾಗಿ ಜಯಿಸಲು ಸಾಧ್ಯವಾಯಿತು. ಆದರೇನು ಕರ್ಣನು ತ್ಯಾಗಶೀಲನೆಂದು ಲೋಕವೇ ಕೊಂಡಾಡಿಬಿಟ್ಟಿತು. ಅವನ ಮರಣವನ್ನು ನೋಡಿ ಶ್ರೀ ಕೃಷ್ಣನೇ ಮೆಚ್ಚಿ ಬೆರಗಾದನು. ಆಡಿದ ಮಾತಿಗೆ ಹಿಂತೆಗೆಯದೆ, ದಾನದಲ್ಲಿ ಎಲ್ಲರಿಗಿಂತಲೂ ಶ್ರೇಷ್ಠನೆಂದು ಹೆಸರುಪಡೆದು, ಅವನು ಬಾಳಿಬದುಕಿದ ದೇಶದಲ್ಲಿರುವ ನಮಗೆಲ್ಲಾ ಆದರ್ಶಪ್ರಾಯನಾದವನು, ಮಹಾಭಾರತವೇ ಮೊದಲಾದ ಪುರಾಣಗಳಲ್ಲಿ ಯಾವನಾದರೂ ಒಬ್ಬ ಮಹನೀಯನುಂಟೇ ಎಂತ ಯಾರಾದರೂ ನಮ್ಮಲ್ಲಿ ಕೇಳಿದರೆ ಕರ್ಣನು ಒಬ್ಬನೇ ಕಾಣುವನೇ ನಿನಾ ಇನ್ಯಾರು ಇಲ್ಲ, ಆದಕ್ಕಾಗಿಯೇ ಹುಡುಗರು ಮಾತನಾಡುವಾಗ ಉದಾರಬುದ್ಧಿಯವನನ್ನು ಕುರಿತು "ಏಯ್ ! ಕರ್ಣ ಹೋಗುವಾಗ ನಿನ್ನ ಮನೆ ಮೇಲೆ ಹೋದ ಅಂತ ಕಾಣಿಸುತ್ತೆ" ಎನ್ನುವುದು !

ಆಟದಬೈಲು.

"ವಾಟರ್ಲೂ ಕದನದಲ್ಲಿ ಜಯಶೀಲರಾಗಿರುವುದಕ್ಕೆ ಈಟನ್ ಪಾಠಶಾಲೆಯ ಆಟದ ಮೈದಾನವೇ ಕಾರಣ" ಎಂದು ಒಬ್ಬ ಸುಪ್ರಸಿದ್ಧ ಇಂಗ್ಲಿಷ್ ಚರಿತ್ರಕಾರನು ಅಭಿಪ್ರಾಯಪಟ್ಟಿರುವನು. ವಾಟರ್ಲೂ ಬಳಿಯಲ್ಲಿ ಫ್ರೆಂಚರ ಸಾರ್ವಭೌಮನಾದ ನೆಪೋಲಿಯನ್ ಮಹಾಪ್ರಭು ವಿಗೂ, ಇಂಗ್ಲೀಷರಿಗೂ ಯುದ್ಧವಾಯಿತು. ಈ ಕದನದಲ್ಲಿ ಇಂಗ್ಲಿಷರೇ ಜಯಶೀಲರಾದರು. ಇದಕ್ಕೆ ಕಾರಣಭೂತನು ಇಂಗ್ಲಿಷರ ಸೈನ್ಯಾಧಿಪತಿಯಾದ ಡ್ಯೂಕ್ ಆಫ್ ವೆಲಿಂಗ್ಟನ್ನನು. ಜಯಶೀಲನಾಗಬೇಕಾದರೆ ಇರಬೇಕಾದ ಯೋಗ್ಯವಾದ ಕೆಲವು ಗುಣಗಳು ಈತನಲ್ಲಿ ಇದ್ದವು. ಇವುಗಳನ್ನು ಪಾಠಶಾಲೆಯಲ್ಲಿ ಗುರುಗಳಿಂದ ಕಲಿಯುವುದಕ್ಕೆ ಸಾಧ್ಯವಲ್ಲ. ಗುಂಪಿನಲ್ಲಿ ಮುಖಂಡನಾಗುವುದು, ಎಲ್ಲರಲ್ಲಿಯೂ ಸಮಾನ ಭಾವವನ್ನು ತೋರಿಸುವುದು, ಗುಂಪಿನ ಶ್ರೇಯಸ್ಸಿಗೆ ಸಾಧ್ಯವಾದಷ್ಟು ಪ್ರಯತ್ನಪಡುವುದು—ಇವೆಲ್ಲಾ ಪಾಠಶಾಲೆಯ ಒಳಗೆ ಬರುವುದಿಲ್ಲ. ಇವುಗಳನ್ನು ಪಾಠಶಾಲೆಯ ಹೊರಗೆ ಆಟದ ಬೈಲಿನಲ್ಲಿ ಜೊತೆಗಾರರೊಡನೆ ಆಟವಾಡುತ್ತಿರುವಾಗ, ಕಲಿಯಬೇಕು. ಆದುದರಿಂದಲೇ ಈಟನ್ ಪಾಠಶಾಲೆಯು ಆಟದ ಬೈಲಿನಲ್ಲಿ ಕಲಿತ ಈ ಗುಣಗಳೇ ಡ್ಯೂಕ್ ಆಫ್ ವೆಲಿಂಗ್ಟನ್‌ಗೆ ಮುಂದೆ ವಾಟರ್ಲೂ ಕದನದಲ್ಲಿ ಉಪಕಾರಿಗಳಾಗಿ ಪರಿಣಮಿಸಿದವು. ಆದುದರಿಂದಲೇ ವಾಟರ್ಲೂ ಕದನವನ್ನು ಈಟನ್ನಿನ ಮೈದಾನದಲ್ಲಿ ಗೆದ್ದರೆಂದು ಹೇಳಬಹುದು.

ಆಟವಾಡಬೇಕಾದರೂ ಹಿರಿಯಣ್ಣಂದಿರು ಸಾಧ್ಯವಾದಷ್ಟು ಗುಂಪಿನ ಆಟಗಳನ್ನೇ ಆಡಿಸಬೇಕು. ಯಾವನಾದರೊಬ್ಬನಿಗೆ ಪ್ರಾಮುಖ್ಯತೆಯು ಬರುವ ಆಟಗಳನ್ನು ಸಾಧ್ಯವಾದಷ್ಟು ಕಡಮೆಮಾಡಬೇಕು. ಆಟಗಳಲ್ಲಿ ಸಮಗೆ ಗೊತ್ತಾಗದೆಯೇ ಅನೇಕ ಗುಣಗಳು ಬಂದು ಬಿಡುತ್ತವೆ. ಆದುದರಿಂದಲೇ ಸರಿಯಾದ ಆಟಗಳನ್ನು ಆರಿಸುವುದೆಂದರೆ ಒಹಳ ಕಷ್ಟ—ಆದರೆ ಆದರಿಂದ ಯೋಗ್ಯವಾದ ಪ್ರತಿಫಲವೂ ಉಂಟು. ಆದುದರಿಂದಲೇ ಹಿರಿಯಣ್ಣಂದಿರ ಶಿಕ್ಷಣದಲ್ಲಿ ಆಟಕ್ಕೆ ಅಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿರುವುದು. ಆಟವು ಆಟದ ರೂಪನ್ನು ಹೊಂದಿರುವ ಪಾಠವೇ ಆಗಿರುತ್ತದೆ. ಆಟದಬೈಲೂ ಪಾಠಶಾಲೆಯೇ ಆಗಿರುತ್ತದೆ. ಹಿರಿಯಣ್ಣನೇ ಉಪಾಧ್ಯಾಯನಾಗಿರುತ್ತಾನೆ.

ಕಪ್ಪುತೋಳ ಬಿಳಿಯತೋಳ.

ಗುಂಪಿನ ಬಾಲಕರೆಲ್ಲರನ್ನೂ ಎರಡು ಪಂಗಡವಾಗಿ ವಿಭಾಗಿಸಬೇಕು. ಒಂದು ಪಂಗಡದವರೆಲ್ಲರನ್ನೂ ಕಪ್ಪುತೋಳಗಳು. ಇನ್ನೊಂದು ಪಂಗಡದವರು ಬಿಳಿಯತೋಳಗಳು. ಆದುದರಿಂದ ಕಪ್ಪುತೋಳಗಳೆಲ್ಲರೂ ಕಾಯಮಸ್ತ್ರವನ್ನು ಕೊರಳಿಗೆ ಸುತ್ತಿಕೊಂಡಿರಬೇಕು. ಹಾಗೆಯೇ ಬಿಳಿಯ ವಸ್ತ್ರವನ್ನು ಬಿಳಿಯ ತೋಳಗಳು ಸುತ್ತಿಕೊಂಡಿರಬೇಕು. ಆಂತೂ ಯಾವುದಾದರೂ ಎರಡು ಬಣ್ಣಗಳಿದ್ದರೆ ಸರಿ. ಆಮೇಲೆ ಹಿರಿಯಣ್ಣನು ಎತ್ತರವಾಗಿ ಒಂದು ಸ್ಟೂಲಿನ ಮೇಲೋ ಕುರ್ಚಿಯ ಮೇಲೋ ನಿಂತುಕೊಳ್ಳಬೇಕು. ಹಾಳೆಯಲ್ಲಿಮಾಡಿದ ಬೀಸಣಿಗೆ ಇರುತ್ತದೆಯಲ್ಲ ಅಂತಹ ಬೀಸಣಿಯೊಂದನ್ನು ತೆಗೆದುಕೊಂಡು ಒಂದುಕಡೆ ಕಪ್ಪುಬಣ್ಣವನ್ನೂ ಇನ್ನೊಂದು ಕಡೆ ಬಿಳಿಯ ಬಣ್ಣವನ್ನೂ ಬಳಿಯಬೇಕು. ಅಥವಾ ಆ ಬಣ್ಣದ ಕಾಗದವನ್ನಾದರೂ ಅಂಟಿಸಬಹುದು. ಆ ಬೀಸಣಿಗೆಯ ಹಿಡಿಯನ್ನು ಅಂಗೈಗಳ ಮಧ್ಯದಲ್ಲಿಟ್ಟು ತಿರುಗಿಸಬಹುದು.

ಈಗ ಗುಂಪಿನವರೆಲ್ಲರೂ (ಅಂದರೆ ಬಿಳಿಯ ತೋಳಗಳೂ, ಕಪ್ಪು ತೋಳಗಳೂ ಸಹ) ಆಟದ ಬೈಲಿನಲ್ಲಿ ಚಲ್ಲಾಪಿಲ್ಲಿಯಾಗಿ ಓಡ್ಯಾಡುತ್ತಿರುತ್ತಾರೆ. ಆಗ ಹಿರಿಯಣ್ಣನು "ಎಲ್ಲರ ಕಣ್ಣೂ ಈ ಬೀಸಣಿಗೆಯ ಮೇಲೆ ಇರಲಿ. ನಾನು ಇದನ್ನು ತಿರುಗಿಸುತ್ತೇನೆ. ಆ ಮೇಲೆ ಯಾವ ಬಣ್ಣವು ನಿಮ್ಮ ಕಡೆಗೆ ಇರುತ್ತದೆಯೋ ಆ ಬಣ್ಣದ ತೋಳಗಳೆಲ್ಲ ಕೂಡಲೆ ನೆಲದ ಮೇಲೆ ಕುಳಿತುಕೊಳ್ಳಬೇಕು. ಅಷ್ಟರವಳಗೆ ಬೇರೆ ತೋಳಗಳು ಅವರನ್ನು ಹಿಡಿದರೆ ಹಾಗೆ ಸಿಕ್ಕುವರು ಸತ್ತಹಾಗೆ" ಎಂದು ಹೇಳುವನು. ಹಿರಿಯಣ್ಣನಿಗೆ ಎದುರಾಗಿಯೇ ಗುಂಪೆಲ್ಲವೂ ಇರಬೇಕು. ಅವನ ಹಿಂದುಗಡೆ ಗುಂಪು ಇರಕೂಡದು. ಹಿರಿಯಣ್ಣನು ಬೀಸಣಿಗೆಯಲ್ಲಿ ಕೈಗಳ ಮಧ್ಯದಲ್ಲಿ ಗಿರ್ರೆಂದು ತಿರುಗಿಸಿ ಯಾವುದಾದರೊಂದು ಬಣ್ಣವು ನಿಲ್ಲುಪಂತೆ ಹಿಡಿಯುವನು. ಆ ಬಣ್ಣದ ತೋಗಳು ಕೂಡಲೆ ನೆಲಕ್ಕೆ ಬೀಳುವುವು. ಇಲ್ಲದಿದ್ದರೆ ಎದಿರು ಪಕ್ಷದ ತೋಳಗಳು ಹಿಡಿದು ಬಿಡುವುವು.

ಸತ್ತವರೆಲ್ಲ ಗುಂಪಿನ ಹೊರಗೆ ಒರಬೇಕು. ಗುಂಪಿನಲ್ಲಿ ಎರಡು ಪಕ್ಷದ ಬಾಲಕರು ಇರುವವರೆಗೂ ಆಟವು ಆಗುವುದು. ಒಂದು ಪಕ್ಷದಲ್ಲಿದ್ದವರೆಲ್ಲರೂ ಸತ್ತುಬಿಟ್ಟರೆ ಇನ್ನೊಂದು ಪಕ್ಷದವರು ಗೆದ್ದಂತೆ.

ಹಿಂದಿನ ಸಂಚಿಕೆಗಳು.

"ಮೈಸೂರು ಮಕ್ಕಳ" ಹಿಂದಿನ ಸಂಚಿಕೆಗಳು ಕೆಲವು ಉಳಿದಿವೆ. ೧ನೇ ವರ್ಷದ ಪುಸ್ತಕವನ್ನು ಪೂರ್ತಿಯಾಗಿ ಮಾಡಿಕೊಳ್ಳಲು ಇಷ್ಟವುಳ್ಳವರು ತಮ್ಮಲ್ಲಿಲ್ಲದ ಹಳೆಯ ಸಂಚಿಕೆಗಳಿಗಾಗಿ ಕೂಡಲೇ ಬರೆಯಿರಿ. ಸಂಚಿಕೆ ಒಂದಕ್ಕೆ ೧ ಆಣೆ ಬೆಲೆ. ವಿ. ಪಿ. ಕಳುಹಿಸಲಾಗುವುದಿಲ್ಲ. ಸ್ಟ್ಯಾಂಪುಗಳನ್ನು ಕಳುಹಿಸಬೇಕು.

ಆದರಸ್ವೀಕಾರ.

ಪತ್ರಿಕೆಗಳು—

ಕುರುಬರ ಪತ್ರಿಕೆ—ಬೆಂಗಳೂರು.

ಕಾದಂಬರೀಸಂಗ್ರಹ—ಚಾಮರಾಜನಗರ.

ಕಬ್‌ಗಳು ಕಲಿಯಬೇಕಾದುದು.

ಗಂಟುಗಳು.

"ಮಗೂ ನೀನು ಗಂಟುಗಳನ್ನು ಹಾಕುವ ರೀತಿಗಳನ್ನು ತಿಳಿದು ಕೊಳ್ಳಬೇಕು" ಎಂದು ರಾಮರಾಯರು, ಗೋಪಾಲನಿಗೆ ಹೇಳುತ್ತಿದ್ದರು. ಗೋಪಾಲನು ಅಳುತ್ತಿದ್ದನು. ಗೋಪಾಲನೇಕೆ ಅಳುತ್ತಿದ್ದನು ? ಗೋಪಾಲನಿಗೆ ನಾಯಿಯೊಂದನ್ನು ಅವರ ತಂದೆ ತಂದುಕೊಟ್ಟಿದ್ದರು. ಗೋಪಾಲನು ಅದರ ಕುತ್ತಿಗೆಗೆ ಒಂದು ಹಗ್ಗವನ್ನು ಕಟ್ಟಿದನು. ಅವನಿಗೆ ಗಂಟುಹಾಕಲು ಬರುತ್ತಿದ್ದಿಲ್ಲ. ಯಾವುದೋ ಒಂದು ಗಂಟನ್ನು ಹಾಕಿ ನಾಯಿಯನ್ನು ಕಟ್ಟಿದನು. ಸ್ವಲ್ಪಹೊತ್ತಿನ ಮೇಲೆ ನಾಯಿಯು ಸತ್ತು ಹೋಗಿದ್ದಿತು. ಗೋಪಾಲನು ನಾಯಿಗೆ ಜೀರಕುಣಿಕೆಯನ್ನು ಹಾಕಿದ್ದನು.

ಅದಕ್ಕೇ ನೀವು ಕೂಡ ಯಾವ ಕಾಲದಲ್ಲಿ ಯಾವ ಗಂಟನ್ನು ಪ ಯೋಗಿಸಬೇಕೆಂದು ತಿಳಿದಿರಬೇಕು. ಗಂಟುಗಳ ಉಪಯೋಗಗಳನ್ನು ಇಲ್ಲಿ ತಿಳಿಸುತ್ತೇನೆ. ಗಂಟುಗಳನ್ನು ಹಾಕುವುದನ್ನು ಚಿತ್ರದಲ್ಲಿ ಕಲಿಯಿರಿ, ಇಲ್ಲ, ಹಿರಿಯಣ್ಣನು ಹೇಳಿಕೊಡುತ್ತಾನೆ.

ಸಾದಾಗಂಟು (Reef Knot) ಗಾಯಗಳಿಗೆ ಒಬ್ಬೆಯನ್ನು ಸುತ್ತಿ ಕೊನೆಯಲ್ಲಿ ಈ ಗಂಟನ್ನು ಹಾಕಬೇಕು. ಬಚ್ಚುವುದು ಸುಲಭ. ಭದ್ರವಾಗಿರುತ್ತದೆ. ಅಲ್ಲದೆ ಗಾಯಕ್ಕೆ ನೋವಾಗುವುದಿಲ್ಲ. ಚಿತ್ರ—3.

ಕರುವಿನ ಗೂಟದ ಗಂಟು. (Clove Hitch) ಇದು ಮರದ ತುಂಡಿಗೆ ಕಟ್ಟುವ ಗಂಟು. ಇದು ಎಳದಷ್ಟೂ ಬಲವಾಗುತ್ತದೆ. ಅದಕ್ಕಾಗಿಯೇ ದನಕರುಗಳನ್ನು ಕಟ್ಟುವ ಗೂಟಕ್ಕೆ ಇದನ್ನು ಕಟ್ಟುವುದು. ಚಿತ್ರ—6.

ಮೂಲೆಗಂಟು. (Sheet Bend) ಗೋಪಾಲನು ಈ ಗಂಟನ್ನು ಹಾಕಬೇಕಾಗಿದ್ದಿತು. ಬೆಂಕಿಬಿದ್ದ ಮನೆಯವರನ್ನು ಮೇಲಿನಿಂದ ಇಳಿಸಬೇಕಾದರೆ ಈ ಗಂಟನ್ನು ಅವರ ಸೊಂಟಕ್ಕೆ ಕಟ್ಟುತ್ತಾರೆ. ಅವರ ಸೊಂಟವು ಬಿಗಿಯುವುದಿಲ್ಲ. ಆದರೂ ಭದ್ರವಾಗಿರುತ್ತದೆ. ಚಿತ್ರ—4

ಬೆಸ್ತರವನ ಗಂಟು—(Fisher man's Knot) ಈ ಗಂಟು ಎರಡು ಜೀರಕುಣಿಕೆಯುಳ್ಳದ್ದು ಒಂದೊಂದು ಕೊನೆಯಲ್ಲಿ ಒಂದೊಂದನ್ನು ಹಾಕಿ ಬಳೆಯಬೇಕು. ಒದ್ದೆಯಾದ ಅಥವ ಬೇರೆ ಬೇರೆ ಮಂದವುಳ್ಳ ಎರಡು ಹಗ್ಗಗಳನ್ನು ಜೋಡಿಸುವುದಕ್ಕೆ ಇದನ್ನು ಸಂಯೋಗಿಸಬೇಕು. ಚಿತ್ರ—8.



ಸ್ಕೌಟುಗಳು ಕಲಿಯಬೇಕಾದ ಎಂಟು ವಿಧವಾದ ಗಂಟುಗಳು ಇವುಗಳ ನಾಲ್ಕು ಮಾತ್ರ ಕಬ್‌ಗಳು ಕಲಿಯಬೇಕು.

ಹಿರಿಯಣ್ಣಂದಿರಿಗಾಗಿ.

ಅಂಕ ೪

ಮೊದಲಿನಿಂದಲೂ ಬಾಲಕರೊಡನೆ ನೀವುಗಳು ಸ್ನೇಹದಿಂದಲೇ ಇರಬೇಕೆಂದು ಹೇಳುತ್ತಿದ್ದೇವೆ. ಆದರೂ ಬಾಲಕರು ಸದಾ ನಿಮ್ಮ ಅಂಕೆಗೊಳಪಟ್ಟಿರಬೇಕೆಂಬುದನ್ನು ಮರೆಯಬೇಡಿ. ಬಾಲಕರನ್ನು "ಛೀಲ" ಬಿಡಬೇಡಿ, ಆಗಾಗ್ಗೆ ಕಬ್‌ಗಳಿಗೆ ಆಪರ ಮೂಡಲನೆಯ ನಿಯಮವನ್ನು ಜ್ಞಾಪಿಸುತ್ತಿರಿ.

ಎರಡನೆಯ ನಿಯಮವನ್ನು ಕಾರ್ಯತಃ ನಡೆಸುವದಕ್ಕೆ ಇತರ ರಿಗ ಉಪಕಾರ ಮಾಡಿಸುವುದೂ, ಕಥೆಗಳ ಮೂಲಕ ವೀರರನ್ನು ಆದರ್ಶ ಪುರುಷರಂತೆ ತೋರಿಸುವುದು, ಆಟಪಾಟಗಳಲ್ಲಿ ಸೋತರೂ ನಗಿಸುತ್ತಿರುವುದು ಇತ್ಯಾದಿಗಳಿಂದ ಅಭ್ಯಾಸಮಾಡಿಸಬೇಕು.

ಕೋಮಲಪಾದ ಶಿಕ್ಷಣ.

ಇಲ್ಲಿ ಕಲಿಯತಕ್ಕದ್ದು ಹೆಚ್ಚಾಗಿಯೇನೂ ಇಲ್ಲ, ನಿಯಮ, ವಾಗಾ್ಯನ, ಪಂದನೆಗಳುವಿಚಾರ, ವೀರಪೂಜೆ ಇಷ್ಟೆ. ಕಲಿಯತಕ್ಕದ್ದು ಸ್ವಲ್ಪವೇ ಇದೆ ಎಂದು ಅಲ್ಲಗಳೆಯದೆ, ಕಾಯಾವಾಚಾ ಮನಸ್ಸಿನಲ್ಲಿಯೂ ಅವ್ಯಗಳು ಮುಂದಟ್ಟುವಂತೆ ಮಾಡಬೇಕು, ಏಕೆಂದರೆ ಇವತ್ತು ನೀವು ಗಳು ಕಲಿಸುತ್ತಿರುವ ಬಾಲಕರು ಮುಂದೆ ಹೊಸಬಾಲಕರಿಗೆ ಕಲಿಸತಕ್ಕ ವರಾಗಿರುತ್ತಾರೆ.

ನಿಯಮ ಮತ್ತು ವಾಗಾ್ಯನಗಳನ್ನು ಸ್ಪಷ್ಟವಾಗಿ ಹೇಳುವುದೂ ಅಲ್ಲದೆ ಅದರ ಅರ್ಥವನ್ನು ಚನ್ನಾಗಿ ತಿಳಿದು ಕೊಳಸದಲ್ಲಿಯೂ, ಉದಾಹರಣೆಗಳಲ್ಲಿಯೂ ತೋರಿಸಬೇಕು ಅವ್ಯಗಳ ಅರ್ಥವನ್ನು ಆಟಗಳಲ್ಲಿಯೂ, ಕಾಡುಕೂಡೆತಗಳಲ್ಲಿಯೂ ಕಲಿಸಬೇಕು

ವೀರಪೂಜೆಯು ಅನೇಕ ಹಿರಿಯಣ್ಣಂದಿರನ್ನು ಘಾಬರಿಪಡಿಸಿದೆ. ಅದು ಅಂತಹ ಕಷ್ಟವಾದುದಲ್ಲ, ಬಾಲಕರಿಗೆ ಬೇಡವಾದುದೂ ಅಲ್ಲ, ಮೊದಲನೆಯ ದಿವಸ ಅದನ್ನು ಹೇಳಿಕೋಡುವುದೇ ತಡ ಮನೆಗೆ ಹೋಗುವಾಗಲೆಲ್ಲಾ ಬಾಲಕರು ಕೂಗಿಕೊಂಡು ಹೋಗುತ್ತಿರುತ್ತಾರೆ.

ಬಾಲನಾಯಕರು.

ನಿಮ್ಮ ಗುಂಪಿನ ಬಾಲಕರು ಕಬ್ ದೀಕ್ಷೆಗೆ ಬರುವುದಕ್ಕೆ ಒಂದೆರಡು ವಾರಗಳ ಹಿಂದೆ ನಿಮ್ಮ ಬಾಲಕರಲ್ಲಿಯೇ ಆರರಂತೆ ವಿಭಾಗಿಸಿ ಒಂದೊಂದು ಭಾಗಕ್ಕೆ ಒಬ್ಬೊಬ್ಬ ನಾಯಕನನ್ನು ಚುನಾಯಿಸಬೇಕು. ಇದು ಸುಲಭವಾದ ಕಾರ್ಯವಲ್ಲ. ಹಾಗೆ ಮಾಡುವಾಗ ಹಿರಿಯಣ್ಣನು ಗಮನಿಸಬೇಕಾದ ಕೆಲವು ಅಂಶಗಳುಂಟು. ಬಾಲನಾಯಕನಾಗುವವನು ಮನಸ್ಸು, ಬುದ್ಧಿ, ನಡೆಸುಡಿಗಳನ್ನು ನೋಡಬೇಕು. ನಡತೆಯೇ ಇದರಲ್ಲಿ ಮುಖ್ಯಅಂಶವಾಗಿದೆ. ಕಬ್ ವಿಧಿಗಳನ್ನೂ ಅದರ ಅರ್ಥವನ್ನೂ ಗಾಂಭೀರ್ಯವನ್ನೂ ಬಲ್ಲವನಾಗಿರಬೇಕು. ಬಾಲಕರನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದನ್ನೂ ಕಬ್ ವಿಚಾರಗಳನ್ನು ಮುಂಗಡವಾಗಿ ಹಿರಿಯಣ್ಣನಿಂದ ತಿಳಿದು ತನ್ನ ಗೆಳೆಯರಿಗೆ ಹೇಳಿಕೊಡುವುದನ್ನೂ ತಿಳಿದಿರಬೇಕು. ಇದೆಲ್ಲವನ್ನೂ ಚೆನ್ನಾಗಿ ತಿಳಿಯುವುದೆಲ್ಲಿ, ಹೇಗೆ ಎಂದು ಕೇಳಬಹುದು. ಇಷ್ಟು ದಿವಸಗಳಲ್ಲಿ ಆಟವಾಡಿಸುವಾಗಲೂ, ಕಬ್ ಸಂಸ್ಥೆಯ ವಿಚಾರವಾಗಿ ಹೇಳುತ್ತಿರುವಾಗಲೂ, ಪ್ರತಿಯೊಬ್ಬನ ಗುಣಾವಗುಣಗಳನ್ನು ತಿಳಿದುಕೊಂಡಿರಬೇಕು.

ನಿಮ್ಮ ಬಾಲಕನಾಯಕರನ್ನು ಚುನಾಯಿಸಿದ ಕೂಡಲೇ ಅವರನ್ನು ಬೇರೆಕಡೆ ಕರೆದು ಅವರ ಕರ್ತವ್ಯದ ವಿಚಾರವಾಗಿ ಒಂದೆರೆಡು ಗಂಭೀರವಾದ ವಿಚಾರಗಳನ್ನೂ ಹೇಳಬೇಕು

ಮೈಸೂರಿನಲ್ಲಿ ಮ್ಯುನಿಸಿಪಾಲಟಿಯವರು ನಡೆಸಿದ ಕಬ್ ಹಿರಿಯಣ್ಣಂದಿರ ಪ್ರದರ್ಶಿಕ್ಷಣಶಿಬಿರ

ಕಬ್ಬಿಗಳೊಡನೆ ನಮ್ಮದೊಂದು ಹರಟೆ.

ನಿನ್ನ ಕೆಲಸಗಳನ್ನು ನೀನೇ ಮಾಡಿಕೊ.

ನಮ್ಮಲ್ಲಿ ಕೆಲವು ಬಾಲಕರು ತಮ್ಮ ಹಾಸಿಗೆಯನ್ನು ತಾವೇ ಹಾಸಿಕೊಳ್ಳುತ್ತಾರೆ. ಅಲ್ಲದೆ ತಮ್ಮ ತಂದೆತಾಯಿಗಳ ಹಾಸಿಗೆಯನ್ನೂ ಹಾಸುತ್ತಾರೆ. ಸುತ್ತುವುದೂ ಸಹ ಬಾಲಕರ ಕೆಲಸವೇ! ಕೆಲವರ ಮನೆಯಲ್ಲಿ ಜವಾನರಿದ್ದಲ್ಲಿ ಈ ಕೆಲಸವನ್ನು ಬಾಲಕರು ಮಾಡುವುದಿಲ್ಲ. ಇದು ತಪ್ಪು. ನಿನ್ನ ಹಾಸಿಗೆಯನ್ನು ನೀನೇ ಹಾಸಿಕೊಂಡರೆ ರಾತ್ರಿ ಎಂತಹ ನಿದ್ರೆ ಬರುತ್ತದೆಂದು ನೀನು ತಿಳಿದಿದ್ದೀಯಾ?

ಹಾಸಿಗೆಯ ವಿಚಾರದಂತೆಯೇ ಬಟ್ಟೆಗಳ ವಿಚಾರ. ನಿನ್ನ ಬಟ್ಟೆಗಳನ್ನು ನೀನೇ ಜೋಪಾನವಾಗಿಟ್ಟುಕೊಳ್ಳಬೇಕು. ಅವುಗಳನ್ನು ಚೆನ್ನಾಗಿ ಮಡಿಸುವುದು, ಅಂಗಿಗಳಿಗೆ ಗುಂಡಿಗಳನ್ನು ಹೊಲೆದುಕೊಳ್ಳುವುದು, ಕೊಳೆಬಟ್ಟೆಗಳನ್ನು ಒಗೆದುಕೊಳ್ಳುವುದು, ಹರಿದುಹೋದವುಗಳನ್ನು ಸರಿಯಾಗಿ ಹೊಲೆದುಕೊಳ್ಳುವುದೂ ಎಲ್ಲವೂ ನಿನ್ನ ಕೆಲಸವೆ. ಇದೆಲ್ಲವನ್ನೂ ನೀನಾಗಿಯೇ ಮಾಡಿಕೊಳ್ಳತ್ತೀನೆಂದರೆ ಅಮ್ಮನು ಅವುಗಳನ್ನು ಮಾಡುವರೀತಿಯನ್ನು ಕಲಿಸುತ್ತಾಳೆ. ಅವಳಿಗೆ ಕೆಲಸದಲ್ಲಿ ಎಷ್ಟೋ ಸಹಾಯವೂ ದೊರಕಿದಂತಾಯಿತು. ನಿನ್ನ ಕೆಲಸಗಳನ್ನು ಇತರರಿಂದ ಮಾಡಿಸಿದಲ್ಲಿ ನಿನಗೆ ಯಾವ ಸಂತೋಷವೂ ತೋರುವುದಿಲ್ಲ.

ಕೆಲವು ಬಾಲಕರು ಬೆಳಗ್ಗೆ ಏಳುವುದೇ ತಡ, ಅಮ್ಮನಿಗೆ ಒಂದು ಉಪಕಾರವನ್ನು ಮಾಡುವ ಪದ್ಧತಿಯನ್ನಿಟ್ಟಿರುತ್ತಾರೆ. ಅದು, ನೀರೊಲೆಗೆ ಬೆಂಕಿಯನ್ನು ಹಚ್ಚಿಕೊಡುವುದು. ನೀನೂ ಮಾಡಬಹುದಲ್ಲವೇ? ಒಲೆ ಹೊತ್ತಿಡುವ ಕ್ರಮವನ್ನು ಅಮ್ಮನನ್ನು ಕೇಳಿ ತಿಳಿದಿಕೊ. ಎರಡನೇ ದರ್ಜೆಯ ಕೆಲಸಗಳನ್ನು ಬರೆಯುವಾಗ ನಾನೂ ತಿಳಿಸುತ್ತೇನೆ.

ಇನ್ನೂ ಇತರ ಕೆಲಸಗಳಲ್ಲಿ ಅಮ್ಮನಿಗೆ ನೀನು ಸಹಾಯಕನಾಗಬಹುದು. ಮನೆಯಲ್ಲಿರುವ ಕುರ್ಚಿ, ಮೇಜು ಮುಂತಾದ ಸಾಮಾನುಗಳನ್ನು ಒರೆಸುವುದು, ಅಮ್ಮನೊಡನೆ ಸಣ್ಣ ಸಣ್ಣ ಪಾತ್ರೆಗಳನ್ನು ಬೆಳಗುವುದು, ಪುಗುಸನ್ನಾಡಿಸಿಕೊಳ್ಳುವುದು ಇತ್ಯಾದಿ.

ಇಷ್ಟೆಂದ ಮೇಲೆ ಪ್ರತಿಬಂದು ಕೆಲಸದ ರೀತಿಯನ್ನೂ ನೀನು ಚೆನ್ನಾಗಿ ತಿಳಿದಿರಬೇಕಲ್ಲವೇ? ಅವುಗಳನ್ನು ಕಲಿಯುವುದು ನಿನಗೇನೂ ಕಷ್ಟವಲ್ಲ. ಅಮ್ಮನಿಗೆ ಬರಬೇ ಇರುವ ಕೆಲಸವೇ ಇಲ್ಲ. ಅವಳನ್ನು ಕೇಳಿ ತಿಳಿದುಕೊ, ಅಲ್ಲದೆ ಅಮ್ಮನು ಕೆಲಸಮಾಡುವಾಗ ನೋಡಿ ಕಲಿತುಕೊ.

ನೀನು ಯಾವ ಕೆಲಸವನ್ನು ಮಾಡುವಾಗಲೂ ಜಾಗರೂಕನಾಗಿರು. ಮುಖ್ಯವಾಗಿ ಪುಸ್ತಕವನ್ನಾಡಿಸುವಾಗ ಮಗುವನ್ನು ಎಚ್ಚರಿಕೆಯಿಂದ ನೋಡಿಕೊ. ಪೀಠಗಳಲ್ಲಿ ಓಡಾಡುವಾಗ ಎಚ್ಚರಿಕೆಯಿಂದಿರು. ಇನ್ನೊಬ್ಬರ ಮನೆಗೆ ನಿನ್ನನ್ನು ಯಾವುದಕ್ಕಾದರೂ ಕಳುಹಿಸಿದಾಗ ದಾರಿಯಲ್ಲಿ ಆಡುತ್ತಾ ನಿಲ್ಲಬೇಡ. ಗಾಜಿನ ಚೂರುಗಳೊಡನೆಯೂ, ಬೆಂಕಿಯಕಟ್ಟಿಗೆಯೊಡನೆಯೂ ಆಡಬೇಡ. ಹಾಸಿಗೆಯನ್ನು ಹಾಸುವಾಗ ಚೆನ್ನಾಗಿ ಒದರಿ ಹಾಸಬೇಕು. ನಿನ್ನ ಪುಸ್ತಕಗಳನ್ನು ಜೋಕ್ಕಟವಾಗಿಟ್ಟುಕೊ. ಕಸಕಸವಾಗಿ ನಿನ್ನ ಪದಾರ್ಥಗಳನ್ನು ಚಲ್ಲಿಕೊಂಡಿದ್ದಲ್ಲಿ ಚೇಳುಗಳ. ಒಂದು ಸೇರುತ್ತವೆ.

ಮನೆಯಿಂದ ಹೊರಗೆಹೋದಾಗ ಇತರರಿಗೆ ಉಪಕಾರಮಾಡಬೇಕೆಂದು ಮನಸ್ಸಿರಲಿ. ಇಕ್ಕಟ್ಟಾದ ರೈಲುಗಾಡಿಯಲ್ಲಿ ನೀನು ಕುಳಿತಿದ್ದಲ್ಲಿ ನಿಂತಿರತಕ್ಕ ಮುದುಕರಿಗಾಗಲೀ, ಮಕ್ಕಳಿಗಾಗಲೀ, ಅಂಗಹೀನರಿಗಾಗಲೀ ನಿನ್ನ ಸ್ಥಳವನ್ನು ಬಿಟ್ಟುಕೊಡು. ಅಂತಹವರನ್ನು ಬೀದಿಗಳಲ್ಲಿ ಕಂಡರೆ ಬೀದಿಗಳನ್ನು ದಾಟಿಸು. ದಾರಿಯನ್ನು ತಪ್ಪಿದವರಿಗೆ ದಾರಿಯನ್ನು ತೋರಿಸು. ಪ್ರಾಣಿಗಳಿಗೆ ದಾಹವಾದಾಗ ನೀರನ್ನು ಕೊಡು. ಹಕ್ಕಿಗಳ ಗೂಡುಗಳನ್ನು ತುಂಟರು ಕದ್ದೊಯ್ಯದಂತೆ ಮಾಡು. ಇನ್ನೂ ಎಷ್ಟೋ ಇವೆ, ಅವುಗಳೆಲ್ಲವನ್ನೂ ಬರೆಯಲಾಗುವುದಿಲ್ಲ. ಕ್ರಮೇಣ ನಿನಗೇ ತಿಳಿಯುತ್ತದೆ.

ಆದರೆ ನೀನು ಯಾವ ಉಪಕಾರವನ್ನು ಮಾಡಿದರೂ ಇತರರಲ್ಲಿ ಬಡಾಯಿ ಕೊಚ್ಚಿಕೊಳ್ಳಬೇಡ. ಉಪಕಾರಕ್ಕೆ ಯಾವ ಪ್ರತಿಫಲವನ್ನೂ ಅಪೇಕ್ಷಿಸಬೇಡ.

ಹಾಸ್ಯಲಹರಿ.

ಪರಿದಾಸರು—(ಸಭೆಯನ್ನು ಕುರಿತು) ಮಹಾಶಯರೇ ಭಾರತದೊಳಗಿನ ಯಾವ ವಿಷಯವನ್ನಾದರೂ ನಾನು ಕೀರ್ತನೆಮಾಡಬಲ್ಲೆ ಅಪ್ಪಣೆಕೊಡಿಸಬೇಕು.

ಸಭಿಕ—ವಿಭೀಷಣಭಕ್ತೆ.

ಪರಿದಾಸ—ನಾನು ಭಾರತದೊಳಗಿನ ವಿಷಯವೆಂದು ಹೇಳಿದೆ ಭಾಗವತದ ವಿಷಯವಲ್ಲ.

ಇನ್ಸ್‌ಪೆಕ್ಟರ್—ಮಕ್ಕಳೇ! ನಾನು ಕೇಳಿದ ಪ್ರಶ್ನೆಗೆ ನೀವು ಗಳು ಸರಿಯಾದ ಉತ್ತರವನ್ನು ಕೊಟ್ಟಿದ್ದನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ನಾನೂ ಒಂದು ಮಗುವಾಗಿ ನಿಮ್ಮೊಡನಿರಬೇಕೆನ್ನಿಸುತ್ತದೆ. ಯಾತಕ್ಕೆಂದು ತಿಳಿದಿರಾ?

ಒಬ್ಬ ಹುಡುಗ—ನೀವು ಕಲಿತಿದ್ದನ್ನೆಲ್ಲಾ ಮರೆತುಬಿಟ್ಟಿದ್ದೀರಿ. ಪುನಃ ಓದಬೇಕೆಂದು ಕಾಣುತ್ತದೆ.

ತಾಯಿ—ಏತಕ್ಕೆ ಅಳುತ್ತೀಯೋ?

ಮಗ—ನಾರಾಯಣ ನನ್ನ ತಲೆ ಒಡೆದ.

ತಾಯಿ—ಅದು ಹೇಗೆ?

ಮಗ—ನಾನು.....ಅವನನ್ನು.....ಹೊಡೆಯಬೇಕೆಂದು ಓಡಿದಾಗ ಕಾಲುಜಾರಿ ಬಿದ್ದೆ.

ಮೈಸೂರು ಸ್ಕೌಟ್

ಮು|| ರಾ|| ಎ. ಆರ್. ವಾಡಿಯಾ, ಬಿ.ಎ., ಬಾರ್-ಅಟ್-ಲಾ, ಇವರ ಸಂದೇಶ.

ನನ್ನ ಚಿಕ್ಕ ಸ್ನೇಹಿತರೇ !

ಭಾವೀ ಜನತಾಂಗವೇ ನೀವೆಂದೂ, ಮತ್ತು ಸಾಮಾನ್ಯವಾಗಿ ಭರತಖಂಡವೆಲ್ಲವೂ, ಮುಖ್ಯವಾಗಿ ಈ ನನ್ನ ಮೈಸೂರು ದೇಶವೂ, ನೀವೇ ಭರತಖಂಡದ ಭಾಗ್ಯಪ್ರದರೆಂದು ಭಾವಿಸಿವೆಯೆಂದೂ ಹೇಳಿದ್ದಲ್ಲಿ ನಿಮಗದು ಅತಿಶಯ ಹೆಮ್ಮೆಯನ್ನುಂಟುಮಾಡಬಹುದು. ಇದು ನಿಜ, ಆದರೆ, ಅಂತಹ ಗಹನವಾದ ಸಾಧನೆಗೆ ಸಿದ್ಧವಾಗಲು ಇದೇ ಸಕಾಲವೆಂದು ಧೃಡವಾಗಿ ತಿಳಿದ ಹೊರತೂ, ಆ ನಿಮ್ಮ ಹಕ್ಕನ್ನು ನೀವು ಸ್ವಾಧೀನಪಡಿಸಿಕೊಳ್ಳಲಾರಿರೆಂಬುದನ್ನು ನೀವು ಮರೆಯಕೂಡದು. ನೀವು ಭರತಮಾತೆಯ ಸೇವೆಯೆನ್ನು ಮಾಡುವ ಮೊದಲು ಆ ಸೇವೆಯನ್ನು ಮಾಡಲು ಯೋಗ್ಯತೆಯುಳ್ಳವರಾಗಿರಬೇಕು. ಈಗ ನೀವು ಕಾಲವನ್ನು ಉಪಯೋಗಿಸಿಕೊಳ್ಳುವುದರಲ್ಲಿರುವ ಯುಕ್ತಾಯುಕ್ತತೆ ಮಾರ್ಗವೇ ಆ ಯೋಗ್ಯತೆ ಎಂತಹದೆಂಬುದನ್ನು ನಿರ್ಧರಿಸುತ್ತದೆ. ಕಲಿತಿರಬೇಕಾದುದನ್ನು ಕಲಿಯಲು ಪ್ರಯತ್ನಿಸಿ; ಯೋಚಿಸಲು ಪ್ರಯತ್ನಿಸಿ; ಸಂಕಲ್ಪಪೂರ್ಣರೂ ಮೇಲ್ನಡೆಯನ್ನುಸಾಸವರೂ ಆಗಿರಲು ಪ್ರಯತ್ನಿಸಿ. ಕಾಡು ಹರಟೆಗಳಲ್ಲಿಯೂ, ಅಸಂಬದ್ಧವಾದ ಸ್ವಪ್ನಗಳಲ್ಲಿಯೂ, ಕಾಲವನ್ನು ವ್ಯಯಮಾಡಬೇಡಿ. ಅತಿಮುಖ್ಯವಾಗಿ, ಇಂದ್ರಿಯನಿಗ್ರಹತ್ವದಿಂದಲೂ, ಅದರಿಂದುಂಟಾಗುವ ಶಕ್ತಿಯಿಂದಲೂ, ಕೆಲಸಮಾಡುವುದನ್ನು ನೀವು ಅಭ್ಯಾಸಮಾಡುವುದಕ್ಕೆ ಮೊದಲೇ ಯಾವುದಾದರೊಂದು ಕೆಲಸಕ್ಕೆ ಕೈಹಾಕಬೇಡಿ. ಯಾವಾಗಲೂ ತನ್ನನ್ನು ತಾನೇ ಯಾವನು ಗೆಲ್ಲುವುದನ್ನು ತಿಳಿದಿರುವನೋ ಅವನಿಗೇ ಜಯವುಂಟಾಗುವುದು. ಅಷ್ಟಲ್ಲದೆ, ಯುಕ್ತಾಯುಕ್ತ ವಿವೇಚನೆಯನ್ನು ಬಿಟ್ಟು ಯಾವನು ತನ್ನ ಮೂಢ ನಂಬಿಕೆಯಲ್ಲಿ ವಿಶ್ವಾಸವಿಟ್ಟು ಕೆಲಸಮಾಡುವನೋ ಅವನಿಗೆ ಜಯವುಂಟಾಗಲಾರದು. ನೀವು ಮನಃ ಮತ್ತು ಕಾರ್ಯತಃ ವ್ಯಕ್ತಾಸವುಳ್ಳವರಾಗಿರಬೇಡಿ—ಬಾಯಿನಲ್ಲಿ ಒಂದು ಮಾತನ್ನಾಡುತ್ತಲೂ, ಮನಸ್ಸಿನಲ್ಲಿ ಬೇರೊಂದನ್ನು ಆಲೋಚಿಸುತ್ತಲೂ ಇರಬಾರದು. ಶ್ರೇಷ್ಠತರ ಹಿಂದುಗಳಾಗಿರಿ, ಶ್ರೇಷ್ಠತರ ಮಹಮ್ಮದೀಯರಾಗಿರಿ, ಆದರೆ ಅದರೊಡನೆ ಶ್ರೇಷ್ಠತರ ಭಾರತೀಯರಾಗಿರಿ. ಮಹಮ್ಮದೀಯರ ದೇವರೇ ಹಿಂದುಗಳಿಗೂ ದೇವರೆಂಬುವುದನ್ನು ಮರೆಯದಿರಿ. ಮತ್ತು ನಾವೆಲ್ಲರೂ ಒಂದೇ ದೇಶದ ಮತ್ತು ಒಬ್ಬನೇ ಭಗವಂತನ ಮಕ್ಕಳೆಂಬುವುದನ್ನು ಮರೆಯದಿರಿ. ಪ್ರಾಚೀನ ಭಾರತವರ್ಷವು ಏಕಮತಹೀನವಾಗಿ ಕಳಂಕಿತವಾಗಿದೆ, ಆದರೆ ಭಾವೀ ಭಾರತವು—ನೀವೆಲ್ಲರೂ ನಿರ್ಮಾಣಮಾಡುವ ಭರತವರ್ಷವು ಐಕ್ಯಮತ್ಯದ ತವರ್ಮನೆಯಾಗಿರಲಿ. ತಥಾಸ್ತು !

ಎ. ಆರ್. ವಾಡಿಯಾ.

[ಮು|| ರಾ|| ಎ. ಆರ್. ವಾಡಿಯಾಯವರು ನಮ್ಮ ವಿಶ್ವವಿದ್ಯಾನಿಲಯದಲ್ಲಿ ವೇದಾಂತ ಶಾಸ್ತ್ರಕ್ಕೆ ಅಧ್ಯಾಪಕರಾಗಿರುವರು. ಇವರು ಜನ್ಮತಃ ಪಾರ್ಶೀಯರು. ಆದರೂ ಪ್ರಥಮತಃ ಭಾರತೀಯರು. ಇವರು ಸೆರಳತೆಯಿಂದಲೂ, ನಿಸ್ಪೃಹತೆಯಿಂದಲೂ ಕೂಡಿರುವ ಈ ಸಂದೇಶವನ್ನು ಕಳುಹಿಸಿಕೊಟ್ಟಿರುವುದಕ್ಕೆ 'ಮೈಸೂರು ಸ್ಕೌಟ್ಸ್' ತುಂಬಾ ಕೃತಜ್ಞನಾಗಿರುತ್ತದೆ. ಇದೇ ರೀತಿ ಆಗಾಗ್ಗೆ ಇವರು ನಮ್ಮೊಡನೆ ಸೇರುತ್ತಿರಬೇಕೆಂಬುದೇ ನಮ್ಮೆಲ್ಲರ ಕೋರಿಕೆ.]

ಪಂಥ್ಯಗಳು.

ಸ್ಕೌಟುಗಳಿಗಾಗಿ ಮಾತ್ರ

ಪ್ರವೀಣತೆಯ ಪದಕಗಳು ಸುಮಾರು ಅರವತ್ತರ ಮೇಲಿವೆ. ಅವುಗಳಲ್ಲಿ ಅತಿ ಮುಖ್ಯವಾದವ್ಯಾವುದೆಂಬುದನ್ನು ತಿಳಿಯುವುದಕ್ಕೂ ಮತ್ತು ಕ್ರಮದಲ್ಲಿ ಯಾವುದ್ಯಾವುದು ಮುಖ್ಯವಾಗಿದೆಂಬುದನ್ನು ತಿಳಿಯುವುದಕ್ಕೂ ನಮ್ಮ ಚಂದಾದಾರರಲ್ಲಿ ಒಂದು ಪಂಥ್ಯವು ಮುಂದಿನ ತಿಂಗಳ ಪತ್ರಿಕೆಯಲ್ಲಿ ಬರೆಯಲ್ಪಡುವುದು.

ನಮ್ಮ ಚಂದಾದಾರರಲ್ಲದವರು ಕೂಡಲೇ ಚಂದಾದಾರರಾಗುವುದು ಉತ್ತಮ. ಬಹುಮಾನಗಳನ್ನೇರ್ಪಡಿಸುತ್ತೇವೆ.

ಕಬ್‌ಗಳಿಗೆ ಮಾತ್ರ.

ಚಿತ್ರಪತಗಳಲ್ಲಿ ತಪ್ಪುಕಂಡುಹಿಡಿಯುವುದು, ಕತ್ತರಿಸಿದ ಚಿತ್ರಗಳನ್ನು ಜೋಡಿಸುವುದು ಮುಂತಾದ ಪಂಥ್ಯಗಳು ಮುಂದಿನ ಸಲದಿಂದ ಪ್ರಾರಂಭವಾಗುವುದು. ನಿಮ್ಮ ಸ್ನೇಹಿತರುಗಳನ್ನು ಕಬ್‌ಗುಂಪಿಗೆ ಸೇರಿಸಿ ಅವರನ್ನು ನಮ್ಮ ಚಂದಾದಾರರನ್ನಾಗಿಮಾಡಿಸಿದಲ್ಲಿ ಅವರೂ ಸಹ ಈ ಪಂಥ್ಯಗಳಿಗೆ ನಿಲ್ಲಬಹುದು. ಬಹುಮಾನಗಳನ್ನೇರ್ಪಡಿಸಿರುತ್ತೇವೆ.

ಪೋಲಿ!

(ಒಂದು ಪುಟ್ಟ ಕಥೆ)

(ಲಾರ್ಡ್ ಹ್ಯಾಮ್‌ಫ್ಟ್‌ನ್‌ರವರ ಸ್ಕೌಟಿಂಗ್ ಸ್ಕೆಚಸ್ ಪುಸ್ತಕದಲ್ಲಿನ 'ಬಡ್ಡಿ' ಎಂಬ ಕಥೆಯ ಅನುವಾದ.)

ಹಾಳು ಅಮಾವಾಸ್ಯೆ ದಿನ ಬಂದ ನೋಡಿ, ಅವನು. ದಳಕ್ಕೆ (ಟ್ರೂಪಿಗೆ) ಸೇರಬೇಕಾದರೆ ಬೇರೆ ದಿನವೇ ಇಲ್ಲವೆ. ಅವನು ಕಾಲಿಟ್ಟ—ರಾಮಪುರದ ಒಂದನೇ ದಳವು ಹಾಳಾಗುವುದಕ್ಕೆ ಪ್ರಾರಂಭವಾಯಿತು. ಅದೇನು ಅಮಾವಾಸ್ಯೆಗೋ ಅಥವಾ ಈ ಪೋಲಿ ಅಂತಹ ಮಹನೀಯನಿಗೋ ನನಗೆ ಬೇರೆ ಗೊತ್ತಿಲ್ಲ. ಪೋಲಿ ಹೆಸರು ಪೋಲಿ ಅಂತ ಅಲ್ಲ. ಅವನು ರಾಮಕೃಷ್ಣ—ಕಡೇ ಮನೆ ನಾಗಮ್ಮನವರ ಮಗ. ಪಾಪ! ತಂದೆಯಿಲ್ಲ—ತಾಯಿಯೋ ಮೂರುಹೊತ್ತೂ ಹಾಸಿಗೆ ಹಿಡಿದಿರುವ ಹೆಂಗಸು. ಪೋಲಿಗೆ ಮನೆಯಲ್ಲಿ ಸುಖವಿಲ್ಲವೆಂದು ಎಲ್ಲರಿಗೂ ಗೊತ್ತು. ಆದರೆ ಅವನು ಸ್ಕೌಟುದಳಕ್ಕೇಕೆ ಸೇರಿದ? ಅಂತಹ ದುಷ್ಟನನ್ನು ಸೇರಿಸಬಾರದೆಂದು ಅನೇಕರು ಹೇಳಿದರು. ಪ್ರಾಯಶಃ ಅವನ ಮುಖದಲ್ಲಿ ಸದಾ ಇರುವ ಆ ನಗುವೇನಾದರೂ ಸ್ಕೌಟುಮಾಸ್ಟರನ್ನು ಮರುಳುಮಾಡಿತೊ! ಏನು ನಗು ಅಂತೀರಿ? ಪ್ರಾಯಶಃ ಅವನು ಸತ್ತಾಗಲೂ ನಗುತ್ತಿರುತ್ತಾನೆ—ಅಂತು ಇನ್ಯಾರಾದರೂ ಸತ್ತಾಗಲಂತೂ ನಕ್ಕೇನಗುತ್ತಾನೆ—ನಮ್ಮ ಪೋಲಿ.

ಪೋಲಿ ಅಂತ ಇವನಿಗೆ ಅಡ್ಡಹೆಸರು—ಅನ್ವರ್ಥನಾಮ. ಇವನು ಸ್ಕೌಟಿಗೆ ಸೇರಿದ ಒಂದು ತಿಂಗಳೊಳಗಾಗಿ ಪ್ರಾರಂಭವಾಯಿತು. ಸ್ಕೌಟುನಿಯಮಕ್ಕೂ ಭಾಷೆಗೂ ಇವನೇ ಹೊಸವ್ಯಾಖ್ಯಾನಮಾಡಿದ. ಪ್ರತಿದಿನವೂ ಯಾರಿಗಾದರೂ ತೊಂದರೆಮಾಡಿ ತಪ್ಪಿಸಿಕೊಳ್ಳುವುದು ಒಂದರ್ಥ. ಪೆಟ್ರೋಲ್‌ಮುಖಂಡನನ್ನೂ ಬಿಡದೆ ಎಲ್ಲರನ್ನೂ ತಿರಸ್ಕರಿಸುವುದು ಇವನ ಹೊಸನೂರ್ಗ. ದಳದವರೆಗೆಲ್ಲಾ ದೀಕ್ಷೆಯನ್ನು ಕೊಡುವುದಕ್ಕೆ ಎಲ್ಲರೂ ಸೇರಿದ್ದಾಗ ಮಧ್ಯದಲ್ಲಿ ಒಂದು ಇಲಿಯನ್ನು ಬಿಟ್ಟು ಬಿಡುತ್ತಿದ್ದನು. ಎಸ್ಸೆಮ್ಮನ (ಸ್ಕೌಟುಮಾಸ್ಟರ) ಅಂಗಿಯ ಜೇಬಿನಲ್ಲಿ ಕಪ್ಪೆಹಾಕಿ "ಸ್ವಲ್ಪ ಪೆನ್‌ಸಿಲ್ ಬೇಕು ಸಾರ್" ಎಂತ ಕೇಳಿ ಅವರು ಕೈ ಹಾಕಿ ಗಾಭರಿಯಾದರೆಂದರೆ ಇವನಿಗೆ ತಕ್ಷಣ ಶೀನು ಬರುತ್ತಿತ್ತು.

ಎಲ್ಲರೂ ಇವನನ್ನು ಓಡಿಸಬೇಕು ಎಂದರು. ಮುಖಂಡನೆಲ್ಲಾ ಇವನನ್ನು ವಜಾಮಾಡಬೇಕು ಅಂದರು. ಇವನ ದಳದಲ್ಲಿದ್ದರೆ ತಮ್ಮ ಹುಡುಗ ಕೆಟ್ಟುಹೋಗುತ್ತಾನೆಂದು ಸಾವುಕಾರ ರಾಮಯ್ಯನವರು ನಾಗೇಂದ್ರನನ್ನು ದಳದಿಂದ ಬಿಡಿಸಿಕೊಂಡರು. ಎಸ್ಸೆಮ್ಮಗೆ ಏನುಮಾಡಬೇಕೂ ತೋರಲಿಲ್ಲ. ಒಂದಾವೃತ್ತಿ ಎಲ್ಲರೂ ಹೊಳೆಯದಡದಲ್ಲಿ ಪಾಳೆಯ ಕಟ್ಟಿದ್ದರು. ಎಲ್ಲರೂ ಸ್ನಾನಕ್ಕೆ ಇಳಿದರು. ಪೋಲಿಯೂ ಇಳಿದಿದ್ದನು ಜಾಗ್ರತೆ ನೋಲೆ ಒಂದುಬಿಟ್ಟಿನು. ಎಸ್ಸೆಮ್ಮ ಸ್ನಾನಮಾಡಿಕೊಂಡು ಬಂದು ಮೊಸರಿಗೆಂದು ದುಡ್ಡುಕೊಡಲು ಹಣದಚೀಲಕ್ಕೆ ಕೈ ಹಾಕಿದರು. ಒಂದು ಕಾಸೂ ಇರಲಿಲ್ಲ. ಎಲ್ಲರಿಗೂ ಗೊತ್ತಾಯಿತು. ಆದರೆ ಎಸ್ಸೆಮ್ಮ ಬುದ್ಧಿವಂತರು. ಪೋಲಿಯನ್ನು ಹತ್ತಿರ ಕರೆದರು. ಈ ಸಲ ಪೋಲಿಗೆ ನಡುಕು ಹುಟ್ಟಿತು. ಎಸ್ಸೆಮ್ಮ ಇನ್ಯಾರಿಗೂ ಕೇಳಿಸದಂತೆ ಲೊ! ಪೋಲಿ! ನನ್ನ ಕೇಳಬಾರದಾಗಿತ್ತೀನೊ—ದುಡ್ಡು ಬೇಕಾಗಿದ್ದರೆ ಕೊಡುತ್ತಿದ್ದೆ ಪಾಪ! ನಿನ್ನ ಸಮಯ ಹೇಗಿದೆಯೋ ಅಪ್ಪ—ಆದರೂ ನನ್ನ ಕೇಳಬೇಕಾಗಿತ್ತು ಎಂದರು. ಪೋಲಿಗೆ ಆಶ್ಚರ್ಯವಾಯಿತು. ಅವನಿಗೆ ಏನು ತೋರಿತೋ ಏನೊ! ಎದುರಿಗೆ ಮೂರ್ತಿಮತ್ತಾಗಿ ದಳದ ಭಾಗ್ಯದೇವತೆಯಂತೆ ಎಸ್ಸೆಮ್ಮ ನಿಂತಿದ್ದಾರೆ! ಪೋಲಿ "ಹೌದು! ಸಾರ್ ತಪ್ಪಾಯ್ತು ಅಮ್ಮನಿಗೆ ಬಹಳ ಕಾಯಿಲೆ ಸಾರ್ ಅದಕ್ಕೆ.... ಅದಕ್ಕೆ....ನಾನು...." ಎಂದನು—ಪೋಲಿ ಅಳುತ್ತಿದ್ದ.

ಇದಾಗಿ ಎರಡು ತಿಂಗಳಾಯಿತು. ಪೆಟ್ರೋಲ್‌ಮುಖಂಡನು ಎಸ್ಸೆಮ್ಮನ ಬಳಿಯಲ್ಲಿ ಪೋಲಿ ಸರಿಯಾಗಿ ಪೆಟ್ರೋಲ್‌ಕ್ಲಾಸಿಗೆ ಬರುತ್ತಿಲ್ಲವೆಂದನು. ಎಸೆಮ್ಮ ನೋಡೋಣ ಎಂತ ನಾಗಮ್ಮನವರ ಮನೆಗೆ ಹೋಗಿ ಬಾಗಿಲು ತಟ್ಟಿದರು. 'ಯಾರು' ಎಂತ ಯಾರೊ ಕ್ಷೀಣಧ್ವನಿಯಿಂದ ಉತ್ತರಕೊಟ್ಟರು. ಎಸ್ಸೆಮ್ಮ ಒಳಗೆ ಬಂದು "ಏನು! ನಾಗಮ್ಮನವರೇ! ಖಾಯಿಲೆ ಮಲಗಿದ್ದೀರಿ? ಎಲ್ಲಿ ಪೋಲಿ ಕಾಣುವುದೇ ಇಲ್ಲವಲ್ಲ" ಎಂದರು. "ಅಯ್ಯೋ! ನಮ್ಮ ಭಾಗದ ದೇವರು ನೀವು ಅವನಿಗೇನು ಮಾಡಿದ್ದಿರಪ್ಪಾ! ಕೈಬಿಟ್ಟುಹೋದ ಅಂತ ಇದ್ದೆ. ಮತ್ತೆ ಇವನು ಇಂತಹ ಒಳ್ಳೆಯ ಮಗನಾಗುತ್ತಾನೆಂದು ತಿಳಿದಿರಲಿಲ್ಲ. ಮೂರು ಹೊತ್ತೂ ನನ್ನ ಸೇವೆಯೇ ಆಗಿದೆ ಅವನಿಗೆ—ಹೆಣ್ಣುಮಗಳಿದ್ದರೆ ನನಗಿಷ್ಟು ಉಪಚಾರಮಾಡುತ್ತಿರಲಿಲ್ಲ." ಎಂದು ನಾಗಮ್ಮನವರು ಹೇಳಿದರು. ಅಷ್ಟರಲ್ಲಿ ಪೋಲಿ ಮನೆಒಳಕ್ಕೆ ಬಂದ ಮೈಯಲ್ಲಾ ನೀರು ಬಸಿಯುತ್ತಾ ಇತ್ತು. ಎಲ್ಲೋ ಕಾಲುಜಾರಿಬಿದ್ದೆ ಅಂತ ಹೇಳಿದ. ಎಸ್ಸೆಮ್ಮ ಬಟ್ಟೆ ಒಣಗಿಸಿಕೋ, ಇಲ್ಲದಿದ್ದರೆ ಖಾಯಿಲೆ ಬರುತ್ತೆ ಎಂತ ಹೇಳಿ ಹೋದರು.

ಆಗಲೆ ಎರಡುವಾರವಾಗಿದೆ. ಎಲ್ಲೆಲ್ಲೂ ವರ್ತಮಾನ ಸಾಹುಕಾರ ರಾಮಯ್ಯನ ಮಗ ನಾಗೇಂದ್ರ ನಾಲೆಯಲ್ಲಿ ಮುಳುಗಿದ್ದ. ಪೋಲಿ ಅವನನ್ನು ಎತ್ತಿಹಾಕಿ, ಉಸಿರುಬರುವಂತೆ ತಿದಿಹಾಕಿ, ಮನೆಯಲ್ಲಿ ಬಿಟ್ಟು "ಯಾರಕ್ಕೆಲೂ ಹೇಳಬೇಡ—ಹೇಳಿದರೆ ನಾಲೆಗೆ ಮತ್ತೆಹಾಕುತ್ತೇನೆ—" ಎಂತ ಹೇಳಿದ್ದ. ಪೋಲೀಗೆ ಸ್ಯೂಮೋನಿಯಾವಂತೆ ದಳವೆಲ್ಲ ಅವನ ಮನೆಸುತ್ತಲೂ ಇದ್ದಾರೆ. ಎಸ್ಸೆಮ್ಮ ಒಂದುಕಡೆ ಮೌನವಾಗಿ ಅಳುತ್ತಿದ್ದಾರೆ. ಪೆಟ್ರೋಲ್ ಮುಖಂಡ "ಸಾರ್ ಅವನು ಸತ್ತುಹೋದರೆ ಸರ್ಕಾರದವರು ಕಳುಹಿಸಿರುವ ಈ ಬೆಳ್ಳಿ ಗಂಡಭೇರುಂಡ ಅವನ ತಾಯಿಗೆ ಕೊಡಬೇಕೆ?" ಎನ್ನುತ್ತಾ ಅಳುತ್ತಿದ್ದಾನೆ. ಇಷ್ಟರಲ್ಲಿ ಡಾಕ್ಟರ್ ನಾರಾಯಣರಾಯರು ಒಳಗಿನಿಂದ ಬಂದು "ರ್ರೀ! ಶಾಸ್ತ್ರಿ! ಪರವಾಗಿಲ್ಲ. ಹುಡುಗ ಬದುಕಿದ, ಕಾಣ್ರೀ." ಎಂದರು. ಎಸ್ಸೆಮ್ಮ "ಹಾ! ಭಗವಂತ, ನಾನು ಗೆದ್ದೆ. ಕೈಹಿಡಿದ ಕೆಲಸವನ್ನು ಪೂರೈಸಿದೆ" ಎಂದರು.

ಗೃಹಶಿಕ್ಷಣ.

"ಗೃಹವೇ ಶಿಶುವಿಗೆ ಪ್ರಥಮ ಪಾಠಶಾಲೆ"—ಫ್ರೋಬೆಲ್.

(ಅಮೇರಿಕಾದೇಶದ ಕಿಂಡರ್‌ಗಾರ್ಟನ್ ಸಂಘದವರ ಅನುಮತಿಯಿಂದ ಅನುವಾದಿಸಲ್ಪಟ್ಟಿದೆ.)

ಅಂಕ ೪.

ತಾಯಂದಿರಿಗೆ ನಾಲ್ಕು ಮಾತುಗಳು.

ಕೆಲವರು ತಾಯಂದಿರು ತಮ್ಮಮಕ್ಕಳನ್ನೇ ತಿಳಿದು ಕೊಂಡಿರುವುದಿಲ್ಲ.

"ಶ್ರೀಕಂಠನಿಗೆ ಏನುಮಾಡಬೇಕೋ ತಿಳಿಯದು. ಮೊದಲು ಸರಿಯಾಗಿದ್ದ. ಈಗ ಏನೋ ಹೀಗೆ ಆಗಿಹೋಗಿದ್ದಾನೆ. ನನಗಂತೋ ಎಲ್ಲವೂ ಬೇಜಾರಾಗಿಹೋಗಿದೆ. ಏನು ಸಂಸಾರವೋ, ಏನೋ ಅಪ್ಪ" ಎಂಬುದಾಗಿ ನಮ್ಮ ಚಿಕ್ಕಮ್ಮನು ಒಂದು ದಿನ ಹೇಳಿದಳು. ನನಗೆ ಒಂದೂ ತೋಚದೆ ಸುಮ್ಮನಿದ್ದೆ. ಆದರೆ ನಮ್ಮ ಭಾವ (ಅಂದರೆ ನಮ್ಮ ತಂದೆಯವರು) ಸುಮ್ಮನಿರಲಿಲ್ಲ. "ಸಾಕು, ನಿನ್ನ ಗೋಳಾಟ. ಶ್ರೀಕಂಠನಿಗೆ ಏನು ಆಗಿದೆ? ಅವನು ಸರಿಯಾಗಿಯೇ ಇದ್ದಾನೆ. ನೀನು ನಿನ್ನ ಮಗುವನ್ನೇ ತಿಳಿದುಕೊಂಡಿಲ್ಲ. ಅವನಿಗೆ ಏನುಮಾಡಬೇಕೋ ತಿಳಿಯುವುದು ಹಾಗಿರಲಿ. ನೀನು ನಿನಗೆ ಏನುಮಾಡಿಕೊಳ್ಳಬೇಕೆಂಬುದನ್ನು ತಿಳಿದುಕೊ. ನೋಡು, ನೀನು ನಿಜವಾಗಿಯೂ ನಿನ್ನ ಮಕ್ಕಳಿಗೆ ಯಥಾರ್ಥವಾಗಿ ತಾಯಿಯಾಗಿರಬೇಕಾದರೆ ನಿನ್ನ ಮಾತೃತ್ವವನ್ನು ಪುನಃ ಸಂಸ್ಕಾರಂಭಸಬೇಕು. ನೀನು ವಿದ್ಯಾವಂತೆ ಯೋಚಿಸಿನೋಡು" ಎಂಬುದಾಗಿ ನಮ್ಮ ಭಾವ ಹೇಳಿದರು. "ಅಯ್ಯೋ! ಹಾಗಂದರೆ? ನಾನು ಅಂಬೆಗಾಲಿಡಲೇ" ಎಂದಳು ಚಿಕ್ಕಮ್ಮ. ಆದಕ್ಕೆ ಭಾವನವರು, "ನೋಡು, ನಿನ್ನ ಮಗು ಶ್ರೀಕಂಠ ಇನ್ನೂ ಚಿಕ್ಕವನಾಗಿದ್ದಾಗ ಅವನು ಏನುಮಾಡಿದರೂ 'ಮಾಪ' ಅವನು ಏನು ಕೇಳಿದರೂ ಸಿದ್ದ. ನೀನು ಯಾವಾಗಲೂ ಆ ಮಗುವಿನ ಅಪೇಕ್ಷೆಗೆ ಅಡ್ಡಬರಲಿಲ್ಲ. ಜ್ಞಾಪಕವಿದೆಯೇ, ನೀನು ಏನು ಹೇಳುತ್ತಿದ್ದೀ ಎಂತ? ನಿನ್ನ ಮಗು ಎಷ್ಟು ಮಾಣ, ಅಂದ್ರೆ. ಅವನಿಗ ಏನೂ ಬೇಡ ಎನ್ನುವುದಕ್ಕ ನನಗೆ ಜಾಯೇ ಬರುವುದಿಲ್ಲ' ಎಂತಲ್ಲವೆ? ಸರಿ, ನೀನು ಒಳ್ಳು ಆಗುತ್ತಾ ಒಂದಹಾಗೆ ಎಲ್ಲಾ ಅವನ ಮೂರ್ಖತನ ಬೆಳೆಯುತ್ತಾ ಬಂತು. ನಿನ್ನನ್ನು ನಿನ್ನ ಮಗು ತಿಳಿದುಕೂಂಡ, ನೀನು ನಿನ್ನ ಮಗುವನ್ನು ತಿಳಿದುಕ್ಕಳ್ಳಲಿಲ್ಲ. ' ಎಂದರು.

ಚಿಕ್ಕಮ್ಮ—ಸರಿ, ನಾನೇನುಮಾಡಲಿ? ನೀವು ಹೇಳುವುದೂ ಚನ್ನಾಯ್ತು? ನಿಮ್ಮ ತಮ್ಮ (ಅಂದರೆ ನಿಮ್ಮ ಚಿಕ್ಕಪ್ಪ) ಯಾವಾಗಲೂ ಸರ್ಕೀಟು ಎಂತ ಮನೇಗೇ ಸೇರುವುದಿಲ್ಲ. ಈಸಲ ಆಗಲೇ ಹೋಗಿ ೫ ದಿನವಾಯಿತು. ಮನೆಯಲ್ಲಿ ಮಗುವಾದರೂ ಸುಖವಾಗಿ ನಗುತ್ತ ನಲಿಯುತ್ತ ಇರಲಿ ಎಂತ ನಾನು ಸುಮ್ಮನಿರುತ್ತಿದ್ದೆ. ಮಾತು ಮಾತಿಗೂ ಹೊಡೆಯುತ್ತ ಬಡಿಯುತ್ತ ಇದ್ದರೆ ಈಗ ಎಂತಹ ಸ್ವಭಾವ ವುಂಟಾಗುತ್ತಿತ್ತೋ ಯಾರಬಲ್ಲರು?"

ಭಾವ—ನಾನು ಹೇಳಲೇನು? ಎಂತಹ ಸ್ವಭಾವ ಬಂದಿದ್ದರೂ ಈಗಿರುವುದಕ್ಕಿಂತ ಒಳ್ಳೆಯದೇ ಹೊರತು, ಇದಕ್ಕೆ ಕೇಳಾದ್ದು ಬರುತ್ತಿರಲಿಲ್ಲ. ಇನ್ನೂ ಕೊಂಚ ಒಳ್ಳೆಯ ನಡತೆ, ಕೊಂಚ ನಮ್ರತೆ, ತನ್ನ ತಾಯಿಯಲ್ಲಿ ಇನ್ನೂ ಕೊಂಚ ಮರ್ಯಾದೆ ಇವೆಲ್ಲಾ ಬರುತ್ತಿತ್ತು.

ಇದನ್ನು ಕೇಳಿ ಚಿಕ್ಕಮ್ಮ ಸ್ವಲ್ಪ ಗಾಬರಿಯಾದಳು. ಆದರೂ ಹೆಂಗಸಲ್ಲವೆ? "ಸರಿ, ಶ್ರೀಕಂಠನಿಗೆ ಏನು ಆಗಿದೆ ಅಂದ್ರೆ? ಅವನು ಅಷ್ಟೇನು....." ಅಷ್ಟರಲ್ಲಿ ಭಾವ "ಇಲ್ಲವೆ ತಾಯಿ! ಈಗ ಹೇಳಿದೆ, ಶ್ರೀಕಂಠನಿಗೆ ಏನುಮಾಡಬೇಕೋ ತಿಳಿಯದು ಅಂತ. ಸಂಸಾರದಲ್ಲಿಯೇ ಆ ಶ್ರೀಕಂಠನಿಂದ ನಿನಗೆ ಬೇಜಾರಾಗಿದೆ ಎಂತ ಹೇಳಿದೆ. ಪುರೆತು ಹೋಯಿತೇನು"

"ತಪ್ಪಾಯಿತು ನಿಜ, ನಾನು ಶುದ್ದ ಹುಚ್ಚಿ. ಮಗುವಿನಲ್ಲಿ ಹಟವು ಶೋಭಿಸಿದರೂ ಹತ್ತುವರ್ಷದ ಹುಡುಗನಲ್ಲಿ ಅದ್ದು ಕೆಟ್ಟಗುಣ. ನಾನು ಖಂಡಿತ ಪುನಃ ಮಾತೃತ್ವವನ್ನು ಪ್ರಾರಂಭಸಬೇಕು. ಅವರಾದರೂ ಯಾವಾಗಲೂ ಮನೆಯಲ್ಲಿ ಇದ್ದರೆ....." "ದೈವಾನುಕೂಲ ಸರಿಯಾಗಿದೆ, ಸಾವಿತ್ರಿ. ನಿನ್ನ ಯಜಮಾನನಿಗೆ ಆಫೀಸಿಗೆ ವರ್ಗವಾಯಿತು. ಇನ್ನು ಸರ್ಕೀಟೂ ಇಲ್ಲ, ಗಿರ್ಕೀಟೂ ಇಲ್ಲ."

ಮುಂದಿನ ಹರಟೆಯು ನಮಗೆ ಅಪ್ರಯುಕ್ತ ಅನೇಕಮಂದಿ ತಂದೆ ತಾಯಿಗಳು ತಮ್ಮ ಮಕ್ಕಳನ್ನು ತಿಳಿದಿರುವುದಿಲ್ಲ. ಮಾತೃತ್ವದ ಜವಾಬ್ದಾರಿಯು ಬಹಳ ಗಹನವಾದುದು. ಮಗುವಿನ ಪ್ರತಿಯೊಂದು ಆಟವೂ ಮಾತೂ ಮುಂದಿನ ಜೀವನವನ್ನೇ ಸೂಚಿಸುತ್ತೆದೆ. ಸರಿಯಾದ ಮಾರ್ಗದಲ್ಲಿ ಶಿಶುವಿಗೆ ಶಿಕ್ಷಣವು ನಡೆಯಬೇಕು. ಅಂದರೆ ಪಾಠಶಾಲೆಗೆ ಹೋಗುವುದಕ್ಕೆ ಮುಂಚೆ ಶಿಕ್ಷಣವು ಮಗುವಿಗೆ ಬೇಕು. ಅದಕ್ಕೆ ಗೃಹವೇ ಸರಿಯಾದ ಸ್ಥಳ. ಗೃಹಶಿಕ್ಷಣವು ಜೀವಮಾನದಲ್ಲೆಲ್ಲಾ ನಡೆಸುಡಿಯನ್ನು ಅನುವರ್ತಿಸಿಬರುವಂತೆ ಬೇರೆ ಯಾವ ಶಿಕ್ಷಣವೂ ಬರಲಾರದು. ಆದುದರಿಂದಲೇ ಗೃಹದೇವತೆಯಾದ ತಾಯಿಯು ತನ್ನ ಮಗುವನ್ನು ಸರಿಯಾಗಿ ಪರಿಶೀಲಿಸಿ ತಿಳಿದುಕೊಂಡು ಶಿಕ್ಷಣವನ್ನು ಕೊಡುವುದು ಬಹಳ ಶ್ರೇಯಸ್ಕರವಾದ ನಿಚಾರವು.

ಸ್ಕೌಟುಗಳೇ!

ನಮ್ಮ ಪತ್ರಿಕೆಗೆ ಚಂದಾದಾರರನ್ನೊದಗಿಸಿಕೊಡತಕ್ಕ ಸ್ಕೌಟುಗಳಿಗೆ ಅಪೂರ್ವ ಬಹುಮಾನಗಳನ್ನು ಕೊಡಬೇಕೆಂದು ನಿರ್ಧರಿಸಿರುತ್ತೇವೆ. ಹೆಚ್ಚು ವಿಚಾರಗಳಿಗೆ ಪತ್ರವ್ಯವಹಾರವನ್ನು ನಡೆಸಿ.

ಸಂಪಾದಕರು.

ಸ್ಕೌಟು ಸುದ್ದಿಗಳು.

ಇಂಗ್ಲೆಂಡಿನ ಜಾಂಬೋರಿ.

1929 ನೇ ಇಸವಿ ಜೂಲೈ 30 ನೇ ತಾರೀಖಿನಿಂದ ಆಗಸ್ಟು 4 ನೇ ತಾರೀಖಿನವರೆಗೆ ಇಂಗ್ಲೆಂಡಿನಲ್ಲಿ ಪ್ರಪಂಚದ ಎಲ್ಲಾ ಭಾಗಗಳಿಂದಲೂ ಸ್ಕೌಟು ಬಾಲಕರು ಬಂದು ಸೇರುತ್ತಾರೆ. ಈ ಸಮಾರಂಭಕ್ಕೆ ಜಾಂಬೋರಿ ಎಂದು ಕರೆಯುತ್ತಾರೆ ಮೊದಲನೆಯ ವಾರದಲ್ಲಿ ಬಿಡಾರಗಳಲ್ಲಿದ್ದು ಎರಡನೆಯ ವಾರದಲ್ಲಿ ಸುತ್ತಮುತ್ತಲಿನ ನೋಟಗಳನ್ನು ನೋಡಲು ಹೋಗುವ ಏರ್ಪಾಟಾಗಿದೆ. ಇದುವರಿವಿಗೆ ಒಂದ ವರ್ತಮಾನದಲ್ಲಿ ಇಂಗ್ಲೆಂಡಿನಿಂದಲೇ 15,000 ಬಾಲಕರೂ ಹೊರಗಿನಿಂದ ಒಟ್ಟು 15,000 ಬಾಲಕರೂ ಸೇರುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ.

ಪ್ರಯಾಣಕ್ಕಾಗಿ ನಮ್ಮ ದೇಶದಿಂದ ಪ್ರತಿಯೊಬ್ಬನಿಗೂ ರೂ. 1200 ರಿಂದ 1500 ರೂ. ವರಿಗಾಗುತ್ತದೆ. ಅಂದರೆ ಪ್ರಯಾಣದ ಖರ್ಚು ಮತ್ತು ಅಲ್ಲಿ 15 ದಿವಸಗಳವರಿಗಿರುವುದಕ್ಕೆ ಮಾತ್ರವೆ. ಹೆಚ್ಚು ಖರ್ಚಿಗೆ ಬೇರೆ ಇನ್ನಿಷ್ಟು ಬೇಕಾಗುತ್ತದೆ.

(1) ಪೂರ್ತಿಯಾಗಿ ತಮ್ಮ ಖರ್ಚನ್ನೇ ಹಾಕಿಕೊಂಡು ಹೋಗಲು ಅನುಕೂಲವಿರುವವರೂ,

(2) ಅರ್ಧ ಖರ್ಚನ್ನು ವಹಿಸಿ ಇನ್ನರ್ಧವನ್ನು ಸರಕಾರದವರಿಂದ ಸಹಾಯವನ್ನಾಗಿ ಕೋರುವವರೂ, ಬೆಂಗಳೂರಿನ ಸ್ಕೌಟು ಮಂಡಳಿಗೆ ಒರೆದುಕೊಳ್ಳಬೇಕು. ಸರಕಾರದವರು ಒಪ್ಪಿದಪಕ್ಷದಲ್ಲಿ ಮೈಸೂರಿನವರು ಹಲವರು ಹೋಗಬಹುದು. ಇಷ್ಟರಲ್ಲಿ ಬೇರೆ ಬೇರೆ ವಿಧಗಳಲ್ಲಿ ಹಣಸಂಪಾದನೆಮಾಡಲು ಪ್ರಯತ್ನಪಡುತ್ತಿದ್ದರೆ ಅನುಕೂಲ.

ದೀಕ್ಷಾವಿಧಿ.

ಮಂಡ್ಯ ಮತ್ತು ಮದ್ದೂರಿನ ಸ್ಕೌಟುಗುಂಪಿನವರು ಆಗಸ್ಟು 19 ನೇ ತಾರೀಖಿನ ದಿವಸ ಬ್ಯಾಡರಹಳ್ಳಿಯಲ್ಲಿ ಒಡಾರವನ್ನು ಹೂಡಿದ್ದರು. ಮೈಸೂರಿನ ಜಿಲ್ಲಾ ಸ್ಕೌಟು ಸಂಘದವರು ಸಹ ಅಲ್ಲಿಗೆ ಹೋಗಿ ಸ್ಕೌಟುಗಳಿಗೆ ದೀಕ್ಷೆಯನ್ನು ಕೊಟ್ಟು ಒಂದರು. ಸ್ಕೌಟುಗಳು ಹತ್ತಿರದಲ್ಲಿದ್ದ ಹುಲಿಕರೆ ಕಾಮಗಾರಿಯನ್ನು ನೋಡಿಕೊಂಡು ಒಂದರು.

ದಸರಾಪ್ರದರ್ಶನ.

ದಸರಾಕಾಲದಲ್ಲಿ ಮೈಸೂರಿನಲ್ಲಿ ಬಂದು ಪ್ರದರ್ಶನವನ್ನು ಹೋದ ವರ್ಷದಂತೆ ನಡೆಯುವುದು. ಸ್ಕೌಟುಗಳು ಕಬ್ಬಗಳು ತಮ್ಮ ಬೇಸಿಗೆ ಕಾಲದಲ್ಲಿ ಮಾಡಿರುವ ಕೈಕಲಸವನ್ನು ಸಾಮಾನುಗಳನ್ನು, ಸಂಚಯಿಸಿರುವ ಸ್ಟಾಂಪುಗಳು, ನಾಣ್ಯಗಳು ಮುಂತಾದವನ್ನು ಸ್ಕೌಟುಗಳಿಗಾಗಿ ಏರ್ಪಡಿಸಿರುವ ಜಾಗದಲ್ಲಿಡಬಹುದು. ಪದಾರ್ಥಗಳನ್ನು ಮೈಸೂರಿನ ಸ್ಕೌಟು ಆಫೀಸಿಗೆ ಕಳಿಹಿಸಿಕೊಡಬೇಕು.

ವಿಮರ್ಶೆ.

ಜೀವನರಹಸ್ಯ. ಶಿ. ಕಾರಂತ, ಕೋಟ, ಬೆಲೆ ೦-೧-೬ ಕೆನರಾ ಭಾಷಾಖಾನೆ ಮಂಗಳೂರು. ಪ್ರತಿ ಒಬ್ಬ ಬ್ರಹ್ಮಚಾರಿಯೂ ಓದತಕ್ಕದ್ದು. ಹಿಂದೂಗಳು ಪ್ರಾಚೀನಕಾಲದಲ್ಲಿ ಪ್ರಪಂಚಕ್ಕೆಲ್ಲಾ ತಮ್ಮ ಶ್ರೇಷ್ಠತ್ವವನ್ನು ಪ್ರಕಾಶಿಸಿದ್ದರೆಂದರೆ ಅದಕ್ಕೆ ಅವರ ಬ್ರಹ್ಮಚರ್ಯವೇ ಕಾರಣ. ಬ್ರಹ್ಮಚರ್ಯವನ್ನು ಆಚರಣೆಗೆ ತರದೇ ಬಿಟ್ಟಿದ್ದ ಈಗಿನ ಹಿಂದೂಗಳು ಹಿಂದೆ ಬಿದ್ದಿದ್ದಾರೆಂದರೆ ಆಶ್ಚರ್ಯವೇನೂ ಇಲ್ಲ ಪ್ರಕೃತ ಏಮರ್ಶೆಯಲ್ಲಿರತಕ್ಕ ಈ ಸಣ್ಣ ಪುಸ್ತಕವು ಪ್ರತಿ ಒಬ್ಬ ಬಾಲಕನನ್ನೂ ನಿಶ್ಚಯದಿಂದ ಎಬ್ಬಿಸುವಂತಿದೆ. ಇದಕ್ಕೆ ತಕ್ಕ ಪ್ರೋತ್ಸಾಹವು ದೊರೆಯಲೆಂದು ಹಾರೈಸುತ್ತೇವೆ.

ಪ್ರಸವಕಾಲದಲ್ಲಿ ಪ್ರಥಮಚಿಕಿತ್ಸೆ. ಡಾ|| ಯು. ರಾಮರಾವ್. ಬೆಲೆ ೦-೬-೦. ಶ್ರೀಕೃಷ್ಣ ಬ್ರದರ್ಸ್, ಮದ್ರಾಸ್. ಪ್ರಥಮ ಚಿಕಿತ್ಸೆಯನ್ನು ಬರೆದ ಶ್ರೀ|| ರಾಮರಾಯರು ಕರ್ನಾಟಕಸ್ಥರಿಗೆ ಹೊಸಬರೇನೂ ಅಲ್ಲ. ಹಳ್ಳಿಗಾಡುಗಳಲ್ಲಿ ವೈದ್ಯರ ಸಹಾಯವು ದೊರಕುವುದು ತಡವಾಗುವುದರಿಂದ, ಅನುಭವವಿಲ್ಲದವರೂ ಸಹ ವೈದ್ಯಸಹಾಯವು ದೊರಕುವುದರೊಳಗೆ ಪ್ರಸವಕಾಲದಲ್ಲಿಯೂ ಪ್ರಥಮಚಿಕಿತ್ಸೆಯನ್ನು ಮಾಡುವ ರೀತಿಯನ್ನು ಸುಲಭವಾಗಿ ತಿಳಿಸಿರುತ್ತಾರೆ. ಅಜ್ಞಾನದಿಂದಲೂ, ಅವಿವೇಕದಿಂದಲೂ ಎಷ್ಟೋ ಪ್ರಾಣಗಳು ನಾಶವಾಗುವುದನ್ನು ತಪ್ಪಿಸುವ ಈ ಪುಸ್ತಕಕ್ಕೆ ನಮ್ಮ ಸುಸ್ವಾಗತವಿದೆ.

ಮುಕುಂದಮಾಲಾ ಸ್ತೋತ್ರರತ್ನ. ಬಿ. ರಾಜಗೋಪಾಲ ಚಕ್ರವರ್ತಿ, ಚಲುವಾಂಬ ಅಗ್ರಹಾರ. ಮೈಸೂರು. ಬೆಲೆ 0-8-0 ಸುಪ್ರಸಿದ್ಧರಾದ ಭಕ್ತಾಗ್ರೇಸರ ಕುಲಶೇಖರ ಆಳ್ವಾರರಿಂದ ವಿರಚಿತವಾದ ಮುಕುಂದಮಾಲಾ ಸ್ತೋತ್ರಗಳನ್ನು ಶ್ರೀ|| ಚಕ್ರವರ್ತಿಗಳು ಬಹಳ ಶ್ರಮದಿಂದ ಕನ್ನಡದಲ್ಲಿ ಪ್ರಕಟಿಸಿ ಕನ್ನಡಿಗರನ್ನು ಋಣಿಗಳನ್ನಾಗಿ ಮಾಡಿರುವರು. ಮುಕುಂದಮಾಲೆಯು ಗೀತೆಯ ಸಾರವಾಗಿರುವುದು. ಕನ್ನಡದಲ್ಲಿ ತಾತ್ಪರ್ಯ, ವಿಶೇಷತಾರ್ತಾದಿಗಳನ್ನೂ, ಕುಲಶೇಖರರ ಜೀವನವನ್ನೂ ಪ್ರಕಟಿಸಿರುವುದು ಸ್ತೋತ್ರಾರ್ಹವೇ ಸರಿ. ಭಾಷೆಯು ಸುಲಭವಾಗಿಯೂ, ಸರಳವಾಗಿಯೂ ಇದ್ದು ಮನೋರಂಜಕವಾಗಿರುತ್ತದೆ. ಭಕ್ತಸುಲಭನಾದ ಕೃಷ್ಣಪರಮಾತ್ಮನು ಶ್ರೀ|| ಚಕ್ರವರ್ತಿಗಳಿಗೆ ಇಂತಹ ಸೇವೆಗಳಿಗೆ ಇನ್ನೂ ಅನೇಕ ಸುಸಮಯಗಳನ್ನು ಒದಗಿಸಲಿ!

ಶುಕ್ಲ ಸಂ|| ಸಿದ್ಧಾಂತಪಂಚಾಂಗ—ಭಾರತ ಜ್ಯೋತಿಷ್ಯ ವೈದ್ಯಾಲಯ ಹರಪನಹಳ್ಳಿ (ಬಳ್ಳಾರಿ ಜಿಲ್ಲಾ) ಬೆಲೆ 0-2-0

ಸುಲಭಬೆಲೆ! ಅತ್ಯುತ್ತಮತರಹ ಫೌಂಟ್‌ಪೆನ್‌ಗಳು!! ತರಿಸಿ ಪರೀಕ್ಷಿಸಿರಿ!!!

1. ವರಲ್ಡ್ಸ್‌ವಂಡರ್ ಫೌಂಟ್‌ಪೆನ್ 1ಕ್ಕೆ 3-0-0
2. ಡಿಟೋನಮೂನೆ ಸ್ಮೂತ್‌ಕ್ಯಾಪಿರುವ ಪೆನ್ 1ಕ್ಕೆ 3-8-0
3. ಹಾರ್ಡ್‌ವೇರ್ ಫೌಂಟ್‌ಪೆನ್ 1ಕ್ಕೆ 0-0
4. "ಸ್ಪಾಟ್" ಫೌಂಟ್‌ಪೆನ್ 1ಕ್ಕೆ 0-0
5. ಬ್ಲಾಕ್‌ಬರ್ಡ್ ಫೌಂಟ್‌ಪೆನ್ 1ಕ್ಕೆ 3-8-0 ಮತ್ತು 3-12-0
6. "ವಾಟರ್‌ಮನ್" ಫೌಂಟ್‌ಪೆನ್ 1ಕ್ಕೆ 8- 8-0
7. "ವಾಟರ್‌ಮನ್" ಸೆಲ್ಫ್‌ಫಿಲಿಂಗ್ ಫೌಂಟ್‌ಪೆನ್ 1ಕ್ಕೆ 12- 0-0
8. "ವಾಟರ್‌ಮನ್" ಸೇಫ್ಟಿ ಫೌಂಟ್‌ಪೆನ್ 1ಕ್ಕೆ 11- 0-0

ಇನ್ನೂ ಅನೇಕತರಹ ಕಡಿಮೆಕ್ರಯದ ಪೆನ್‌ಗಳು ನಮ್ಮಲ್ಲಿ ದೊರೆಯುತ್ತವೆ. 6ಪೈ ಸ್ಟ್ಯಾಂಪು ಕಳಿಸಿ ನಮ್ಮ ಕ್ಯಾಟಲಾಗ್ ತರಿಸಿಕೊಳ್ಳಿರಿ.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು, ಮೈಸೂರು.

THE MYSORE SCOUT

THE OFFICIAL ORGAN OF THE BOY SCOUTS OF MYSORE
A TEN YEAR OLD SCOUT MAGAZINE

SUBSCRIPTION RATES

To Students and Scouts, by Post Re. 1 per annum.
To Patrons, Reaning Rooms, ect., Rs. 2 per anuum.

THE MANAGER,
Tippusultan's Palace Fort Bangalore City.

MY SCIENTIFIC SYSTEM OF GRADUATED PHYSICAL CULTURE

6th Edition, Revised & Enlvrged.

It is free—This will show you some of my remarkable achievements in Health—building exercises, many pages with nice photographs of myself and a number of my pupils. Read what they say about my system. All I ask is the price of postage 2 annas. Remember this does not obligate you in any way. So don't delay one minute. Order for a copy at once—now while it is in your mind—Prof. M. V. Krishna Rao, Post Basavangudi, Bangalore City.

ಸಚಿತ್ರ] ಸುಬೋಧ [ಮಾಸಪತ್ರಿಕೆ

ಮೂರನೆಯ ಸಂಪುಟವು ೧೯೩೭ ಅಕ್ಟೋಬರ್ ತಿಂಗಳಿಂದ ಪ್ರಾರಂಭ.

ಇದರಲ್ಲಿ ಧಾರ್ಮಿಕ, ನೈತಿಕ, ಸಾಮಾಜಿಕ, ವಿದ್ಯಾವಿಷಯಕ, ಮತ್ತು ಇತರ ಬೋಧಪರ ಲೇಖಗಳು, ಸುಲಭವೂ ಮನೋಹರವೂ ಆದ ತಿಳಿಗನ್ನಡದಲ್ಲಿ ಕರ್ಣಾಟಕದ ಸುಪ್ರಸಿದ್ಧ ಲೇಖಕರಿಂದ ಬರೆಯಲ್ಪಟ್ಟು ಪ್ರಕಟವಾಗುವುವು. ಅಲ್ಲದೆ ಆರ್ಷೇಯ ಕರ್ಣಾಟಕದ ರಾಜ್ಯವಾದ ಹಳೇಬೀಡು ದ್ವಾರಸಮುದ್ರಗಳ ಚರಿತ್ರಾಂಶಗಳನ್ನು ವರ್ಣಿಸುವ 'ಶಾಂತಳಾ' ಎಂಬೊಂದು ಸುಮನೋಹರ ಕರ್ಣಾಟಕ ನಾಟಕವೂ ಕ್ರಮಶಃ ಪ್ರಕಟವಾಗುತ್ತಿದೆ.

ಸ್ಯಾಮಾರ್ಕೆಟ್, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ರೂ. ೧—೮—೦ (ಅಂಚೆವೆಚ್ಚ ಉಚಿತ)

ಕರ್ನಾಟಕ ಸ್ಕೌಟ್ ಮಾಸಪತ್ರಿಕೆ.

ವಾರ್ಷಿಕ ಚಂದಾ ೧—೮—೦.
ಪೋಷಕರಿಗೆ ,, ೩—೦—೦.

ವ್ಯಾಪಾರಸ್ಥರ ಜಾಹೀರಾತುಗಳ ದರಗಳ ವಿವರವನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕು.

ಮ್ಯಾನೇಜರ್
ಕರ್ನಾಟಕ ಸ್ಕೌಟ್, ಧಾರವಾಡ.

ನಮ್ಮಲ್ಲಿ :—
ಎಲ್ಲಾ ತರಗತಿಗಳ ಪುಸ್ತಕಗಳೂ ಮತ್ತು ಸಮಸ್ತ ಸ್ಟೇಷನರಿ ಸಾಮಾನುಗಳೂ ಯಾವಾಗಲೂ ದೊರೆಯುತ್ತವೆ.
ಅಲ್ಲದೆ :—ಬೆಂಗಳೂರು ಪ್ರೆಸ್ಸಿನ ಸಾಮಾನುಗಳು ನಮ್ಮಲ್ಲಿವೆ.
ಚಾರಪ್ಪನವರ ಪುಸ್ತಕಗಳು ನಮ್ಮಲ್ಲಿವೆ.
ಮೈಸೂರು ಮಕ್ಕಳು ಮಾಸಪತ್ರಿಕೆಗೆ ಏಜಂಟರಾಗಿದ್ದೇವೆ.

ಕೆ. ವಿ. ರಾಮಶೆಟ್ಟಿ ಅಂಡ್‌ಕೊ,
ಮೈಸೂರು.

'ಮೈಸೂರು ಮಕ್ಕಳು' ಚಿತ್ರಮಾಲೆ
(Mysore Makkalu Pictorial)
1927-1928

ನುಣುಪಾದ ಕಾಗದದ ಮೇಲೆ ಎರಡು ರಂಗುಗಳಲ್ಲಿ ಮೈಸೂರು ಮಕ್ಕಳ ಚಿತ್ರಗಳನ್ನು ಮುದ್ರಿಸಿ ಪುಸ್ತಕರೂಪದಲ್ಲಿ ಹೊರಡಿಸಲಾಗಿದೆ.

ದಸರಾ ಕಾಲದಲ್ಲಿ ಮಕ್ಕಳಿಗೆ ಈ ಪುಸ್ತಕಗಳನ್ನು ಉಡುಗೆರೆಯಾಗಿ ಕೊಡಲು ಅನುಕೂಲವಾಗಿದೆ. ತಮ್ಮ ದೇಶ, ತಮ್ಮ ಜನವೆಂಬ ಸ್ವಾಭಿಮಾನವು ಮಕ್ಕಳಿಗಿರಬೇಕಾದರೆ ಇದೇ ಉಪಾಯ.

ನಮ್ಮ ಚಂದಾದಾರರಿಗೆ ಮಾತ್ರ ೦-೬-೦, ಇತರರಿಗೆ ೦-೮-೦ ವಿ.ಪಿ. ಖರ್ಚು ಪ್ರತ್ಯೇಕ. ವಿ.ಪಿ. ಅಪೇಕ್ಷಿಸುವವರು ೩ ಆಣೆ ಸ್ಟ್ಯಾಂಪನ್ನು ಕಳುಹಿಸಬೇಕು. ಮೈಸೂರುಮಕ್ಕಳು ಆಫೀಸು, ಮೈಸೂರು.

ಜೀವನಾಧಾರ ಡಿಪೋ ಇವರ ಮೂರು ರತ್ನಗಳು

೧. ಜೀವನಾಧಾರ

ಸಣ್ಣ ಬಾಟ್ಲಿ 0—12—0 ದೊಡ್ಡ ಬಾಟ್ಲಿ 1—8—0 ವಿ. ಪಿ. ಚಾರ್ಜು ಪ್ರತ್ಯೇಕ.

೨೬-೧೦-೨೭ ಬೊಮ್ಮಗಟ್ಟ.

ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಅನೇಕ ವ್ಯಾಧಿಗಳಿಗೆ ಉಪಯೋಗಿಸಿದ್ದೇನೆ. ಮತ್ತು ಅದು ಗುಣಕೊಡುವ ವಿಷಯದಲ್ಲಿ ತುಂಬಾ ತೃಪ್ತಿಹೊಂದಿದ್ದೇನೆ. ನಿಜವಾಗಿ ಅದು ಉತ್ಕೃಷ್ಟ ಔಷಧವಾಗಿರುತ್ತದೆ. ಮತ್ತು ಅದು ಜಗತ್ತಿಗೆ ಒಂದು ಲಾಭವೇ ಆಗಿರುತ್ತದೆ. ಮೈಸೂರು ಪ್ರದರ್ಶನದಲ್ಲಿ ಜೀವನಾಧಾರವು ಬಹುಮಾನದ ಇನಾಮನ್ನು ಹೊಂದಿದ್ದನ್ನು ತಿಳಿಸಲು ಅತ್ಯಂತ ಸಂತೋಷಪಡುತ್ತೇನೆ. ಜೀವನಾಧಾರದ ಒಂದು ಸೀಸೆಯು ಪ್ರತಿಯೊಂದು ಮನೆಯಲ್ಲಿ ಇಡುವುದಕ್ಕೆ ನಾನು ಉಪದೇಶಮಾಡುವೆನು. ಕಠಿಣ ಪ್ರಸಂಗದಲ್ಲಿ ಒಬ್ಬ ಡಾಕ್ಟರನಂತೆ ಉಪಯೋಗಬೀಳುತ್ತದೆ.

ಎಲ್. ರಾಮಚಂದ್ರರಾವ್,
ಮುನ್, ಗ್ರಾಮಪಂಚಾಯಿತ್.

ನನ್ನ ಕುದುರೆಯು ಮೈಗೀ ಎಂಬ ತ್ವಚರೋಗದಿಂದ ಪೀಡಿತವಾಗಿತ್ತು. ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಕಳೆದ ೧೫ ದಿವಸಗಳಿಂದ ಉಪಯೋಗಿಸುತ್ತಿರುವೆನು. ಮತ್ತು ಬಹಳೇ ಗುಣಕೊಟ್ಟಿರುವುದು.

೨-೧೧-೨೭,
ಮೈಸೂರು.

ಸಿದ್ಧರಾಜ ಅರಸು.
ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್.

೨. ಗಜಕರ್ಣದ ತೈಲ

ಬಾಟ್ಲಿ ೧ ಕ್ಕೆ 0 12 0 ಪ್ಯಾಕಿಂಗ್ ಪೋಸ್ಟೇಜ್ ಪ್ರತ್ಯೇಕ.

ಧಾರವಾಡ, ೧೮-೨-೨೮.

ನಾನು ನಿಮ್ಮ ಗಜಕರ್ಣದ ತೈಲವನ್ನು ತಲೆಯಲ್ಲಿ ಕೂದಲುಗಳು ಉದರಿರುವದಕ್ಕೆ (Pach of baldness) ಉಪಯೋಗಿಸುತ್ತಿದ್ದೇನೆ. ಅದು ಈಗಾಗಲೇ ಬಹಳ ಗುಣಕೊಟ್ಟಿರುವುದು. ಕಾರಣ ಈ ಪತ್ರವುಟ್ಟಿದ ಕೂಡ್ಲೆ 2 ಬಾಟ್ಲಿ ಗಜಕರ್ಣದ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

ರಾಮರಾವ್ ಎನ್. ದೇಸಾಯಿ.

ಅನೇಕರು ಅನುಭವಿಸುತ್ತಿರುವ ನವೆ, ಗಜಕರ್ಣ, ಹುಳಕಡ್ಡಿ, ಕಜ್ಜಿ, ಉಗುರುಸುತ್ತು; ಹಳೇ ಇಸಬು, ಕತ್ತಿ ಘಾಯ, ಮತ್ತು ಎಲ್ಲಾ ತರಹದ ಚರ್ಮವ್ಯಾಧಿಗಳಿಗೆ ಗಜಕರ್ಣದ ತೈಲವನ್ನು ಹಚ್ಚಿದ 2-3 ದಿನಗಳಲ್ಲಿ ಗುಣಮಾಡಿಕೊಳ್ಳಬಹುದು, ಇದರಲ್ಲಿ ಮುಖ್ಯವಾದ ಗುಣವೇನೆಂದರೆ, ಗಾಯ ಅಥವಾ ಹುಣ್ಣಿನಿಂದ ಬರುವ ಕಲೆಗಳನ್ನು ತೆಗೆದುಹಾಕಿ ಪುನಃ ಮೊದಲಿನ ಚರ್ಮದ ಬಣ್ಣಕ್ಕೆ ತರುವದು.

೩. ಶತಮೂಲಿಕಾ ಸಮ್ಮೇಳನ ಭೃಂಗಾಮಲಕ ತೈಲ

ಬಾಟ್ಲಿ 1ಕ್ಕೆ 0 8 0. ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

ಈ ತೈಲವು ಆಯುರ್ವೇದ ಶಾಸ್ತ್ರೋಕ್ತವಾದ ಶತಮೂಲಿಕಾಸಂಗ್ರಹವನ್ನು ಪಾಶ್ಚಾತ್ಯ ರಸಾಯನಶಾಸ್ತ್ರ ರೀತ್ಯಾ (Latest Scientific Process) ಶುದ್ಧಿಯಾದ ತೈಲದಲ್ಲಿ ಪಕ್ವಮಾಡಿ ವನಸ್ಪತಿ ದ್ರವ್ಯಗಳ ಪ್ರತಿಯೊಂದು ಗುಣಾಂಶವನ್ನೂ ಭಾವಸೆಮಾಡಿ ತಯಾರಿಸಿದೆ. ಇದನ್ನು ಪ್ರತಿದಿನವೂ ತಲೆಗೆ ಲೇಪಿಸುವುದರಿಂದ ಜ್ಞಾನಶಕ್ತಿಯು ಅಭಿವೃದ್ಧಿಯಾಗಿ ಬುದ್ಧಿಭ್ರಮೆಯು ನಾಶವಾಗುತ್ತದೆ. ನೇತ್ರವ್ಯಾಧಿಗಳು ಗುಣವಾಗಿ ಕಣ್ಣುಗಳಿಗೂ, ಮುಖಕ್ಕೂ ಕಾಂತಿಯು ಬರುವುದು.

ಮೈಸೂರು ಬ್ರಾಂಚ್—ಇಲವಾಲ ರೋಡು.

ಜೀವನಾಧಾರ ಡಿಪೋ, ಹುಬ್ಬಳ್ಳಿ.

ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

"ಮೈಸೂರು ಸ್ಕೌಟ್" ನ ಕನ್ನಡಭಾಗವು ಇದರೊಡನೆ ಸಮಾವಿಷ್ಟವಾಗಿದೆ.

ಮೈಸೂರು ಮಕ್ಕಳು

॥ ಓದುವ ಹೆಣ್ಣಳು ಗಂಡುಗಳುಲಿವರು, ಹರುಷವಬೀರುತ ಓಡ್ಯಾಡಿ।
॥ ನಾಲ್ಮಡಿ ಕೃಷ್ಣನ ಕೊಂಡಾಡಿ ॥

೨ನೆಯ ವರ್ಷ.] ವಿಭವ ಸಂ॥ ದ ಕಾರ್ತೀಕದ ಹುಣ್ಣಿವೆ—ನವೆಂಬರ್ ೧೯೨೮ [೧೪ನೆಯ ಹೆಜ್ಜೆ.

ಮೈಸೂರು ಸ್ಕೌಟುಮಂಡಳಿಯ ಕನ್ನಡ ಮಾಸಪತ್ರಿಕೆ.

ಬರಹಗಳ ಭಾಂಡಾರ.

೧ ಮೈಸೂರು ಮಕ್ಕಳ ಚಿತ್ರಪರಿಚಯ—
ಶ್ರೀ॥ ದಿವಾ೯ ಪೂರ್ಣಯ್ಯನವರು
೨ ಮೈಸೂರು ಮಕ್ಕಳ ಜೀವನಚರಿತ್ರೆ—
ಶ್ರೀ॥ ದಿವಾ೯ ಪೂರ್ಣಯ್ಯನವರು
೩ ಎಳೆಯರು (ಪದ್ಯ) ವೇ॥ ಹಿರಿಯಣ್ಣ ಶ್ರೀ ಹೊಯಿಸಳ.
ಗುಂಪುಗಳ ವರದಿಗಳು
೪ ನವರಾತ್ರಿ (ಒಂದು ಕಥೆ).
೫ ಕಥೆಗಳ ಕಟ್ಟು—ಬಲಿಚಕ್ರವರ್ತಿ
೬ ಕಬ್‌ಗಳು ಕಲಿಯಬೇಕಾದುದು
ಕಬ್‌ಗಳೊಡನೆ ನಮ್ಮದೊಂದು ಹರಟೆ
೭ ಆಟದ ಬೈಲು
೮. ಹಿರಿಯಣ್ಣಂದಿರಿಗಾಗಿ
೯ ಸಮರೂಪ—(ಯಾನಿಘಾರಂ)
೧೦. ಶಿಬಿರದ ವಿಷಯವಾಗಿ.
೧೧ ಗೃಹಶಿಕ್ಷಣ.
೧೨ ಸ್ಕೌಟು ಸುದ್ದಿಗಳು—ವಿಮರ್ಶೆ—ಸ್ವೀಕಾರ.

ಅಲ್ಲಲ್ಲಿ ಕೆಲಕೆಲವು

ಸಂಪಾದಕರು
ಎನ್ ಎಸ್. ನಾರಾಯಣಶಾಸ್ತ್ರಿ, ಬಿ.ಎ.
ಆರ್. ಕ. ಲಕ್ಕೂರ್.

ವಾರ್ಷಿಕಚಂದಾ ೧—೦—೦
(ಅಂಚೆಹಾಸಲು ವಿನಾ)
ಸ್ಕೂಲು ಮತ್ತು ವಾಚನಾಲಯ
ಗಳಿಗೆ ರೂ. ೨.

"ಮೈಸೂರು ಮಕ್ಕಳು ಆಫೀಸ್,
ಮೈಸೂರು.

ದೇವಭೂಜ.

ಈ ಮಾಸಪತ್ರಿಕೆಯಲ್ಲಿ ಪೌರಾಣಿಕ, ಐತಿಹಾಸಿಕ, ಕಾದಂಬರಿಗಳೂ, ಚಿಕ್ಕ ಕಥೆಗಳೂ, ವೈದ್ಯಭಾಗ, ಗೃಹಶಾಸ್ತ್ರ ಮುಂತಾದ ವಿಷಯಗಳೂ, ಉತ್ತಮ ಲೇಖಗಳೂ, ವರ್ತಮಾನಸಂಗ್ರಹವೂ, ಪ್ರತಿ ತಿಂಗಳದ ಕನ್ನಡ ಕ್ಯಾಲೇಂಡರವೂ ಕ್ರಮಶಃ ಪ್ರಕಟವಾಗುವವು.

ವಾರ್ಷಿಕಚಂದಾ—ಮುಂಗಡ ೧-೪-೦, ವಿ.ಪಿ.ಯಿಂದ ೧-೮-೦.

ವಿಳಾಸ:—**"ದೇವಭೂಜ" ಆಫೀಸ,**
ಪೋಸ್ಟ ರೋಣ, ಡಿ|| ಧಾರವಾಡ.

ಕಥೆ! ಕಾದಂಬರಿ! ನಾಟಕ!
ಕವಿತೆ! ಲೇಖನ! ಹಾಸ್ಯ!

ದೊಡ್ಡ ಆಕಾರದ ೭೪ ಪುಟಗಳು!

ವರ್ಷಾಂತ್ಯಕ್ಕೆ ವಿಶೇಷಾಂಕ!!

ಉದಯಭಾರತ

ಸಚಿತ್ರ ಮಾಸಪತ್ರಿಕೆ

ವಿಶೇಷಾಂಕ ರಹಿತ ೧-೮-೦

ವಿಶೇಷಾಂಕ ಸಹಿತ ೨-೦-೦

ಉದಯ ಭಾರತ ಕಾರ್ಯಾಲಯ,
ಕೊಡಿಯಾಲ್‌ಬೈಲ್

THE SCHOOL FOLK

(A BRIGHT LIVELY ENLIGHTENING MONTHLY FOR YOUNG AND OLD)

10th YEAR BEGINS FROM JUNE 1928.

SUBSCRIPTION.

Rupees 1—8—0 only per Year.

Apply to —

THE MANAGER,
SCHOOL FOLK,
TUMKUR.

" ರೋಗಗಳನ್ನು ಗುಣಮಾಡುವವನು ನಿಪುಣವೈದ್ಯನಾಗಿರಬಹುದು.
ಆದರೆ, ರೋಗಗಳು ಬಾರದಂತೆ ಮಾಡುವವನೇ ನಂಬಿಕೆಗೆ
ಪಾತ್ರನಾದ ಉತ್ತಮವೈದ್ಯನು. "

ಥಾಮಸ್ ಫುಲ್ಲರ್.

ಅನರಬುಲ್ ಡಾ. ಯು. ರಾಮರಾವ್ ಮತ್ತು ಯು. ಕೃಷ್ಣರಾವ್, ಎಂ. ಬಿ. ಬಿ. ಎಸ್ ಇವರಿಂದ ಪ್ರಕಟವಾಗುತ್ತಿರುವ ಆರೋಗ್ಯ ಜೀವನದ ಮಾರ್ಗವನ್ನು ಭೋಧಿಸತಕ್ಕ,

ಆರೋಗ್ಯಚಂದ್ರಿಕೆ

ಎಂಬೀ ಸಚಿತ್ರಮಾಸಪತ್ರಿಕೆಯು, ಅಂತಹ ನಂಬಿಕೆಯುಳ್ಳ ಉತ್ತಮ ವೈದ್ಯಸ್ಥಾನದಲ್ಲಿದ್ದು ನಿಮಗೆ ಸಹಾಯಮಾಡುತ್ತಿರುವುದು. ಏಕೆಂದರೆ. ಮಾನವಜಾತಿಗೆ ಬರತಕ್ಕ ರೋಗಗಳಿಗೆ ನಿವಾರಣೋಪಾಯಗಳನ್ನು ಕೋರಿಸುವುದೇ ಆ ಪತ್ರಿಕೆಯ ಮುಖ್ಯೋದ್ದೇಶವು. ಇದಕ್ಕೆ ಚಂದಾ ಹಣವು ಅಂಚೆಯ ವೆಚ್ಚ ಸೇರಿ, ವರ್ಷವೊಂದಕ್ಕೆ ರೂ. 1—8—0. ಮಾತ್ರ.

ಮ್ಯಾನೇಜರ್, **"ಆರೋಗ್ಯಚಂದ್ರಿಕೆ"**
ಪೋಸ್ಟ ಬಾಕ್ಸ್ ನಂ, 166,
ಮದ್ರಾಸ್.

ಕೇವಲ ನಾಟಕ ವಿಚಾರಗಳಿಂದಲೂ ಕರ್ನಾಟಕ ಸುಪ್ರಸಿದ್ಧ ನಟರ ಅಭಿನಯ ಚಿತ್ರಗಳಿಂದಲೂ, ಹಿಂದೂಸ್ಥಾನದ ಪ್ರಸಿದ್ಧ ಚಿತ್ರಕಾರರ ಹಲವು ಬಣ್ಣಗಳ ಚಿತ್ರಗಳಿಂದಲೂ, ಹೆಬ್ಬವನ್ನುಂಟುಮಾಡುತ್ತಿರುವ ಪತ್ರಿಕೆಯೆಂದರೆ ಇದೊಂದೇ. ಇಂಥಾದ್ದರಲ್ಲಿ ಪತ್ರಿಕೆಗೆ ಕೇವಲ ರೂ. 3—8—0, ವಾರ್ಷಿಕಚಂದ ಇಡಲಾಗಿದೆ.

ವ್ಯವಸ್ಥಾಪಕ, ರಂಗಭೂಮಿ,
ಮನವಾರ್ತೆವೇಟೆ, ಬೆಂಗಳೂರು ಸಿಟಿ.

THE EASTERN HERALD.

India's only Psychic, Astrological, Physchological, Vedantic, Occult, Monthly Journal and Miscellany.

Annual Subscription Rs. 2.

For Students Rs .1-8-0, Foreign 5 Shillings Single copy 0-4-0.

Editor: Bharati Bhusan,
Prof: **Prakasa Raw.**
Vizianagaram City, (B. N. Ry.)

ಮೈಸೂರು ಮಕ್ಕಳು

ದಿವಾನ್ ಪೂರ್ಣಯ್ಯನವರು.

ದಿವಾ ಪೂರ್ಣಯ್ಯನವರು.

ಸುಮಾರು ಇನ್ನೂರು ವರ್ಷಗಳ ಹಿಂದೆ, ಈಗ ಮದ್ರಾಸು ಅಧಿಪತ್ಯಕ್ಕೂ ಬೊಂಬಾಯಿ ಅಧಿಪತ್ಯಕ್ಕೂ ಸೇರಿರುವ ಅನೇಕ ಪ್ರದೇಶಗಳು ಮೈಸೂರಿನವರ ಅಧೀನದಲ್ಲಿದ್ದುವು. ಹಾಗೆ ಮೈಸೂರಿಗೆ ಸೇರಿದ್ದ ಪಟ್ಟಣಗಳಲ್ಲಿ ಕೋಯಮತ್ತೂರು ಒಂದಾಗಿತ್ತು.

ಕೋಯಮತ್ತೂರು ಮೈಸೂರು ರಾಜ್ಯಕ್ಕೆ ಸೇರಿದ್ದಾಗ, ಸುಮಾರು ೧೭೫ ವರ್ಷಗಳ ಹಿಂದೆ, ಸುಪ್ರಸಿದ್ಧರಾದ ದಿವಾ ಪೂರ್ಣಯ್ಯನವರು ಅಲ್ಲಿ ಜನ್ಮವೆತ್ತಿದರು. ಇವರ ಬಾಲ್ಯವೆಲ್ಲಾ ಪ್ರಾಯಶಃ ಕೋಯಮತ್ತೂರಿನಲ್ಲಿ ಕಳೆದಿರಬೇಕು. ಆದರೆ ಇವರ ಬಾಲ್ಯ ಚರಿತ್ರೆಯು ನಮಗೆ ದೊರಕಿಲ್ಲ. ಇವರು ಯೌವನ ದೆಶೆಯಲ್ಲಿ ತಮ್ಮ ಅದೃಷ್ಟವನ್ನು ಪರೀಕ್ಷಿಸಬೇಕೆಂದೋ ಏನ್ನುವಹಾಗೆ, ಆ ಕಾಲದಲ್ಲಿ ದಕ್ಷಿಣ ದೇಶದಲ್ಲೆಲ್ಲಾ ಪ್ರಸಿದ್ಧವಾದ ರಾಜಧಾನಿಯಾದ ಶ್ರೀರಂಗಪಟ್ಟಣಕ್ಕೆ ಬಂದರು. ಇವರು ಲೆಫ್ಟಾಚಾರನ ಗುಮಾಸ್ತರಾಗಿ ಆಗಿನ ಸರ್ಕಾರದಲ್ಲಿ ಕೆಲಸಕ್ಕೆ ಸೇರಿದರು. ಇವರ ಅಸಾಧಾರಣವಾದ ಬುದ್ಧಿ ಶಕ್ತಿಯೂ ಲೆಕ್ಖವನ್ನು ಇಡುವುದರಲ್ಲಿ ಇವರಿಗಿದ್ದ ಜಾಣತನವೂ ಕೂಡಲೆ ಹೈದರ ರಾಲಿಯ ಗಮನಕ್ಕೆ ಬಂದವು. ಹೈದರನು ಇವರನ್ನು ಅತಿಜಾಗ್ರತೆಯಲ್ಲಿ ಸಂಸ್ಥಾನದ ಕೋಶಾಧ್ಯಕ್ಷರನ್ನಾಗಿ ಮಾಡಿದನು. ಈ ಕೆಲಸದಲ್ಲಿದ್ದಾಗ ಇವರಿಂದುಂಟಾದ ಸಹಾಯವನ್ನು ಯಾವಾಗಲೂ ಮರೆಯದಿರುವುದಕ್ಕೋಸ್ಕರ ಹೈದರನು ಇವರಿಗೆ ಮರುವಳ್ಳಿ ಗ್ರಾಮವನ್ನು ಜಹಗೀರಿಯನ್ನಾಗಿ ಕೊಟ್ಟು ಸತ್ಕರಿಸಿದನು.

ಹೀಗಿರುವಲ್ಲಿ ಅಕಸ್ಮಾಟಿಸಲ್ಲಿ ಹೈದರನು ಅಕಸ್ಮಾತ್ತಾಗಿ ಬೆನ್ನು ವಣಿಯೆಂಬ ರೋಗದಿಂದ ಮರಣಹೊಂದಿದನು. ಆಗ ಅವನ ಮಗನಾದ ಟಿಪ್ಪುವು ೬೦೦ ಮೈಲಿಗಳ ದೂರದಾಚೆ ಯುದ್ಧದಲ್ಲಿದ್ದನು. ಇದನ್ನು ತಿಳಿದು ಟಿಪ್ಪುವಿನ ಸಂಬಂಧಿಯಾದಪನೂರ್ಖಾನ್ ಫ್ರೆಂಚರಿಸಹಾಯದಿಂದ ಮೈಸೂರು ರಾಜಾಧಿಪತ್ಯವನ್ನು ತಾನೇ ವಹಿಸಲು ಒಳಸಂಚನ್ನು ನಡಯಿಸುತ್ತಿದ್ದನು. ಈ ಸಂದರ್ಭದಲ್ಲಿ ಪೂರ್ಣಯ್ಯನವರು ಸುಲಭವಾಗಿ ರಾಜದ್ರೋಹಿಗಳ ಪಕ್ಷವನ್ನು ವಹಿಸಿ ಟಿಪ್ಪುವಿಗೆ ಮೋಸಮಾಡ ಬಹುದಾಗಿತ್ತು. ಆದರೆ ಪೂರ್ಣಯ್ಯನವರು ಯಾವಾಗಲೂ ರಾಜಭಕ್ತಿಯುಳ್ಳವರಾಗಿದ್ದರು. ತಿಂದ ಮನೆಗೆ ಎರಡು ಬಗೆಯುವ ಘಾತುಕರಾಗಿರಲಿಲ್ಲ. ಇವರು ಸೈನಿಕರ ಸಹಾಯದಿಂದ ಆ ರಾಜದ್ರೋಹಿಗಳನ್ನು ಕೂಡಲೆ ಹಿಡಿದು ಸೆರೆಯಲ್ಲಿಡಿಸಿದರು ಅಲ್ಲದೆ ಹೈದರನು ಸತ್ತಿರುವ ನಂಬುದು ಜನಗಳಲ್ಲಿ ತಿಳಿದರೆ ಏನಾದರೂ ತೊಂದರೆಯಾದೀತೆಂಬ ಭಯದಿಂದ ಆ ಹೆಣವನ್ನು ಒಂದು ಪೆಟ್ಟಿಗೆಯಲ್ಲಿಡಿಸಿ ಅದರಲ್ಲಿ ಸುಗಂಧದ್ರವ್ಯಗಳನ್ನು ತುಂಬಿಸಿದರು. ಹೀಗಾಗಿ ಟಿಪ್ಪುವು ಬಂದು ರಾಜ್ಯವನ್ನು ವಹಿಸುವವರೆಗೂ ಹೈದರನೇ ಎಲ್ಲಾ ಕೆಲಸವನ್ನೂ ಮಾಡುತ್ತಿದ್ದಾನೆಯೋ ಎಂಬಂತೆ ಇವರು ಕಾರ್ಯಗಳನ್ನು ನಿರ್ವಹಿಸಿದರು.

ಟಿಪ್ಪುವಾದರೊ ಇವರ ಅಸಾಧಾರಣವಾದ ರಾಜಭಕ್ತಿಗೆ ಮೆಚ್ಚಿ ೪೬೦೦ ಕುದುರೆಗಳ ಮನಸಬ್ದಾರರನ್ನಾಗಿ ಮಾಡಿ ಇವರನ್ನು ಗೌರವಿಸಿದನು. ಇವರು ರಾಜತಂತ್ರದಲ್ಲಿ ಎಷ್ಟು ಬುದ್ಧಿವಂತರಾಗಿದ್ದರೋ ಹಾಗೆಯೇ ಸೈನ್ಯಾಧಿಕಾರದಲ್ಲಿಯೂ ಬಹಳ ಬುದ್ಧಿವಂತರೆಂದು ಹೆಸರು ಪಡೆದಿದ್ದರು. ಇಂಗ್ಲಿಷಿನವರೊಡನೆ ಇವರು ಹೊಡೆದಾಡಿ ಜನರಲ್ ಸ್ಟೂಯರ್ಟ್‌ನನ್ನು ಸೋಲಿಸಿದ್ದು ಎಲ್ಲರಿಗೂ ತಿಳಿದ ಅಂಶವೇ ಆಗಿರುತ್ತದೆ. ಇವರ ಪ್ರಖ್ಯಾತಿಯು ಬಹಳವಾಗಿದ್ದಿತು. ಇಂಗ್ಲಿಷರು ಸಂಧಿಯನ್ನು ಮಾಡಿಕೊಂಡಾಗ ನಾಲ್ವರು ಪ್ರಮುಖರಾದ ಸರದಾರರನ್ನು ತಮ್ಮಲ್ಲಿಗೆ ಕಳುಹಿಸಬೇಕೆಂದೂ, ಸಂಧಿಯನ್ನು ಟಿಪ್ಪುವು ಮುರಿದರೆ ಆಗ ಆ ಸರದಾರರೇ ಅದಕ್ಕೆ ಹೊಣೆಯೆಂದು ತಿಳಿಸಿದಾಗ ಆ ನಾಲ್ವರಲ್ಲಿ ಒಬ್ಬರು ನಮ್ಮ ಪೂರ್ಣಯ್ಯನವರು. ಇದರಿಂದಲೇ ಎಲ್ಲರಿಗೂ ಪೂರ್ಣಯ್ಯನವರು ಎಷ್ಟು ಪ್ರಮುಖರೆಂಬುದು ಗೊತ್ತಿತ್ತೆಂದು ನಾವು ಊಹಿಸಬಹುದು.

ಟಿಪ್ಪುವಿನ ಮರಣಾನಂತರ ದಿವಾ ಪೂರ್ಣಯ್ಯನವರು ಏನು ಮಾಡಬೇಕೋ ತಿಳಿಯದವರಾದರು. ಹೊಸದಾಗಿ ಇಂಗ್ಲಿಷರು ಹೂಡಿದ್ದ ಹಿಂದೂ ಸಂಹಾಸನದ ಸೇವೆಯಲ್ಲಿರಬೇಕು, ಇಲ್ಲವೇ ಅನಾಮಧೇಯರಾಗಿ ಎಲ್ಲಿಗಾದರೂ ಹೋಗಬೇಕು. ಈ ಸಂದರ್ಭದಲ್ಲಿ ಹಿಂದೂ ರಾಜರ ಸೇವೆಯಿಂದ ಪುರಾತನಕಾಲದಿಂದಲೂ ನಡೆದುಬಂದ ಸುಪ್ರಸಿದ್ಧವಾದ ರಾಜಮನೆತನದ ಸೇವೆಯೂ ಅಲ್ಲದೆ ಹಿಂದೂ ಸಂಸ್ಕೃತಿ, ಹಿಂದೂ ನಾಗರೀಕತೆ ಇವುಗಳ ಸೇವೆಯೂ ಆದಂತೆ ಆಗುವುದೆಂಬ ಅಭಿಲಾಷೆಯಿಂದ ಇವರು ಮೈಸೂರಿನ ರಾಜಮನೆತನದ ಸೇವೆಯಲ್ಲಿ ನಿಂತರು. ರಾಜ್ಯವು ಅಲ್ಲೋಲ ಕಲ್ಲೋಲವಾಗಿದ್ದಿತು. ಇವರು ಅತಿದಕ್ಷತೆಯಿಂದ ಪುಂಡು ಪಾಳೆಯಗಾರರನ್ನೆಲ್ಲಾ ಹಿಡಿಸಿ ರಾಜ್ಯದಲ್ಲಿ ಸುವ್ಯವಸ್ಥಿತಿಯು ಇರುವಂತೆ ಮಾಡಿದರು. ಇವರಕಾಲದಲ್ಲೇ ನಮ್ಮ ಭರತಖಂಡದಲ್ಲಿ ಎಲ್ಲೆಲ್ಲೂ ಪೂರ್ಣಯ್ಯನವರ ಛತ್ರಗಳು ನಿರ್ಮಿಸಲ್ಪಟ್ಟವು.

ಹೀಗೆ ಅನಿಚ್ಛೆನ್ನವಾದ ಭಕ್ತಿಯಿಂದ ರಾಜಮನೆತನವನ್ನು ಇವರು ಸೇವಿಸಿ ೧೮೧೧ ನೆಯ ಇಸವಿಯಲ್ಲಿ ಸಶಾಂತಿಯನ್ನು ಹೊಂದಿದರು. ಆ ಸಮಯದಲ್ಲೇ ಬ್ರಿಟಿಷರಿಗೂ ಮೈಸೂರಿನವರಿಗೂ ಇವರು ಮಾಡಿದ್ದ ಮಹದೋಪಕಾರವನ್ನು ಶಾಶ್ವತವಾಗಿರುವಂತೆ ಮಾಡುವುದಕ್ಕೋಸ್ಕರ ಸರ್ಕಾರದವರು ಇವರಿಗೂ ಇವರ ವಂಶಕ್ಕೂ ಅನುಭವಿಸುವದಕ್ಕೋಸ್ಕರ ಯಳಂದೂರನ್ನು ಜಹಗೀರಿಯಾಗಿ ಕೊಟ್ಟರು. ಆದರೆ ಇವರು ಆ ಸುಖವನ್ನು ಒಹುಕಾಲ ಅನುಭವಿಸಲು ಅದೃಷ್ಟವಿಲ್ಲದೆ ಸ್ವರ್ಗಸ್ಥರಾದರು. ಇವರು ಯಾವಾಗಲೂ ಹೇಳುತ್ತಿದ್ದುದೇನೆಂದನೆ, "ಯಾವಗ್ಗೆ ಜನರು ಜನಸೇವೆಯಲ್ಲಿ ಧರ್ಮದೃಷ್ಟಿಯನ್ನಿಟ್ಟು ಕೆಲಸಮಾಡುವರೋ, ದೇವದತ್ತವಾದ ಶಕ್ತಿಯನ್ನು ಯಾವಾಗ್ಗೆ ಜನಸೇವೆಯಲ್ಲಿ ಜನರು ಉಪಯೋಗಿಸುವರೋ ಆಗ ಭೂಲೋಕವು ಸ್ವರ್ಗವಾಗುತ್ತದೆ." ನಮ್ಮ ತಾಯ್ನಾಡು ಸೇವೆಗೆ ಇಂತಹವರುಬೇಕು!

ಎಳೆಯರು.

೧

ಅಮ್ಮನ ಶಿರಗ ಬಿಡೆ |
ದುಮ್ಮಾನ ಸುತ್ತುವುದು ||
ಅಮ್ಮನ ಸಗುಮೊಗ | ದಾಮಿ ಚಕ್ಕುಲಿದಾಚಿ |
ಸುಮ್ಮನೆ ವ್ಯರ್ಥವು | ಹೊಸಿಲೊಳಗಿರದೆ ||

೨

ಪುರದ ಪೂಥಳಿಯಾಗು |
ಇಡಿಸುವೆ ಕಿಸೆಯೊಳಗೆ ||
ಗುರುಗಳ ಬಳಿಯೊಳು | ಕಲಿಯುತಲಮರವ |
ಮರೆಯದಲಡಿಗಡಿ | ಗೆತ್ತಿಮುದ್ದಿಡುವೆ ||

೩

ಶಾಲೆಗೆ ಪೋಗದೆಲೆ |
ಪೂಲೆಯೊಳಡಗುವೆನು ||
ಸೋಲಿಸಿ ಹೀರುವೆ | ದೂರಪೂತಣಿಬರೆ |
ಬಾಲನಂದೆನ್ನುತ | ಲಂಜ ಬೇಡಮ್ಮ ||

೪

ದೂರವ ನರಸಿಪೋಪೆ |
ದಾರಿಯ ನಳೆಯುತಲಿ ||
ದೂರದೂರೆಂಬುವ | ರಕ್ಕಸಿ ಹಾರುವ |
ಊರೊಳಗಿರುವಳೆ | ಸಾಗರದಾಚೆ ||

೫

ದೂರವ ಹಿಡಿತರುವೆ |
ದೂರವ ಸೆರೆಹಿಡಿವೆ ||
ನಿಾರದೆ ಬರ್ಸನೆ | ಮಾಡೆಮಾವಿಾ ಜೋತಿ |
ದಾರಿಯ ಕೆರೆತೊರೆ | ಗಿರಿಗಳ ಗುರುತಿಸಿ ||

೬

ದೂರವ ಹಿಡಿತರುವೆ |
ದಾರಿಯ ಬಿಡಿಬಿಡಿರಿ ||
ದೂರನಾರೆಂಬವ್ವ ಯಾರಾರ ನೋಯಿಸಿ
ದಾರಿಯ ದಬ್ಬಿಸಿ ಮರುಳು ಮಾಡಿಹವ್ವ ||

೭

ಕೊಡು ಕೊಡು ಒತ್ತಿಯೆನು
ನಡುವನು ಬಗಿಯಮ್ಮ ||
ಕಡಿಕಾದಾಡುವೆ ಕೊಲುವೆನೆನೆ ದೂರನ |
ಬಿಡಲಾರೆಯೆನ ಬೇಡ | ಕಣ್ಣೀರ ಕರೆದು ||

ಹಿರಿಯಣ್ಣ, ಶ್ರೀ ಹೊಯಿಸಳ.

ಗುಂಪುಗಳ ವರದಿಗಳು.

೧. ಗಜಾನನ ದಳ, ತುಮಕೂರು.

ಈ ದಳವನ್ನು ಮ|| ಜಿ. ಜಿ. ಗಾನೇಕರವರು ಪ್ರಾರಂಭಿಸಿದರು. ಈಗ ಮ|| ಎಲ್. ನರಸಿಂಹ ಅಯ್ಯಂಗಾರ್ಯರು ನಾಯಕರಾಗಿರುತ್ತಾರೆ. ಈ ದಳವು ಕಳೆದ ೬ ವರ್ಷಗಳಿಂದಲೂ ಬಹಳ ದಕ್ಷತೆಯಿಂದಲೂ ಸಂತೋಷದಿಂದಲೂ ಕೆಲಸವನ್ನು ಮಾಡಿಕೊಂಡು ಬರುತ್ತಿದೆ. ಈ ದಳದಲ್ಲಿ ಮೂವತ್ತು ಸ್ಕೌಟುಗಳಿದ್ದು ಸ್ಕೌಟು ಪ್ರಾವೀಣ್ಯತೆಯಲ್ಲಿ ಯೋಗ್ಯತೆಯನ್ನು ತೋರಿಸಿರುವರಲ್ಲದೆ ಶಾಲೆಯ ಪರೀಕ್ಷೆಗಳಲ್ಲಿಯೂ ಯೋಗ್ಯವಾದ ಪ್ರಾವೀಣ್ಯತೆಯನ್ನು ತೋರಿಸಿರುತ್ತಾರೆಂಬುದು ಸ್ತುತ್ಯವೇ ಸರಿ. ಈ ದಳಕ್ಕೆ ಸಂಬಂಧಪಟ್ಟು ಒಂದು ಕಬ್ ಗುಂಪು ಇದೆ. ಈ ದಳದ ಪುಸ್ತಕ ಭಂಡಾರದಲ್ಲಿ ಸುಮಾರು ೧೫೦ ಪುಸ್ತಕಗಳಿವೆ. ಈ ದಳದವರು, ಮಹಾತ್ಮ ಗಾಂಧಿಯವರು, ಶ್ರೀಂಗೇರಿ ಜಗದ್ಗುರುಗಳು ಬಂದಕಾಲದಲ್ಲಿಯೂ. ಶಿವಗಂಗೆ ಜಾತ್ರೆಕಾಲದಲ್ಲಿಯೂ ಉತ್ತಮವಾದ ಕೆಲಸಗಳನ್ನು ಮಾಡಿರುತ್ತಾರೆ. ಈ ದಳವು ಇಷ್ಟು ಮುಂದುವರಿಯುವುದಕ್ಕೆ ಸಹಾಯಕರಾಗಿರುವವರು, ದಳದ ನಾಯಕರಲ್ಲದೆ, ಮ|| ಅಡ್ವೊಕೇಟ್ ಸಿ. ಕೃಷ್ಣರಾಯರು, ಮ|| ಕೆ. ಎಸ್. ಕಿನಿಯವರು, ಮತ್ತು ಇನ್ನೂ ಅನೇಕ ಮಹನೀಯರೆಂದು ತಿಳಿಯುತ್ತೇವೆ.

ಇದನ್ನು ಕಳುಹಿಸಿದವರು, ಬಿ. ಲಕ್ಷ್ಮಣ್.

೨ ಕಮಲ ದಳ, ತುಮಕೂರು

ಈ ದಳದವರು ನಡೆಸಿದ ಬಾಲಚಾರರ ಹತ್ತನೆಯ ವರ್ಷ ವರ್ಧಂತ್ಯುತ್ಸವದ ವರದಿಯು ಬಂದಿರುತ್ತೆ. ಈ ಉತ್ಸವವನ್ನು ಮ|| ರಾ|| ಬಿ. ಲಿಂಗೇಗೌಡರ ಅಧ್ಯಕ್ಷತೆಯಲ್ಲಿ 7-10-28 ರಲ್ಲಿ ನಡೆಯಿಸಿದರು. ಬೆಳಗ್ಗೆ ಧ್ವಜಾರೋಹಣ, ಪ್ರಥಮ ಚಿಕಿತ್ಸೆ ಮುಂತಾದ ಸ್ಕೌಟು ಪ್ರದರ್ಶನಗಳು ಇದ್ದವು. ಮಧ್ಯಾಹ್ನ ಟರ್ಕಹಾಲಿನಲ್ಲಿ ಸಭೆಸೇರಿ ಉಪನ್ಯಾಸಗಳೂ ನಾಯಕರ ಸಂದೇಶವನ್ನು ಓದುವುದೂ, ಕೆಲವರು ದೊಡ್ಡ ಮನುಷ್ಯರ ಭಾಷಣಗಳೂ ನಡೆದವು. ಆಗ್ರಾಸನಾಧಿಪತಿಗಳು ಬಾಲಚಮೂ ವಿಚಾರವಾಗಿ ಬಹಳ ಮನೋರಂಜಕವಾಗಿ ಮಾತನಾಡಿದರು. ರಾತ್ರಿ ಶಿಬಿರಾಗ್ನಿಯಲ್ಲಿ ಸ್ಕೌಟುಗಳು ಒಹಳ ಚನ್ನಾಗಿ ಕೆಲಸಗಳನ್ನು ನಡೆಯಿಸಿದರು ಒಂದಿದ್ದ ಊರಿನವರೆಲ್ಲರೂ ಒಹಳ ಆನಂದಪಟ್ಟರು

ಇದನ್ನು ಕಳುಹಿಸಿದವರು ಮ|| ಎಸ್. ವೆಂಕಟರಾಮರಾಯರು.

ಸೂಚನೆ:—ಈ ಎರಡು ಲೇಖನಗಳೂ ಬಹಳ ಏಳಂಬವಾಗಿದ್ದುವು. ನಮ್ಮ ಪುಟ್ಟ ಪತ್ರಿಕೆಯಲ್ಲಿ ಚಿಕ್ಕ ಚಿಕ್ಕ ಲೇಖನಗಳೇ ವಿಶೇಷವಾಗಿರುವುದರಿಂದ ಲೇಖನಗಳನ್ನು ಸಂಗ್ರಹಿಸಿ ಬರೆಯಬೇಕಾಯಿತು. ಇದಕ್ಕೆ ಆ ಸುಹನೀಯರು ನಮ್ಮನ್ನು ಕ್ಷಮಿಸಬೇಕು. ಮುಂದೆ ಕಳುಹಿಸಬಹುದಾದ ಲೇಖನಗಳು ಸುಮಾರು ೧೦೦ ಶಬ್ದಗಳನ್ನು ಮೀರಿರಬಾರದು.

ಸಂಪಾದಕರು.

ನವರಾತ್ರಿ.

(ಒಂದು ಸಣ್ಣ ಕಥೆ)

ಹಳೇಬೀಡಿಗೆ ಸಮೀಪದಲ್ಲಿರುವ ಹೆಬ್ಬಾರಯ್ಯನ ಹಳ್ಳಿ ಬೀರೇಗೌಡನು ಒಂದು ದಿನ ಹುಲಿಕಲ್ಲಯ್ಯನ ಹಳ್ಳಿಗೆ ರಾಮೇಗೌಡನನ್ನು ನೋಡಲು ಬಂದನು ಕುಶಲಪ್ರಶ್ನೆಗಳಾದನಂತರ ಆ ಮಾತು ಈ ಮಾತು ಆಡುತ್ತಾ ನವರಾತ್ರಿಯ ಪ್ರಸ್ತಾಪವನ್ನು ಎತ್ತಿದನು.

ಬೀರೆಗೌಡ:—ಏ, ರಾಮೇಗೌಡ, ನೀನೂ ದಸರೀಲಿ ಮೈಶೂರಿಗೆ ಓಗಿತ್ತಿಲ್ವಾ; ಎಂಗಿತ್ತಲ್ಲಪ್ಪಣ್ಣೀ ದೊರೆಗಳ ಉಚ್ಚಾಯ?

ರಾಮೇಗೌಡ:—ಓ! ಏನೆಂದೇ! ಹೇಳಾಕಾಗ್ತ್ತೇತೇನಾಲ್ಲಪ್ಪಯ್ಯ. ಚಂಜೆಬೆಳಗಾದರೂ ಕುತ್ಕಂಡು ಹನ್ನೆರ್ಡ್ಸಾರ್ಸಾ ಏಳಿದರೂ ಮುಗಿಯಾಕಿಲ್ಲ. ಒಂದೂ ತುಸಾ ಏಳ್ತೀನಿ ಕೇಳ್ತೀಯೋ!

ಬೀರ:—ಸಿಂಗೆ ಏಟು ಗೊತ್ತಿತ್ತೋ ಓಟೇ ಹೇಳು.

ರಾಮು:—ಉಚ್ಚಾಯ ನಾಳೇ ಅನ್ನೋ ಅಂಗೆ ಇವತ್ತಿಂಜಿಣ ಜೈಗ ನಾವ್ದಾಗೆ ಅರಮನೆ ತಾಗೆ ಓಗಿ ನಿಂತಿದ್ದೆ. ಬಂದೂ ಕರ, ಸುರಿ, ಸುಗ್ಗೂಕೆ ಅಪ್ಪಣೆಯಿಲ್ಲ. ಓಟೋಂಜನ ಸೇರಿತ್ತು. ಒಂದೂ ಸಿಮಿಷದಾಗೆ ಆರ್ಮನೆ ಎಲ್ಲಾ ಕತ್ಗಂಡು ಉರೀತು.

ಬೀರ:—ಯಾರಾ ಮಾರಾಜ್ರ ಆರ್ಮನೀಗೆ ಬೆಂಕಿ ಹೆಟ್ಟಿದೋರು?

ರಾಮು:—ಅಲ್ಕಂಡ್ಕೇ, ದೀಪ ಕತ್ಗಿಂಡ್ಬು. ಯಾರೂ ಕತ್ತಿಲ್ಲಾ. ಅವೇ ಕತ್ಗಿಂಡ್ಬು. ಏನು ದೀಪ ಅನ್ತು. ಜೆ-ಜೆ-ಜೇ ಬರೀ ದೀಪವೇ, ಎಲ್ಲಿ ನೋಡೀದ್ರು. ಆಮೇಗೆ, ಹಿಂತ್ಗಡೆ ಕೆರೆಯೀತೆ ನೋಡು ಆಲ್ಲಿ ಧಂ ಅಂತು. ಅದು ಏನೋ ನೋಡಣ್ಣ, ಬಂದಂಕಣದಿಂಬ ಇತ್ತು. ಉರೀತ ಹೊಂಟ್ಬಿತ್ತು ಮೇಕೆ. ಆಕಾಸಕ್ಕೆ ಹೋಗಿಬಿಡ್ತು. ಆಕಾಸಪುಟ್ಟಿ ಎಂದ್ರಪ್ಪ ನೋಡು.

ಬೆಳಗಿನ ಬಿಣ ಚಂಜೇಲಿ ಉಚ್ಚಾಯಹೊಂಟಿತು. ಏಸೊಂಜನ! ಪೌಜು ಹೆಂಗಿತ್ ಅನ್ತೀಯ ಅನೆಮೇಗೆ ಅಂಬಾರಿಕಟ್ಟಿ ಅದ್ಮಾಗೆ ನನ್ಮ ದೊರೆಗಳು, ಯೀರಾಜ್ರಮಕ್ಕ ಕುಂತಿದ್ರು, ದೊರೆಗಳು ನಮ್ಮಾಗೆ ಬರ್ತಾನೆ ಜಪ್ಪಾಳಿ ಹೊಡದ್ವು. ದೊರೆಗಳು ನಂಗೆ ಕೈಮುಗಿದ್ರು ಕಣ್ತಾ, ನಮ್ಮಪ್ಪ ಕೈಮುಗಿದ್ರು. ಲೇ! ಬೀರೆಗೌಡ! ಏಸೊಂದುಂಗರ ಇಟ್ಟಿದ್ರೋ ನನ್ನಿಂದ ಏಳಾಕಾಗೋದಿಲ್ಲ. ದೊರೆಗಳ ಮುಂದೆ ಹಿಂದೆ ಏಸೊಂದಾನೆಗಳು, ಏಸೊಂದು ಬಂಟೆಗಳು, ಏಸೊಂದು ಕುದುರೆಗಳು? ಹೋ! ಹೋ ಹೋ! ನೋಡಾಕೆ ಎರಡೂ ಕಣ್ಣು ಸಾಲ್ಲ್ವ ಕಣ್ತಾಪ್ಪಯ್ಯ. ದೊರೆಗಳು ಒನ್ನಿಮಂಡಪದಿಂದ ಬಂದ್ರಲ್ಲಾ ಆಗ ಆ ದೀಪಗಳೂ, ಆ ದ್ಯಾಸೂ, ದೇವೇಂದ್ರನ ಉಚ್ಚಾಯ ಇದ್ದಂಗೆ ಇತ್ತು. ನಾನು ನೋಡಿ, ನೋಡಿ, ಬೆಳಕ್ಕಾಗೆ ಕಣ್ಣು ಮಂಜು ಬಂದು ಒದ್ದಾಡ್ಬಿಟ್ಟೆ.

ಬೀರ:—ಅವ್ಯಾಗೆ ಊರಿಗೆ ಹೆಂಗೆ ಬಂದೀ?

ರಾಮು:—ಬೆಳಗಿನಜಿಣ ಊರಿಗೇ ಅಮ್ತಾ ಟೇಶನ್ನಿಗೆ ಬಂದೆ. ನಂತಾಪ ಏನಂ ಇತ್ತಿಲ್ಕಿಂಡ್ಯಾ. ಬಂದೇ ಬಂದು ಕಂಬ್ಳ ಗಂಟಿತ್ತು. ಅದ್ಮಾಗೆ ಏಸಿ ಏಶಾಯಿ, ನಮ್ಮ ರುದ್ರಣ್ಣಂಗೆ ಬಂದು ಜಳ್ಳಾ. ನಮ್ಮ ಶಿವಗೀಗೆ ಬಂದು ವೈನಾದ ಆಕಾಶ ಬಣ್ಣದ ಕುಬಸ ತಿಕೀಟೂ ಇತ್ತು. ನೆರಿ, ನಾನು ಒರ್ತಾ ಇರ್ದಿ. ಇದ್ದಂಗೆ ನೋಡಣ್ಣಾ, ಯಾರೋ ಬಡ್ಡೀಮಗ, ಭರಬದ್ದಕಣಯ್ಲಿ ನನ್ಗಂಟೆಲ್ಲೂ, ಆ ಪರ್ಯೇಲಿ ಎಲ್ಲಿ ಹುಡಿಕ್ಲಿ. ಅಂತೂ ಉದ್ಕೀ ಉದ್ಕೀ ಸಾಕಾಗಿ ನುಮ್ಮೆ ಕುಂತ್ಬಿಟ್ಟೆ. ಒಬ್ಬ ಪಯ್ಯ 'ಏನು ಗೌಡ್ರೇ ಕುಂತೀರಿ ಅಂದ.

ಬೀರ:—ಯಾವಪಯ್ಯ!

ರಾಮು:—ಯಾವನೋ ನಿಮ್ಮಪ್ಪ. ವಾರೆಪೇಟ ಸುತ್ತಿದ್ದ. ನಮ್ಮ ಪೋಲೀಸಿನೋರಂಗೆ ಅಂಗೀತೊಟ್ಟಿದ್ದ. ಚಣ್ಣ ಆಕಿದ್ದ. ಕೈಯಾಗೆ ಒಂದು ದೊಣ್ಣೆ. ಕತ್ತಿನಲ್ಲಿ ಹಳ್ದಿ ಬಟ್ಟೆ ಸುತ್ತಿದ್ದ. ಅವ್ರೂ ಏಸು ಜನ ಅನ್ತೀ? ಟೇಶನ್ನಾಗೆ ಹೋಗೊರ್ಗೆಲ್ಲ ಸಲೀಸಾಗಿ ಗಾಡೀಲಿ ಕೂರ್ಸಿ, ತಿಕೀಟು ಕೊಡ್ಸಿ ತಳ್ಕೋರು ಕಣ್ಗೆ. ಆ ಪಯ್ಯ ನೋಡು ನಾನ್ಹೇಳ್ದಿ ಗಂಟೆಲ್ಲ ತಿಕೀಟೆಲ್ಲ ಅಂತ ನಿಮ್ಮವ್ವಾಗೆ ಒಡ್ಹೋಗಿ ಬಂದು 'ಕೂಳ್ರೀ ಗೌಡ್ರೇ ನಿಮ್ದೆ ಗಂಟು' ಅಮ್ತ ನಂಸ ಗಂಟು ಹುಡ್ಕಿತಂದ. ಬಿಚ್ಚ ನೋಡ್ದ. ಎಲ್ಲಾ ಹಾಗೆ ಇತ್ತು. ಜಂಚೀಲಿ ಕೈಹಾಕಿ ಒಂದಾಣೆ ಕೊಡೋಕೆ ಹೋದೆ, ಆ ಪಯ್ಯಗಳು ಮುಟ್ಟಾರೆ ಡುಡ್ಡ. ನಮ್ಮಾ ಯೀರಾಜ್ರು ಅಂಗೆ ದ್ರಿವ್ ಹಾಕ್ತಾರ್ಲೆ. ಒಂದಗ್ಡೀಲಿ ಪೋಟೋದಾಗೆ ನೋಡ್ದೆ.

ಬೀರ:—ಆವಯ್ಯ ಬರದಿದ್ರೆ ನೀನೆಂಗೆ ಒರ್ತಿದ್ದಿ?

ರಾಮು:—ನಮ್ಮಪ್ಪ. ದೇವರು ಬಂದಹಾಗೆ ಒಂದ. ಆವಯ್ಯುಗನ ಹೊಟ್ಟೆ ತಣ್ಗಿಟ್ಟಿರ್ಲಿ, ನಮ್ಮೂರ ಮಾತಾಯಿ.

ಇಷ್ಟರಲ್ಲಿ ಹೊತ್ತಾಯ್ತಾದುದರಿಂದ ಬೀರೇಗೌಡನು ರಾಮೇಗೌಡನು ಸಂಬಾಷಣೆಯನ್ನು ಪೂರೈಸಿ ಹೊರಟುಹೋದನು.

(ಸಂಗ್ರಹಿಸಲ್ಪಟ್ಟಿದೆ)

—ಇದನ್ನು ಬರೆದವ ಜಿ. ಸಿ. ಶಂಕರನಾರಾಯಣರಾವ್.

ನಗಬೇಕು.

ಸೇವಕ—ಸ್ವಾಮಿ, ತಮ್ಮ ಕೆಲಸದಲ್ಲಿಯೇ ನನಗೆ ತಲೆ ನರೆಯಿತು. ಈಗ ನಾನು ತಮ್ಮನ್ನು ಬಿಟ್ಟುಹೋಗುವಾಗ ಏನಾದರೂ ಕೊಡಬೇಕು.

ಯಜಮಾನ—(ಮೇಜಿನ ಮೇಲಿದ್ದ ಮಸಿದೌತಿಯನ್ನು ಕೊಟ್ಟು) ಇಗೋ ತೆಗೆದುಕೊ. ಇದು ಸೊಗಸಾದ ಕಪ್ಪುಮಸಿ.

(ಎಲ್ಲಿಂದಲೊ ಕದ್ದದ್ದು)

ಕಥೆಗಳ ಕಟ್ಟು.

(ಕನಕದ ಕುಂಚ)

೧೨. ಬಲಿಚಕ್ರವರ್ತಿ.

ಮಗೂ, ರಾಕ್ಷಸರು ಅಂದರೆ ಅವರು ಭೂತ ಪಿಶಾಚಿಗಳಲ್ಲ. ಅವರೂಕೂಡ ಮನುಷ್ಯರಂತೆಯೇ ಸುನೆ ಮತಗಳನ್ನು ಕಟ್ಟಿಕೊಂಡು, ಹಳ್ಳಿ ಪಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ ವಾಸಮಾಡಿಕೊಂಡು ನಾಗರೀಕರಾಗಿ ಜೀವಿಸುತ್ತಿದ್ದರು. ಈಗ ರಾವಣ, ವಿಭೀಷಣ ಮುಂತಾದವರು ರಾಕ್ಷಸರು. ಅವರು ಭಂಗಾರದ ಪಟ್ಟಣವನ್ನೇ ಕಟ್ಟಿಕೊಂಡು, ನಾಗರೀಕತೆಯ ಮುಖ್ಯ ಗುರುತುಗಳೆಲ್ಲಾ ಇದ್ದ, ಅತಿ ಸುಂದರವಾಗಿದ್ದ ಲಂಕಾ ನಗರದಲ್ಲಿ ವಾಸಮಾಡಿಕೂಂಡಿದ್ದರು. ರಾಕ್ಷಸನೆನ್ನುವುದು ಒಂದು ಗುಣಕ್ಕೇ ಹೊರ್ತು ಬೇರೆಯದಕ್ಕಲ್ಲ. ಹಾಗೆ ನೋಡಿದರೆ ನಮ್ಮಲ್ಲೂ ಕೆಲವರು ರಾಕ್ಷಸರಿರಬಹುದಲ್ಲವೆ?

ಪೂರ್ವಕಾಲದಲ್ಲಿ ನಮ್ಮ ಈ ಭರತಖಂಡವು ಅತಿ ಸಮೃದ್ಧಿಯಾದ ಪೈರು ಪಚ್ಚೆಗಳಿಂದಲೂ, ಅತಿ ಸಂತೋಷಭರಿತರಾದ ಪ್ರಜೆಗಳಿಂದಲೂ ಕೂಡಿ ಇದ್ದಿತಂತೆ. ಆ ಕಾಲದಲ್ಲಿ ಒಲಿ ಎಂಬ ರಾಜನೊಬ್ಬನು ಇದ್ದನು. ಈ ಒಲಿಯು ಬಹಳ ಪ್ರಬಲನಾದ ರಾಜನು. ದೇವರನ್ನು ಕುರಿತು ತಪಸ್ಸುಮಾಡಿ ವರವನ್ನು ಪಡೆದಿದ್ದನಂತೆ. ಭಕ್ತಾಗ್ರೇಸರನಾದ ಪ್ರಹ್ಲಾದನ ಕಥೆ ನಿನಗೆ ಗೊತ್ತಿದೆಯಲ್ಲವೆ? ಆ ಪ್ರಹ್ಲಾದನ ಮೊಮ್ಮಗನಂತೆ ಬಲಿಚಕ್ರವರ್ತಿ. ಆಗಿನ ಕಾಲದಲ್ಲಿಯೂ ಈಗಿನ ಕಾಲದಂತೆಯೇ ಒಂದು ವರ್ಷದಲ್ಲಿ ನಾಲ್ಕು ಋತುಗಳು ಇದ್ದುವು. ಈಗಿನ ಕಾಲದಂತೆಯೇ ಸುಗ್ಗಿಯು ಒಂದೇಸಲ ಬರುತ್ತಿದ್ದಿತು. ಈಗಿನಂತೆಯೇ ಜನರು ಕೆಲವುಕಾಲ ಸುಖದಲ್ಲಿಯೂ ಕೆಲವುಕಾಲ ದುಃಖದಲ್ಲಿಯೂ ಇರುತ್ತಿದ್ದರು. ಇದನ್ನು ಕಂಡು ಬಲಿಚಕ್ರವರ್ತಿಯು ಒಂದು ಯೋಚನೆಯನ್ನು ಮಾಡಿದನು. ಈಗ, ವರ್ಷದಲ್ಲಿ ಋತುಗಳು ಬೇರೆಬೇರೆಯಾಗಿರುವುದರಿಂದ ಜನರಿಗೆ ಸುಗ್ಗಿಯೂಕೂಡ ಒಂದೇಸಲ ಬರುತ್ತದೆ. ಇದುದರಿಂದ ನಾಲ್ಕು ಋತುಗಳೂ ಯಾವಾಗಲೂ ಕೂಡಿರುವಂತೆ ಮಾಡಿದರೆ ಆಗ ಜನರಿಗೆ ಸದಾ ಸುಗ್ಗಿಯಿರುತ್ತದೆ. ಸದಾ ಜನರು ಸುಖವಾಗಿರುತ್ತಾರೆ. ಹೀಗೆಂದು ಆಲೋಚಿಸಿ ಬಲಿಚಕ್ರವರ್ತಿಯು ನಾಲ್ಕು ಋತುಗಳನ್ನೂ ಒಂಧಿಸಿ ಆ ನಾಲ್ಕು ಋತುಗಳೂ ಯಾವಾಗಲೂ ಇರುವಂತೆ ಏರ್ಪಡಿಸಿದನು. ಇದುದರಿಂದ ಅವನ ಪ್ರಜೆಗಳಿಗೆ ಸದಾ ಸುಗ್ಗಿಯಾಗಿ ಜನರು ಸುಖದಿಂದ ಇರುತ್ತಿದ್ದರು.

ಆದರ ದೇವರು ಯಾವಕಾರಣದಿಂದ ನಾಲ್ಕು ಋತುಗಳನ್ನು ಏರ್ಪಡಿಸಿ ನಾಲ್ಕು ಕಾಲದಲ್ಲಿ ಅವು ಬರಬೇಕೆಂದು ಗೊತ್ತುಮಾಡಿದ್ದನೋ ಅದು ಒಲಿಚಕ್ರವರ್ತಿಗೆ ಗೊತ್ತಿರಲಿಲ್ಲ. ಅಂತೂ ಅವನು ಭಗವಂತನ ನಿಯಮಕ್ಕೆ ವಿರುದ್ಧವಾಗಿ ನಡೆದಂತೆ ಆಯಿತು. ಇದನ್ನು ತಿಳಿದು, ಭಗವಂತನಾದ ಶ್ರೀಮನ್ನಾರಾಯಣನು ಆ ಬಲಿಚಕ್ರವರ್ತಿಯ ಸ್ವಾಭಿಮಾನವನ್ನು ಪರಿಹರಿಯಬೇಕೆಂದು ಯೋಚಿಸಿ ಒಬ್ಬ ಬ್ರಾಹ್ಮಣ ಬ್ರಹ್ಮಚಾರಿಯವೇಷವನ್ನು ಹಾಕಿಕೊಂಡು ಬಲಿಚಕ್ರವರ್ತಿಯ ಮನೆಗೆ ಹೋದನು. ಬಲಿಚಕ್ರವರ್ತಿಯಾದರೋ ದಾನದಲ್ಲಿ ಅಗ್ರೇಸರನೆಂದು ಪ್ರಪಂಚಕ್ಕೇ ಗೊತ್ತಿತ್ತು. ಏನುಕೇಳಿದರೂ ಇಲ್ಲವೆಂದನ್ನುತ್ತಿರಲಿಲ್ಲ. ಇದನ್ನು ತಿಳಿದು ವಾಮನನಾಗಿದ್ದ ಭಗವಂತನು ಬಲಿಚಕ್ರವರ್ತಿಯ ಬಳಿಗೆ ಬಂದು 'ಭಿಕ್ಷೆ' ಎಂದು ಕೂಗಿದನು. ಬಲಿಯು 'ಅಪ್ಪಾ ನಿನಗೆ ಏನುಬೇಕು, ಕೇಳು' ಎಂದನು. ಆಗ ವಾಮನನು 'ಮಹಾರಾಯ, ನನಗೇನೂ ಬೇಡ, ಮೂರು ಹೆಜ್ಜೆ ಭೂಮಿಯನ್ನು ಕೊಡು' ಎಂದನು. ಆದರೆ ಬಲಿಚಕ್ರವರ್ತಿಯ ಗುರುವಾದ ಶುಕ್ರಾಚಾರ್ಯನು ವಾಮನನ ನಿಜಸ್ವರೂಪವನ್ನು ತಿಳಿದು, ಖಂಡಿತವಾಗಿಯೂ ದಾನವನ್ನು ಕೊಡಬೇಡವೆಂದನು. ಆದರೆ ಬಲಿಯು ಆಡಿದಮಾತಿಗೆ ತಪ್ಪುವನೆ? 'ಮೂರು ಹೆಜ್ಜೆಯನ್ನು ಅಳೆದುಕೊ' ಎಂದು ವಾಮನನಿಗೆ ಹೇಳಿದನು. ವಾಮನನು ಅದ್ಭುತಾಕಾರವನ್ನು ತಾಳಿ ಒಂದು ಹೆಜ್ಜೆಯಲ್ಲಿ ಭೂಮಿಯನ್ನೂ ಮತ್ತೊಂದರಲ್ಲಿ ಆಕಾಶವನ್ನೂ ಅಳೆದು, ಇನ್ನೊಂದು ಹೆಜ್ಜೆಗೆ ಜಾಗ ವೆಲ್ಲಿದೆ ಎಂದನು. ಬಲಿಯು 'ತನ್ನ ತಲೆಯಮೇಲಿಡು' ಎಂದನು. ಆಗ ವಾಮನನು ಬಲಿಯ ತಲೆಯಮೇಲೆ ಕಾಲಿಟ್ಟು ಅವನನ್ನು ಪಾತಾಳಕ್ಕೆ ತಳ್ಳಿಬಿಟ್ಟನು.

ಆದರೆ ಒಲಿಯಲ್ಲಿದ್ದ ದಾನಬುದ್ಧಿಯನ್ನು ನೋಡಿ ಸಂತುಷ್ಟನಾಗಿ ಭಗವಂತನು 'ಚಿರಜೀವಿಯಾಗಿರು' ಎಂದು ಹರಸಿದನು. ಆದರೆ ಬಲಿಯು "ವರ್ಷಕ್ಕೊಮ್ಮೆ ಭೂಮಿಯನ್ನು ನೋಡಲು ಅನುಗ್ರಹಿಸು" ಎಂದನು. ಆಗ ಭಗವಂತನು, ಯಾವಕಾಲದಲ್ಲಿ ಭೂಮಿಯಲ್ಲಿ ಹೂ ಪೈರು ಪಚ್ಚೆಗಳಿಂದ ತುಂಬಿರುತ್ತದೆಯೋ, ಯಾವಕಾಲದಲ್ಲಿ ಜನರು ಸುಖದಿಂದಿರುವರೊ ಅಂತಹ ದೀಪಾವಳಿ ಸಮಯದಲ್ಲಿ ಬಂದು ನೋಡುತ್ತಿರಬಹುದೆಂದನು. ಆದಕ್ಕಾಗಿಯೇ ನಾವೆಲ್ಲರೂ ದೀಪಾವಳಿಯಲ್ಲಿ ಬಲೀಂದ್ರನನ್ನು ಅತಿಸಂಭ್ರಮದಿಂದ ಪೂಜೆಮಾಡುವುದು. ಎಲ್ಲೆಲ್ಲಿಯೂ ಪಟಾಕಿಯನ್ನು ಹತ್ತಿಸುತ್ತಿರುತ್ತಾರೆ. ಎಲ್ಲೆಲ್ಲಿಯೂ ದೀಪದಸಾಲಿರುತ್ತದೆ. ಎಲ್ಲೆಲ್ಲಿಯೂ ಜನರು ಸುಖದಿಂದಿರುತ್ತಾರೆ. ಅಂತಹ ಸಮಯದಲ್ಲಿ ತನ್ನದಾಗಿದ್ದ ಭೂಮಿಯನ್ನು ನೋಡಲು ಬಲೀಂದ್ರನು ಬರುತ್ತಾನೆ.

ನಗು.

ಉಪಾಧ್ಯಾಯ—ನೆನ್ನೆಯಾಕೆ ಶಾಲೆಗೆ ಬರಲಿಲ್ಲ?

ಶಿಷ್ಯ—ನನ್ನ ಅಣ್ಣನ ಮದುವೆ ಇತ್ತು ಸಾರ್.

ಉಪಾಧ್ಯಾಯ—ಯಾರನ್ನು ಕೊಟ್ಟೋ?

ಶಿಷ್ಯ—ಒಂದು ಹುಡಿಗಿಯನ್ನು ಸಾರ್.

ಉಪಾಧ್ಯಾಯ—ಹುಚ್ಚ, ಹುಡುಗಿಯನ್ನಲ್ಲದೆ ಹುಡುಗನನ್ನು ಕೊಟ್ಟು ಮದುವೆಮಾಡಿದ್ದು ಕೇಳಿದ್ದಿಯೇನೊ?

ಶಿಷ್ಯ—ಹೌದು ಸಾರ್ ನಮ್ಮ ಅಕ್ಕನಿಗೆ.

(ಜೋರಿ.)

ಕಬ್ಬಗಳು ಕಲಿಯಬೇಕಾದುದು.

ಮಗೂ—ಹಿಂದಿನ ಸಲ, ನೀನು ತಿಳಿಯಬೇಕಾಗಿರುವ ಮೂರು ಆಟಗಳನ್ನು ಹೇಳಿರಲಿಲ್ಲವೆ? ಈ ಸಲ ಇನ್ನಿಷ್ಟು ಹೇಳುತ್ತೇನೆ.

ಪುಸ್ತಕಗಳನ್ನು ತಲೆಯಮೇಲೆ ಇಟ್ಟುಕೊಂಡು ಓಡುವುದು.

(Book-Balancing)—ನೋಡಿ ಅಮ್ಮನು ಹೊಳೆಯಿಂದ ಕೊಡದಲ್ಲಿ ನೀರನ್ನು ತರುವಾಗ ಕೊಂಕಳಲ್ಲಿ ಒಂದು ತಲೆಯ ಮೇಲೆ ಒಂದು ಕೊಡವಿಟ್ಟುಕೊಂಡು ಬರುವುದಿಲ್ಲವೇ? ತಲೆಯ ಮೇಲೆ ಇರುವುದನ್ನು ಬೀಳಿಸದೆ, ಕೈಯಲ್ಲೂ ಹಿಡಿದು ಬರುತ್ತಾಳಲ್ಲವೆ? ಅದು ಬಹಳ ಕಷ್ಟವಾಗಿ ತೋರಿದರೂ ಸ್ವಲ್ಪ ಅಭ್ಯಾಸಮಾಡಿದಲ್ಲಿ ಎಂತಹ ಪದಾರ್ಥವಾಗಲೀ ಕೆಳಗೆ ಬೀಳಿಸದೇ, ಕೈಯಲ್ಲಿ ಹಿಡಿಯದೇ, ಹೊತ್ತುಕೊಂಡು ಓಡುವುದು. ಪ್ರಥಮತಾರೆಗೆ (Frist Star) ಇದು ಒಂದು ಮುಖ್ಯ ವಿಷಯವಾಗಿರುವುದರಿಂದ ಇದನ್ನು ಅಭ್ಯಾಸಮಾಡಲೇಬೇಕು.

ಕೆಲವು ಆಟಗಳು.

ಗಾಲೀ ಚಕ್ರವನ್ನಾಡಿಸುವುದೂ, ಒಂಟಿಕಾಲಿನಲ್ಲಿ ತರಹಾವರಿ ಪುಂಖ್ಯವಾಗಿ ಇಂಗ್ಲೀಷ್ "ಎಂಟು" ಅಂಕೆಯಂತೆ ಕುಂಟುವುದು ಮುಂತ್ಯವಾಗಿ ಅಭ್ಯಾಸ ಮಾಡಲೇಬೇಕು ಇವುಗಳು ನಿಮಗೆಲ್ಲರಿಗೂ ತಿಳಿದ ಆಟಗಳೇ ಆಗಿವೆ, ಅಭ್ಯಾಸವಿಲ್ಲದವರು ಅಭ್ಯಾಸಮಾಡಲೇಬೇಕು.

ಚೆಂಡನ್ನೆಸೆಯುವುದು—ಹಿಡಿಯುವುದು.

ಚೆಂಡನ್ನು ಎಸೆಯುವುದೇ ಒಂದು ಬಿದ್ದೆ. ಅದನ್ನು ಹಿಡಿಯುವುದೇ ಇನ್ನೊಂದು. ನಿನ್ನ ಎದುರಿಗಿರುವನಿಗೆ ಅನುಕೂಲವಾಗಿ ಎಸೆಯುವುದೂ ಅವನು ನಿನಗೆ ಎಸೆದಾಗ ಚೆಂಡನ್ನು ಹಿಡಿಯುವುದು ಅಭ್ಯಾಸಮಾಡಬೇಕು. ನಿಮ್ಮಿಬ್ಬರ ನಡುವೆ 10 ಗಜದ ಅಂತರವಿರಬೇಕು. ನೀನು ಒಂದು ಕೈಯಲ್ಲಿ ಮಾತ್ರ ಹಿಡಿಯಬೇಕು. ಒಂದೇ ಕೈಯ್ಯಲ್ಲಿ ಎಸೆಯಬೇಕು. ಎರಡು ಕೈಗಳಲ್ಲಾದರೆ ಇದು ಅತಿ ಸುಲಭವಾಗಿರುತ್ತದೆ. ಆದರೆ ಒಂದು ಕೈಯಲ್ಲಿ ಇದು ಸ್ವಲ್ಪ ಕಷ್ಟ—ಅಂದರೆ ಅಭ್ಯಾಸಮಾಡಿದವನಿಗೆ ಇದು ಯಾವುದೂ ಕಷ್ಟವಿಲ್ಲ.

ಇವೆಲ್ಲವನ್ನು ಸುಮ್ಮನೆ ಅಭ್ಯಾಸಮಾಡಿದರೆ ಚೆನ್ನಾಗಿರುವುದಿಲ್ಲ. ಅವುಗಳೇ ಪುಂಖ್ಯವಾಗಿರುವ ಆಟಗಳನ್ನು ಆಡಿದಲ್ಲಿ ನಿನಗೆ ಅಭ್ಯಾಸವೂ ಆಗುವುದಲ್ಲದೆ ಹರ್ಷದಿಂದಲೂ ಆಟವಾಡಿದಂತಾಗುತ್ತದೆ. ಹಿರಿಯಣ್ಣನ ಕೈಯಲ್ಲಿ ಇವುಗಳನ್ನು ಹೇಳಿಸಿಕೊಳ್ಳಿ.

ಕಬ್ಬಗಳೊಡನೆ ನಮ್ಮದೊಂದು ಹರಟೆ.

ಮಗೂ—ನಿನಗೆ ಹಿರಿಯಣ್ಣನು ಗಂಟುಗಳನ್ನು ಹಾಕುವುದನ್ನು ಕಲಿಸಿದನಲ್ಲವೇ? ಅವುಗಳನ್ನು ಕಲಿಯುವಾಗ ನಿನ್ನ ಮನಸ್ಸಿನಲ್ಲಿ ಇದರಿಂದೇನು ಪ್ರಯೋಜನವೆನ್ನಿಸಿರಬೇಕಲ್ಲವೆ? ಅದಕ್ಕೆ ಉತ್ತರವನ್ನು ನಾನೇ ಹೇಳಿ ಹೇಳುತ್ತೇನೆ. ಪ್ರತಿ ಒಂದು ತರಹದ ಗಂಟನ್ನೂ ನೀನು ತಿಳಿದ್ದಲ್ಲಿ ಯಾವ ಸಮಯಕ್ಕಾದರೂ ಉಪಯೋಗಕ್ಕೆ ಒದುತ್ತದೆ. ಕೂಗಾರರು ಕೆಲಸಮಾಡುವಾಗ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಗಂಟುಗಳನ್ನು ಹಾಕುತ್ತಾರೆಂದು ನೋಡು, ಅದೇ ಸಂದರ್ಭದಲ್ಲಿ ಅದೇ ತರಹದ ಗಂಟನ್ನು ಯಾವಾಗಲೂ ಹಾಕುತ್ತಾರೆ. ಗಂಟುಗಳನ್ನು ಹಾಕುವುದು ಭದ್ರವಾಗಿರಲೆಂದೂ, ಮತ್ತು ಬಿಚ್ಚಲು ಸುಲಭವಾಗಿರಲೆಂದೂ ಆಗಿದೆ. ಸಂದರ್ಭಕ್ಕೆ ತಕ್ಕಂತೆ ಬಿಗಿಯಾಗಿರಬೇಕಾದರೆ ಬೇರೆ ತರಹ ಗಂಟುಗಳಿರಲೇಬೇಕು. ನೋಡು, ಚೆಂಬು ಬಿಗಿಯಾಗಿರಲೆಂದು ಅಮ್ಮನು ಹಾಕುವ ಗಂಟ್ಯಾವುದೋ ಅದನ್ನು ಹಸುವಿನ ಕುತ್ತಿಗೆಯಾತಕ್ಕೆ ಕಟ್ಟಬಾರದು? ಅದಕ್ಕೆ ಉತ್ತರ ನೀನೇ ಹೇಳು.

ಆಂತು ವಿವಿಧಗಂಟುಗಳನ್ನೂ ನೀನು ತಿಳಿದಿರಬೇಕು. ಜೊತೆಗೆ ಹಿಂದೆ ಕೈಯಿಟ್ಟುಕೊಂಡು ಅವುಗಳನ್ನು ಹಾಕುವುದನ್ನು ಕಲಿಯಬೇಕು. ಕತ್ತಲೆಯಲ್ಲಾದರೂ ಹಗ್ಗದಿಂದ ಗಂಟನ್ನು ಹಾಕುವಷ್ಟು ಅಭ್ಯಾಸವನ್ನು ಮಾಡಿಕೊ. ಕಣ್ಣುಮುಚ್ಚಿಕ್ಕೊಂಡು ಕೈಯಲ್ಲಿ ಮುಟ್ಟಿದಮಾತ್ರಕ್ಕೆ ಇಂತಹ ಗಂಟೆಂದು ಗುರ್ತಿಸಬೇಕು. ಗಂಟುಗಳು ಇಂತಹವೇ ಎಂದು ತಿಳಿಯುವುದು ನಿನಗೆ ಬಹಳ ಸುಲಭವಾಗಿರಬೇಕೆಂದರೆ—ಬಾಲಬೋಧೆಯಲ್ಲಿನ ಮೊದಲನೆಯ ಪಾಠವನ್ನು ಓದುವಷ್ಟು ಸುಲಭವಾಗಿರಬೇಕು.

ನಮ್ಮ ಕಬ್ಬವಾಚಕರ ಕಾಗದಗಳಿಗೆ ಉತ್ತರ.

ಕೆ. ಆರ್. ವಿದ್ಯಾಶಂಕರ—ತಮ್ಮಾ-ನಿನ್ನ ಕಾಗದವನ್ನು ನೋಡಿ ಸಂತೋಷವಾಯಿತು ವೀರಘರ್ಜನೆಯು ಒಂದು ಆಟವೆಂದು ಬರೆದಿದ್ದಾಗಲ್ಲ, ಅದು ನಿನ್ನ ಭಾಷೆ—ನಿಮ್ಮ ಹಿರಿಯಣ್ಣನಿಗೆ (ದೇವರಿಗೆ) ನೀನು ಕೊಡುವ ಭಾಷೆ ಎಂದು ತಿಳಿ. ಆಟಗಳ ಜೊತೆಯಲ್ಲಿ ಹಾಡನ್ನೂ ಸೇರಿಸಿದ್ದಿ. ಅದು ತಪ್ಪು. ಇನ್ನೂ ಯಾವ ಯಾವ ವಿಷಯಗಳು ನಿನ "ಮೈಸೂರು ಮಕ್ಕಳಿ" ಸಲ್ಲಿರಬೇಕೆಂಬುದನ್ನು ತಿಳಿಸು. ನೀನು 'ನಿನಗುಂಪಿಗೆ ಲೀಡರ್' ಎಂದು ಬರೆದಿದ್ದಿ. 'ಲೀಡರ್' ಎನ್ನುವುದಕ್ಕೆ ಬದಲಾಗಿ 'ನಾಯಕ' ಎಂಬ ಸೊಗಸಾದ ಕನ್ನಡಶಬ್ದವನ್ನು ಉಪಯೋಗಿಸು. ನಾಯಕನ ಕೆಲಸಗಳನ್ನು ಸರಿಯಾಗಿ ಮಾಡುತ್ತೀ ಎಂದು ತಿಳಿದಿದ್ದೇವೆ.

ನಿನ್ನ ಅಣ್ಣಂದಿರು, ಸಂಪಾದಕರು.

ಉಪಾಧ್ಯಾಯ—ಆಕ್ಬರ್ ಸಿಂಹಾಸನವನ್ನು ಹತ್ತಿ ಏನುಮಾಡಿದ?

ರಾಮು—ಕುಳಿತುಬಿಟ್ಟ ಸಾರ್! (ತಸ್ಕರ.)

ಆಟದ ಬೈಲು.

ಕಳ್ಳ, ಪೋಲೀಸಿನವನು.

ಚಕ್ರಭೀಮನ ಕೋಟೆಯು ವಿಷಯವಾಗಿ ನೀವೆಲ್ಲರೂ ಕೇಳಿರ ಬಹುದು. ಆ ಕೋಟೆಯು ಬಹಳ ತಮಾಷೆಯಾಗಿದ್ದಿತಂತೆ. ನಮ್ಮ ಆಟ ದಲ್ಲಿಯೂ ಅಕಿರನಾದ ಒಂದು ಕೋಟೆಯ ಆಟವಿದೆ. ನಮ್ಮ ಆಟದ ಕೋಟೆಯು ಆಟದ ಮಧ್ಯದಲ್ಲಿ ಬದಲಾಯಿಸುತ್ತಿರುತ್ತದೆ.

ಗುಂಪಿನವರಲ್ಲೆಲ್ಲಾ ಬಹಳ ಗಟ್ಟಿಗನಾದ ಒಬ್ಬನನ್ನು ಮೊದಲು ಆರಿಸಿಕೊಳ್ಳಬೇಕು. ಇವನು ಕಳ್ಳನಾಗುತ್ತಾನೆ. ಚಿತ್ರದಲ್ಲಿ ಇವನನ್ನು **'ಕ'** ಎಂತ ಗುರ್ತಿಸಿದೆ. ಆಮೇಲೆ ಇವನಿಗೆ ಸರಿಯಾಗಿ ಆಟವಾಡು ವಂತಹ ಇನ್ನೊಬ್ಬನನ್ನು ಆರಿಸಿಕೊಳ್ಳಬೇಕು. ಇವನು ಪೋಲೀಸಿನವನು. ಇವನನ್ನು ಚಿತ್ರದಲ್ಲಿ **'ಪೊ'** ಎಂತ ಗುರ್ತಿಸಿದೆ. ಈಗ **'ಕ'** ಎಂಬ ಕಳ್ಳನು ಯಾರಮನೆಯಲ್ಲಿಯೋ ಕಳ್ಳತನವನ್ನು ಮಾಡಿ ಓಡಿಹೋಗು ತ್ತಿದ್ದಾನೆ. ಇವನಿಗೆ ದಾರಿಯಲ್ಲಿ ಕೋಟೆಸಿಕ್ಕಿದೆ. ಗುಂಪಿನಲ್ಲಿರುವ ಇತರ ಬಾಲಕರೆಲ್ಲರನ್ನೂ ನಾಲ್ಕು ಅಥವಾ ಐದುಸಾಲಿನಲ್ಲಿ ನಿಲ್ಲಿಸಬೇಕು. ಈಗ ಒಂದು ಗುಂಪಿನಲ್ಲಿ ಸುಮಾರು ಮೂವತ್ತೈಂಟು ಬಾಲಕರಿದ್ದಾ ರೆಂದು ಇಟ್ಟುಕೊಳ್ಳೋಣ. ಇವರಲ್ಲಿ ಒಬ್ಬ ಕಳ್ಳ, ಇನ್ನೊಬ್ಬ ಪೋ ಲೀಸಿನವನು ಆದುದರಿಂದ ಕೋಟೆ ಕಟ್ಟುವುದಕ್ಕೆ ಮೂವತ್ತಾರು ಬಾಲಕರು ಮಾತ್ರ ಉಳಿದಂತಾಯಿತು. ಈ ಮೂವತ್ತಾರು ಬಾಲಕ ರನ್ನು ಒಂದೊಂದು ಸಾಲಿನಲ್ಲಿ ಆರು ಆರು ಮಂದಿಯಂತೆ ಆರು ಸಾಲಾಗಿ ನಿಲ್ಲಿಸಬೇಕು. ಚಿತ್ರದಲ್ಲಿ ಇವರನ್ನು 'ಅ ಆ ಇ ಇ ಉ ಊ' ಎಂಬುದಾಗಿ ಪ್ರತಿಸಾಲಿನಲ್ಲಿಯೂ ತೋರಿಸಿದೆ. ಪ್ರತಿಯೊಬ್ಬ ಬಾಲ ಕನೂ ತನ್ನ ಪಕ್ಕದಲ್ಲಿರುವನನ ಕೈಯನ್ನು ಹಿಡಿದುಕೊಳ್ಳಬೇಕು. ಪ್ರತಿ ಬಾಲಕನೂ ಕೈಯನ್ನು ಭಾರಾಳವಾಗಿ ನೀಡಿರಬೇಕು. ಆಂದರೆ ಇಬ್ಬರು ಬಾಲಕರ ಮಧ್ಯದಲ್ಲಿ ಎರಡು ನೀಡಿದ ಕೈಗಳಷ್ಟು ಅಂತರವಿರುತ್ತದೆ. ಅಲ್ಲದೆ ಒಂದು ಸಾಲಿಗೂ ಅದರ ಹಿಂದಿರುವ ಸಾಲಿಗೂ ಸುಮಾರು ಎರಡು ನೀಡಿದ ಕೈಗಳಷ್ಟು ಅಂತರವಿರಬೇಕು.

ಅ- -ಅ- -ಇ- -ಇ- -ಉ- -ಊ

ಕ

ಅ- -ಅ- -ಇ- -ಇ- -ಉ- -ಊ
ಅ- -ಅ- -ಇ- -ಇ- -ಉ- -ಊ
ಅ- -ಅ- -ಇ- -ಇ- -ಉ- -ಊ
ಅ- -ಅ- -ಇ- -ಇ- -ಉ- -ಊ

ಪೊ

ಅ- -ಅ- -ಇ- -ಇ- -ಉ -ಊ

ಇದನ್ನು ಕೋಟೆಯೆಂದು ಭಾವಿಸಬೇಕು. ಈಗ ಬಾಲಕರು ಕೈ ಗಳನ್ನು ಹಿಡಿದುಕೊಂಡಿರುವುದರಿಂದ ಈ ಕೋಟೆಯಲ್ಲಿ ಐದು ಒಣಿಗಳಿ ದ್ದಂತಾಯಿತು. ಕಳ್ಳನೂ ಪೋಲೀಸಿನವನೂ ಈ ಒಣಿಗಳಲ್ಲೇ ಓಡ ಬೇಕು. ಕೈಗಳ ಮಧ್ಯದಲ್ಲಿ ನುಸಿಯಕೂಡದು.

ಹೀಗೆ ಅವರು ಓಡಿಯಾಡುತ್ತಿರುವಾಗ ಹಿರಿಯಣ್ಣನು ಸಮೀಪ ದಲ್ಲಿದ್ದುಕೊಂಡು ನೋಡುತ್ತಿರಬೇಕು. ಪೋಲೀಸಿನವನು ಕಳ್ಳನ ಸಮೀಪವರ್ತಿಯಾದರೆ ಕೂಡಲೆ ಹಿರಿಯಣ್ಣನು ಶೀಟಿಯನ್ನು ಊದ ಬೇಕು. ಹೀಗೆ ಹಿರಿಯಣ್ಣನು ಶೀಟಿಯನ್ನು ಊದಿದಾಗಲೆಲ್ಲಾ ಬಾಲ ಕರು ತಮ್ಮ ಎಡಭಾಗಕ್ಕೇ ತಿರುಗಬೇಕು, ಮತ್ತು ಮೊದಲಿನಂತೆಯೇ ತಮ್ಮ ನೆರೆಯವರ ಕೈಯನ್ನು ಹಿಡಿದುಕೊಳ್ಳಬೇಕು. ಅಂದರೆ ಹಿರಿ ಯಣ್ಣನು ಶೀಟಿಯನ್ನು ಊದಿದಕೂಡಲೇ ಕೋಟೆಯೊಳಗಣ ಒಣಿಗ ಳೆಲ್ಲವೂ ಅಡ್ಡಡ್ಡಲಾಗಿ ಆಗುವ್ರವು. ಮೊದಲು ಉತ್ತರದಿಕ್ಕಿಗೆ ನಿಂತಿದ್ದ ಬಾಲಕರು ಈಗ ಪಶ್ಚಿಮಕ್ಕೆ ಎದುರಾಗಿ ನಿಲ್ಲುವರು. ಚಿತ್ರವು ಹೀಗೆ ಬದಲಾಯಿಸಿಹೋಗುವುದು.

ಫಿ ಫಿ ಫಿ ಫಿ ಫಿ ಫಿ
ಕ
ಫಿ ಫಿ ಫಿ ಫಿ ಫಿ ಫಿ
ಫಿ ಫಿ ಫಿ ಫಿ ಫಿ ಫಿ
ಫಿ ಫಿ ಫಿ ಫಿ ಫಿ ಫಿ
ಫಿ ಫಿ ಫಿ ಫಿ ಫಿ ಫಿ
ಫಿ ಫಿ ಫಿ ಫಿ ಫಿ ಫಿ
ಪೊ
ಫಿ ಫಿ ಫಿ ಫಿ ಫಿ ಫಿ

ಆಂದರೆ, ಆಗ ಕಳ್ಳನಿಗೂ ಪೋಲೀಸಿನವನಿಗೂ ಅಕಸ್ಮಾತ್ತಾಗಿ ದೂರವು ಹೆಚ್ಚಾದಂತಾಯಿತು. ಮತ್ತೆ ಯಥಾಪ್ರಕಾರ ಪೋಲೀಸಿ ನವನು ಕಳ್ಳನನ್ನು ಬೆನ್ನಟ್ಟಿಕೊಂಡು ಒಣಿಗಳಲ್ಲಿ ಓಡಬೇಕು. ಪೋಲೀಸಿ ನವನು ಕಳ್ಳನನ್ನು ಹಿಡಿದರೆ ಆಪರಿಚ್ಚರೂ ಹೋಗಿ ಯಾವುದಾದರೊಂದು ಪಂಚ್ಕ್ತಿಗ ಸೇರಬೇಕು. ಇನ್ಯಾರಾದರಿಚ್ಚರು ಕಳ್ಳ, ಪೋಲೀಸಿನವರಾಗ ಬೇಕು. ಕಳ್ಳನಾಗಲೀ, ಪೋಲೀಸಿನವನಾಗಲೀ ಯಾವಾಗಲೂ ಒಣಿ ಗಳಲ್ಲೇ ಓಡಬೇಕು. ಹಾಗಲ್ಲದೆ ಬಾಲಕರಮಧ್ಯದಲ್ಲಿ ಕೈ ಬಿಡಿಸಿ ಕೊಂಡು ನುಗ್ಗಬಾರದು. ಹಿರಿಯಣ್ಣನು ಒಳ್ಳೆಯ ಸ್ವಾರಸ್ಯವಾದ ಸಮಯವನ್ನು ನೋಡಿ ಶೀಟಿಯನ್ನು ಊದಬೇಕು.

ರಾಮಕ್ಕ—ನಿನ್ನ ಮನೆ ಬಾಗಿಲಿಗೆ ಎರಡು ಕಿಂಡಿಗಳೇಕೆ ಭೀಮಕ್ಕಾ?

ಭೀಮಕ್ಕ—ನನ್ನ ಎರಡು ಬೆಕ್ಕುಗಳು ಓಡಾಡಲಿಕ್ಕೆಂದು. ಚಿಕ್ಕ ಬೆಕ್ಕಿಗೆ ಚಿಕ್ಕ ಕಂಡಿ—ದೊಡ್ಡದ್ದಕ್ಕೆ ದೊಡ್ಡ ಕಂಡಿ.

ರಾಮಕ್ಕ—ಅಯ್ಯೋ—ಡೊಡ್ಡ ಕಂಡಿ ಒಂದೇ ಸಾಕಾಗಿತ್ತಲ್ಲವೆ?

ಭೀಮಕ್ಕ—ಹೌದು, ನನಗೆ ಅದು ಮುಂಚೆ ಹೊಳಿಯಲೇ ಇಲ್ಲ!

ಇದನ್ನು ಕಳುಹಿಸಿದನ,

ಕಬ್, ಜಿ. ಬಾಲಕೃಷ್ಣರಾವ್,
ಚಿಂತಾಮಣಿ.

ಹಿರಿಯಣ್ಣಂದಿರಿಗಾಗಿ.

ಅಂಕ ೬.

ಹಿಂದಿನ ಸಲ—ನಿಮ್ಮ "ದರ್ಜೆಯ" ಕೆಲಸಗಳನ್ನು ಹೇಗೆ ಮಾಡಬೇಕೆಂದು ಹೇಳಿದೆನು. ಕೆಲವು ಜನರು 'ನಮ್ಮ ಕೆಲಸಗಳನ್ನು ಹೀಗೆಯೇ ಮಾಡಬೇಕೆಂಬುದನ್ನು ತಿಳಿಸಿ' ಎಂದು ಕೇಳಿದರು. ಅದು ಹೇಳುವುದಕ್ಕಾಗುವುದಿಲ್ಲ. ಆಯಾ ಹಿರಿಯಣ್ಣನು ಅವನವನ ಪಟ್ಟಿಯನ್ನು ಸ್ವತಃ ರಚಿಸಿಕೊಳ್ಳಬೇಕು. ಆದರೆ ಸಾದಾಹರಣವಾಗಿ ಪ್ರತಿಯೊಂದು ಕ್ಲಾಸಿನಲ್ಲಿಯೂ ಇವುಗಳನ್ನು ಮಾಡಬೇಕು:—

ಆಟದಿಂದ ನಿಮ್ಮ ಕೆಲಸವನ್ನು ಪ್ರಾರಂಭಮಾಡಿ, ಏನೋದವಾದ ಕಥೆಯಿಂದ ಕೆಲಸವನ್ನು ಮುಗಿಸಿ. ವಾರಕ್ಕೆರಡಾವರ್ತಿಗಿಂತ ಹೆಚ್ಚಾಗಿ ನಿಮ್ಮ ಕ್ಲಾಸುಗಳನ್ನು ಇಟ್ಟುಕೊಳ್ಳಬೇಡಿ, ಕ್ಲಾಸುಗಳನ್ನು ದೇವರ ದೊಡ್ಡ ಅಂಗಳದಲ್ಲಿ ಇಟ್ಟುಕೊಳ್ಳಿ, ಕಾಲಕ್ಕೆ ಕ್ಲಪ್ತವಾಗಿ ಕೆಲಸನಡೆಸುತ್ತಿರಿ, ನೀವುಗಳು ಹೊತ್ತಾಗಿ ಒರಬೇಡಿ, ಹುಡುಗರನ್ನು ಕ್ಲಿಪ್ತಕಾಲಕ್ಕೆ ಹೊರಡಿಸಿಬಿಡಿ, ಕ್ಲಾಸುಗಳನ್ನು ಏನಾಕಾರಣ ಮುಂದಕ್ಕೆ ಹಾಕುತ್ತಿರಬೇಡಿ, ಇವುಗಳಲ್ಲಿ ಬೇಜಾರುಪಟ್ಟ ಹುಡುಗರೇ ನಮ್ಮನ್ನು ಬಿಟ್ಟು ಹೋಗಿ ನಮಗೆ ದ್ವೇಷಿಗಳಾಗಿ ಹೊರ ಹುಡುಗರನ್ನೂ ಒಳಬರದಂತೆ ಮಾಡುತ್ತಾರೆ.

ತಾರೆಯ ದರ್ಜೆಗಳು (Star Subjects).

ದೀಕ್ಷೆಯನ್ನು ವಹಿಸಿದ ಕೆಲವು ದಿನಗಳಲ್ಲಿಯೇ ತಾರೆ (Star) ಯ ವಿಷಯಗಳನ್ನು ಬಾಲಕರಿಗೆ ತಿಳಿಸಿ, ನಿಮ್ಮ ಕೆಲಸಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಂಡಿರಿ, ಬಾಲಕರಿಗೆ ದ್ವಜದ ವಿಷಯವನ್ನು ಹೇಳುವಾಗ ಧ್ವಜವಿಲ್ಲದೇ ಇರಬೇಡಿ. ಧ್ವಜವನ್ನು ಸಮ್ಮನೆ ತೋರಿಸಿ ಕಲಿಸುವ ಬದಲು ಧ್ವಜವನ್ನು ಮೇಲಕ್ಕೆ ಏರಿಸಿ, ಅದಕ್ಕೆ ತಕ್ಕ ಮರ್ಯಾದೆಗಳನ್ನು ಸಲ್ಲಿಸುವ ರೀತಿಗಳನ್ನೂ ತಿಳಿಸುವುದೂ ಅಲ್ಲದೇ ಅಲ್ಲಿಯೇ ಮಾಡಿಸಬೇಕು, ಬಾಲಕರು ಇಂಥವುಗಳನ್ನು ಗುರ್ತಿಸಿಕೊಳ್ಳುವದಕ್ಕೆ ಒಂದು ಚಿಕ್ಕ ಪುಸ್ತಕವನ್ನು ಇಟ್ಟುಕ್ಕೊಂಡು ಅವುಗಳಲ್ಲಿ ಸಚಿತ್ರವಾಗಿ ಒರೆದುಕೊಳ್ಳುವಂತೆ ಮಾಡಿ

ಒಂದೊಂದು ಗುಂಪಿಗೂ ಬೇಕಾದ ಸಾಮಾನುಗಳನ್ನು ಬೇರೆ ಇಡಿಸಿ ಅವುಗಳನ್ನು ಬಾಲಕರ ನಾಯಕನ ವಶಕ್ಕೆ ಬಿಟ್ಟುಬಿಡಿ, ಅವುಗಳನ್ನು ಜೋಪಾನವಾಗಿಟ್ಟಿರುವುದು ಅವನ ಭಾರ. ನೀವುಗಳು ಕಲಿಸಿದ ವಿಷಯಗಳನ್ನು ಬಾಲಕರ ನಾಯಕನು ತನ್ನ ಗೆಳೆಯರೊಡನೆ ಅಭ್ಯಾಸಮಾಡಿ, ತನ್ನ ಗೆಳೆಯರಿಗೂ ಅಭ್ಯಾಸಮಾಡಿಸಿದನಂತರ ಒಂದು ಸಣ್ಣ ಪರೀಕ್ಷೆಯನ್ನಿಟ್ಟುಕೊಳ್ಳಿ. ಸರಿಯಾಗಿರುವವರನ್ನೇ ದಾಕ್ಷಿಣ್ಯವಿಲ್ಲದೆ ಹುಸಾರಿಸಿ, ಇತರರಿಗೆ ಮತ್ತೊಂದು ವಾರದ ಅವಧಿಯನ್ನು ಕೊಟ್ಟು ಅವರನ್ನು ಮತ್ತೆ ಪುನಃ ಪರೀಕ್ಷಿಸಬೇಕು. ದಾಕ್ಷಿಣ್ಯಕ್ಕೆ ಗಂಟು ಬಿದ್ದು ತಿಳಿಯದವನನ್ನೂ ಹುಸಾರಿಸಿದಲ್ಲಿ ಸಂಘಕ್ಕೆ ದೊಡ್ಡ ಹಾನಿಯುಂಟಾಗುತ್ತದೆಂದು ತಿಳಿಯಿರಿ.

ಸರಿಯಾದವರನ್ನು ಹುಸಾರಿಸಿದಿರೆನ್ನುವ, ಅಂತಹವರಿಗೆ ಬಂದ ನಯ ತಾರೆಯನ್ನು ಕೊಡುವಾಗ, ಇದ್ದದ್ದರಲ್ಲಿ ಶೋಭಾಯಮಾನವಾದ ಸಮಾರಂಭವನ್ನೇರ್ಪಡಿಸಿ ಅವನು ಕಷ್ಟಪಟ್ಟಿದ್ದಕ್ಕೆ ಅವನಿಗೆ ಬಂದ ಬಹುಮಾನವು ಹೆಚ್ಚಾದ ಬೆಲೆ ಉಳ್ಳದ್ದಾಗಿರುವುದಾಗಿ ಹೇಳಿ ಆ ತಾರೆಯಲ್ಲಿ ಅಭಿಮಾನವಿರುವಂತೆ ಮಾಡಬೇಕು. ಅಷ್ಟಕ್ಕೆ ತನ್ನ ಕೆಲಸವು ಮುಗಿಯಲಿಲ್ಲವೆಂದು ಮುಂದಿನ ಇತರ ತಾರೆಗಳನ್ನು ಸಂಪಾದಿಸಬೇಕೆಂದೂ ಅವನಲ್ಲಿ ಉತ್ಸಾಹವನ್ನುಂಟುಮಾಡಬೇಕು.

ಮೈಸೂರು ಧ್ವಜಕ್ಕೆ ಗೆಳೆಯನೊಬ್ಬನು ನಮಸ್ಕರಿಸುತ್ತಿರುವುದು.

ಉಪಾಧ್ಯಾಯ—(ಸಿಟ್ಟಿನಿಂದ) ನಿನಗೇನು ಬರುತ್ತದೆ?

ರಾಮು—ಹೊಡಿಬೇಡಿ ಸಾರ್ ಹೊಡದರೆ ಅಳುಬರುತ್ತೆ.

ಉಪಾಧ್ಯಾಯ—ಪೃಥ್ವಿರಾಜನು "ನಾನು ಸುಮ್ಮಿಯಾಗಿ ಸಾಯುತ್ತೇನೆಂ"ದು ಯಾವ ಯುದ್ಧದಲ್ಲಿ ಹೇಳಿದನು.

ವಿದ್ಯಾರ್ಥಿ—ಅವನ ಕಡೇ ಯುದ್ಧದಲ್ಲಿ ಸಾರ್.

ಒಬ್ಬ (ನದಿಯ ಧಡದಲ್ಲಿ) ಏನ್ರೀ ಒಬ್ಬನು ನೀರಿನಲ್ಲಿ ಮುಳಿಗಿಕೊಂಡರೆ ಎಷ್ಟುಹೊತ್ತು ಇದ್ದಾನು?

ಮತ್ತೊಬ್ಬ—ಸುಮಾರು 5 ನಿಮಿಷ.

ಮೊದಲನೆಯವನು—ಸುಳ್ಳು-ಈಗ ಅರ್ಧಗಂಟೆಯಾದರೂ ಮೇಲಕ್ಕೇ ಬರದೆ ಒಬ್ಬ ಮನುಷ್ಯನು ಇಲ್ಲಿ ಮುಳಿಗಿರುತ್ತಾನೆ. ಇನ್ನೂ ಎಷ್ಟುಹೊತ್ತಿರುತ್ತಾನೆಯೋ ನೋಡುವ.

ಮೈಸೂರು ಸ್ಕೌಟ್



ಸ್ಕೌಟು ಸಮರೂಪ ಅಥವಾ ಯೂನಿಫಾರಂ.

ಇದು ನೋಡಿ, ಈ ಶಬ್ದಕ್ಕೆ ಕನ್ನಡದಲ್ಲಿ ಏನು ಹೇಳಬೇಕೋ ನಮಗೆ ಗೊತ್ತಿಲ್ಲ. ಮೊನ್ನೆ ಬಯಕನರ್ಾಟಕದಲ್ಲಿ ಇದಕ್ಕೆ ಸಮರೂಪ ಎಂತ ಯಾರೋ ಬರೆದಿದ್ದಾರೆ. ನಾವೂ ಅದನ್ನೇ ಒಕೆನಿದ್ದೇವೆ. ಆದಷ್ಟು ಕನ್ನಡಶಬ್ದವನ್ನೇ ಉಪಯೋಗಿಸೋಣ.

ಒಂದು ದೇಶಕ್ಕೆ, ಒಂದು ಜನಾಂಗಕ್ಕೆ ಒಂದು ಸಮಾಜಕ್ಕೆ ಸಮುತ್ಪತ್ತಿಯೇನ ಅಸ್ತಿಯಿಸತಕ್ಕ ಕಲವು ವಿಷಯಗಳಿರುತ್ತವೆ. ಈಗ ಧ್ವಜ ಎದೆ. ಆ ಧ್ವಜವು ಒಂದು ದೇಶವನ್ನೇ ಸೂಚಿಸುತ್ತದೆ. ಆ ಧ್ವಜಕ್ಕೆ ಅಪಮಾನವಾದರೆ ಆ ಜನಾಂಗಕ್ಕೂ ಆ ದೇಶಕ್ಕೂ ಅಪಮಾನ ವನ್ನು ಮಾಡಿದಂತೆ. ಹಾಗೆಯೇ ಜನಾಂಗಗಳ ಘರ್ಜನೆಯೂ, ಈಗಿನ ಕಾಲದಲ್ಲಿ ಜನಾಂಗದಲ್ಲೆಲ್ಲಾ ಅಸ್ತಿಯಿಸರುವ ಏಕಮಾತ್ರ ಕೀರ್ತ ನೆಯೂ, ಜನತೆಯನ್ನೇ ಸೂಚಿಸುತ್ತವೆ. ಮೊನ್ನೆ ಯಾರೋ ಹೇಳಿದರು, ನಾನು 'ಕಾಯೌ ಶ್ರೀ ಗೌರಿ' ಯನ್ನು ಹಾಡುವುದಿಲ್ಲ, ನನಗೆ ಶ್ರೀ ಗೌರಿಯಲ್ಲಿ ನಂಬಿಕೆಯಿಲ್ಲ, ಎಂತ. ನ್ಯಾಯ, ಒಪ್ಪಿಕೊಳ್ಳೋಣ. ಈಗ ಇಂಗ್ಲಿಷರಲ್ಲಿಯೂ ಅಂತಹದೊಂದು ಕೀರ್ತನೆಯೆದೆಯಲ್ಲ—ಸ್ವಾವಿ ಕಾಯಲಿ ನಮ್ಮ ರಾಜನ—ಎಂತ, ಆ ಕೀರ್ತನೆಯನ್ನು ಯಾರಾದರೂ ಹಾಡದೆ ತಿರಸ್ಕರಿಸಿದರೆ ಅದು ಇಂಗ್ಲಿಷ್ ಜನಾಂಗಕ್ಕೇ ಅಪಮಾನ ಮಾಡಿದಂತ ಈಗ ಇಂಗ್ಲಿಷ್ ಸ್ಕೌಟು ಮಾಸ್ಟರು ಬಬ್ಬಸಿದ್ದಾನೆ—ಅವನು 'ನಾನು ಈ ಕೀರ್ತನೆಯನ್ನು ಹೇಳುವುದಿಲ್ಲ' ಪೆಂದನ್ನುವುದಿಲ್ಲ. ಈಗ ಅವನಿಗ ದೇವರಲ್ಲಿ ನಂಬಿಕೆಯಿಲ್ಲದಿರಬಹುದು. ಅಂತಹವರನ್ನು, ನಾವು, ಅವರು ನಂಬದಿರುವ ದೇವರನ್ನು ಕುರಿತು ಹಾಡಿ ಎಂತ ಹೇಳು ವುದು ಈ ವ್ಯಕ್ತಿಸ್ವಾತಂತ್ರ್ಯದ ಯುಗದಲ್ಲಿ ನ್ಯಾಯವಲ್ಲದಿರಬಹುದು. ಆದರೂ ಪ್ರತಿಯೊಬ್ಬ ಇಂಗ್ಲಿಷನನೂ ಆ ಕೀರ್ತನಕಾಲದಲ್ಲಿ ಎಷ್ಟು ನಮ್ರತೆಯಿಂದಲೂ ಗೌರವದಿಂದಲೂ ವರ್ತಿಸುವನು!

* * * *

ಹಾಗೆಯೇ ಸಮರೂಪದ ವಿಚಾರವು. ಸಮರೂಪದಿಂದ ಎಲ್ಲರೂ ಒಂದೇ ಒಂದು ಗುಂಪಿಗೆ ಸೇರಿದವರೆಂದು ನೋಡಿದವರಿಗೆ ಅರ್ಥವಾಗು ವುದಲ್ಲದೆ, ಕೆಲಸಕಾರ್ಯಗಳಿಗೆ ಬಹಳ ಸೌಕರ್ಯವುಂಟು. ವಾಹ್ಯಾಡಂಬ ರವ್ ಇದ್ದರೂ ಇದರರ್ಥವು ಬಹಳ ಗಂಭೀರವಾದುದು. ಆ ಪೋಷಾಕು ಅರೀತಿಯಲ್ಲಿರುವುದರಿಂದ ಕೆಲಸಕಾರ್ಯಕ್ಕೆ ಎಷ್ಟೇ ಅನುಕೂಲವಿದ್ದರೂ ಇದರ ಮಹತ್ವವ ಇನ್ನೂ ಮಹತ್ಕರವಾದುದು. ಈ ಸಮರೂಪವನ್ನು ನಾವು ಗೌರವದಿಂದ ಕಾಣುತ್ತಲೂ ಅದರ ಧರಿಸುವಿಕೆಯಲ್ಲಿ ಬಂದು ಗಾಂಭೀರ್ಯತೆಯನ್ನು ಆಶಿಸುತ್ತಲೂ ಇರುವುದರಿಂದ ನಮಗೆ ತಿಳಿಯು ದೆಯೇ ನಾವು ನಮ್ಮ ಭಾತೃಮಂಡಳದಲ್ಲಿ ಒಬ್ಬರಾಗಿರುವುದರಂತೆ ವರ್ತಿ ಸುತ್ತೇವೆ. ಇದೊಂದು ಗುಟ್ಟು.

ಒಂದು ಸಮರೂಪವಿದ್ದು ಅದಕ್ಕೆ ವಿರುದ್ಧವಾಗಿ ಬಟ್ಟೆಬರೆಗಳನ್ನು ಹಾಕಿಕೊಂಡು ನಾವು ಸಂಘದ ಉತ್ಸವಕಾಲಗಳಲ್ಲಿ ಮೆರೆಯಲು ಬರು ವುದು ನಮ್ಮ ಸಂಘಕ್ಕೆ ನಾವು ಮಾಡಿದ ಮಹತ್ತಾದ ತಿರಸ್ಕಾರವ್. ಇದು ತಿಳಿದೂ ನಮ್ಮ ಹಿರಿಯಣ್ಣಂದಿರು ಕೆಲವರು ಈ ಮಹಾನಿಯಮ ವನ್ನು ತಿರಸ್ಕರಿಸುವುದು ಅತಿ ಶೋಚನೀಯವ್.

ಒಂದು ಸಂಘವನ್ನೇ ಅಸ್ತಿಯಿಸುವ ಸಮರೂಪವಿದ್ದರೂ ಅದರಲ್ಲಿ ಇರುವ ಚಿಕ್ಕ ಚಿಕ್ಕ ಗುಂಪುಗಳಲ್ಲಿ ಸ್ವಲ್ಪ ಸ್ವಲ್ಪ ವ್ಯತ್ಯಾಸಗಳಿರ ಬಹುದು. ಮೈಸೂರು ಸ್ಕೌಸ್ಯನೆಲ್ಲಾ ಒಂದೇ ಆದರೂ ಅದರೊಳಗೆ ಭೇದ ಗಳುಂಟು. ಹಾಗೆಯೇ ನಮ್ಮ ಸಮರೂಪದಲ್ಲಿಯೂ ಭೇದಗಳಿರಬಹು ದು. ಆದರೆ ಒಂದೊಂದು ಗುಂಪ್ಪಲ್ಲಿ ಮಾತ್ರ ಸಮರೂಪವಿರಲೇಬೇಕು. ಅಲ್ಲದೆ ನಮ್ಮ ಸಂಘಕ್ಕೆ ಅಸ್ತಿಯಿಸುವ ಕೆಲವು ವಿಷಯಗಳಿರುತ್ತವೆ. ಅವ್ರ ಎಲ್ಲಾ ಗುಂಪುಗಳ ಸಮರೂಪದಲ್ಲಿಯೂ ಕಾಣಬರುತ್ತಿರಬೇಕು.

ಇನ್ನೂ ಎಷ್ಟೋ ಇದೆ—ಬರೆಯುತ್ತ ಹೋದರೆ.

ಶಿಬಿರದ ವಿಷಯವಾಗಿ.

"ಎಲ್ಲಿಗೆ, ಸಾರ್, ಕ್ಯಾಂಪು? ನೋಡಿ, ಸಾರ್, ಒಳ್ಳೆಜಾಗಕ್ಕೆ ಹೋಗಬೇಕು. ಈಜುವುದಕ್ಕೆ ನದಿಯಿದೆಯೆ ಸಾರ್?" ಎಂಬುದಾಗಿ, ಶಿರಗೂರು ಮೂರನೇ ದಳದ ಮುಖಂಡರ ಕಚೇರಿಯಲ್ಲಿ ಶ್ರೀರಾಮ ಗುಂಪಿನ ಮುಖಂಡನಾದ ರಾಮರಾಯನು ಕೇಳಿದನು. ಶಿರಗೂರಿನ ಮೂರನೆಯ ದಳದವರು ಶಿಬಿರವನ್ನು ಈಗಾಗಲೇ ಹತ್ತೆಂಟು ಕಡೆಗಳಲ್ಲಿ ಸಾಧಿಸಿದ್ದರಂತೆ. ಆ ಊರಿನ ಸುತ್ತಮುತ್ತಲೂ ಇದ್ದ ಕ್ಷೇತ್ರಸ್ಥಳಗಳೂ, ಬೆಟ್ಟ ಗುಡ್ಡಗಳೂ ಆದಳದವರಿಗೆ ಶಿಬಿರಸ್ಥಾಪನೆಗೆ ಬಹಳ ಅನುಕೂಲವಾಗಿದ್ದುವು. ಇದುವರೆಗೂ ಅವರು ಊರಿನ ಹತ್ತಿರದ ಕಾಡಿನಲ್ಲಿಯೇ ಶಿಬಿರಗಳನ್ನು ಇಟ್ಟುಕೊಂಡಿದ್ದುದರಿಂದ ಈಸಲ, ಅಲ್ಲಿಗೆ ಹತ್ತು ಮೈಲಿದೂರದಲ್ಲಿದ್ದ ವಾತಾಪಿಯಲ್ಲಿ ಇಟ್ಟುಕೊಳ್ಳಬೇಕೆಂದು ಆದಳದ ಸ್ಕೌಟುಮಾಸ್ಟರ ಮನಸ್ಸಾಗಿದ್ದಿತು. ಆದುದರಿಂದ ಅವರು ಮೇಲಿನ ಪ್ರಶ್ನೆಗೆ ಉತ್ತರವಾಗಿ, "ಒಳ್ಳೆಜಾಗವಿಂದ್ರೆ ಏನೋ? ಏನು, ನಿನಗೆ ಊಟ ಉಪಚಾರ ಎಲ್ಲಾ ಅನುಕೂಲಗಳು ಇರಬೇಕೋ? ಸಾಕು, ಸಾಕು, ಸ್ಕೌಟು ಆದಮೇಲೆ ಕಾಡಿಗೆ ಹೋದರೂ ಅನ್ನ ಹುಟ್ಟಿಸಿಕೊಂಡು ಬರಬೇಕು. ಈಸಲ ಶಿಬಿರವನ್ನು ವಾತಾಪಿಯಲ್ಲಿ ಇಟ್ಟುಕೊಳ್ಳೋಣ. ಅಲ್ಲಿ ಸೊಗಸಾದ ಬಂದು ಬಂಗ್ಲೆ ಇದೆ. ನಾನು ಅರಮನೆ ಕಚೇರಿಗೆ ಒರೆಯುತ್ತೇನೆ. ಬಹುಶಃ—" "ಅಲ್ಲ, ಸಾರ್, ಇಂಜನಿಯರಿಗೆ ಅಲ್ಲವೆ ಸಾರ್, ಬರಿಯಬೇಕಾಗಿರುವುದು?" "ಅಯ್ಯೋ ಪೆಜ್ಜೆ! ವಾತಾಪಿಯ ಬಂಗ್ಲೆ ಅರಮನೆಗೆ ಸೇರಿದೆ. ಪೂರ್ವದಲ್ಲಿ ರೆಸಿಡೆಂಟರು ಅಲ್ಲಿ ಇರುತ್ತಿದ್ದರು. ಈಗ ಆಗಾಗ್ಯೆ ಮಹಾರಾಜರು ಹೋಗುತ್ತಿರುತ್ತಾರೆ. ಅರಮನೆ ಕಚೇರಿಗೆ ಬರಿಯಬೇಕು. ಅದೆಲ್ಲಾ ನಾನು ಮಾಡುತ್ತೇನೆ. ಶುಕ್ರವಾರ ಸಾಯಂಕಾಲ ಇಲ್ಲಿಂದ ಹೊರಡೋಣ. ಶನಿವಾರ ಅಲ್ಲಿಯೇ ಇದ್ದು ಭಾನುವಾರ ಸಾಯಂಕಾಲ ವಾಪಸು ಬರುವುದು. ನಿಮ್ಮ ನಿಮ್ಮ ಗುಂಪುಗಳಿಗೆಲ್ಲಾ ಹೇಳಿಬಿಡಿ. ಶಿಬಿರ ಕಾಣಿಕೆ ಒಬ್ಬೊಬ್ಬರಿಗೆ ಒಂದು ರೂಪಾಯಿ ಗೊತ್ತಾಯಿತೋ?"

ಹೀಗೆಂದು ವ್ಯವಸ್ಥೆಮಾಡಿಕೊಂಡು ಶಿರಗೂರಿನ ಮೂರನೆಯ ದಳದವರು ವಾತಾಪಿಯಲ್ಲಿ ಶಿಬಿರವನ್ನು ಇಟ್ಟುಕೊಂಡು, ಶುಕ್ರವಾರ ರಾತ್ರಿಯಿಂದ ಭಾನುವಾರದ ಸಾಯಂಕಾಲದವರೆಗೆ ಅಲ್ಲಿದ್ದು, ಭಾನುವಾರ ರಾತ್ರಿ ಶಿರಗೂರಿಗೆ ವಾಪಸು ಬಂದರು. ಯಾರನ್ನು ಕೇಳಿದರೂ ಶಿಬಿರವು ಬಹಳ ಸೊಗಸಾಗಿತ್ತು, ಶಿಬಿರಾಗ್ನಿಯೋ ಬಹು ಸೊಗಸಾಗಿತ್ತು, ಊಟವೋ ಮತ್ತೂ ಸೊಗಸಾಗಿತ್ತು, ಎಂಬುದಾಗಿ ಅನ್ನುವವರೇ ಆಗಿದ್ದರು.

* * * *

ಇದಾದ ಎರಡುವಾರಕ್ಕೆ ಮಹಾರಾಜರ ಸವಾರಿಯು ವಾತಾಪಿಗೆ ದಯಮಾಡಿಸುವುದೆಂದು ತಿಳಿದು, ಅರಮನೆ ಮುಖ್ಯ ಇಂಜನಿಯರು ವಾತಾಪಿಯ ಬಂಗ್ಲೆಯನ್ನು ನೋಡಿಕೊಂಡು ಬರುವುದಕ್ಕಾಗಿ ವಾತಾಪಿಗೆ ಹೋದರು. ಬಂಗ್ಲೆಯಲ್ಲಿ ಮಹಾರಾಜರು ಇಳಿದುಕೊಳ್ಳುವ ಕೊಠಡಿಯು ಮೊದಲಿನಂತೆಯೇ ಸುವ್ಯವಸ್ಥಿತವಾಗಿದ್ದಿತು. ಅಲ್ಲಿಂದ ಅವರು ಬಂಗ್ಲೆಯ ಹಜಾರಕ್ಕೆ ಬಂದರು. ಅಲ್ಲಿ ಕೆಲವು ಸಾಮಾನೆಲ್ಲಾ ಹಾಳಾಗಿದ್ದವು. ಮಾಲಿಯನ್ನು ಕರೆದು ಕೇಳಿದ್ದಕ್ಕೆ, ಅವನು, "ಬೇಡವೆಂದು ಎಷ್ಟು ಹೇಳಿದರೂ ಕೇಳದೆ ಮೊನ್ನೆ ಬಂದಿದ್ದ ಸ್ಕೌಟು ಹುಡುಗರು ಹೀಗೆ ಮಾಡಿದರು, ಬುದ್ದಿ. ಒಂದು ಕುರ್ಚಿಮೇಲೆ ನಾಲ್ಕು ಜನ ಕುಳಿತುಕೊಂಡರು. ಅದಕ್ಕೇ ಅದು ಮುರಿದುಹೋಯಿತು. ಹಜಾರದೊಳಗೆ ಜಂಡಾಡಿದರು. ಆ ಚಂಡು ದೀಪಕ್ಕೆ ಬಡಿದು, ಅದರ ಗಾಜು ಎಲ್ಲಾ ಒಡೆದುಹೋಯಿತು. ಇಲ್ಲಿ ನೋಡಿ, ಬುದ್ದಿ, ಗೋಡೆಮೇಲೆ ಮಸಿಕೆಂಡದಲ್ಲಿ ಚಿತ್ರ ಬರೆದಿದ್ದಾರೆ. ನನ್ನೊಡೆಯ, ಬೇಡಬುದ್ದೀ ಅಂತ ತಡೆಯುವುದಕ್ಕೆ ಹೋದೆ ಕೈಲಿದ್ದ ದೊಣ್ಣೆಯಿಂದ ಹೊಡೆದರು. ನನ್ನೊಡೆಯ ನಾನು ಏನು ಮಾಡೆಯೇನು? ಒಬ್ಬೊಂಟಿಗ," ಎಂಬುದಾಗಿ ಹೇಳಿದನು. ಅದಕ್ಕೆ ಇಂಜನಿಯರು, "ಲೋ! ಅವರ ಮೇಸ್ಟರು ಒಬ್ಬರು ಇದ್ದರಲ್ಲೋ? ಅವರು ಜೊತೆಯಲ್ಲಿ ಇರಲಿಲ್ಲವೇನೋ? ಎಂದು ಕೇಳಿದರು. "ಹು! ಬುದ್ದಿ ಇದ್ದರು. ಆದರೆ ಅವರು ಹುಡುಗರಿಗೆ ಆಡಿಗೆಮಾಡುವದಕ್ಕೆ ಬರುವುದಿಲ್ಲವೆಂದು ಅವರು ಯಾವಾಗಲೂ ಅಡಿಗೆಮನೆಯಲ್ಲಿಯೇ ಇರುತ್ತಿದ್ದರು, ಬುದ್ದೀ" ಎಂದನು ಮಾಲಿ. ಇಂಜನಿಯರು ಹಲ್ಲು ಕಡಿಯುತ್ತಾ ಹೊರಗೆಬಂದರು.

ಬಂಗ್ಲೆ ಮುಂಭಾಗದಲ್ಲಿ ಸೊಗಸಾದ ಹೂ ತೋಟವಿದೆ. ಅಲ್ಲಿ ಅಲಂಕಾರಕ್ಕೆ ಒಂದು ಸೀಮೆ ಬಿದಿರಿನಮೆಳೆಯನ್ನು ಹಾಸಿದ್ದರು. ಮಹಾರಾಜರಿಗೆ ಆದರಲ್ಲಿ ಬಹಳ ಪ್ರೀತಿಯಂತೆ. ಪಾಪ! ಈ ಇಂಜನಿಯರೇ ತರಿಸಿಹಾಕಿದ್ದರು. ಆದರೆ ಈಗ ನೋಡುತ್ತಾರೆ—ಎಲ್ಲವೂ ಸುಟ್ಟು ಕರಕಾಗಿ ಬರಲಾಗಿ ನಿಂತಿದೆ! ಇಂಜನಿಯರಿಗೆ ಹಿರೆನಲಾರದಷ್ಟು ಕೋಪಬಂತು. ಮಾತನಾಡುವುದಕ್ಕಾಗದೆ, ಹಾಗೇ ಆ ಬದುರು ಮಳೆಯ ಕಡೆ ಕೈತೋರಿಸಿದರು. ಮಾಲಿಯು, "ಬುದ್ದೀ ಆ ಮೆಳೆತಾವ ಬೆಂಕಿ ಒಡ್ಡಿಕೊಂಡಿದ್ದರು. ಸುಗ್ಗಿ ಕುಣಿತ ಕುಣಿದರು, ಬುದ್ದಿ ರಾತ್ರಿ ೧೨ ಘಂಟೆತನಕ ಇಲ್ಲಿ ಬೆಂಕಿ ಹಾಕ್ಕೊಂಡು ಇದ್ದರು. ಮೆಳೆಗೆ ಬೆಂಕಿಬಿತ್ತು. ಆರಿಸುವುದಕ್ಕೆ ಬಿಡದೆ, 'ಭಾರಿ ಫೈರು (Fire) ಭಾರಿ ಫೈರು ಎಂತ ಕುಣಿದರು. ಆ ಆಡಿಗೆಮನೆ ರಂಪ ಎರಡುದಿನ ನಾನು ತೆಗೆದೆ. ಈಗ ಸ್ವಲ್ಪ ನೋಡುವಹಾಗಿದೆ" ಎಂದನು. ಇಂಜನಿಯರು ಸುಮ್ಮನೆ ಬಂದುಬಿಟ್ಟರು.

ಈಗ ಆ ಬಂಗ್ಲೆಯಲ್ಲಿ ಇಳಿದುಕೊಳ್ಳುವುದಕ್ಕೆ ಯಾವ ಸ್ಕೌಟು ದಳದವರಿಗೂ ಅನುಮತಿಯು ದೊರೆಯುವುದಿಲ್ಲ. ಒಂದು ದಳದವರ ಅವಿವೇಕ—ಸ್ಕೌಟುಗಳೆಲ್ಲರೂ ಉಣ್ಣಬೇಕು. ಅಂತಹ ದಳಗಳೂ ನಮ್ಮಲ್ಲಿ ಇವೆಯಲ್ಲ ಇವುಗಳಿಗೆ ಏನುಮಾಡೋಣ?

ಗೃಹಶಿಕ್ಷಣ.

["ಗೃಹವೇ ಶಿಶುವಿಗೆ ಪ್ರಥಮ ಪಾಠಶಾಲೆ"—ಫ್ರೋಬೆಲ್.

(ಅಮೇರಿಕದ ಕಿಂಡರ್‌ಗಾರ್ಟನ್ ಸಂಘದವರ ಅನುಮತಿಯಿಂದ)

ಅಂಕ ೬.

ಮಕ್ಕಳಲ್ಲೂ ವಿನಯವಿರಬೇಕು.

"ಅಮ್ಮ, ನಮ್ಮ ಮನೆ ಮೇಷ್ಟರನ್ನ ಏನಾದರೂ ಕೇಳಬೇಕಾದರೆ, 'ಸರ್' ಎಂತ ಏಕೆ ಹೇಳಬೇಕಮ್ಮ? ರಾಮಯ್ಯನವರನ್ನು (ಇವರು ಅಡಿಗೆಮಾಡುವವರು) 'ಆ ಪಕ ತೆಗೆದು **ಕೊಡಿ**' ಎಂತ ಏಕೆ ನಾನು ಕೇಳಬೇಕು? '**ಕೊಡು**' ಎಂತ ಕೇಳಬಾರದೇನಮ್ಮ?" ಅಮ್ಮನು ಏನು ಉತ್ತರವನ್ನು ಕೊಡುತ್ತಾಳೆಯೋ ನೋಡಬೇಕೆಂದು. ರಾಮು ಕೃಷ್ಣನು ಬಹಳ ಉತ್ಸಾಹದಿಂದ ತಾಯಿಯ ಮುಖವನ್ನು ನೋಡುತ್ತಿದ್ದನು. ಶಾರದಮ್ಮನವರು ಮಕ್ಕಳ ಸ್ವಭಾವವನ್ನು ಬಹಳ ಚನ್ನಾಗಿ ತಿಳಿದಿದ್ದವರು. ಮಗನ ತರ್ಕವಿತರ್ಕಗಳಲ್ಲಿ ಅವರಿಗೆ ಬಹಳ ಆನಂದವಾಗುತ್ತಿತ್ತು. ಅವನ ಪ್ರಶ್ನೆಗಳೆಲ್ಲವೂ ಬೆಳವಣಿಗೆಯ ಸೋಪಾನದಲ್ಲಿ ಒಂದೊಂದೂ ಮೆಟ್ಟಲನ್ನು ಏರುವ ಪ್ರಯತ್ನಗಳೆಂದು ಅವರು ತಿಳಿದಿದ್ದರು.

ಆದುದರಿಂದ ಅವರು ನಿಧಾನವಾಗಿ, ಮಕ್ಕಳ ಮನಸ್ಸಿಗೆ ರುಚಿಸುವ ರೀತಿಯಲ್ಲಿ 'ವಿನಯ' 'ಶೀಲ' ಎಂಬ ನಡತೆಯುಗಾಂಭೀರ್ಯದ ಕುರುಹುಗಳನ್ನು ಮಗನಿಗೆ ತಿಳಿಯಹೇಳಿದರು. ಕೆಲವರು ತಾಯಂದಿರಿದ್ದಾರೆ, ಶಾರದಮ್ಮನವರೂ ಅವರಂತೆಯೇ ಮಾಡಬಹುದಾಗಿತ್ತು. 'ನಡತೆಯಲ್ಲಿ ವಿನಯವು ಏಕೆ ಇರಬೇಕೆಂದರೆ, ಎಲ್ಲರೂ ಹಾಗೆ ಇರುತ್ತಾರೆ' ಎಂತಲೋ, ಅಥವಾ, 'ನಾನು ಹೇಳಿದ ಮೇಲೆ ಹಾಗೆ ಮಾಡಬೇಕು' ಎಂತಲೋ, ಅಥವಾ, 'ನಿನಗೇಕೆ ತಲಹರಟೆ, ದೊಡ್ಡವರು ಹೇಳಿದ ಹಾಗೆ ಕೇಳು' ಎಂತಲೋ ಹೇಳಬಹುದಾಗಿತ್ತು. ಆದರೆ ಶಾರದಮ್ಮನವರು ಬುದ್ಧಿವಂತರು. ಆದುದರಿಂದ ನಿಧಾನವಾಗಿ ಮಗನ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಹೇಳಿದರು

'ಈಗ ನೀನು ಈ ಪ್ರಶ್ನೆಗಳನ್ನು ಕೇಳಿದ್ದು ಸರಿಯಾಯಿತು. ಏಕಾಂದರೆ ಅರ್ಥವಿಲ್ಲದ ನಡವಳಿಕೆಯಂತೆ ಪ್ರತಿದಿನವೂ ನೀನು ನಡೆಯಬೇಕೆಂದರೆ ನಿನಗೆ ಬೇಜಾರಾಗತ್ತದೆ. ಅಲ್ಲದೆ ಅರ್ಥವಿಲ್ಲದ ನಡವಳಿಕೆಯು ಬಹಳದಿನಗಳವರೆಗೂ ನಿಲ್ಲುವುದಿಲ್ಲ. ನಿನಗೇನಾದರೂ ಸರಿಯಾಗಿ ಗೊತ್ತಾಗದೆ ಅನುಮಾನವಾದರೆ ನನ್ನನ್ನು ಕೇಳು. ಎಷ್ಟೋ ವಿಚಾರಗಳು ನಿನಗೆ ತಿಳಿಯದುವು ನನಗೆ ಗೊತ್ತಿರುತ್ತವೆ. ನನಗೂ ತಿಳಿದ ವಿಷಯಗಳನ್ನು ಅವರನ್ನು ಕೇಳಿ ತಿಳಿದುಕೊಳ್ಳಬಹುದು."

ಇಷ್ಟರಲ್ಲಿಯಾಗಲೆ ರಾಮಕೃಷ್ಣನು ಕಣ್ಣುಗಳನ್ನು ಅರಳಿಸಿಕೊಂಡು ತಾಯಿಯು ಹೇಳುತ್ತಿದ್ದುದನ್ನೆಲ್ಲಾ ಅತಿ ಉತ್ಸಾಹದಿಂದ ಕೇಳುತ್ತಿದ್ದನು. ಮಕ್ಕಳಲ್ಲಿ ಉತ್ಸಾಹವನ್ನು ಹೆಚ್ಚಿಸುವ ರೀತಿಯು ಶಾರದಮ್ಮನವರಿಗೆ ಗೊತ್ತಿತ್ತೆಂದು ಕಾಣುತ್ತದೆ.

"ಈಗನೋಡು, ಮಗು, ನೀನು ಅಡಿಗೆಯವರನ್ನು 'ನನಗೆ ಸ್ವಲ್ಪ ನೀರು **ಕೊಡಿ**' ಎಂತ ಕೇಳಿದರೆ, ಹಾಗೆ ಕೇಳುವದರಿಂದ ಅವರ ಮನಸ್ಸಿಗೆ ಹರ್ಷವುಂಟಾಗುವಂತೆ ಮಾಡುತ್ತಿ. ಅವರಿಗೂ ಕೂಡ, ನಿನ್ನಲ್ಲಿ ನಿಜವಾಗಿಯೂ ಪ್ರೀತಿಯುಂಟಾಗುತ್ತದೆ. ಪ್ರಪಂಚದಲ್ಲಿ ಎಲ್ಲರೂ ನಿನ್ನನ್ನು ಪ್ರೀತಿಸುವ ಹಾಗೂ, ನೀನು ಎಲ್ಲರನ್ನೂ ಪ್ರೀತಿಸುತ್ತಲೂ ನಡೆಯಬೇಕು. ಈಗ, ನೀನು, 'ನನಗೆ ಸ್ವಲ್ಪ ನೀರು '**ಕೊಡೋ**' ಎಂತ ಕೇಳಿದ್ದರೆ ಅವರ ಮನಸ್ಸಿಗೆ ಎಷ್ಟು ಬೇಜಾರಾಗುತ್ತಿತ್ತು. ಹಾಗೆಯೇ, ಮನೆಯ ಮೇಷ್ಟರಲ್ಲಿಯೂ ವಿನಯದಿಂದ ನಡೆದರೆ ಅವರ ಮನಸ್ಸಿಗೂ ಹರ್ಷವಾಗುತ್ತದೆ, ಅವರೂ ನಿನ್ನನ್ನು ಪ್ರೀತಿಸುತ್ತಾರೆ."

ಇಷ್ಟರಲ್ಲಾಗಲೇ ರಾಮಕೃಷ್ಣನಿಗೆ 'ವಿನಯ' 'ನಡತೆ' ಇವುಗಳ ನಿಜವಾದ ಅರ್ಥವು ಸ್ವಲ್ಪ ಸ್ವಲ್ಪ ಮನಸ್ಸಿಗೆ ಹೊಳೆದಂತೆ ತೋರಿತು. ಆದುದರಿಂದಲೇ ಅವನು:

"ಅಲ್ಲಮ್ಮ, ಊಟಕ್ಕೆ ಕುಳಿತುಕೊಂಡಾಗ, ಎಲ್ಲರೂ ಕುಳಿತು ಕೊಳ್ಳುವತನಕ ನಾನೂ ಕುಳಿತುಕೊಳ್ಳದಿರುವುದೂ ಸರಿಯಾದ ನಡತೆಯಲ್ಲವೇನಮ್ಮ?" ಎಂದು ಕೇಳಿದನು.

"ನಿಜ, ನಿಜ, ಅದೂ ಕೂಡ ಸರಿಯಾದ ನಡತೆ. ನೋಡು, ನೀನು ಹಾಗೆ ಉಳಿದವರೆಲ್ಲರೂ ಕುಳಿತುಕೊಳ್ಳುವ ತನಕ ಕಾದಿದ್ದುದು, ಅವರೆಲ್ಲರಿಗೂ ನೀನು ಮರ್ಯಾದೆಯನ್ನು ಮಾಡಿದಂತಾಯಿತು. ಹಾಗೆ ಮರ್ಯಾದೆಯನ್ನು ಮಾಡಿದರೇ ತಾನೇ ಅವರಲ್ಲಿ ನಿನಗೆ ನಿಜವಾದ ಪ್ರೀತಿಯುಂಟಾಗುವುದು. ಅವರ ಮನಸ್ಸಿಗೂ ಹರ್ಷವುಂಟಾಗುವುದು ನೋಡು, ಮಗು, ಪ್ರಪಂಚದಲ್ಲಿ ಸಾಧ್ಯವಾದಷ್ಟು ಜನರಿಗೆ ಹರ್ಷವನ್ನೂ ಸಂತೋಷವನ್ನೂ ಉಂಟುಮಾಡುವುದೇ ನಮ್ಮೆಲ್ಲರ ಧರ್ಮ. ಹಾಗೆ ಸಂತೋಷವನ್ನುಂಟುಮಾಡುವುದಕ್ಕೆ ವಿನಯ ಗಾಂಭೀರ್ಯದಿಂದ ಕೂಡಿದ ನಡತೆಯೂ ಒಂದು ಮಾರ್ಗ."

"ಹಾಗಾದರೆ, ಮನೆಯಲ್ಲಿ ಸಾಮಾನೆಲ್ಲವನ್ನೂ ಸರಿಯಾಗಿರುವಂತೆ ನೋಡಿಕೊಳ್ಳುವುದೂ ಸರಿಯಾದ ನಡತೆಯೇನಮ್ಮ?"

"ಹೂಂ, ನೋಡು, ಮೊನ್ನೆ ಅವರ ಮೇಜಿನ ಮೇಲಿದ್ದ ಮಸಿದೌತಿಯನ್ನು ರಂಗಣ್ಣ ಒಡೆದುಬಿಟ್ಟ, ಅವರ ಕಾಗದವೆಲ್ಲಾ ಮಸಿಯಿಂದ ಹಾಳಾಗಿಹೋಯಿತು. ಇವೆಲ್ಲಾ ಸಣ್ಣ ವಿಚಾರಗಳಾದರೂ, ಸರಿಯಾದ ನಡತೆಯಲ್ಲಿ ಸೇರಿವೆ."

ನಿಮಗೆ ಗೊತ್ತಿದೆಯೇ?

ಹತ್ತು ತಲೆ ಕೆಂಪಾಗಿ, ಆರುತಲೆ ಕಪ್ಪಾಗಿ ಇರ್ಷವನ ಸೆಬನ ಪುತ್ರನ ಒಡೆಯನ ಶತೃವಿನ ಮಡದಿಯಾರು?

ಎಂ. ಏ. ಕೃಷ್ಣಸ್ವಾಮಿ ಕಳುಹಿಸಿದ್ದು.

ಸುದ್ದಿಗಳು.

ನಮ್ಮ ನಾಯಕರ ಸುಖಾಗಮನ.

ವಿದೇಶಗಳಲ್ಲಿ ಪ್ರವಾಸವನ್ನು ತೀರಿಸಿಕೊಂಡು ನಮ್ಮ ನಾಯಕರು ಸ್ವದೇಶಕ್ಕೆ ಸುಖವಾಗಿ ಒಂದು ತಲಿಪಿರುತ್ತಾರೆ. ಈ ಸಂದರ್ಭದಲ್ಲಿ ನಮ್ಮ ನಾಯಕರಿಗೆ "ಮೈಸೂರು ಮಕ್ಕಳು" ಸುಖಾಗಮನವನ್ನು ಬಯಸಲು ಆನಂದಿಸುತ್ತಾರೆ.

ಯುವರಾಜಕುಮಾರರು ಸಂಗೀತದಲ್ಲಿ ಪ್ರವೀಣತೆಯನ್ನು ಹೊಂದಿದರು.

ನಮ್ಮ ಚಿಕ್ಕ ನಾಯಕರು ಸಂಗೀತ ವಿದ್ಯೆಯಲ್ಲಿ ಪ್ರವೀಣತೆಯನ್ನು ಹೊಂದಿದರೆಂದು ಕೇಳಿ ಅವರಿಗೆ ನಮ್ಮ ವಿನಯಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸಲು ಹಾರೈಸುತ್ತೇವೆ. ಟ್ರಿಸಿಟಿಕಾಲೇಜಿನ ಸಂಗೀತದ ಪರೀಕ್ಷೆಯಲ್ಲಿ ನಮ್ಮ ಚಿಕ್ಕ ನಾಯಕರು, ಎಲ್ಲರಿಗಿಂತಲೂ ಪೊದಲನೆಯವರಾಗಿಯೂ, ಶೇಕಡ 98 ಮಾರ್ಕುಗಳನ್ನು ಹೊಂದಿಯೂ ಉಚ್ಚತರಗತಿಯಲ್ಲಿ ತೇರ್ಗಡೆಯಾದರೆಂದು ಕೇಳಿ ಕಬ್‌ಗಳೆಲ್ಲರೂ ಸಂತೋಷಪಡದೆ ಇರಲಾರದು. ಅಲ್ಲದೆ ಇದಕ್ಕಾಗಿ ನಮ್ಮ ಮಹಾಮಾತೋಶ್ರೀಯವರಾದ ಮಹಾರಾಣಿಯವರು ಒಂದು ಬೆಳ್ಳಿಯ ಬಟ್ಟಲನ್ನು ಬಹುಮಾನವಾಗಿ ದಯಪಾಲಿಸಿದರೆಂದು ತಿಳಿಯಬರುತ್ತದೆ. ಇಂಗ್ಲೀಷ್ ಮತ್ತು ಕರ್ಣಾಟಕ ಸಂಗೀತದ ಪಾಂಡಿತ್ಯವನ್ನು ಹೊಂದಿರುವ ನಮ್ಮ ಚಿಕ್ಕ ನಾಯಕರನ್ನು ಕಂಡು ನಮ್ಮ ಕಬ್ ತಮ್ಮಂದಿರೆಲ್ಲರೂ ಎಷ್ಟು ಸಂತೋಷಿಸುತ್ತಾರೆಯೋ ಅದನ್ನು ಬರವಣಿಗೆಯ ಮೂಲಕ ತಿಳಿಸಲು ನಾವು ಶಕ್ಯರಲ್ಲ.

ತುಮಕೂರಿನ ರ್ಯಾಲಿ.

ತುಮಕೂರಿನ ರ್ಯಾಲಿಯು ವಿಚಾರವಾಗಿ ಹೆಚ್ಚು ವಿಷಯಗಳು ಹೊರಬಿದ್ದಿವೆ. ಹಿರಿಯಣ್ಣಂದಿರು ಅಲ್ಲಿನ ಕಾರ್ಯದರ್ಶಿಗಳಿಗೆ ಬರೆದು ವಿಷಯಗಳನ್ನು ತಿಳಿದುಕೊಳ್ಳಬಹುದು. ಫ್ಲೇಗಾಗಿ ಮುಂದುವರಿಯುವುದೆಂದೂ ವರ್ತಮಾನವಿದೆ.

ದಸರಾಮಹೋತ್ಸವ.

ದಸರಾಮಹೋತ್ಸವವು ಮೈಸೂರಿನ—ಕರ್ನಾಟಕದ—ನಾಡಹಬ್ಬವು. ಆ ಕಾಲದಲ್ಲಿ ಎಲ್ಲೆಲ್ಲಿಂದಲೋ ಜನಗಳು ಬಂದು ರಾಜಧಾನಿಯಲ್ಲಿ ಕಿಕ್ಕಿರಿದು ತುಂಬಿರುತ್ತಾರೆ. ಆಗಲೇ ಸ್ಕೌಟುಗಳು ಸಹಾಯಕರಾಗಿರಬೇಕಾಗುತ್ತದೆ. ರೈಲ್ವೆ ಸ್ಟೇಷನ್‌ನಲ್ಲಿ ಜನಗಳಿಗೆ ಟಿಕೀಟುಗಳನ್ನು ತೆಗೆದುಕೊಡುವುದು, ದಾರಿಗಳ ಗುರ್ತನ್ನು ತಿಳಿಸುವುದು, ರೈಲಿನಲ್ಲಿ ಜಾಗಗಳನ್ನೊದಗಿಸಿಕೊಡುವುದು ಮುಂತಾದ ಕೆಲಸವನ್ನು ಕೆಲವು ಜನ ಹಿರಿಯರು ಕೈಕೊಂಡಿದ್ದರು. ಅವರಿಗಿಂತ ಚಿಕ್ಕವರು ಪ್ರದರ್ಶನಾಲಯದಲ್ಲಿ ಕೆಲಸಮಾಡಿದರು. ಹೆಂಗಸರಿಗಾಗಿಯೇ ಏರ್ಪಟ್ಟಿದಿವಸ ಪ್ರದರ್ಶನಾಲಯದಲ್ಲಿ ಕಬ್‌ಗಳೇ ಎಲ್ಲ ಕೆಲಸಗಳನ್ನೂ ಮಾಡಿದರು. ಜಂಬೂ ಸವಾರಿಯಕಾಲದಲ್ಲಿ ಶ್ರೀಮನ್ಮಹಾರಾಜರವರಿಗೂ, ಶ್ರೀಮನ್ಮ ಯುವರಾಜಕುಮಾರರಿಗೂ ಹಾರತುರಾಯಿಗಳನ್ನೊಪ್ಪಿಸಿ ರಾಜಭಕ್ತಿಯನ್ನು ತೋರಿಸಿದರು.

ಇದೇ ಸಂದರ್ಭದಲ್ಲಿ ಕಬ್- ಸ್ಕೌಟುಗಳಲ್ಲಿ ಪಂಥ್ಯಗಳು ನಡೆದವು. ಅಕ್ಟೋಬರ್ 28 ನೇ ತಾರೀಖಿನದಿವಸ ಜನಗಳ ವಿನೋದಕ್ಕಾಗಿ ಒಂದು ಶಿಬಿರಾಗ್ನಿಯು ಏರ್ಪಡಿಸಲ್ಪಟ್ಟಿತು. ದಸರಾಕಾಲದ ಕೆಲಸಗಳೆಲ್ಲವೂ ಸಾಂಗವಾಗಿ ನಡೆದು ಈಗ ಬಾಲಕರೆಲ್ಲರೂ ತುಮಕೂರು ರ್ಯಾಲಿಯಲ್ಲಿನ ಪಂಥ್ಯಗಳಿಗೆ ತಯಾರಾಗುತ್ತಿದ್ದಾರೆಂದು ತಿಳಿದಿರುತ್ತೇವೆ.

ಆದರ ಸ್ವೀಕಾರ.

ಬೆಂಗಳೂರು—ಪರಮಾರ್ಥ ಚಂದ್ರೋದಯ; ನವಜೀವನ (ವಾರಪತ್ರಿಕೆ); New Mysore; ಸರಸ್ವತಿ, ರಂಗಭೂಮಿ, ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ.

ಮಂಗಳೂರು—ಸ್ವದೇಶಾಭಿಮಾನಿ; ತುಣುಕು ಮಿಣಕು.

ಕೂಡಲಿ—ಕಾನಡಾ ವೃತ್ತ.

ಧಾರವಾಡ—ಕನ್ನಡ ಶಾಲಾಪತ್ರಿಕೆ; ಸ್ವಧರ್ಮ.

ಆನಂದನಿಲಯ—ಸದ್ಬೋಧ ಚಂದ್ರಿಕೆ.

ಮೈಸೂರು—ಜೇಸುನಾಥರ ತಿರುಹೃದಯದ ದೂತನು.

NatureCure.

ಹೊಸೂರು—ಆನಂದಚಂದ್ರಿಕೆ.

ವಿಶಾಖಪಟ್ಟಣ—Eastern Herald.

ಹೈದರಾಬಾದು—Hyderabad Scouter.

ವಿಮರ್ಶೆಗಳು.

ರಾಜಭಕ್ತಿ—(ಮೈರೂರು ಮಾಣಿಕ್ಯ)—ಲೇ|| ಚಿ. ಸದಾಶಿವಯ್ಯ—ದೇಶೀಯ ವಿದ್ಯಾಶಾಲಾ ಬೆಂಗಳೂರು. ಕ್ರಯ 0-2-6 ಗದ್ಯ ನಾಟಕ, ಬಾಲಕರು. ಮುಖ್ಯವಾಗಿ ಸ್ಕೌಟುಗಳು, ಕುಮಾರ. ಒಂದು ಗಂಟೆಯಲ್ಲಿ ಆಡಬಹುದಾದ ಚಿಕ್ಕನಾಟಕ, ಇದನ್ನು ಓದಿದವರಿಗೆ ರಾಜಭಕ್ತಿಯೊಡನೆ ದೇಶಭಕ್ತಿಯೂ ಹುಟ್ಟುವಂತಿದೆ. ಮೈಸೂರು ದೇಶದ ಚರಿತ್ರೆಯಲ್ಲಿನ ಒಂದು ಭಾಗವನ್ನು ವಸ್ತುವಾಗಿಟ್ಟು ಈ ನಾಟಕವು ಬರೆಯಲ್ಪಟ್ಟಿದೆ. ಇಂತಹ ಇತರ ದೃಶ್ಯಗಳನ್ನು ಮೈಸೂರು ಚರಿತ್ರೆಯಿಂದಲೇ ಆರಿಸಿ ಕೆಗೆದು ಬಾಲಕರು ಆಗಾಗ್ಗೆ ಆಡಿದ್ದಲ್ಲಿ ಮೈಸೂರು ದೇಶದವರಲ್ಲಿ ರಾಜಭಕ್ತಿಯು ಹೆಚ್ಚಾಗುವುದರಲ್ಲಿ ಸಂಶಯವೇ ಇಲ್ಲ.

ಕ್ಯಾಲೆಂಡರುಗಳು.

ಹುಬ್ಬಳ್ಳಿಯ ಜೀವನಾನಾಧಾರ್ ಡಿಪೋಯವರು ತಮ್ಮ ಎರಡು ವಿಧವಾದ ಕ್ಯಾಲೆಂಡರುಗಳನ್ನು ಕಳುಹಿಸಿಕೊಟ್ಟಿರುವುದಕ್ಕಾಗಿ ಕೃತಜ್ಞರಾಗಿರುತ್ತೇವೆ.

ಮೈಸೂರಿನ ಹಾರ್ಮೋನಿಯಂವ್ಯಾಪಾರಿಗಳಾದ ಎಂ. ಎಸ್. ಸಿದ್ದಪ್ಪನವರು ತಮ್ಮ ಎರಡುವಿಧವಾದ ಕ್ಯಾಲೆಂಡರುಗಳನ್ನು ಪಾಕೆಟ್ ಡೈರಿಯನ್ನು ಕಳುಹಿಸಿರುತ್ತಾರೆ. ಅವುಗಳನ್ನು ಆದರದಿಂದ ಸ್ವೀಕರಿಸುತ್ತೇವೆ. 5 ಆಣೆ ಸ್ಟ್ಯಾಂಪುಗಳನ್ನು ಕಳುಹಿಸಿದವರಿಗೆ ಅವುಗಳನ್ನು ಕಳಿಹಿಸುತ್ತೇವೆಂದು ತಿಳಿಸುತ್ತಾರೆ.

ಮೈಸೂರು ಮಕ್ಕಳು

ಸುಲಭವೆಲೆ! ಅತ್ಯುತ್ತಮತರಹ ಫೌಂಟೆಪೆಗಳು!! ತರಿಸಿ ಪರೀಕ್ಷಿಸಿರಿ!!

1. ವರಲ್ಡ್ಸ್ ವಂಡರ್ ಫೌಂಟೆಪೆ 1ಕ್ಕೆ 3-0-0
2. ಡಿಟೋನಮೂನೆ ಸ್ಕ್ರೂಕ್ಯಾಪಿರುವ ಪೆ 1ಕ್ಕೆ 3-8-0
3. ಹಾರ್ಡ್‌ವೇರ್ ಫೌಂಟೆಪೆ 1 ಕ್ಕೆ 3- 0-0
4. "ಸ್ಪಾರ್ಕ್" ಫೌಂಟೆಪೆ 1 ಕ್ಕೆ 7- 0-0
5. ಬ್ಲಾಕ್‌ಬರ್ಡ್ ಫೌಂಟೆಪೆ 1ಕ್ಕೆ 3-8-0 ಮತ್ತು 3-12-0
6. "ವಾಟರ್‌ಮನ್" ಫೌಂಟೆಪೆ 1 ಕ್ಕೆ 8- 8-0
7. "ವಾಟರ್‌ಮನ್" ಸೆಲ್ಫ್‌ಫಿಲಿಂಗ್ ಫೌಂಟೆಪೆ 1 ಕ್ಕೆ 12- 0-0
8. "ವಾಟರ್‌ಮನ್" ಸೇಫ್ಟಿ ಫೌಂಟೆಪೆ 1 ಕ್ಕೆ 11- 0-0

ಇನ್ನೂ ಅನೇಕತರಹ ಕಡಮೆಕ್ರಯದ ಪೆಗಳು ನಮ್ಮಲ್ಲಿ ದೊರೆಯುತ್ತವೆ. 6 ಪೈ ಸ್ಟಾಂಪ್ ರವಾನಿಸಿ ನಮ್ಮ ಕ್ಯಾಟಲಾಗ್ ತರಿಸಿಸೋಡಿರಿ.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು, ಮೈಸೂರು.

THE MYSORE SCOUT

Have you read,

Our English official Organ **"Mysore Scout"**

If not write for a specimen copy to,

The Manager,
"Mysore Scout."

THE BOY SCOUTS OF MYSORE.

Tippu Sultan's Palace Fort Bangalore City.

MY SCINTIFIC SYSTEM OF GRADUATED PHYSICAL CULTURE

6th Edition, Revised & Enlarged.

It is free—This will show you some of my remarkable achievements in Health—building exercises, many pages with nice photographs of myself and a number of my pupils. Read what they say about my system. All I ask is the price of postage 2 annas. Remember this does not obligate you in any way. So don't delay one minute. Order for a copy at once—now while it is in your mind—Prof. M. V. Krisha Rao, Post Basavangudi, Bangalore City.

ಸಚಿತ್ರ] ಸುಬೋಧ [ಮಾಸಪತ್ರಿಕೆ

ನೂತನ ವರ್ಷಾರಂಭ ವಿಭವ ಸಂ|| ಆಶ್ವಯುಜ,

"ಜಯ ಕರ್ನಾಟಕ" ಮಾಸಪತ್ರಿಕೆಯ ಆಕಾರದ ೪೦ ಪುಟಗಳು.

ಕರ್ನಾಟಕದ ಸುಪ್ರಸಿದ್ಧ ಲೇಖಕರಿಂದ ಬರೆಯಲ್ಪಟ್ಟ ಲೇಖನ, ಕಥೆ, ಕವಿತೆಗಳು, ರಾಜಪುತ್ರಸ್ಥಾನ ವೀರಶ್ರೇಷ್ಠರ ಜೀವನಚರಿತ್ರೆಯನ್ನೊಳಗೊಂಡ **"ರಾಜಸ್ಥಾನ ಕಥಾವಳಿ"** ಎಂಬ ಐತಿಹಾಸಿಕ ಗ್ರಂಥವೂ ಮತ್ತು ಪುರಂದರದಾಸರ ನಾಟಕವೂ ಕ್ರಮಶಃ ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದಾ: ೨—೦—೦, (ಅಂಚೇ ಹಾಸಲು ಉಚಿತ)

ಸುಬೋಧ ಪ್ರಕಟನಾಲಯ,
ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

ಕರ್ನಾಟಕ ಸ್ಕೌಟ್ ಮಾಸಪತ್ರಿಕೆ.

ವಾರ್ಷಿಕ ಚಂದಾ ೧—೮—೦.
ಪೋಷಕರಿಗೆ ,, ೩—೦—೦.

ವ್ಯಾಪಾರಸ್ಥರ ಜಾಹೀರಾತುಗಳ ದರಗಳ ವಿವರವನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕು.

ಮ್ಯಾನೇಜರ್
ಕರ್ನಾಟಕ ಸ್ಕೌಟ್, ಧಾರವಾಡ.

ಕಾದಂಬರೀ ಸಂಗ್ರಹ.

ಈ ಮಾಸಪತ್ರಿಕೆಯಲ್ಲಿ ಧಾರ್ಮಿಕ, ಐತಿಹಾಸಿಕಾದಿ ವಿವಿಧ ರಸಭರಿತ ಕಾದಂಬರಿಗಳೂ, ಗದ್ಯಪದ್ಯಾತ್ಮಕ ನಾನಾ ಲೇಖನಗಳೂ ಪ್ರಕಟವಾಗುವುವು.

ವಾ|| ವರ್ಗಣಿ, ೧—೮—೮,

ಸಂಪಾದಕ,
ಕಾದಂಬರೀ ಸಂಗ್ರಹ,
ಚಾಮರಾಜನಗರ.

'ಮೈಸೂರು ಮಕ್ಕಳು' ಚಿತ್ರಮಾಲೆ
(Mysore Makkalu Pictorial)
1927-1928

ಸುಣುಪಾದ ಕಾಗದದ ಮೇಲೆ ಎರಡು ರಂಗುಗಳಲ್ಲಿ ಮೈಸೂರು ಮಕ್ಕಳ ಚಿತ್ರಗಳನ್ನು ಮುದ್ರಿಸಿ ಪುಸ್ತಕರೂಪದಲ್ಲಿ ಹೊರಡಿಸಲಾಗಿದೆ.

ದಸರಾ ಕಾಲದಲ್ಲಿ ಮಕ್ಕಳಿಗೆ ಈ ಪುಸ್ತಕಗಳನ್ನು ಉಡುಗೆರೆಯಾಗಿ ಕೊಡಲು ಅನುಕೂಲವಾಗಿದೆ. ತಮ್ಮ ದೇಶ, ತಮ್ಮ ಜನವೆಂಬ ಸ್ವಾಭಿಮಾನವು ಮಕ್ಕಳಿಗಿರಬೇಕಾದರೆ ಇದೇ ಉಪಾಯ.

ನಮ್ಮ ಚಂದಾದಾರರಿಗೆ ಮಾತ್ರ ೦-೬-೦, ಇತರರಿಗೆ ೦-೮-೦ ವಿ.ಪಿ. ಖರ್ಚು ಪ್ರತ್ಯೇಕ. ವಿ.ಪಿ. ಅಪೇಕ್ಷಿಸುವವರು ೩ ಆಣೆ ಸ್ಟಾಂಪನ್ನು ಕಳುಹಿಸಬೇಕು. ಮೈಸೂರುಮಕ್ಕಳು ಆಫೀಸು, ಮೈಸೂರು.

ಜೀವನಾಧಾರ ಡಿಪೋ ೫ವರ ಮೂರು ರತ್ನಗಳು

೧. ಜೀವನಾಧಾರ

ಸಣ್ಣ ಬಾಟ್ಲಿ 0—12—0 ದೊಡ್ಡ ಬಾಟ್ಲಿ 1—8—0 ವಿ. ಪಿ. ಚಾರ್ಜ್ ಪ್ರತ್ಯೇಕ.

೨೬-೧೦-೨೭ ಬೊಮ್ಮಗಟ್ಟ.

ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಅನೇಕ ವ್ಯಾಧಿಗಳಿಗೆ ಉಪಯೋಗಿಸಿದ್ದೇನೆ. ಮತ್ತು ಅದು ಗುಣಕೊಡುವ ವಿಷಯದಲ್ಲಿ ತುಂಬಾ ತೃಪ್ತಿಹೊಂದಿದ್ದೇನೆ. ನಿಜವಾಗಿ ಅದು ಉತ್ಕೃಷ್ಟ ಔಷಧವಿರುತ್ತದೆ. ಮತ್ತು ಅದು ಜಗತ್ತಿಗೆ ಒಂದು ಲಾಭವೇ ಆಗಿರುತ್ತದೆ. ಮೈಸೂರು ಪ್ರದರ್ಶನದಲ್ಲಿ ಜೀವನಾಧಾರವು ಬಹುಮಾನದ ಇನಾಮನ್ನು ಹೊಂದಿದ್ದನ್ನು ತಿಳಿಸಲು ಅತ್ಯಂತ ಸಂತೋಷಪಡುತ್ತೇನೆ. ಜೀವನಾಧಾರವು ಒಂದು ಸೀಸೆಯು ಪ್ರತಿಯೊಂದು ಮನೆಯಲ್ಲಿ ಇಡುವುದಕ್ಕೆ ನಾನು ಉಪದೇಶಮಾಡುವೆನು. ಕಠಿಣ ಪ್ರಸಂಗದಲ್ಲಿ ಒಬ್ಬ ಡಾಕ್ಟರನಂತೆ ಉಪಯೋಗಬೀಳುತ್ತದೆ.

ಬಿ. ಎಚ್. ರಾಮಚಂದ್ರರಾವ್,
ಚೇರಮನ್, ಗ್ರಾಮಪಂಚಾಯಿತ.

ನನ್ನ ಕುದುರೆಯು ಮೈಗೀ ಎಂಬ ತ್ವಚರೋಗದಿಂದ ಬಾಧಿತವಾಗಿತ್ತು. ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಕಳೆದ ೧೫ ದಿವಸಗಳಿಂದ ಉಪಯೋಗಿಸುತ್ತಿರುವೆನು. ಮತ್ತು ಬಹಳೇ ಗುಣಕೊಟ್ಟಿರುವುದು.

೨-೧೧-೨೭,
ಮೈಸೂರು.

ಸಿದ್ಧರಾಜ ಅರಸು.
ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್.

೨. ಗಜಕರ್ಣದ ತೈಲ.

ಬಾಟ್ಲಿ ೧ ಕ್ಕೆ 0 12 0 ಪ್ಯಾಕಿಂಗ್ ಪೋಸ್ಟೇಜ್ ಪ್ರತ್ಯೇಕ.

ಧಾರವಾಡ, ೧೦-೨-೨೮.

ನಾನು ನಿಮ್ಮ ಗಜಕರ್ಣದ ತೈಲವನ್ನು ತಲೆಯಲ್ಲಿ ಕೂದಲುಗಳು ಉದುರಿರುವದಕ್ಕೆ (Pach of baldness) ಉಪಯೋಗಿಸುತ್ತಿದ್ದೇನೆ. ಅದು ಈಗಾಗಲೇ ಬಹಳ ಗುಣಕೊಟ್ಟಿರುವುದು. ಕಾರಣ ಈ ಪತ್ರಮುಟ್ಟಿದ ಕೂಡ್ಲೆ 2 ಬಾಟ್ಲಿ ಗಜಕರ್ಣದ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

ರಾಮರಾವ್ ಎನ್. ದೇಸಾಯಿ.

ಅನೇಕರು ಅನುಭವಿಸುತ್ತಿರುವ ನವೆ, ಗಜಕರ್ಣ, ಹುಳಕಡ್ಡಿ, ಕಜ್ಜಿ, ಉಗುರುಸುತ್ತು, ಹಳೇ ಇಸಬು, ಕತ್ತಿ ಘಾಯ, ಮತ್ತು ಎಲ್ಲಾ ತರಹದ ಚರ್ಮವ್ಯಾಧಿಗಳಿಗೆ ಗಜಕರ್ಣದ ತೈಲವನ್ನು ಹಚ್ಚಿದ 2-3 ದಿನಗಳಲ್ಲಿ ಗುಣಮಾಡಿಕೊಳ್ಳಬಹುದು. ಇದರಲ್ಲಿ ಮುಖ್ಯವಾದ ಗುಣವೇನೆಂದರೆ, ಗಾಯ ಅಥವಾ ಹುಣ್ಣಿನಿಂದ ಬರುವ ಕಲೆಗಳನ್ನು ತೆಗೆದುಹಾಕಿ ಪುನಃ ಮೊದಲಿನ ಚರ್ಮದ ಬಣ್ಣಕ್ಕೆ ತರುವದು.

೩. ಶತಮೂಲಿಕಾ ಸಮ್ಮೋಳನ ಭೃಂಗಾಮಲಕ ತೈಲ.

ಬಾಟ್ಲಿ 1ಕ್ಕೆ 0 8 0. ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

ಈ ತೈಲವು ಆಯುರ್ವೇದ ಶಾಸ್ತ್ರೋಕ್ತವಾದ ಶತಮೂಲಿಕಾಸಂಗ್ರಹವನ್ನು ಪಾಶ್ಚಾತ್ಯ ರಸಾಯನಶಾಸ್ತ್ರ ರೀತ್ಯಾ (Latest Scientific Process) ಶುದ್ಧಿಯಾದ ತೈಲದಲ್ಲಿ ಪಕ್ವಮಾಡಿ ವನಸ್ಪತಿ ದ್ರವ್ಯಗಳ ಪ್ರತಿಯೊಂದು ಗುಣಾಂಶವನ್ನೂ ಭಾವನೆಮಾಡಿ ತಯಾರಿಸಿದೆ. ಇದನ್ನು ಪ್ರತಿದಿನವೂ ತಲೆಗೆ ಲೇಪಿಸುವುದರಿಂದ ಜ್ಞಾಪಕಶಕ್ತಿಯು ಅಭಿವೃದ್ಧಿಯಾಗಿ ಬುದ್ಧಿಭ್ರಮೆಯು ನಾಶವಾಗುತ್ತದೆ. ನೇತ್ರವ್ಯಾಧಿಗಳು ಗುಣವಾಗಿ ಕಣ್ಣುಗಳಿಗೂ, ಮುಖಕ್ಕೂ ಕಾಂತಿಯು ಬರುವುದು.

ಮೈಸೂರು ಬ್ರಾಂಚ್—ಇಲವಾಲ ರೋಡು.

ಜೀವನಾಧಾರ ಡಿಪೋ, ಹುಬ್ಬಳ್ಳಿ.

ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

"ಮೈಸೂರು ಸ್ಕೌಟ್" ನ ಕನ್ನಡಭಾಗವು ಇದರೊಡನೆ ಸಮಾವಿಷ್ಟವಾಗಿದೆ.

ಮೈಸೂರು ಮಕ್ಕಳು

॥ ಓದುವ ಹೆಣ್ಗಳು ಗಂಡುಗಳುಲಿವರು, ಹರುಷವಬೀರುತ ಓಡ್ಯಾಡಿ ॥
॥ ನಾಲ್ಕಡಿ ಕೃಷ್ಣನ ಕೊಂಡಾಡಿ ॥

೨ನೆಯ ವರ್ಷ.] ವಿಭವ ಸಂ|| ದ ಮಾರ್ಗಶಿರ ಹುಣ್ಣಿವೆ—ಡಿಸಂಬರ್ ೧೯೨೮ [೧೫ನೆಯ ಹೆ

ಮೈಸೂರು ಸ್ಕೌಟುಮಂಡಳಿಯ ಕನ್ನಡ ಮಾಸಪತ್ರಿಕೆ.

ಸಂಗತಿಗಳ ಸರಣಿ.

೧. ಮೈಸೂರು ಮಕ್ಕಳು ಚಿತ್ರಪರಿಚಯ—ನವಾಬ್ ಹೈದರಾಲಿ.
೨. ಮೈಸೂರು ಮಕ್ಕಳ ಜೀವನಚರಿತ್ರೆ—ನವಾಬ್ ಹೈದರಾಲಿ
೩. ಕೊರಳಪಟ್ಟಿ (ಗಾನ) ಲೇ|| ಹಿರಿಯಣ್ಣ ನಾಗಾಜೂಯಿಸ.
ಒಂದು ಹೊಸ ಘರ್ಜನೆ.
೪. ಕಥೆಗಳ ಕಟ್ಟು—ಪೂರು.
೫. ಮೈಸೂರು ಚರಿತ್ರೆಯ ಕಥೆಗಳು—ಲೆ|| ಬಿ. ನಾ. ರಾ.
೬. ಕಬ್‌ಗಳೊಡನೆ ನಮ್ಮದೊಂದು ಹರಟೆ.
೭. ಕಬ್‌ಗಳು ಕಲಿಯಬೇಕಾದುದ
ಆಟದ ಬೈಲು.
೮. ಹಿರಿಯಣ್ಣಂದಿರಿಗಾಗಿ.
೯. ಆನಂದ—(ಪದ್ಯ) ಲೆ|| ಶ್ರೀಯ
೧೦. ಬಿಡಿನುಡಿಗಳು.
೧೧. ಗೃಹಶಿಕ್ಷಣ.
೧೨. ಸ್ಕೌಟು ಸುದ್ದಿಗಳು—ವಿಮರ್ಶೆ—ಸ್ಫೂ

ಅಲ್ಲಲ್ಲಿ ಕೆಲಕೆಲವು

ಸಂಪಾದಕರು :
ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.
ಆರ್. ಕೆ. ಲಕ್ಕೂರ್.

ವಾರ್ಷಿಕಚಂದಾ ೧—೦—೦ (ಅಂಚೆಹಾಸಲು ವಿನಾ)
ಸ್ಕೂಲು ಮತ್ತು ವಾಚನಾಲಯ ಗಳಿಗೆ ರೂ. ೨.

ಮೈಸೂರು ಮಕ್ಕಳು ಆಫೀಸ್,
ಮೈಸೂರು.

JOIN
THE EAST & WEST CORESPONDENCE & EXCHANGE CLUB.

MEMBERS GET THE BENIFIT OF THE EAST & WEST JOURNAL.

For Particulars Write to:—

The Director,
H. L. SAXENA J. P. S.
Parade, Cawnpore (U. P.)

SCHOOL FOLK (A Monthly Magazine)
Subscription Rs. 1—8—0 Per year.
Manager,
SCHOOL FOLK, Tumkur.

ನಿಮಗೆ ಉತ್ತಮರಾದ ವೈದ್ಯರು ಬೇಕಾದರೆ—ಔಷಧಿಗಳಿಗಾಗಿ ನೂರಾರು ರೂಪಾಯಿಗಳು ಸುರಿಯುತ್ತಿದ್ದರೆ ಇನ್ನು ಮುಂದೆ ಹಾಗೆ ಮಾಡದೆ **ಆರೋಗ್ಯಚಂದ್ರಿಕೆಗೆ** ಚಂದಾದಾರರಾಗಿ.
ವಾ|| ಚಂ|| ೧—೮—೦
323, ತಂಬುಚೆಟ್ಟಿ ಬೀದಿ, ಮದ್ರಾಸ್.

THE EASTERN HERALD.
The only Psychic, Astrological, Vedantic & Occult, Journal in India.
Annual Subscription Rs. 2.
Editor,
THE EASTERN HERALD,
Vizianagaram City, (B. N. Ry

ಕಾದಂಬರೀಸಂಗ್ರಹ (ಮಾಸಪತ್ರಿಕೆ)
ವಾ|| ಚಂದಾ ೧—೦—೦
ಕಾದಂಬರೀಸಂಗ್ರಹ ಆಫೀಸ್, ಚಾಮರಾಜನಗರ

K. V. RAMA SETTY & Co.,
DEALERS IN SCHOOL & COLLEGE BOOKS.
STOCKISTS OF
THE BANGALORE PRESS STATIONERY.
Agents of—MYSORE MAKKALU.
Call personally or write to us
at, Lansdowne Buildings, Mysor

EFFECTIVE MEDICINES

CAN BE HAD FROM ME

	Rs.	A.
Leprosy Emulsion	7	6
Tonic Pills (100 Pills)	4	8
Infantile Convulsions	3	12
Anticorpulence 3	0	2
Piles Ointment or Powder; Wind killing Oil, Emamagogue Pill, Ague Syrup	2	0
Headache Remedy; White Leprosy, Guine Worm Paste	1	14
Digestive Pills; Jaundice Powder; Hair-dye	1	9
Tooth Powder	0	5
Saffron Per Tola	2	12

Dia[illegible] & Cholera Dispeller, Cough Pills, Ear Drops, Scropion Sting Semedy, Dysentry ....
Fever Dispeller, Drops; Pills; Infant Protector, Cough Syrup; Eye Drops, Hair Eestare, Sarso Dyne (Blood Purifier), Dime Syrups, Worm Powder, Oil Pepper Mints, Ringworm Cakes
Headache Powders
Pepper Mint Essence; Essence of Camphor
Musk, Pudina and Anisi, Ringworm Ointment, doz. bottles

Packing and Postage Extra.
Dr. GOPINATH KRISHNAJI KSHATRIYA, GIRGAON POST, BOMBAY.

ಮೈಸೂರು ಮಕ್ಕಳು

ನವಾಬ್ ಹೈದರಾಲಿ.

ನವಾಬ ಹೈದರಾಲಿ.

ಮಗೂ, ಶ್ರೀರಂಗಪಟ್ಟಣವು ಈಗ್ಯೆ ಸಮಾರು 200 ವರ್ಷಗಳ ಹಿಂದೆ ಈಗಿರುವಹಾಗೆ ಒಂದು ಚಿಕ್ಕ ಗ್ರಾಮವಾಗಿರಲಿಲ್ಲ. ದಕ್ಷಿಣ ದೇಶದಲ್ಲೆಲ್ಲಾ ಸುಪ್ರಸಿದ್ಧವಾದ ಪಟ್ಟಣವಾಗಿದ್ದಿತು. ಈಗ ಮೈಸೂರು ಪಟ್ಟಣದಲ್ಲಿರುವುದಕ್ಕಿಂತ ಹೆಚ್ಚು ಸಂಖ್ಯೆಯ ಪ್ರಜೆಗಳು ಆಗ ಶ್ರೀರಂಗ ಪಟ್ಟಣದಲ್ಲಿದ್ದರು. ಈಗ ಮೈಸೂರು ಇರುವ ಹಾಗೆಯೇ ಆಗ ಶ್ರೀರಂಗ ಪಟ್ಟಣವು ಮೈಸೂರುದೇಶದ ರಾಜಧಾನಿಯಾಗಿದ್ದಿತು. ಆಗ, ಅಂದರೆ ಸುಮಾರು 1,750, ನೆಯ ಸುಮಾರಿನಲ್ಲಿ ಆಳುತ್ತಿದ್ದ ರಾಜರು ಅಷ್ಟು ಶಕ್ತರಾಗಿರಲಿಲ್ಲ. ಆದುದರಿಂದ ಮುಖ್ಯ ಸರದಾರರಾದ ದೇವರಾಜಯ್ಯ ಮತ್ತು ನಂಜರಾಜಯ್ಯ ಎಂಬಿಬ್ಬರು ರಾಜ್ಯದ ಆಡಳಿತವನ್ನೆಲ್ಲಾ ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರು.

ಈ ಸಮಯದಲ್ಲಿ ದಳವಾಯಿ ನಂಜರಾಜಯ್ಯನು ಆರ್ಕಾಟಿನ ಮಹಮ್ಮದಾಲಿಯ ಸಹಾಯಕ್ಕೆ ತಿರುಚನಾಪಳ್ಳಿಗೆ ಹೋಗಿದ್ದನು. ಆ ತಿರುಚನಾಪಳ್ಳಿಯ ಯುದ್ಧದಲ್ಲಿ, ಮೈಸೂರು ಸೈನ್ಯದಲ್ಲಿ ಒಬ್ಬ ಮಹಮ್ಮದೀಯ ಸೈನಿಕನು ಬಹಳ ಪರಾಕ್ರಮದಿಂದ ಯುದ್ಧಮಾಡಿ ಹೆಸರು ಪಡೆದನು. ಆತನೇ ಹೈದರಾಲಿಯು.

ಹೈದರಾಲಿಯು ಕೋಲಾರ ಜಿಲ್ಲೆಯ ಬೂದಿಕೋಟೆಯಲ್ಲಿ ಹುಟ್ಟಿದನೆಂದು ಕೆಲವರು ಹೇಳುತ್ತಾರೆ. ಇವನು ಯೌವನವನೆಲ್ಲಾ ಸೈನಿಕನಾಗಿ ಕಳೆದಂತೆ ತೋರುತ್ತದೆ. ಕಾಲಕ್ರಮೇಣ ಇವನ ಧೈರ್ಯವನ್ನು ನೋಡಿ ನಂಜರಾಜಯ್ಯನು ಇವನಿಗೆ ಬಹಳ ಪ್ರೋತ್ಸಾಹವನ್ನುಕೊಟ್ಟನು. ಆದರೆ ಚತುರಿಯಾದ ಹೈದರನು ಸಮಯವನ್ನು ಕಾದಿದ್ದು 1,760 ರಲ್ಲಿ ದಳವಾಯಿಗಳನ್ನು ಸೋಲಿಸಿ ತಾನೇ ರಾಜ್ಯವನ್ನು ವಹಿಸಿಕೊಂಡು "ನವಾಬ್ ಹೈದರ್ ಆಲಿ ಬಹದ್ದೂರ್" ಎಂಬುದಾಗಿ ಹೆಸರಿಟ್ಟುಕೊಂಡನು.

ಇವನು ರಾಜನಾದೊಡನೆಯೇ ಸೈನ್ಯವನ್ನು ಸರಿಪಡಿಸುವುದಕ್ಕೋಸ್ಕರ ಫ್ರೆಂಚಸರದಾರರನ್ನು ನೇಮಿಸಿಕೊಂಡನು. ಬಳಿಕ ಆ ಸೈನ್ಯವನ್ನು ತೆಗೆದುಕೊಂಡು ಘಟ್ಟದ ಕೆಳಗಿಳಿದು ಇಂಗ್ಲಿಷರ ರಾಜ್ಯವನ್ನು ಕೊಳ್ಳೆ ಹೊಡೆದನು. ಇಂಗ್ಲಿಷರ ಕರ್ನಲ್ ಸ್ಮಿತ್ ಎಂಬುವನು ಆಗ ಇವನನ್ನು ಸೋಲಿಸಿಬಿಟ್ಟನು. ಆದರೆ ಹೈದರನು ಸ್ವಲ್ಪವೂ ಎದೆಗುಂದದೆ ಆರುನೂರರ ಕುದುರೆ ಸೈನ್ಯವನ್ನು ತೆಗೆದುಕೊಂಡು ಬಂದು ಇಂಗ್ಲಿಷರನ್ನು ಸೋಲಿಸಿ ಮದರಾಸಿನ ಮೇಲ್ಗಡೆಗೇ ಬಂದುಬಿಟ್ಟನು. ಆಗ ಇಂಗ್ಲಿಷರು ತಮ್ಮ ಒಪ್ಪಂದದ ಪ್ರಕಾರ ಯಾರಿಗೆ ತೊಂದರೆಬಂದರೂ ಒಬ್ಬರಿಗೊಬ್ಬರು ಸಹಾಯಮಾಡಬೇಕಾಯಿತು.

ಆದರೆ ಹೈದರನಿಗೆ ಕಷ್ಟ ಬಂದಾಗ ಇಂಗ್ಲಿಷರು ಹಾಗೆ ಮಾಡಲಿಲ್ಲ. ಯಾಕೆಂದರೆ, ಮರುವರ್ಷದಲ್ಲಿ ಪೇಶ್ವೆ ಮಾಧವರಾಯನು ಹೈದರನಮೇಲೆ ದಂಡೆತ್ತಿ ಬಂದನು. ಆಗ ಒಪ್ಪಂದದ ಪ್ರಕಾರ ಹೈದರನ ಸಹಾಯಮಾಡಿರೆಂದು ಇಂಗ್ಲಿಷರನ್ನು ಕೇಳಿದನು. ಆಗ ಇಂಗ್ಲಿಷರು ಸಹಾಯಮಾಡಲಿಲ್ಲ. ಹೈದರನು ಪೇಶ್ವೆಗೆ ಹಣವನ್ನುಕೊಟ್ಟು ಸಮಾಧಾನಮಾಡಿ ಕಳುಹಿಸಿಬಿಟ್ಟನು. ಆಗ ಇಂಗ್ಲಿಷರು ಮಾಡಿದುದಕ್ಕೆ ಅವನಿಗೆ ಬಹಳ ಕೋಪಬಂತು. ಸಾಲದುದಕ್ಕೆ ಇಂಗ್ಲಿಷರು ತಮ್ಮದಾಗುಂಟೂರಿಗೆ ಹೋಗುವುದಕ್ಕೂ, ಫ್ರೆಂಚರ ಮಾಹೆಯನ್ನು ಹಿಡಿಯಹೋಗುವುದಕ್ಕೂ ಹೈದರ ರಾಜ್ಯದಲ್ಲಿ ಅಪ್ಪಣೆಯಿಲ್ಲದೆ ನುಗ್ಗಿಹೋದರು. ಆದುದರಿಂದ ಹೈದರನು ಇಂಗ್ಲಿಷರಮೇಲೆ ಯುದ್ಧವನ್ನು ಆರಂಭಿಸಿದನು.

ಪಾಲಿಲೋರು ಬಳಿಯಲ್ಲಿ ಇಂಗ್ಲಿಷರ ಸೈನ್ಯವು ಸಿಕ್ಕಿತು. ಪ್ರಥಮದಲ್ಲಿ ಹೈದರನಿಗೇ ಜಯವಾದರೂ ಇಂಗ್ಲಿಷರ ಅಧಿಕಾರಿಯಾದ ಕೂಟನು ಹೈದರನನ್ನು ಸೋಲಿಸಿಬಿಟ್ಟನು. ಆದರೆ ಹೈದರನು ಧೈರ್ಯಗೆಡದೆ ವೆಲ್ಲೂರಿನ ಬಳಿಯಲ್ಲಿ ಡಚ್ಚರಸೇನೆಯನ್ನೂ ಫ್ರೆಂಚರಸೇನೆಯನ್ನೂ ಸಹಾಯಕ್ಕೆ ಕರೆಯಿಸಿಕೊಂಡು ಯುದ್ಧಾಭಿಮುಖನಾದನು. ಆಗ ಆಗಲೇ ಮಳೆಗಾಲವು ಪ್ರಾರಂಭವಾದುದರಿಂದ ಅವನು ಯುದ್ಧವನ್ನು ನಿಲ್ಲಿಸಿ ಆರ್ಕಾಟಿಗೆ ಹೋದನು. ಇಲ್ಲಿರುವಾಗಲೇ ಅವನಿಗೆ ಬೆನ್ನು ಫಣಿಯೆದ್ದು ಅವನು ಸತ್ತುಹೋದನು. ಬಳಿಕ ಅವನ ಮಗನಾದ ಟಿಪ್ಪುವು ರಾಜ್ಯವನ್ನು ವಹಿಸಿದನು. ಆದರೆ ಆ ಕಥೆಯೇ ಬೇರೆ.

ಹೈದರನಿಗೆ ಓದುಬರಹ ಬರದಿದ್ದರೂ ಬಹು ವಿವೇಕದಿಂದಲೂ ದಕ್ಷತೆಯಿಂದಲೂ ರಾಜ್ಯವನ್ನು ಆಳಿದನು. ಇವನಿಗೆ ಅನ್ಯಮತದ್ವೇಷವಿರಲಿಲ್ಲ. ಅನೇಕರು ಬ್ರಾಹ್ಮಣರೇ ಮೊದಲಾದ ಹಿಂದುಗಳು ಈಗಲೂ ಇವನು ಪ್ರಖ್ಯಾತರಾದ ಸಪ್ತಋಷಿಗಳಲ್ಲೊಬ್ಬನೆಂದೂ, ಕಾರಣಾಂತರದಿಂದ ಯವನನಾಗಿ ಭೂಮಿಯಲ್ಲಿ ಹುಟ್ಟಬೇಕಾಯಿತೆಂದೂ, ಹೇಳುತ್ತಿರುವರು. ಇದೊಂದರಿಂದಲೇ ಹಿಂದುಗಳಿಗೆ ಇವನಲ್ಲಿ ಎಷ್ಟು ಗೌರವವು ಇದ್ದಿತೆಂದು ಹೇಳಬಹುದು. ಯುದ್ಧದಲ್ಲಿ ಮಹಾ ಗಟ್ಟಿಗನಾಗಿದ್ದನು. ಇವನಂತಹ ಧೈರ್ಯಶಾಲಿಗಳೇ ಅಪರೂಪ. ಅಂತೂ, ಯಾವ ಯಾವ ಕಾರಣದಿಂದಲೇ ಆಗಲಿ ಇವನು ಮೈಸೂರು ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದನು. ಹೈದರನೂ ನಮ್ಮ ತಾಯ್ನಾಡ ಮಡಿಲಲ್ಲಿ ಸೇರಿರುವ ಮಹನೀಯನೊಬ್ಬನು.

ಸ್ವೀಕಾರ—ಪತ್ರಿಕೆಗಳು.

ಬೆಂಗಳೂರು—Garland, ಮೈಸೂರು ವ್ಯವಸಾಯಶೋಧಕ ಸಂಘದ ಪತ್ರಿಕೆ, ವ್ಯಾಣಿಜಯೆ, ಅರ್ಥಸಾಧಕಪತ್ರಿಕೆ.

ಮಂಗಳೂರು—ವೇದಸಂದೇಶ, ಸತ್ಯವ್ರತ.

ಬೆಳಗಾಂ—ಸುಧಾರಕ.

ಬೊಂಬಾಯಿ—ಮಧ್ವಮತಪ್ರಕಾಶ.

ಗಾನ.

ಕೊರಳಪಟ್ಟ (ನೆಕ್‌ಸ್ಕಾರ್ಫ್)

ಗಾಯಕಟ್ಟುವ ಆರುವೆ |
ಸ್ಕೌಟರ ಕೊರಳಲಿರುವೇ ||ಪ||

ಗಾಯವಾಗಲು ಬರುವೆ |
ಮದ್ದಿನಜೊತೆ ನೀ ಬರುವೆ |
ಆಪ್ತನಿಗೂ ಮಿಗಿಲಾಗಿರುವೆ |
ಸೇವೆಗೈಯ್ವೊಡೆ ಮೊದಲುಬರುವೇ ||೧||

ಆಟದಲಿ ನೆರವಾಗುವೆ |
ಪಾಠಕಲಿಸಲು ಬರುವೆ |
ಸ್ಕೌಟರಕೊರಳಲಿ ಇರುವೆ |
ಸಾಟಿನಿಸಗಾರಲೆ ಆರುವೇ ||೨||

ಜಾಡ್ಯಜೊತೆನೀಬಂದೆ |
ನಿಯಮದಿ ವರ್ತಿಸೆಂದೆ |
ಸೇವಾಕಾರ್ಯದಿ ನಿಲುಯೆಂದೆ |
ನಿನ್ನಧ್ಯೇಯವದೆಂದೇ ||೩||

ಕುತ್ತಿಗೆಯಮೇಲೇರೆ |
ಗಂಟಿರಡರಿಂ ಮೆರೆವೆ |
ತುದಿಯಗಂಟಿಂದುಪಕಾರ
ನೀಮೊಡೆಸುತಲೆಸುವೇ ||೪||

ವೃದ್ಧರಿತಿಹಿರ್ನಿನ್ನ
ಬಹುದುಪಯೋಗಗಳ
ಪ್ರಥಮಸಹಾಯನೆ ನಿನ್ನ
ಪರಮೋಪರತರಕಾರ್ಯ ||೫||

ನಿತ್ಯಭಕ್ತಿ, ಸಹಾಯ
ಸಮತೆವಿನಯ, ದಯೆ |
ನಿಷ್ಠೆಯತೆ ಹಾಸ, ಮಿತವ್ಯಯ |
ಸರ್ವಶುದ್ಧಿಯಿಂದಿರೆಂದೇ ||೬||

ಕೂಡಲಿ ನಾಗಶರ್ಮ,
ಚಮೂಪತಿ, ಆಯನೂರು.

ಹೊಸ ಘರ್ಜನೆ.

ರಾಗಿಮುದ್ದೆ, ರಾಗಿಮುದ್ದೆ ; ತಿಂದು ತಿಂದು, ತಿಂದು ತಿಂದು ;
ರಾಗಿಮುದ್ದೆ, ರಾಗಿಮುದ್ದೆ ; ತಿಂದು ತಿಂದು, ತಿಂದು ತಿಂದು ;
ಗಟ್ಟಿಯಾಗಿ, ಗಟ್ಟಿಯಾಗಿ,

ಇ—ದ್ದೆಂ—ವ್ಹಂ.

ಈಗ ಈಗ, ಸಪ್ಪೆ ಅಕ್ಕಿ, ತಿಂದು ತಿಂದು,
ಕ್ಷೀಣವಾಗಿ, ಹೀನವಾಗಿ

ಈ ೧ ೧ ೧ ೧ ೧

ಆದರೆ!

ಸ್ಕೌಟಿಂಗ್ ಸೇರಿ, ಕಾಡಿಗ್ಹೋಗಿ, ಕಸರತ್ ಮಾಡಿ,

ರು—ಸ್ಟಂ ;

ಭಲ್ ಭಲ್ ಭಲ್

ರು—ಸ್ಟಂ ;

ಉಷ್ಹೇ!

[ಸೂಚನೆ:—ಈ ಘರ್ಜನೆಯನ್ನು ನಮ್ಮ ಗೆಳೆಯರಲ್ಲೊಬ್ಬರಾದ ಮು|| ವಿ. ಎಸ್. ರಾಮಚಂದ್ರರಾಯರು ಮೊದಲು ಹೇಳಿಕೊಟ್ಟರು. ಈಗಿರುವ ಮೈಸೂರು ಬಾಲಚಮುಗಳ ವೀರಘರ್ಜನೆಗಳಲ್ಲಿ ಸೊಗಸಾದುದಕ್ಕೆ ಬಹುಮಾನವನ್ನು ಕೊಡುವುದಾದರೆ ನಾವು ಈ ಘರ್ಜನೆಗೆ ಪ್ರಥಮಬಹುಮಾನವನ್ನು ನಿಸ್ಸಂದೇಹವಾಗಿ ಕೊಡುವೆವು

ಘರ್ಜನೆಯು ಮೂರುಭಾಗವಾಗಿದೆ. ಮೊದಲನೆಯ ಭಾಗದಲ್ಲಿ, ಪೂರ್ವದಲ್ಲಿ ನಾವು ಹೇಗಿದ್ದೆವೆಂಬುದನ್ನು ತಿಳಿಸಿದೆ. ಎರಡನೆಯದರಲ್ಲಿ ಈಗಿನಕಾಲದಲ್ಲಿರುವ ನಿಶ್ಶಕ್ತಸಮಾಜವು ವರ್ಣಿಸಲ್ಪಟ್ಟಿದೆ. ಮೂರನೆಯದರಲ್ಲಿ ಬಾಲನು ಸ್ಕೌಟುದಳಕ್ಕೆ ಸೇರಿ ಹೊಂದಬಹುದಾದ ಲಾಭವು ಕಾಣಿಸಲ್ಪಟ್ಟಿದೆ.

ಸ್ವರವ್ಯತ್ಯಾಸವನ್ನು ಅಕ್ಷರಗಳ ಗಾತ್ರವ್ಯತ್ಯಾಸದಿಂದ ಸೂಚಿಸಿದ್ದೇವೆ. ತಾಳಕ್ಕೆ ಸರಿಯಾಗಿ ಘರ್ಜಿಸಬೇಕು. ಈಗ 'ರಾಗಿಮುದ್ದೆ, ರಾಗಿಮುದ್ದೆ' ಎಂಬ ಪದಗಳನ್ನು 'ಒಂದು ಎರಡು, ಒಂದು ಎರಡು' ಎಂಬ ಪದಗಳನ್ನು ಜಾಗ್ರತೆಯಾಗಿ ಹೇಳುವಷ್ಟು ಹೊತ್ತಿನಲ್ಲಿ ಹೇಳಬೇಕು. ಒಂದೆರಡಾವೃತ್ತಿ ಹೇಳಿದರೆ ಗೊತ್ತಾಗುತ್ತದೆ. ಕನ್ನಡದಲ್ಲಿ ಉಷ್ಹೇ! ಎಂದರೆ ಜೈ! ಎಂದು ಅರ್ಥ. ಬಹಳ ಪೂರ್ವಕಾಲದಿಂದಲೂ ಕರ್ನಾಟಕರಾಜರಿಗೆ ಜಯಕಾರವನ್ನು ಹೇಳುವಾಗ ಉಷ್ಹೇ ಎಂದು ಕೂಗುತ್ತಿದ್ದರು.

ಸಂ. ಮೈ:ಮ.]

ಕಥೆಗಳ ಕಟ್ಟು.

(ಕನಕದ ಕುಂಚಿ.)

ಪೂರು.

ಮಗೂ, ತಂದೆತಾಯಿಗಳ ಮಾತಿನಲ್ಲಿ ತುಂಬಾ ಗೌರವವಿರಬೇಕು. ಪೂರ್ವದಲ್ಲಿದ್ದ ಅನೇಕ ಮಹರ್ಷಿಗಳು ತಪಸ್ಸನ್ನು ಮಾಡಿ ದೇವರನ್ನು ಕಣ್ಣಾರೆ ಕಂಡಿದ್ದರಂತೆ. ಅದು ನಮಗೆಲ್ಲರಿಗೂ ಸಾಧ್ಯವಾಗಿರಲಾರದು. ಆದರೆ ನಮಗೆ ಕಣ್ಣೆದುರಿಗಿರುವ ದೇವರು ಒಬ್ಬರುಂಟು. ಆ ದೇವರು ಯಾರೆಂದರೆ ನಮ್ಮ ತಂದೆತಾಯಿಂದಿರು. ಅಂತಹ ದೇವಸಮಾನರಾದ ತಂದೆ ತಾಯಿಂದಿರ ಮಾತೆಂದರೆ ಅದನ್ನು ಸಾಧ್ಯವಾದ ಮಟ್ಟಿಗೂ ನಾವು ನೆರವೇರಿಸಲು ಪ್ರಯತ್ನಮಾಡಬೇಕು. ಈಗ ಶ್ರೀರಾಮಚಂದ್ರಸಿರಲಿಲ್ಲವೇ? ಆತನು ಎಷ್ಟು ಕಷ್ಟಗಳುಂಟಾದರೂ ಲೆಕ್ಕಿಸದೆ ತಂದೆಯ ಮಾತನ್ನು ಕಾಪಾಡಿದನು. ಭೀಷ್ಮನು ತಂದೆಗೋಸ್ಕರವೇ ಮರಣಪರ್ಯಂತರವೂ ಬ್ರಹ್ಮಚಾರಿಯಾಗಿದ್ದನು. ಹಾಗೆಯೇ ಇತರರೂ ಸಹ ತಂದೆಯ ಮಾತಿಗೋಸ್ಕರನಾಗಿ ಎಷ್ಟು ಕಷ್ಟವನ್ನಾದರೂ ಅನುಭವಿಸಿ ನಮ್ಮ ತಾಯ್ನಾಡಿನಲ್ಲಿ ಎಷ್ಟೋ ಮಹನೀಯರು ಆಗಿಹೋದರು. ಅಂತಹ ಪುಣ್ಯವಂತರಲ್ಲಿ ಒಬ್ಬನಾದ ಪೂರುಮಹನೀಯನ ಕಥೆಯನ್ನು ಹೇಳುತ್ತೇನೆ.

ಪೂರ್ವದಲ್ಲಿ ಯಯಾತಿ ಎಂಬ ಒಬ್ಬ ರಾಜನು ನಮ್ಮ ಈ ಭರತ ಖಂಡದಲ್ಲಿ ಆಳುತ್ತಿದ್ದನು. ಈತನು ವೃಷಪರ್ಣನೆಂಬ ರಾಜನ ಮಗಳಾದ ಶರ್ಮಿಷ್ಠೆ ಎಂಬ ರಾಜಗುವರಿಯನ್ನು ಲಗ್ನವಾಡಿಕೊಂಡಿದ್ದನು. ಅಲ್ಲದೆ, ಈತನಿಗೆ ಇನ್ನೊಬ್ಬಳೂ ಹೆಂಡತಿ ಇದ್ದಳು. ಈಕೆಯ ಹೆಸರು ದೇವಯಾನಿ ಎಂದು. ಈ ದೇವಯಾನಿಯು ಶುಕ್ರಾಚಾರ್ಯರ ಮಗಳು ಈ ದೇವಯಾನಿಗೆ ಸವತಿಯಾದ ಶರ್ಮಿಷ್ಠೆಯನ್ನು ನೋಡಿ ಸಹಿಸಲಾರದಷ್ಟು ಹೊಟ್ಟೇಕಿಚ್ಚು ಉಂಟಾಗಿತ್ತು. ಅದಕ್ಕೋಸ್ಕರ ತಂದೆಯೊಡನೆ ಹೇಳಿ, ಯಯಾತಿಯು ಶರ್ಮಿಷ್ಠೆಯೊಡನೆ ಸಂಸಾರ ಮಾಡಿಕೊಂಡಿರದಂತೆ ಮಾಡಿದಳು.

ಯಯಾತಿಯು ಆ ಶುಕ್ರಾಚಾರ್ಯರಿಗೆ ಹೆದರಿ ಹಾಗೆಯೇ ಆಗಲೆಂದು ಒಪ್ಪಿಕೊಂಡನು. ಆದರೆ ಅವರಿಗೆ ತಿಳಿಯದಂತೆ ಶರ್ಮಿಷ್ಠೆಯ ಮನೆಗೂ ಹೋಗಿ ಬರುತ್ತಿದ್ದನು. ಕೆಲವು ಕಾಲವಾದ ಮೇಲೆ ಶರ್ಮಿಷ್ಠೆಗೆ ಮೂವರು ಮಕ್ಕಳಾದರು. ಅವರಿಗೆ ದ್ರುಹ್ಯು, ಅನು, ಪೂರು ಎಂಬುದಾಗಿ ಹೆಸರಿಟ್ಟಿದ್ದರು. ಇತ್ತ ದೇವಯಾನಿಗೂ ಯದು, ತುರ್ವಸು ಎಂಬ ಇಬ್ಬರು ಮಕ್ಕಳಾದರು. ಒಂದುದಿನ ಆಕಸ್ಮಾತ್ತಾಗಿ ದೇವಯಾನಿಗೆ ಶರ್ಮಿಷ್ಠೆಗೆ ಮಕ್ಕಳಾಗಿರುವ ವಿಚಾರವು ಗೊತ್ತಾಯಿತು. ಆಗಲು ಬಂದು ತಂದೆಯಾದ ಶುಕ್ರಾಚಾರ್ಯರಲ್ಲಿ ಹೇಳಿದಳು. ಅವರು ತನ್ನ ಮಾತಿಗೆ ವಿರುದ್ಧವಾಗಿ ನಡೆದನೆಂಬ ಸಿಟ್ಟಿನಿಂದ ಯಯಾತಿಗೆ ಶಾಪವನ್ನು ಕೊಟ್ಟರು. ಏನೆಂದರೆ:—'ಕೂಡಲೆ ಯಯಾತಿಯು ವೃದ್ಧನಾಗಲಿ' ಆಗ ಗಡಿಗಡಿಗ ಯಯಾತಿಯು ಇದ್ದಕ್ಕಿದ್ದಹಾಗೆ ವೃದ್ಧನಾದನು.

ಆಗ ಅವನು ತನ್ನ ಮಕ್ಕಳನ್ನೆಲ್ಲಾ ಕರೆದು, 'ಅಪ್ಪಾ, ಮಕ್ಕಳಿರಾ ನಿಮ್ಮಲ್ಲಿ ಯಾರಾದರೂ ನನ್ನ ವೃದ್ಧಾಪ್ಯವನ್ನು ತೆಗೆದುಕೊಂಡು ನಿಮ್ಮ ಯೌವನವನ್ನು ಕೊಟ್ಟಿರಿ. ಕೆಲವು ಕಾಲಾನಂತರ ನಾನು ವೃದ್ಧಾಪ್ಯವನ್ನು ತೆಗೆದುಕೊಳ್ಳುತ್ತೇನೆ' ಎಂದನು. ಆಗಿನ ಕಾಲದವರಿಗೆ ಅಂತಹ ಶಕ್ತಿಯಿತ್ತು.

ಆದರೇನು? ಆ ಮಕ್ಕಳಲ್ಲಿ ಪೂರು ಒಬ್ಬನು ಏನಾ ಆಗಿದನೇ ಎಲ್ಲರೂ ಆಗುವುದಿಲ್ಲವೆಂದು ತಂದೆಯ ಮಾತನ್ನು ತಿರಸ್ಕರಿಸಿದರು. ಪೂರುವು ಚಿಕ್ಕವನಾದರೂ ತಂದೆಯಮಾತಿನಲ್ಲಿ ಅವನಿಗೆ ತುಂಬಾ ಗೌರವವಿತ್ತು. ಅವನು ತಾನು ಮುದುಕನಾಗುವುದಕ್ಕೆ ಒಡಂಬಟ್ಟನು. ಆಗ ಯಯಾತಿಯು ಸಂತೋಷದಿಂದ ತನ್ನ ವೃದ್ಧಾಪ್ಯವನ್ನು ಪೂರುವಿಗೆ ಕೊಟ್ಟು ಆ ಪೂರುವಿನ ಯೌವನವನ್ನು ತಾನು ತೆಗೆದುಕೊಂಡನು. ಕೂಡಲೆ ಪೂರುವು ಮುದುಕನಾದನು—ಯಯಾತಿಯು ಯುವಕನಾದನು.

ಅನೇಕ ವರ್ಷಗಳು ಹೀಗೆ ಪೂರುವು ಮುದುಕನಾಗಿ ಕಾಲಕಳೆದನು. ಯಯಾತಿಯಾದರೋ ಮಗನಿಂದ ಬಂದ ಯೌವನದಲ್ಲಿ ಸುಖವಾಗಿರುತ್ತಿದ್ದನು. ಆದರೆ ಪ್ರಪಂಚದಲ್ಲಿ ಯಾವಾಗಲೂ ಧರ್ಮಕ್ಕೆ ಜಯವು. ಯಯಾತಿಯು ತನ್ನ ಮಾತನ್ನು ಅಸಡ್ಡೆಮಾಡಿದ ನಾಲ್ವರು ಮಕ್ಕಳನ್ನು ಕರೆಯಿಸಿ ಅವರನ್ನು ರಾಜ್ಯದಿಂದೋಡಿಸಿಬಿಟ್ಟನು. ಆದರೆ ಪೂರುವಿಗೆ ಯೌವನವನ್ನು ಪುನಃ ಹಿಂತಿರುಗಿಸಿ ಕೊಟ್ಟು ರಾಜ್ಯಕ್ಕೆ ಪಟ್ಟಕಟ್ಟಿ ತಾನು ಕಾಡಿಗೆ ಹೋದನು. ಹೀಗೆ ಧರ್ಮಪರಾಯಣರಾದ ಪುಣ್ಯಪುರುಷರು ನಮ್ಮಲ್ಲಿ ಎಷ್ಟು ಜನರು ಆಗಿಹೋದರು—ನಿನಗೆ ಗೊತ್ತೆ ಮಗು?

* * *

ಕಬ್ಬಾದನನು 'ಆಚಾರ್ಯ' ನಾನು ಕೈಲಾದಮಟ್ಟಿಗೂ ಸಾಹಸ ಮಾಡುತ್ತೇನೆಂದು ವಾಗ್ದಾನಮಾಡುವನು. ಆಚಾರ್ಯ ಎಂದರೆ ತಂದೆತಾಯಿಗಳು, ಗುರುಹಿರಿಯರು, ಸಮಸ್ತಕ್ಕೂ ಆಧಾರಭೂತನಾದ ಪರಮೇಶ್ವರನು.

ಮೈಸೂರು ಚರಿತ್ರೆಯ ಕಥೆಗಳು.

ಪ್ರಸಿದ್ಧರಾದ ಅಣ್ಣತಮ್ಮಂದಿರು.

ಯದುರಾಯರು, ಕೃಷ್ಣರಾಯರು.

ನಮ್ಮ ಮೈಸೂರು ದೇಶಕ್ಕೆ ಈಗ ಶ್ರೀಮನ್ ಮಹಾರಾಜರವರು ದೊರೆಗಳು. ಈಗಿನ ಹಾಗೆ ಹಿಂದೆ ಈ ದೇಶಕ್ಕೆ ಒಬ್ಬರೇ ದೊರೆಗಳಿರಲಿಲ್ಲ. ಅಲ್ಲಲ್ಲಿ ಚಿಕ್ಕಚಿಕ್ಕ ರಾಜರೂ ಪಾಳೆಯಗಾರರೂ ಇದ್ದರು. ಇವರು ಆಗಾಗ್ಗೆ ವ್ಯಾಜ್ಯವಾಡುತ್ತಾ ಒಬ್ಬರಮೇಲೊಬ್ಬರು ಕೈಮಾಡುತ್ತಿದ್ದರು. ಹೀಗಿರುವಾಗ ಇಬ್ಬರು ಅಣ್ಣತಮ್ಮಂದಿರು ಒಂದು ಸಾಹಸವನ್ನು ಮಾಡಿದರು. ಮಹಿಸೂರು ರಾಜ್ಯವನ್ನು ಕಟ್ಟಿದರು. ಆ ಕಥೆಯನ್ನು ಹೇಳುತ್ತೇನೆ ಕೇಳಿ.

ನಾಯಕನ ಯೋಚನೆ.

ನಂಜನಗೂಡಿನ ಹತ್ತಿರ ಹದಿನಾಡೊಂಬ ಗ್ರಾಮ. ಅಲ್ಲಿ ಚಾಮರಾಜರೆಂಬ ಒಬ್ಬ ರಾಜರಿದ್ದರು. ಅವರಿಗೆ ಮೈಸೂರೂ ಸೇರಿದ್ದಿತು. ಕಾರುಗಹಳ್ಳಿ ಎಂಬುದೊಂದು ಇನ್ನೊಂದು ಗ್ರಾಮ. ಅಲ್ಲಿ ಮಾರನಾಯಕನೆಂಬ ಪಾಳೆಯಗಾರನಿದ್ದನು.

ಚಾಮರಾಜರಿಗೆ ಗಂಡುಮಕ್ಕಳಿರಲಿಲ್ಲ. ಒಬ್ಬ ಮಗಳು ಮಾತ್ರ ಇದ್ದಳು. ಆಕೆಯನ್ನು ಮದುವೆ ಮಾಡಿಕೊಂಡರೆ ತನಗೆ ಹದಿನಾಡು ಸಿಕ್ಕುವುದೆಂದು ಮಾರನಾಯಕನು ಯೋಚಿಸುತ್ತಿದ್ದನು. ಅದಕ್ಕೆ ತಕ್ಕ ಅವಕಾಶವೂ ಸಿಕ್ಕಿತು.

ಏಕೆಂದರೆ ಸ್ವಲ್ಪಕಾಲವಾದಮೇಲೆ ಚಾಮರಾಜರು ಕಾಲವಾದರು, ರಾಜಕುಮಾರಿಯನ್ನು ತನಗೆ ಮದುವೆಮಾಡಿಕೊಡಬೇಕೆಂದು ಮಾರನಾಯಕನು ಚಾಮರಾಜರ ಹೆಂಡತಿ ದೇವಾಜಮ್ಮಣ್ಣಿಯವರಿಗೆ ಹೇಳಿಕಳುಹಿಸಿದನು. ನಾಯಕನು ತೊರವೇ ಜಾತಿಯವನು. ದೇವಾಜಮ್ಮಣ್ಣಿಯವರು ಉತ್ತಮಕುಲದವರು—ಕ್ಷತ್ರಿಯರು. ಬೇರೆ ಜಾತಿಯವನಿಗೆ ಮಗಳನ್ನು ಕೊಡಲು ಅವರು ಇಷ್ಟಪಡಲಿಲ್ಲ. "ನಿಮ್ಮ ಮನಸ್ಸಿನಂತೆ ನಡೆಯಲು ಆಗಲಾರದು ಎಂದು ಆಕೆಯು ನಾಯಕನಿಗೆ ತಿಳಿಸಿದರು.

ಆದರ ಮೇಲೆ ನಾಯಕನು ಕೋಪಗೊಂಡು, "ನಿಮ್ಮ ಮಗಳನ್ನು ನನಗೆ ಮದುವೆಮಾಡಿಕೊಡಬೇಕು ಅದಕ್ಕೆ ಒಪ್ಪದಿದ್ದರೆ ದಂಡು ಗದುಕೊಂಡುಬರುತ್ತೇನೆ. ನನ್ನ ದಂಡಿನ ಬಲ ನಿಮಗೆ ತಿಳಿದಿದೆಯಷ್ಟೆ. ನನಗೆ ಇಲ್ಲದ ಕಷ್ಟವನ್ನು ಕೊಟ್ಟು ನಿಮ್ಮ ಮಗಳನ್ನು ಮದುವೆಮಾಡಿಕೊಳ್ಳುವನು. ಯೋಚಿಸಿ" ಎಂದು ಹೇಳಿಕಳುಹಿಸಿದನು.

ದೇವಾಜಮ್ಮಣ್ಣಿಯವರು ತಮ್ಮ ಸೆಂಟರಿಷ್ಟರ ಸಂಗಡ ಕಲೆತು ಆಲೋಚಿಸಿದರು. ನಾಯಕನ ಮುಂದೆ ನಿಲ್ಲಲು ಬಲ್ಲರೂ ಭಯಪಟ್ಟರು. ಅವನು ಅಷ್ಟು ಗಟ್ಟಿಗನಾಗಿದ್ದನು. ಕೊನೆಗೆ ಯಾವುದೂ ನಡೆಯದೆ "ನಿಮ್ಮ ಆಪೇಕ್ಷೆಯಂತೆ ಮದುವೆ ಮಾಡಿಕೊಡುವೆನು" ಎಂದು ನಾಯಕನಿಗೆ ತಿಳಿಯಿಸಿದರು. ತಾಯಿಯೂ ಮಗಳೂ ದೇವರನ್ನು ಕುರಿತು "ಸ್ವಾಮಿ ನಮಗೆ ಬಂದಿರುವ ಕಷ್ಟ ತಪ್ಪಿಸು. ನಮಗೆ ಯಾರೂ ಸಹಾಯಕರಿಲ್ಲ ನೀನೇ ಗತಿ" ಎಂದು ಬೇಡಿಕೊಳ್ಳುತ್ತಿದ್ದರು.

ನಾಯಕನ ಗತಿ.

ಹೀಗಿರಲು ದ್ವಾರಕೆಯಿಂದ ಇಬ್ಬರು ಅಣ್ಣತಮ್ಮಂದಿರು ಬಂದಿದ್ದರು. ಅವರೇ ಯದುರಾಯರು, ಕೃಷ್ಣರಾಯರೆಂಬುವರು, ದೊಡ್ಡವರು ಯದುರಾಯರು, ಚಿಕ್ಕವರು ಕೃಷ್ಣರಾಯರು. ಇವರು ಯಾದವ ಕುಲದವರು. ಎಂದರೆ ಶ್ರೀ ಕೃಷ್ಣನ ವಂಶದವರು ಈ ಅಣ್ಣತಮ್ಮಂದಿರು ಹದಿನಾಡಿನ ಕೆರೆಯ ಬಳಿ ದೇವಸ್ಥಾನದಲ್ಲಿ ಇಳಿದುಕೊಂಡಿದ್ದರು.

ಆಗ ನೀರಿಗಾಗಿ ಕೆಲವು ಜನ ಹೆಂಗಸರು ಕೆರೆಗೆ ಬಂದರು. ಅವರು ಹೀಗೆ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದರು.

ಒಬ್ಬ ಹೆಂಗಸು.—"ನಮ್ಮ ರಾಣಿಯವರಿಗೆ ಏನು ಕಷ್ಟಬಂತು ಪಾಪ!"

ಇನ್ನೊಬ್ಬ ಹೆಂಗಸು—"ಹೌದು, ಹೊತ್ತು, ಹೆತ್ತು, ಸಾಕಿ, ಸಲುಹಿದ ಮುದ್ದು ಮಗಳನ್ನು ಆ ಮಾರಿಗೆ ಹೇಗೆ ಕೊಟ್ಟಾರು? ಪಾಪ"

ಮೂರನೆಯ ಹೆಂಗಸು.—"ಇಲ್ಲದಿದ್ದರೆ ದಂಡು ತೆಗೆದುಕೊಂಡು ಒರುತ್ತೇನೆಂದು ಬೆದರಿಸಿದ್ದಾನಂತಮ್ಮ"

ಇನ್ನೊಬ್ಬ ಹೆಂಗಸು.—"ಹೌದಂತೆ ಅದಕ್ಕೆ, ಪಾಪ. ನಮ್ಮ ದೊರೆಗಳ ಹೆಂಡತಿ ಮಗಳನ್ನು ನಾಯಕನಿಗೆ ಕೊಟ್ಟು ಮದುವೆಮಾಡಿಕೊಡುತ್ತೇನಂದು ಹೇಳಿ ಕಳುಹಿಸಿದ್ದಾರಂತೆ. ಇನ್ನೇನು ಮಾಡಿಯಾರು!"

ಮತ್ತೊಬ್ಬ ಹೆಂಗಸು.—"ಮಾರನಾಯಕ ಎಂತಹ ಕೆಟ್ಟ ಮನುಷ್ಯ, ದೇವರು ಅವನಿಗೆ ಒಳ್ಳೆಯದು ಮಾಡುವನೆ!"

ಹೆಂಗಸರು ಮಾತನಾಡಿಕೊಳ್ಳುತ್ತಿದ್ದುದು ಯದುರಾಯರು ಕೃಷ್ಣರಾಯರಿಗೆ ತಿಳಿಯಿತು. ಸಂಕಟಪಟ್ಟುಕೊಂಡರು. ಈ ಕಷ್ಟಕಾಲದಲ್ಲಿ ಚಾಮರಾಜರ ಹೆಂಡತಿಗೆ ಸಹಾಯಮಾಡಬೇಕೆಂದು ಮನಸ್ಸು ಮಾಡಿದರು. ಇವರಲ್ಲವೇ ಧೀರರು.

ಅದರ ಮೇಲೆ ಅರಮನೆಗೆ ಹೋಗಿ ತಿಳಿಯಿಸಿದರು. ದೇವರೇ ತಮಗೆ ಸಹಾಯಕ್ಕಾಗಿ ಬಂದನೆಂದು ದೇವಾಜಮ್ಮಣ್ಣಿಯವರಿಗೆ ಸಂತೋಷವಾಯಿತು. ಅಣ್ಣತಮ್ಮಂದಿರು ಒಂದು ಉಪಾಯವನ್ನು ಹೇಳಿಕೊಟ್ಟರು. ಅದೇನೆನ್ನುವಿರೋ?

"ಮದುವೆಗೆ ಇಂತಹ ದಿವಸವೆಂದು ಗೊತ್ತಾಗಿದೆ. ಮದುವೆಯು ನಡೆಯುವುದೆಂದು ನಾಯಕನು ತಿಳಿದುಕೊಳ್ಳುವ ಹಾಗೆ ಎಲ್ಲಾ ಸಿದ್ಧವಾಗಿರಲಿ, ಆಗ ಅವನು ತನಗೆ ಬೇಕಾದವರ ಸಂಗಡ ಇಲ್ಲಿಗೆ ಬರುವನು. ನಾವು ಆ ಸಮಯದಲ್ಲಿ ಆಯತುಕೊಂಡಿದ್ದು ಅವನಿಗೆ ತಕ್ಕ ಕೆಲಸವನ್ನು ಕೊಡುವೆವು" ಎಂದು ಹೇಳಿದರು.

(6 ನೇ ಪೇಜಿನ 1 ನೇ ಕಾಲಂ ಕೊನೆಯಲಿ ಮುಂದುವರದಿದೆ)

ಹಿರಿಯಣ್ಣಂದಿರಿಗಾಗಿ.

ಅಂಕ ೨.

ಹೊಸಹುಡುಗರನ್ನು ಸೇರಿಸುವಿಕೆ.

ನಿಮ್ಮ ಮೊದಲನೆಯವರಾದ ಹನ್ನೆರಡು ಮಂದಿ ಪ್ರಥಮತಾರೆಯನ್ನು ಹೊಂದಿದರೆಂದರೆ ನಿಮ್ಮ ಗುಂಪಿನವರು ಒಂದು ಮೆಟ್ಟಲನ್ನೇರಿದರೆಂದು ತಿಳಿಯಿರಿ. ಈ ಸಂದರ್ಭದಲ್ಲಿ ಹೊಸಹುಡುಗರನ್ನು ಸೇರಿಸಿಕೊಳ್ಳಬಹುದು. ಅದರಿಂದ ನಿಮಗೆ ಕೆಲವು ಉಪಕಾರಗಳೇ ಆಗಬಹುದು.

1. ನಿಮ್ಮ ಬಾಲಕರು ಒಂದು ಹೆಜ್ಜೆ ಮುಂದಿಟ್ಟಿರುತ್ತಾರೆ. ಅವರ ಸ್ನೇಹಿತರಾದ ಮತ್ತು ನಮ್ಮ ಸಂಗಡಕ್ಕೆ ಸೇರದ ಕೆಲವು ಬಾಲಕರು ನಮ್ಮಲ್ಲಿಗೆ ಒಂದಲ್ಲಿ ಅವರ ಉತ್ಸಾಹವನ್ನು ಹೆಚ್ಚಿಸಿ ಅವರು ಇದುವರೆಗೂ ಕಲಿತ ವಿಚಾರಗಳನ್ನು ಅವರಿಂದಲೇ ಹೇಳಿಸಬಹುದು. ಅವರ ಹೆಚ್ಚಾದ ಉತ್ಸಾಹವನ್ನು ಸರಿಯಾದ ಮಾರ್ಗದಲ್ಲಿ ನಡೆಸಿಕೊಂಡು ಹೋಗಲು ಇದೇ ಉಪಾಯ. ಇದರಿಂದ ಆ ಬಾಲಕರಿಗೆ ತಮ್ಮ ಹಿಂದಿನ ಪ್ರಥಮಶಾಲೆಯ ಕೆಲಸಗಳು ಚೆನ್ನಾಗಿ ತಿಳಿಯುವಂತೆ ಆದುದೂ ಅಲ್ಲದೆ ಅವರುಗಳು ತಮ್ಮ ಎರಡನೇ ತಾರೆಯ ಕೆಲಸಗಳನ್ನು ಮಾಡುತ್ತಿರುವಾಗ ಮೊದಲನೇ ತಾರೆಯ ಕೆಲಸಗಳನ್ನೂ ಮಾಡುವುದರಿಂದ ಕಬ್‌ಕೆಲಸಗಳಲ್ಲಿ ಹೆಚ್ಚಿನ ಯೋಗ್ಯತೆಯು ಅನುಭವದಿಂದ ಸಂಪಾದಿಸುತ್ತಾರೆ.

2. ಹಿಂದಿನ ಅಂಕಗಳಲ್ಲಿ 12 ಬಾಲಕರಿಗಿಂತ ಹೆಚ್ಚಾಗಿ ಸೇರಿಸಿಕೊಳ್ಳಬೇಡಿ ಎಂದು ಹೇಳಿದೆ. ಹೆಚ್ಚಿನ ಹುಡುಗರೆಂದರೆ ಇನ್ನು ಆರು ಜನ ಬಾಲಕರನ್ನು ಮಾತ್ರ ತೆಗೆದುಕೊಳ್ಳಿ. ಇದರಿಂದ ನಿಮ್ಮ ಹೊಸಬಾಲಕರ ಗುಣಗಳನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ದೊಂಬಿಯನ್ನು ಕಟ್ಟಿಕೊಂಡು ದೊಂಬಿಯ ಮರ್ಜಿಯನ್ನು ತಿಳಿಯುವುದಕ್ಕಿಂತ, ಕೆಲವರನ್ನೇ ಕಟ್ಟಿಕೊಂಡು ಪ್ರತಿಬಿಬ್ಬನ ಗುಣಗಳನ್ನು ತಿಳಿದು ತಿದ್ದಬೇಕೆಂಬುದೇ ನಿಮ್ಮ ಧ್ಯೇಯವಾಗಿರಬೇಕು. ಕ್ರಮೇಣ ಹೆಚ್ಚು ಮಾಡುತ್ತ ಹೋದಲ್ಲಿ ಎಷ್ಟೇ ಸಂಖ್ಯೆಯುಳ್ಳ ಗುಂಪನ್ನಾದರೂ ಹತೋಟಿಯಲ್ಲಿಡಬಹುದು.

3. ನಿಮ್ಮ ಹಳೆಯ ಬಾಲಕರಲ್ಲಿ ಪ್ರತಿ ಒಬ್ಬನೂ ಪ್ರಥಮ ತಾರೆಯವನಾಗಿದ್ದಲ್ಲಿ ಹೊಸಹುಡುಗರು ಅವನಲ್ಲಿ ಒಂದು ಪೂಜ್ಯಬುದ್ಧಿಯನ್ನಿಟ್ಟುಕೊಳ್ಳಲು ಅವಕಾಶವಿರುತ್ತದೆ. ಇದಕ್ಕಿಂತಲೂ ಮುಂಚಿತವಾಗಿಯೇ ಹೊಸ ಹುಡುಗರು ಗುಂಪಿಗೆ ಸೇರಿದಲ್ಲಿ ಮತ್ತೆ ಪುನಃ ದೊಂಬಿಯೇ ನಿಮ್ಮ ಪಾಲಿಗೆ ಸೇರುತ್ತದೆ. ಆ ಪೂಜ್ಯಬುದ್ಧಿಯಿಂದ ಗುಂಪಿನಲ್ಲಿ ನಡತೆ, ನುಡಿ, ಮತ್ತು ಶೀಲಭಾವಗಳು ಏಕರೀತಿಯಲ್ಲಿ ನಡೆದುಬರುತ್ತವೆ. ಕಬ್ ಗುಂಪೆಂದರೆ, ಅದೂ ಒಂದು ತರಗತಿ ಎಂದು ಕೆಲವರು ತಿಳಿದಿರುತ್ತಾರೆ. ಅದು ಒಂದು ಸಮಾಜ. ಅದರಲ್ಲಿ ಪ್ರತಿಬಿಬ್ಬನಿಗೂ ತನ್ನ ತನ್ನ ಜಾಗವು ನಿರ್ಮಿಸಲ್ಪಟ್ಟಿದೆ. ಅದನ್ನು ತನ್ನ ಸ್ವಂತವಾದ ಬುದ್ಧಿಯಿಂದಲೂ, ಘನತೆಯಿಂದಲೂ, ಕೆಲಸದಿಂದಲೂ ಅವನೇ ಸಂಪಾದಿಸಿಕೊಳ್ಳಬೇಕು.

4. ಕಬ್‌ಗಳಲ್ಲಿ ಆತ್ಮಾವಲಂಬನೆಯು ಬರಬೇಕಾದರೆ ಈ ಹೊಸಬರು ಅದಕ್ಕೆ ಸ್ವಲ್ಪ ಕಾರಣಕರ್ತರು. ಹೊಸಬರು ಬರುವುದಕ್ಕಿಂತ ಮುಂಚಿತವಾಗಿ, ಹಿರಿಯಣ್ಣನು ತನ್ನ ಲಕ್ಷ್ಯವೆಲ್ಲವನ್ನೂ ಹಳಬರ ಮೇಲೆಯೇ ಇಟ್ಟಿರುತ್ತಿದ್ದನು. ಹೊಸಬರು ಬಂದಕೂಡಲೇ ಆ ಸಂಪೂರ್ಣಲಕ್ಷ್ಯವು ಬಹಳಮಟ್ಟಿಗೆ ಕಮ್ಮಿಯಾಯಿತೆಂದೇ ಅನ್ನಬೇಕು. ಆದಕಾರಣ ಹಳೆಯವರು ತಮ್ಮಷ್ಟಕ್ಕೆ ತಾವೇ ತಮ್ಮ ಮುಂದಿನ ಕೆಲಸಕ್ಕೆ ಕೈಹಚ್ಚಬೇಕಾಗಿ ಬರುತ್ತದೆ.

5. ಈ ಸಂದರ್ಭದಲ್ಲಿ ನಿಮ್ಮ ಬಾಲಕರಲ್ಲಿ ನಾಯಕತ್ವದ ಯೋಗ್ಯತೆಯು ಎಷ್ಟರಮಟ್ಟಿಗಿದೆ ಎಂಬುದನ್ನು ತಿಳಿಯಲೂ ನಿಮಗೆ ಅನುಕೂಲವಾಗುತ್ತದೆ. ಈ ಸಂದರ್ಭದಲ್ಲಿ ನಿಮ್ಮ ಹಳೆಯ ಮತ್ತು ಹೊಸಹುಡುಗರುಗಳನ್ನು ಕೂಡಿಸಿ ಬೇರೆ ಬೇರೆ ಗುಂಪುಗಳನ್ನಾಗಿ ಮಾಡಿ ಪ್ರತಿ ಒಂದರಲ್ಲೂ ಇಬ್ಬರೂ ಒಟ್ಟಿಗೆಸೇರಿ ಕೆಲಸಮಾಡುವಂತೆ ಮಾಡಬೇಕು. ಹಳಬರ ಪೈಕಿ ಒಬ್ಬಬ್ಬರನ್ನು ಹೊಸನಾಯಕರನ್ನು ಮಾಡಿ.

ಹೊಸಬರಿಂದಲೇ ನಿಮ್ಮ ಗುಂಪು ಮುಂದಕ್ಕೆ ಬರಬೇಕಾದರೆ ಅವರೂ ಸಹ ನಿಮ್ಮ ಹಳೆಯವರು ಕಲಿತ ರೀತಿಯಲ್ಲಿಯೇ ಎಲ್ಲವನ್ನೂ ಕಲಿಯಬೇಕು. ಮೊಟ್ಟಮೊದಲು ಈ ಹೊಸಬರು ಹಳಬರಿಗೆ ಸ್ವಲ್ಪ ತೊಂದರೆಯನ್ನು ಕೊಟ್ಟಂತಾಗಬಹುದು. ಆದರೆ ಕೆಲವು ದಿವಸಗಳಲ್ಲಿಯೇ ಎಲ್ಲವೂ ಸರಿಹೋಗಬಹುದು. ಕೆಲವು ಸಂದರ್ಭಗಳಲ್ಲಿ ಹೊಸಸೇರಿ ಬಂದು ಹಳೆಯಸೇರನ್ನು ಕೊಚ್ಚಿಕೊಂಡು ಹೋಗಬಹುದು. ಆದರೆ ಹಿರಿಯಣ್ಣನ ಕಾರ್ಯದಕ್ಷತೆಯಿಂದ ಎಲ್ಲವೂ ಸರಿಹೋಗುತ್ತದೆ.

ಹೊಸಹುಡುಗರಿಗೆ ದೀಕ್ಷಾವಿಧಿಯನ್ನು ನಡೆಯಿಸುವಾಗ ಹಿಂದಿನಂತೆಯೇ ಗಂಭೀರವಾದ ಒಂದು ಸಮಾರಂಭವಾಗಿರಬೇಕು. ಆ ಕಾಲದಲ್ಲಿ ಹಳಬರು ತಮ್ಮ ವಾಗ್ದಾನವನ್ನು ಪುನಃ ಪಠಿಸುತ್ತಾರೆ. ಆಗ ತಾವುಗಳು ಇದುವರಿಗೂ ಎಷ್ಟುಮಟ್ಟಿಗೆ ಅದರಂತೆ ನಡೆದುಕೊಂಡಿರೆಂಬುದು ತಮ್ಮ ಮನಸ್ಸೇ ಹೇಳುತ್ತದೆ. ಅಲ್ಲದೆ ಅವರನ್ನು ತಿದ್ದಬೇಕಾಗಿದ್ದಲ್ಲಿ ತಿದ್ದುವ ಸಂಭವವೂ ಬರುತ್ತದೆ.

(ನಿನ್ನೆ ನೇಜಸಿಂದ ಮುಂದುವರಿದಿದೆ)

ದೇವಾಜಮ್ಮಣ್ಣಿಯವರು ಅದಕ್ಕೆ ಒಪ್ಪಿ ಅವರು ಹೇಳಿದಂತೆ ಮಾಡಿದರು. ಅವರ ಸಹಾಯಕ್ಕಾಗಿ ಕೆಲವುಜನ ಭಂಟರನ್ನು ಒಪ್ಪಿಸಿದರು.

ನಾಯಕನು ಸಂತೋಷದಿಂದ ತನ್ನ ಜನಗಳನ್ನು ಕರೆದುಕೊಂಡು ಒಂದನು. ಒಂದಕೂಡಲೇ ಯದುರಾಯರು ಕೃಷ್ಣರಾಯರು ಅವನ ಮೇಲೆ ಬಿದ್ದರು. ನಾಯಕನೂ ಅವನ ಕಡೆಯವರೂ ಎದುರಿಸಿ ನಿಂತರು. ಕತ್ತಿಗಳಿಂದ ಹೊಡೆದಾಟವು ನಡೆಯಿತು. ನಾಯಕನೂ ಅವನ ಕಡೆಯಲ್ಲಿ ಕೆಲಸರೂ ಸತ್ತುಹೋದರು. ಮಿಕ್ಕವರು ಓಡಿಹೋದರು. ಅದರ ಮೇಲೆ ಶೂರರಾದ ಅಣ್ಣತಮ್ಮಂದಿರು ಕಾರುಗಹಳ್ಳಿಯನ್ನು ಹಿಡಿದರು.

(ಮುಂದುವರಿಯುವುದು.)

ಕಬ್ಬುಗಳು ಕಲಿಯಬೇಕಾದುದು.

ಮಗೂ—ನೀನು ಬಲಿಷ್ಠನಾಗಬೇಕಾಗಿದ್ದರೆ, ನಿನ್ನ ಊಟದ ವಿಚಾರದಲ್ಲಿಯೂ, ನಿನ್ನ ಆಟದ ವಿಚಾರದಲ್ಲಿಯೂ, ನಿನ್ನ ಆರೋಗ್ಯದ ವಿಚಾರದಲ್ಲಿಯೂ ಸರಿಯಾದ ಗಮನವನ್ನು ಕೊಡಬೇಕು.

ಪ್ರತಿ ನಿತ್ಯದಲ್ಲಿಯೂ, ನೀನು ನಿನ್ನ ದೇಹವನ್ನು ಶುಚಿಯಾಗಿ ಬ್ಬುಕೊಳ್ಳಬೇಕು. ಅಂದರೆ ನಿನ್ನ ದೇಹದ ಹೊರಗಿರುವ ಕಶ್ಮಲವನ್ನೂ, ಒಳಗಿರುವ ಕಶ್ಮಲವನ್ನೂ ತೆಗೆದುಹಾಕಬೇಕು. ಧಾರಾಳವಾಗಿ ನೀನು "ದೇವರ ದೊಡ್ಡ ಆಂಗಳದಲ್ಲಿ" ಹೊಸ ಗಾಳಿಯನ್ನು ಸೇವಿಸಬೇಕು. ಮನೆಯಲ್ಲಿಯೂ ಸಾಕಾದಷ್ಟು ಗಾಳಿಯು ಬರುವಂತೆ ಬಾಗಿಲುಗಳನ್ನು ತೆಗೆದುಕ್ಕೊಂಡಿರಬೇಕು. ಇವೆಲ್ಲವೂ ನೀನೇ ಮಾಡಿಕೊಳ್ಳಬೇಕಾದವುಗಳಲ್ಲವೆ? ಶಕ್ತಿಯುಳ್ಳವನಾಗುವುದು ಅಥವಾ ಬಲಹೀನನಾಗುವುದು ಎಲ್ಲವೂ ನಿನ್ನ ಕೈಯ್ಯಲ್ಲಿದೆ.

ನಿನಗೆ ಅಗತ್ಯವಾದ ನಾಲ್ಕು ಕೆಲಸಗಳು:—

ಶುಚಿಯಾದ ಆಹಾರ.

ದೇಹದ ಒಳಗಿನ ಮತ್ತು ಹೊರಗಿನ ಕೊಳಕನ್ನು ತೆಗೆಯುವುದು

ಹೊಸ ಗಾಳಿ.

ಶರೀರ ವ್ಯಾಯಾಮ.

ಇವುಗಳ ವಿಚಾರವನ್ನು ಒಂದೊಂದಾಗಿ ಮುಂದಿನ ಸಲದಿಂದ ಬರೆಯುತ್ತೇನೆ.

(1) ಮೂಗಿನಿಂದಲೇ ಉಸಿರನ್ನು ಬಿಡುವುದು.

(2) ನಿನ್ನ ಉಗುರುಗಳನ್ನು ಹೇಗೆ ಕಾಪಾಡಿಕೊಳ್ಳಬೇಕು.

(3) ನಿನ್ನ ಹಲ್ಲುಗಳನ್ನು ಹೇಗೆ ಇಟ್ಟುಕೊಳ್ಳಬೇಕು.

(4) ನಿನ್ನ ಪಾದಗಳನ್ನು ಹೇಗೆ ನೋಡಿಕೊಳ್ಳಬೇಕು.

ಇವುಗಳ ವಿಚಾರವಾಗಿ ನೀನು ಹಿರಿಯಣ್ಣನಿಂದ ಈಗಲೇ ತಿಳಿದುಕೊಂಡಿರು. ಆನಂತರ ನಾನು ಬರೆದಿದ್ದನ್ನೂ ಓದು. ಆಗ ನಿನಗೆ ಎಲ್ಲಾ ವಿಚಾರಗಳು ಚೆನ್ನಾಗಿ ಇನ್ನೂ ತಿಳಿಯುತ್ತವೆ.

ಆಟದ ಬೈಲು.

೨೦. ಸುರಂಗದ ಆಟ.

ಗುಂಪನ್ನೆಲ್ಲಾ ಎಂಟೆಂಟು ಬಾಲಕರಿರುವ ಚಿಕ್ಕ ಚಿಕ್ಕ ಭಾಗಗಳಾಗಿ ವಿಭಾಗಿಸಬೇಕು. ಬಳಿಕ ಒಂದು ಚಿಕ್ಕ ಗುಂಪನ್ನು ಕರೆದು ನಾಲ್ಕು ಜನರು ಒಂದು ಸಾಲಿನಲ್ಲಿಯೂ ಈ ಸಾಲಿನ ಎದುರಿಗೆ ಇನ್ನು ನಾಲ್ಕು ಜನರೂ ನಿಲ್ಲುವಂತೆ ಮಾಡತಕ್ಕದು. ಅಂದರೆ ಒಬ್ಬರು ಎದಿರಾಗಿ ಒಬ್ಬರಂತೆ ನಾಲ್ಕು ಜೊತೆಗಳಿದ್ದಂತಾಯಿತು. ಒಂದೊಂದು ಜೋಡಿಯಲ್ಲಿರುವ ಬಾಲಕರಿಬ್ಬರೂ ತಮ್ಮ ತಮ್ಮ ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಎದುರಾಳಿಯ ಹಸ್ತಗಳನ್ನು ಬಂಧಿಸಿಕೊಳ್ಳಬೇಕು. ಉದರಂತೆಯೇ ಉಳಿದ ಜೋಡಿಯವರೂ ಮಾಡಬೇಕು. ಅಂದರೆ, ಎಲ್ಲರೂ ಕಮಾನಿನಂತೆ ಕೈಯನ್ನು ಎತ್ತಿಟ್ಟುಕೊಂಡಿರಬೇಕು. ಈಗ ಇದೇ ಒಂದು ಸುರಂಗ, ಎದುರುಬದಿರಿಗಿರುವ ಬಾಲಕರೇ ಎರಡೆರಡು ಕಂಭಗಳು. ಕಂಭಗಳು ತೀರ ಒತ್ತೊತ್ತಾಗಿರಬಾರದು.

ಇದೇ ರೀತಿಯಲ್ಲಿ ಉಳಿದ ಚಿಕ್ಕ ಪಂಗಡಗಳನ್ನೂ ಸಿದ್ಧಪಡಿಸಿ ಸುರಂಗಗಳನ್ನಾಗಿಮಾಡಬೇಕು. ಸುರಂಗದ ಬಾಗಿಲಲ್ಲಿರುವ ಬಾಲಕರಿಬ್ಬರು ಉಳಿದ ಸುರಂಗದ ಬಾಗಿಲಿಗೆ ಸಮನಾಗಿಯೇ ನಿಲ್ಲಬೇಕು.

ಹಿರಿಯಣ್ಣನು ಎಲ್ಲಾ ಸುರಂಗಗಳ ಹಿಂಬಾಗಿಲಿನ ಬಾಲಕರಿಬ್ಬರಿಗೆ ನಾಣ್ಯಗಳನ್ನು ಕೊಟ್ಟಕೂಡಲೇ ಹಿರಿಯಣ್ಣನು ಶೀಟಿಯನ್ನು ಊದುವನು, ಕೂಡಲೆ ಹಿಂಬಾಗಿಲಿನ ಬಾಲಕರಿಬ್ಬರು ಹಿಡಿದಿದ್ದ ತಮ್ಮ ಕೈಗಳನ್ನು ಬಿಟ್ಟು ಸುರಂಗದೊಳಗೆ ನುಗ್ಗಿ ಹೋಗಿ ಹೊರಗಡೆಯ ಬಾಗಿಲಿನಾಜೆ ಕಂಭಗಳಾಗಿ ನಿಲ್ಲುತ್ತಾರೆ. ಕೈಗಳನ್ನು ಮೇಲೆತ್ತಿ ಹಿಡಿದುಕೊಳ್ಳುವುದಕ್ಕೆ ಮೊದಲು ತಮ್ಮ ಪಕ್ಕದಲ್ಲಿರುವ ಬಾಲಕರಿಬ್ಬರಿಗೆ ನಾಣ್ಯವನ್ನು ಕೊಡುತ್ತಾರೆ ಈ ಬಾಲಕರು ತಮ್ಮ ಪಕ್ಕದವರಿಗೆ ತಲ್ಪಿಸಬೇಕು. ಹೀಗೆ, ಈಗ ಹಿಂಬಾಗಿಲಿನಲ್ಲಿರುವ ಬಾಲಕರಿಬ್ಬರಿಗೆ ತಲ್ಪಿದ ಕೂಡಲೆ ಅವರು ಕೈಬಿಟ್ಟು, ಸುರಂಗದಲ್ಲಿ ನುಗ್ಗಿ ಬಂದು, ಮುಂಭಾಗದಲ್ಲಿ ನಿಂತುಕೊಳ್ಳಬೇಕು. ಇವರು ನಾಣ್ಯವನ್ನು ಪಕ್ಕದವರ ಮುಖಾಂತರ ಹಿಂದಕ್ಕೆ ತಲ್ಪಿಸಬೇಕು.

ಹೀಗೆ ಪ್ರತಿ ಬಬ್ಬನೂ ಒಂದುಸಲ ಓಡಿದನಂತರ ಆಟವು ಪ್ರಾರಂಭವಾಗುವಾಗ ನಿಂತಂತೆ ನಿಲ್ಲುವುದರಲ್ಲಿ ಯಾರು ಮೊದಲಾಗುತ್ತಾರೆಯೋ ಅವರೇ ಗೆದ್ದಂತೆ.

ಕಬ್ಬಿಗಳೊಡನೆ ನಮ್ಮದೊಂದು ಹರಟೆ.

ಸೋಲಿಗರು.

ಬಿಳಿಗಿರಿರಂಗನಬೆಟ್ಟದ ಹತ್ತಿರ ಸುತ್ತಮುತ್ತಲೂ ದೊಡ್ಡ ದೊಡ್ಡ ಕಾಡುಗಳಿವೆ. ಅವುಗಳಲ್ಲಿ ಆನೆಗಳೂ, ಚಿರತೆಗಳೂ ಅನೇಕವಾಗಿವೆ. ಈ ಕಾಡಿನ ಮಧ್ಯದಲ್ಲಿ "ದೊಡ್ಡ ಸಂಪಿಗೆ" ಮರವಿದೆ. ಅದು ಗಾತ್ರದಲ್ಲಿ ಬಹಳ ದೊಡ್ಡದಾಗಿರುತ್ತದೆ. ಅದನ್ನು ನೋಡಲು ಅನೇಕರು ಹೋಗುತ್ತಾರೆ. ಹೋಗಲು ಮಾತ್ರ ಸರಿಯಾದ ರಸ್ತೆಯು ಇರುವುದಿಲ್ಲ. ಕಾಡಿನಲ್ಲಿಯೇ ಇರುವ ಕಾಲುಹಾದಿಯಲ್ಲಿ ಹೋಗಬೇಕು. ಕಾಡುಪ್ರಾಣಿಗಳು ಮತ್ತು ರಸ್ತೆಯು ತಿಳಿಯದಿರುವುದರ ಹೆದರಿಕೆಯಿಂದ ಅಲ್ಲಿನ ಕಾಡು ಜನರ ಸಹಾಯವನ್ನು ಕೋರಲೇ ಬೇಕಾಗಿದೆ. ಅವರು ಜನಗಳನ್ನು ಕೂಡಿಸಿ ಒಂದುಸಲಕ್ಕೆ ಏನತ್ತು ಅರವತ್ತು ಜನಗಳನ್ನು ಕರೆದುಕೊಂಡು ಹೋಗುತ್ತಾರೆ. ಆ ಸಂದರ್ಭಗಳಲ್ಲಿ ಆನೆಗಳು ದೂರದಲ್ಲಿ ಬರುವುದನ್ನು ಆ ಕಾಡುಜನರು ಕೂಡಲೇ ಗ್ರಹಿಸುವುದನ್ನೂ ಜನರನ್ನು ಕಷ್ಟದಿಂದ ತಪ್ಪಿಸುವ ಉಪಾಯಗಳನ್ನೂ ತಿಳಿದಿರುತ್ತಾರೆ. ಈ ಜನಗಳನ್ನು "ಸೋಲಿಗರು" ಎಂದು ಕೂಗುವ ವಾಡಿಕೆಯಾಗಿದೆ.

ಈ ಜನರು ಯಾವಾಗಲೂ ಕಾಡಿನಲ್ಲಿಯೇ ವಾಸಮಾಡುತ್ತಾ, ಸ್ವಾವಲಂಬಿಗಳಾಗಿ, ದೃಢಕಾಯರಾಗಿರುತ್ತಾರೆ ಅಲ್ಲದೆ ಅವರು ಯಾವಾಗಲೂ ಪದಗಳನ್ನು ಹಾಡುತ್ತಾ ಸದಾ ಸಂತುಷ್ಟರಾಗಿ ನಗುತ್ತಿರುತ್ತಾರೆ. ನಿಶ್ಚಯವಾದ ಸ್ಕೌಟೆಂದರೆ ಇವರು.

* * *

ತಮ್ಮಾ, ನಮಗಾಗಿ ಕಷ್ಟಪಟ್ಟು, ನಮ್ಮ ಸುಖಕ್ಕಾಗಿ ಪ್ರಾಣಗಳನ್ನು ಕೂಟ್ಟವರು ಅನೇಕರಿದ್ದಾರೆ. ರಾತ್ರಿಯ ಹೊತ್ತು ನಮ್ಮ ಸ್ವತ್ತನ್ನು ಕಾಯುವ ಪೋಲೀಸಿನವರು, ನಮ್ಮ ವ್ಯಾಧಿಗಳೊಡನೆ ಹೊಡೆದಾಡುತ್ತಾ ಅದರಿಂದ ತಮ್ಮ ಪ್ರಾಣಕ್ಕೆ ಹಾನಿಮಾಡಿಕೊಳ್ಳಬಹುದಾದ ವೈದ್ಯರು, ನಮ್ಮ ದೇಶವನ್ನು ಕಾಪಾಡುವ ಸೈನಿಕರು, ಗಣಿಗಳಲ್ಲಿ ನಮ್ಮ ಆನಂದಕ್ಕಾಗಿ ಬಂಗಾರ, ಬೆಳ್ಳಿ ಮುಂತಾದವುಗಳನ್ನು ತೆಗೆಯುತ್ತಾ ಆಪಾಯಕ್ಕೆ ಗುರಿಯಾಗುವ ಕೂಲಿಗಾರರು ಸಹ ನಿಜವಾದ ಸ್ಕೌಟುಗಳೆನ್ನಬೇಕು.

ನೋಡಿ, ಈಗ ಕೆಲವು ದಿನಗಳ ಹಿಂದೆ ಒಬ್ಬ ಸ್ನೇಹಿತರ ಮನೆಗೆ ಊಟಕ್ಕೆ ಹೋಗಿದ್ದೆ. ಅನೇಕ ಇತರ ಸ್ನೇಹಿತರೂ ಸಹ ಊಟಕ್ಕೆ ಬಂದಿದ್ದರು. ಆಡಿಗೆಯು ಬಹಳ ರುಚಿಕರವಾಗಿದ್ದಿತು. ನಾವುಗಳೆಲ್ಲರೂ ನಮ್ಮ ಸ್ನೇಹಿತನನ್ನೂ ಕೊಂಡಾಡಿ, "ನಿನಗೆ ಬಹಳ ಶ್ರಮವಾಯಿತು" ಎಂದು ಹೇಳಿ ಉಪಚಾರದ ಮಾತುಗಳಾಡಿದೆವು. ನಮ್ಮ ಕೈಗಳನ್ನು ತೊಳೆದುಕೊಳ್ಳುವದಕ್ಕಾಗಿ ಬಚ್ಚಲಮನೆಗೆಹೋಗುವಾಗ ಮೈಮೇಲೆ ಬೆವರಿನ ಧಾರೆಗಳು ಸುರಿಯುತ್ತಿರುವ ಒಬ್ಬಾತನನ್ನು ನೋಡಿದೆವು. ಆತನು ಸಲ್ಲಿಯಹತ್ತಿರ ನಿಂತು ಸ್ನಾನಮಾಡುವುದಕ್ಕೆ ಅಣಿಮಾಡಿಕೊಳ್ಳುತ್ತಿದ್ದನು ಆತನೇ ನಮ್ಮ ಸ್ನೇಹಿತ ಅಡಿಗೆಯವನು. ಕಷ್ಟಪಟ್ಟಿದ್ದು ಆತ, ಉಪಚಾರ ಮಾತ್ರ ನಮ್ಮ ಸ್ನೇಹಿತರಿಗೆ ಸೋಡಿ ಹೋಗಿದೆ. ಇದು ಒಂದು ಸಣ್ಣ ಉದಾರಹಣೆ ಆದರೂ ಹೀಗೆ ಅನೇಕರು ಒಬ್ಬರ ಕಣ್ಣಿಗೂ ಕಾಣಿಸಿಕೊಳ್ಳದೇ ಹಿಂದುಗಡೆಯಲ್ಲಿಯೇ ನಿಂತು ಕಲಸಮಾಡುತ್ತಿರುತ್ತಾರೆ ಅವರಿಗೆ ಯಾವ ಶಹಬಾಸ್‌ಗಿರಿಯೂ ಇಲ್ಲ. ನಮಗೆ ಇವರಿಂದಲೇ ಜಯವು. ಆದರೆ ಇಂತಹವರನ್ನು ನಾವು ಮರೆತುಬಿಡುತ್ತೇವೆ. ಫುಟ್‌ಬಾಲ್ ಆಟದಲ್ಲಿ ಗೋಲಿನ ಕಾವಲಿರುವವನಂತೆಯೇ ಇವರೆಲ್ಲರೂ.

ಇದರಿಂದ ನೀವುಗಳು ಕಲಿಯಬೇಕಾಗಿರುವುದು ಬಂದಿದೆ. ನಿಮ್ಮ ಮನಸ್ಸಿಗೆ ಜೆನ್ನಾಗಿದ್ದರೂ ಸರಿ, ಇಲ್ಲದಿದ್ದರೂ ಸರಿ, ಎಂಥಹ ಕೆಲಸವನ್ನಾದರೂ ಮಾಡಲೇಬೇಕು. ಆ ಕೆಲಸವನ್ನು ನೀವು ಮಾಡುವುದು ಇತರರಿಗೆ ತಿಳಿದರೂ ಸರಿ, ತಿಳಿಯದಿದ್ದರೂ ಸರಿ, ನೀವು ಆ ಕೆಲಸವನ್ನು ಮಾಡಲೇಬೇಕು. ನಿಮ್ಮಗಳಿಗೇ ಯಶಸ್ಸು ಬರಬೇಕೆಂದು ಕೆಲಸ ಮಾಡಬೇಡಿ ನಿಮ್ಮ ಪಂಗಡದವರು ಗೆದ್ದರೆ ಸಾಕೆಂಬ ಭಾವನೆಯು ನಿಮ್ಮಲ್ಲಿರಬೇಕು.

ಆತ್ಮಸೇವೆಯಲ್ಲ, ಸಮಾಜಸೇವೆ.

ಯುವರಾಜಕುಮಾರರು ಮತ್ತು ಸಿಲೋನಿನ ಚೀಫ್ ಕಮಿಷ್ನರವರು.

ಮೈಸೂರು ಸ್ಕೌಟ್



ಆನಂದ.

ಹೋ ! ಆನಂದಂ, ಪೇರಾನಂದಂ,
ನೆಗೆವಾ ಕುಣಿವಾ ಮಿಗುವಾನಂದಂ.

ಓ ಶಿವ ಬಾರಯ್
ಓ ಶಿವ ಬಾರಯ್

ಬೆಳ್ಕಿಯು ಬೆಟ್ಟದ ಕೋಡಿನ ಬೀಡಿನ್,
ತೆಂಕಣ ನಾಡಿನ ಕೋಯಿಲ ಕೋಡಿನ್,
ಒಂದೇ ನೆಗೆತಂ ನೆಗೆಯುತೆ ಬಾರಯ್.

ಬಾ ನಟರಾಜಾ
ಬಾ ನಟರಾಜಾ

ಲೋಕಂ ಪುಟ್ಟಲಾ, ಲೋಕಂ ನಾಯಲಾ,
ದೇಸತೆಗಳ ಗಣಮೆಲ್ಲಂ ಪಾಯಲ್,
ಒರ್ವನೆ ತಾಂಡವವಾಡುವ ರಾಜಾ,
ನಾಟ್ಯಂಗಲಿಸುವ ಓ ನಟರಾಜಾ
ಕುಣಿವೆನ್ ಕಲಿಸೆನಗೀಗಳ್ ಬಾರಯ್.

ಕುಣಿವೆನ್ ಬಾರಯ್
ಓ ಶಿವ ಬಾರಯ್

ಕಣ್ಣಿನ್ ಜೆದುರಿತು ಕಳ್ತಲೆ ನೋಡಯ್,
ನಮೆಯಾ ಭ್ರಮೆಯಾ ಕಳ್ತಲೆ ನೋಡಯ್.

ಹೋ, ಆನಂದಂ
ಪೇರಾನಂದಂ.

ಕಣ್ಣಿನ್ ಮುಸುಕಿದ ಕಳ್ತಲೆಯೋಡಲ್,
ಬಗೆಯೊಳ್ ಶಿವನಾ ಬೆಳ್ವಗಾಡಲ್
ಮೂಡಿತು ಸೂರ್ಯಂ, ಜೀವಾನಂದಂ

ಓ ಶಿವ ಶಂಕರ
ಓ ಶಿವ ಶಂಕರ

ತಿರುಗಲ್ ಮಾನವ ಸೇವೆಗೆ ಶಂಕರ
ಆಗದುದಾವುದು ಓ ಶಿವಶಂಕರ ?
ಕುಣಿವೆನ್ ಕರುಣಿಸು ನನಗಾನಂದಂ,

ಕುಣಿವಾನಂದಂ
ಪೇರಾನಂದಂ.

—ಶ್ರೀ.

[ಸೂಚನೆ :—ಈ ಪದ್ಯವನ್ನು ನಮ್ಮ ಗುರುಗಳಾದ ಮು|| ರಾ|| ಬಿ. ಎಂ. ಶ್ರೀಕಂಠಯ್ಯನವರು ಬರೆದಿರುವ ಹಳೆಗನ್ನಡದ 'ಅಶ್ವತ್ಥಾಮನ್' ಎಂಬ ನಾಟಕದಿಂದ ಆರಿಸಿದುದಾಗಿದೆ. ಇನ್ನೂ ಪ್ರಚುರವಾಗದಿರುವ ತಮ್ಮ ಆ ನಾಟಕದಿಂದ ಇದನ್ನು ಆರಿಸಿಕೊಂಡು ಮುದ್ರಿಸುವುದಕ್ಕೆ ಅವರು ಅನುಮತಿಯನ್ನು ಕೊಟ್ಟುದುದಕ್ಕಾಗಿ ನಾವು ತುಂಬಾ ಕೃತಜ್ಞರಾಗಿರುತ್ತೇವೆ. ಗ್ರೀಕಿನಲ್ಲಿರುವ ಸುಪ್ರಸಿದ್ಧ ನಾಟಕಕರ್ತನಾದ ಸಫೋಕ್ಲಿಯಸ್ಸಿನ 'ಅಜಾಕ್ಸ್' ಎಂಬ ನಾಟಕವನ್ನು ಮು|| ರಾ|| ಶ್ರೀಯವರು ಕನ್ನಡದಲ್ಲಿ 'ಅಶ್ವತ್ಥಾಮನ್' ಎಂದು ಬರೆದಿರುವರು. ಈ ಪದ್ಯವು, ಅಲ್ಲಿ ಮೇಳದವರು ಹೇಳುವ ಒಂದು ಹಾಡನ್ನು ಅನುವರ್ತಿಸಿದೆ. ನಮ್ಮಲ್ಲಿ ಚಿಕ್ಕ ಚಿಕ್ಕ ಬಾಲಕರು ತಾಳ ಜಾಲರಿಯೊಡನೆ ಹಾಡುವುದಕ್ಕೆ ಒಹಳ ಅನುಕೂಲವಾಗಿದೆ. ಅಲ್ಲದೆ ನಮ್ಮ ಕಿರಿಯ ತಮ್ಮಂದಿರು ಅವರ ಕುಣಿತಗಳಲ್ಲೊಂದರಲ್ಲಿ ಇದನ್ನು ಉಪಯೋಗಿಸಿಕೊಳ್ಳಬಹುದು.

ಸಂ, ಮೈ. ಪ.]

ಬಿಡಿ ನುಡಿಗಳು.

ಸ್ಕೌಟಿನ ಪರಮಧ್ಯೇಯವು ಪರಸೇವೆಯೆಂಬುದನ್ನು ನಾವು ಯಾವಾಗಲೂ ಮರೆಯಬಾರದು. ಬಾಲಚಾರರ ಶಿಕ್ಷಣವೆಲ್ಲವೂ ಆ ಧ್ಯೇಯಸಾಧನೆಗೆ ಅನುಕೂಲವಾಗಿರಬೇಕು. ಬಾಲಚಾರ ಶಿಕ್ಷಣವೇ ಏಕೆ, ಯಾವ ಶಿಕ್ಷಣವಾದಲೂ ಒಂದು ಧ್ಯೇಯ ಸಾಧನೆಗೆ ತಾನೇ?

ಧ್ಯೇಯವನ್ನು ಸಾಧ್ಯವನ್ನಾಗಿ ಮಾಡುವ ಶಿಕ್ಷಣವು ಸ್ಕೌಟಿಂಗ್ ಆಗಿರುವುದಾದರೆ, ಆ ಸ್ಕೌಟು ಕ್ರಮದಲ್ಲಿ ಧ್ಯೇಯಸಾಧನ ಕುರುಹುಗಳನ್ನು ನಾವು ತಿಳಿದು, ಆ ಕುರುಹುಗಳನ್ನು ಬಿಡದೇ ಕಣ್ಣ ಮುಂದೆ ಇಟ್ಟುಕೊಂಡಿರಬೇಕು. ಅಜಾಗರೂಕತೆಯಿಂದಲೋ, ಅಲಸ್ಯದಿಂದಲೋ ಅಥವಾ ಅವಿವೇಕದಿಂದಲೋ ಅಂತಹ ಕುರುಹುಗಳು ನಮ್ಮ ಕಣ್ಣಿಗೆ ಬೀಳದಂತೆ ಆಗಿಹೋಗಬಹುದು. ಅಂತಹ ಸಂದರ್ಭಲ್ಲೆಲ್ಲಾ ಸ್ಕೌಟಿಂಗು ಹಾಳಾಗಿಹೋಗಿರುವುದೆಂದು ಧಾರಾಳವಾಗಿ ಹೇಳ ಬಹುದು.

* * *

ಅಂತಹ ಕುರುಹುಗಳಲ್ಲಿ ಅತಿ ಮುಖ್ಯವಾಗಿರುವುದು ಒಂದಿರು ವುದು. ಅದು ಯಾವುದೆಂದರೆ ಸ್ಕೌಟುಶಿಕ್ಷಣದಲ್ಲಿ ಅಂಗಪ್ರತ್ಯಂತಗ ದಲ್ಲಿಯೂ ಅದು ವಿದ್ಯಾಭ್ಯಾಸದ ಒಂದು ಅಂಗವೆಂದು ಕಂಡುಬರುತ್ತಿರು ವುದು. (ವಿದ್ಯಾಭ್ಯಾಸವೆಂಬ ಶಬ್ದವನ್ನು ವಿಶಾಲಾರ್ಥದಲ್ಲಿ ಉಪಯೋ ಗಿಸಿದೆ). ಇದೊಂದರಲ್ಲಿಯೇ ಸ್ಕೌಟುಶಿಕ್ಷಣದ ಜೀವಾಳವು ಕಂಡು ಬರುತ್ತದೆ. ಸ್ಕೌಟುಶಿಕ್ಷಣವು ವಿದ್ಯಾಭ್ಯಾಸದಂತೆಯೇ ಒಬ್ಬ ಮನುಷ್ಯ ನಿಗೆ ಮನುಷ್ಯತ್ವಸಂಪಾದನೆಯನ್ನು ಮಾಡಿಕೊಡುವುದೇ ವಿನಾ ಆ ಮನುಷ್ಯನನ್ನು ಯಾವ್ರದಾದರೊಂದು ಹುದ್ದೆಗೋ ಅಸವಾ ಉದ್ಯೋ ಗಕ್ಕೋ ತರಬೇತು ಮಾಡುವುದಿಲ್ಲ.

* * *

ಈಗ ಡ್ರಿಲ್ ಇದೆಯಷ್ಟೆ. ಸ್ಕೌಟುಶಿಕ್ಷಣವು ಬರೀ ಡ್ರಿಲ್ಲಲ್ಲ. ಹಾಗಿದ್ದರೆ ಅದಕ್ಕೂ ಸೈನ್ಯಕ್ಕೂ ವ್ಯತ್ಯಾಸವೇ ಇರುತ್ತಿರಲಿಲ್ಲ. ಮನು ಷ್ಯನಿಗೆ ಮನುಷ್ಯತ್ವ ಸಂಪಾದನೆಗೆ ಎಷ್ಟು ಬೇಕೋ ಅಷ್ಟು ಡ್ರಿಲ್ ಇದೆ. ಈಗ, ಒಂದು ಮನೆಗೆ ಬೆಂಕಿ ಬಿದ್ದಿದೆ. ಆಸಮಯದಲ್ಲಿ, ಸರಿಯಾಗಿ ನಾಲ್ಕು ಮಂದಿ ಸೇರಿ, ಗುಂಪೊಂದು ಕೆಲಸಮಾಡಿ, ಜನರಿಗೆ ಉಪಕಾರಿ ಯಾಗಿ, ಮುಖ್ಯವಾಗಿ ಮನುಷ್ಯತ್ವವನ್ನು ತೋರ್ಪಡಿಸಲು, ಅಂತಹ ಮಾನವನಿಗೆ ಸ್ವಲ್ಪ ಡ್ರಿಲ್ ಒಂದಿರಬೇಕು. ಇಲ್ಲದಿದ್ದರೆ ಅಂತಹ ಸಮ ಯಗಳಲ್ಲಿ ಅವನೂ ಕೂಡ ಮನುಷ್ಯರೂಪದ ಪ್ರಾಣಿಯಂತೆ ವರ್ತಿಸಿ ತನ್ನಲ್ಲಿ ಮನುಷ್ಯತ್ವವೇ ಇಲ್ಲವೆಂದು ತೋರಿಸಿಕೊಳ್ಳುತ್ತಿದ್ದನು.

* * *

ಹಾಗೆಯೇ ಉಳಿದ ಶಿಕ್ಷಣಭಾಗಗಳ ವಿಚಾರವೂ ಆಗಿದೆ. ಮನುಷ್ಯನಿಗೆ ಜನ್ಮತಃ ಬಂದಿರುವ ಯಾವ, ಪ್ರಕೃತಿಸಿದ್ಧವಾ ಪ್ರತೀಕಾರಮಾರ್ಗಗಳಿರುವವೊ, ಯಾವ ಆಕಾಂಕ್ಷೆಗಳಿರುವ (Instincts) ಆ ಮಾರ್ಗಗಳು ಅಥವಾ ಆ ಆಕಾಂಕ್ಷೆಗಳು ಪ್ರಯೋ ಗಬಲದಿಂದ ಒಲಿತು, ಅಂತಹ ಮನುಷ್ಯನನ್ನೂ ಒಬ್ಬ ಮನುಷ್ಯತ್ವವನ್ನು ಬಬ್ಬ ಮನುಷ್ಯತ್ವವನ್ನು ಹೊಂದಿರುವ ವ್ಯಕ್ತಿಯನ್ನಾಗಿ ಮಾಡಬೇಕು. ಅಂದರೆ ಸ್ವಭಾವಸಿದ್ಧವಾದ ಆಕಾಂಕ್ಷೆಗಳು ಪ್ರಯೋಗಬಲದಿಂದ ಒಲಿತು ಅಮಾನುಷ್ಯನನ್ನು ಮಾನವನನ್ನಾಗಿಮಾಡಬೇಕು. ಹೀಗೆ ಪ್ರಯೋಗಗ ಳುಂಟಾಗಲು ಅವಕಾಶವು ದೊರೆಯಬೇಕಾದರೆ ಶಿಕ್ಷಣದ ಅಂಗಗಳು ಅದಕ್ಕೆ ಅನುಸಾರವಾಗಿರಬೇಕು. ನಮ್ಮ ಸ್ಕೌಟು ಶಿಕ್ಷಣದಲ್ಲಿ ಅಂಗಾಂ ಗಳು ಹಾಗೆ ಇವೆಯೇ ಇಲ್ಲವೇ ಎಂಬುದನ್ನು ತಿಳಿದಿರಬೇಕು.

* * *

ನಮ್ಮ ಧ್ಯೇಯವು 'ಪರಸೇವೆ', 'ಪರೋಪಕಾರ' ವೆಂದು ನಾವು ಹೇಳುವುದಿಲ್ಲ. ಯಾಕೆಂದರೆ ಉಪಕಾರ ಶಬ್ದಕ್ಕೆ ಅನೇಕವೇಳೆ 'ಪ್ರತಿ' ಎಂಬೊಂದು ಪ್ರತ್ಯಯವು ಸೇರಿರುತ್ತದೆ. ಅಂತಹ ಪರಸೇವೆ ಯನ್ನು ಸಾಧ್ಯವನ್ನಾಗಿ ಮಾಡಬೇಕಾದರೆ ನಮ್ಮ ಶಿಕ್ಷಣಪದ್ಧತಿಯಲ್ಲಿ ಆಕಾಂಕ್ಷೆಗಳ ಪ್ರಯೋಗ—ಸನ್ಮಾರ್ಗದಲ್ಲಿ ಪ್ರಯೋಗಿಸಲು ಅನುಕೂ ಲವಾದ ಮನಸ್ಸು—ಇವೆರಡೂ ಕಂಡುಬರಬೇಕು. ಉತ್ತಮವಾದ ಸ್ಕೌಟುಪದ್ಧತಿಯಲ್ಲಿ ಇವೆರಡೂ ಕಂಡುಬರುತ್ತದೆ. ಆದರೆ ಇವೆರಡು ಕುರುಹುಗಳು ಯಾವ ಪದ್ಧತಿಯಲ್ಲಿ ಇಲ್ಲವೋ ಅಲ್ಲಿ ಸ್ಕೌಟಿಂಗು ಹಾಳಾ ಗಿರುತ್ತದೆ.

* * *

ಸ್ಕೌಟ್‌ಶಿಕ್ಷಣಕ್ಕೂ ಇತರ ಯುವಕಶಿಕ್ಷಣಗಳಿಗೂ ಇರುವ ವ್ಯತ್ಯಾಸವಾದರೂ ಇದೇ ಆಗಿರುವುದು. ಆ ಶಿಕ್ಷಣಗಳಲ್ಲಿ ಆಕಾಂಕ್ಷೆ ಗಳು ಬಲಿಯಲು ಮಾರ್ಗವು ವಿಶೇಷವಾಗಿರುವುದಿಲ್ಲ—ಅಥವಾ ಇದ್ದರೂ ಸರಿಯಾದ ಮಾರ್ಗದಲ್ಲಿ ಪ್ರಯೋಗಿಸಲು ಅವಕಾಶವಿರುವುದಿಲ್ಲ.

* * *

ಆದರೇನು? ಯಾವ ಯುವಕಶಿಕ್ಷಣಪದ್ಧತಿಯೇ ಆದರೂ ಯುವ ಕರಿಗೆ ಮುಂದೆ ಬರಬಹುದಾದ ಯೋಗ್ಯತೆಗೆ ಅಥವಾ ಸ್ಥಾನಕ್ಕೆ ಸಿದ್ಧರನ್ನಾಗಿ ಮಾಡಬೇಕು.

ಗೃಹಶಿಕ್ಷಣ.

[ಮಕ್ಕಳ ಸ್ಕೂಲು ಮನೇಲಲ್ವೆ? ಗುಂಡೂ]

(ಅಮೇರಿಕಾದೇಶದ ಕಿಂಡರ್‌ಗಾರ್ಟನ್ ಸಂಘದವರ ಅನುಮತಿಯಿಂದ)

ಬಾಯಿಮುಚ್ಚು ಮೂಲೆಯಲ್ಲಿ ಕೂತುಕೊ !

ಹಿಂದೆ ಯಾವಾಗಲೋ ಕಲಿತಿದ್ದು ಈಗ ಮರೆತುಹೋಗಿದ್ದ ಒಂದು ಹಸೆಯನ್ನು ಅಮ್ಮನು ಜ್ಞಾಪಿಸಿಕೊಳ್ಳುತ್ತಿದ್ದಳು. ಎಷ್ಟು ಪ್ರಯತ್ನಪಟ್ಟರೂ ಜ್ಞಾಪಕವೇ ಆಗುತ್ತಿರಲಿಲ್ಲ. ಪ್ರಯತ್ನಪಟ್ಟರೂ ಬರಲಿಲ್ಲವಲ್ಲಾ ಎಂದು ಕ್ಷಣಕ್ಷಣಕ್ಕೂ ಜಿಗುಪ್ಸೆಪಟ್ಟುಕೊಳ್ಳುತ್ತಿದ್ದಳು.

ಇದೇ ಸಮಯದಲ್ಲಿ ಶಾಂತೆಯು ಬಹಳ ಆಟಗೂಳಿಹೆಣ್ಣಾಗಿದ್ದಳು. ಯಾವುದಾದರೂ ಒಂದು ಆಟವನ್ನೂ ಆಡದೇ ಕ್ಷಣಕ್ಷಣಕ್ಕೂ ಬೇರೆ ಬೇರೆ ಆಟಗಳಲ್ಲಿ ಆಸಕ್ತಿಯುಳ್ಳವಳಾಗಿ ಬಹಳ ಗಲಾಟೆ ಮಾಡುತ್ತಿದ್ದಳು. ಇವಳ ಸದ್ದಿನಿಂದ ಅಮ್ಮನಿಗೂ ರೇಗಿತು, ರಂಗವಲ್ಲಿಯೂ ಮುಂದೆ ಸಾಗಲೊಲ್ಲದು. ಅಮ್ಮನ ಸಿಟ್ಟಿಗೆ ಮೇರೆತಪ್ಪಿತು.

"ಶಾಂತೆ ಇಲ್ಲಿಬಾ" ಎಂದು ನನ್ನ ತಂಗಿಯನ್ನು ಕರೆದು "ಬಾಯಿ ಮುಚ್ಚಿ ಆ ಮೂಲೆಯಲ್ಲಿ ಕೈಕಟ್ಟಿ ಕೂತುಕೊ? ಇಲ್ಲದಿದ್ದರೆ ನಿನ್ನ ಬೆನ್ನಿನ ಚರ್ಮ ಸುಲಿಯುತ್ತೀನೆ" ಎಂದಳು. ಪಾಪ ಶಾಂತೆಯು ಮೂಲೆಗೆ ಹೋಗಿ ಕೈಕಟ್ಟಿ ಕೂತುಕೊಂಡಳು. ನನಗಂತೂ ಬಹಳ ಸಂಕಟವಾಯಿತು.

ಅಮ್ಮನು ಮಾಡಿದ್ದು ತಪ್ಪೆ? ನಾವುಗಳು ಚಿಕ್ಕವರಾಗಿದ್ದಾಗ ಅಮ್ಮನು ಹೀಗೆಯೇ ಆನ್ನುತ್ತಿದ್ದಳು ಆಗಲೂ ಅಮ್ಮನ ಮನಸ್ಸಿನಲ್ಲಿ ಇದರಿಂದ ಮಗುವು ಒಳ್ಳೆಯತನವನ್ನು ಕಲಿಯುತ್ತದೆಂದು ಭಾವಿಸಿದ್ದಳು. ನಾವುಗಳು ಮೂಲೆಯಲ್ಲಿ ಕೂತಾಗ ಯಾವುದಾದರೂ ಒಳ್ಳೆಯತನವನ್ನು ಮನನಮಾಡುತ್ತಿದ್ದೆವೆ? ಇಲ್ಲ ಅಮ್ಮನ ಸಿಟ್ಟು ಕಮ್ಮಿಯಾಗಲಿ ಸಂತರ ಒಂದಕ್ಕೆ ಎರಡರಷ್ಟು ತುಂಟತನವನ್ನು ಮಾಡಬೇಕೆಂದು ಮನಸ್ಸುಮಾಡುತ್ತಿದ್ದೆವು. ಇಂತಹ ಶಿಕ್ಷೆಯಿಂದ ಮಕ್ಕಳಿಗೆ ಯಾವಗುಣವೂ ಆಗುವದಿಲ್ಲ.

ಒಳ್ಳೆಯ ಮಕ್ಕಳು ಸದ್ದನ್ನು ಮಾಡಕೂಡದೇ? ಮಾಡಬಹುದು. ದೀಪವನ್ನು ದುಳಿಸಿ ಒಡೆಯಬಹುದು. ಇತರರು ತನ್ನ ಬೆಕ್ಕಿನಮರಿಯನ್ನು ಗೂಳಿಕ್ಕಿದರೆ, ಅವರನ್ನು ಹೊಡೆದು ಬಡಿಯಬಹುದು ಯಾವ ದುರ್ಬುದ್ಧಿಯೂ ಇಲ್ಲದೆ ಅಮ್ಮನ ಮಾತಿಗೆ ಎದುರಾಡಬಹುದು. ಆದರೆ ಇಂತಹವರು ಕೆಟ್ಟವರು ಎಂದು ಹೇಳಲಾಗುವದಿಲ್ಲ.

ಬಲವಂತದಿಂದ ಒಳ್ಳೆಯತನವನ್ನು ಕಲಿಸಬೇಕೆಂದು ತಿಳಿದ ಹಿರಿಯರು, ತಮ್ಮ ದೊಡ್ಡ ದೊಡ್ಡ ಒಣ ಉಪನ್ಯಾಸಗಳಿಂದ ಬಾಲಕರನ್ನು ಒಳ್ಳೆಯವರಾಗಿ ಮಾಡಬಹುದೆಂದು ತಿಳಿದಿರಬಹುದು. ಇದರಿಂದ ಬಾಲಕರು ನೋಡಲು ಒಳ್ಳೆಯವರಾಗಿ ಕಾಣಬಹುದಾದರೂ ಮನಸ್ಸಿನಲ್ಲಿಯೇ ಕೆಟ್ಟತನವನ್ನು ಬೆಗೆಯುತ್ತಿರುತ್ತಾರೆ, ಇದರಿಂದ ಹಟವೂ, ಸೇಡೂ ಉತ್ಪನ್ನವಾಗುವುವು. ಬುದ್ಧಿವಾದವನ್ನು ಹೇಳುತ್ತಿರುವವರಲ್ಲಿ ಅಲ್ಲದೆ ಈ ಉಪನ್ಯಾಸಕ್ಕೆ ಸಂಬಂಧಪಡದ ಇತರರೊಡನೆಯೂ ದ್ವೇಷವನ್ನು ಸಾಧಿಸುವುದು ಸರ್ವಸಾಮಾನ್ಯವಾಗಬಹುದು.

ಸರಿಯಾದ ತಾಯಂದಿರು ಮಕ್ಕಳನ್ನು ಬಲಾತ್ಕರಿಸದೇ "ಒಳ್ಳೆಯವರಾಗಿರುವುದು" ತಮಗೇ ಸೂಕ್ತವೆಂದು ಮಕ್ಕಳೇ ತಿಳಿದುಕ್ಕೊಳ್ಳುವಂತೆ ಮಾಡುತ್ತಾರೆ.

ಶಾಂತೆಗೆ ರಂಗವಲ್ಲಿಯಲ್ಲಿ ಏನೂ ಇಷ್ಟವಿರಲಿಲ್ಲ. ಅಮ್ಮನಿಗಾಗಿ ತಾನು ಸುಮ್ಮನೇಕಿರಬೇಕೇ? ತನ್ನನ್ನು ಮಗ್ಗಲು ಮನೆ ಸೀತಾಬಾಯಿಯವರ ಜೊತೆಗೆ ಶ್ರೀ ರಂಗನಾಥನ ಗುಡಿಗೆ ಕರೆದುಕೊಂಡು ಹೋಗ ಬಾರದೇಕೆ? ಎಂದು ಶಾಂತೆಯು ತನ್ನ ಮನಸ್ಸಿನಲ್ಲಿ ಯೋಚಿಸುತ್ತಿರಬಹುದು. ಅಮ್ಮನು ಹಾಕುತ್ತಿದ್ದ ರಂಗೋಲೆಯಿಂದ ಮನೆಗೆಬಂದ ಶೋಭೆಯು ಶಾಂತೆಗೆ ಮರೆತುಹೋಗಬಹುದು. ಆದರೆ ಅಮ್ಮನ ಮುಂಗೋಪದಿಂದ ಶಾಂತೆಯು ಮೂಲೆಯಲ್ಲಿ ಕೈಕಟ್ಟಿಕೊಂಡು ಕೂತದ್ದನ್ನು ಅವಳ ಪ್ರಕೃತಿಯು ಮರೆಯಲಾಗುವುದೆ? ಇಲ್ಲ

ಆದರ ಸ್ವೀಕಾರ.

ಮೈಸೂರು ಮಕ್ಕಳ ವಾಚನಾಲಯಕ್ಕೆ ಈ ಕೆಳಗೆ ಕಂಡ ಪುಸ್ತಕಗಳನ್ನು ದಿವಂಗತ ಬಿ. ಕೃಷ್ಣಪ್ಪನವರ ಮಕ್ಕಳು ಮ|| ರಾ|| ನರಸಿಂಹಯ್ಯನವರು ದಯಪಾಲಿಸಿರುತ್ತಾರೆ ಅದಕ್ಕಾಗಿ ನಾವ್ರ ಅವರಿಗೆ ಚಿರ ಋಣಿಗಳಾಗಿರುವೆವು.

ಪುಸ್ತಕಗಳ ಪಟ್ಟಿ.

೧. ಯವನರ ಆಯುತ ಸೇನಾಸಾಹಸದ ಇತಿಹಾಸವು.
೨. ಯವನವೀರ ಕಥಾವಳಿ ಭಾಗ ೧.
೩. ರಾಮಚಂದ್ರಚರಿತಪುರಾಣ ವಿಮರ್ಶೆ.
೪. ರಾಮಚಂದ್ರಚರಿತಪುರಾಣ ಸಂಗ್ರಹ.
೫. ಕುಂದಮಾಲಾ ನಾಟಕ.
೬. ಏಬ್ರಹಾಂ ಲಿಂಕನ್ನಿನ ಚರಿತ್ರೆ.
೭. ಯವನಮಹಾವೀರ ಚರಿತ್ರೆ.
೮. ಶಾಕುಂತಲನಾಟಕದ ವಿಮರ್ಶೆ.
೯. ಕನಕೋದ್ಯಾರ್ಜನ.
೧೦. ಅಶೋಕವಿಜಯ ನಾಟಕಂ.
೧೧. ಟ್ರೋಜ್ ದಂಡಯಾತ್ರೆ.
೧೨. ಮುದಲಿಯಾರ್ ಸಂಗಡದ ಚರಿತ್ರೆ.

ಸುದ್ದಿಗಳು.

ಮೈಸೂರು ಸ್ಕೌಟು ಸಪ್ತಾಹ.

ಮೈಸೂರು ಸ್ಕೌಟು ಸಪ್ತಾಹವು ಬಹಳ ವಿಜೃಂಭಣೆಯಿಂದ ನಡೆಯಿತು. ನಮ್ಮ ನಾಯಕರೂ ಆವರ ಕುಮಾರರೂ ಬಂದು ಸಮಾರಂಭವನ್ನು ಶೋಭಾಯಮಾನಗೊಳಿಸಿದರು. ಸ್ಕೌಟುಗಳೂ ಕಬ್‌ಗಳೂ ತಮ್ಮ ಪ್ರತಿಜ್ಞೆಯನ್ನು ಜ್ಞಾಪಕಮಾಡಿಕೊಂಡ ನಂತರ ನಮ್ಮ ನಾಯಕರೂ ಆವರ ಕುಮಾರರೂ ಮಂಟಪದಲ್ಲಿದ್ದ ಪೀಠವನ್ನು ಸ್ವೀಕರಿಸಿದರು. ಜಿಲ್ಲಾ ಸ್ಕೌಟು ಸಂಘದವರೂ, ರಾಜಧಾನಿಯ ಸ್ಕೌಟು ಸಂಘದವರೂ ನಾಯಕರಿಗೆ ಸ್ವಾಗತವನ್ನು ಬಯಸಿದ ತರುವಾಯ ನಾಯಕರು ಪಂಥ್ಯೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿ, ಎಲ್ಲರಿಗೂ ಉಪದೇಶ ಪೂರ್ವಕವಾಗಿ ಒಂದೆರಡು ಮಾತುಗಳನ್ನು ಹೇಳಿದರು. ಎಂದಿನಂತೆಯೇ ಈ ಉಪದೇಶವು ಗಂಭೀರವಾಗಿ ಯಾ ಸ್ಕೌಟುಗಳಿಗೆ ಉಜ್ಜಿಧ್ಯೇಯ ದೋಪಾದಿಯಲ್ಲಿರುವಂತಿದೆ. ಇದನ್ನು ಆಮೂಲಾಗ್ರವಾಗಿ ಮುಂದಿನ ಸಲ ಮುದ್ರಿಸುತ್ತೇವೆ.

ಬೆಂಗಳೂರಿನಲ್ಲಿಯೂ ಒಂದು ಸ್ಕೌಟು ಸಪ್ತಾಹ.

ಜನವರಿ 22 ರಿಂದ ಫೆಬ್ರವರಿ 3 ರ ವರಿಗೆ ಬೆಂಗಳೂರಿನಲ್ಲಿಯೂ ಒಂದು ಸ್ಕೌಟು ಸಪ್ತಾಹವು ನಡೆಯುತ್ತದೆ.

ನಮ್ಮ ಆಯವ್ಯಯಗಳು.

ಅಂದರೆ ನಮ್ಮ ಲಾಭ ನಷ್ಟಗಳು ದುಡ್ಡು ಕಾಸಿನದಲ್ಲ. ನಮ್ಮನ್ನು ಬಿಟ್ಟುಹೋದ ಮತ್ತು ಬಂದು ಸೇರಿದ ಸ್ಕೌಟುಗೆಳೆಯರದು. ನಮ್ಮ ಜಿಲ್ಲಾ ಸಂಘದ ಉಪಾಧ್ಯಕ್ಷರೂ, (ಗುಟ್ಟಾಗಿ ಹೇಳುತ್ತೇವೆ—ಅದರ ಕಾರಣ ಕರ್ತರೇ) ಆದ ಶ್ರೀ|| ಎ. ವಿ. ರಾಮನಾರ್ಥರವರು ನಮ್ಮ ಜಿಲ್ಲೆಯಿಂದ ವರ್ಗಾಯಿಸಲ್ಪಟ್ಟು ಕೋಲಾರಕ್ಕೆ ಹೊರಟುಹೋಗಿರುತ್ತಾರೆ. ನಮ್ಮ ಜಿಲ್ಲೆಯಲ್ಲಿ ಸ್ಕೌಟು ಚಳವಳಿಯು ಮುಂದುವರೆದಿರುವುದು ಅವರಿಂದಲೇ ಎನ್ನಬೇಕು. ಇಂತಹ ಗೆಳೆಯರು ನಮ್ಮನ್ನು ಅಗಲುವುದು ನಮ್ಮ ದುರ ದೃಷ್ಟವೇ ಸರಿ. ಆದಾಗ್ಯೂ ನಮ್ಮ ಕೋಲಾರದ ಗೆಳೆಯರು ಇವರಿಂದ ಲಾಭವನ್ನು ಹೊಂದುವುದರಿಂದ, ಇವರ ಸಹಾಯದಿಂದ ಅವರೂ ಮುಂದುವರಿದರೆ ನಮಗೆ ಸಂತೋಷವೇ ಸರಿ. ಶ್ರೀ|| ರಾಮನಾರ್ಥರವರಿಗೂ ಕೋಲಾರದವರಿಗೂ ನಮ್ಮ ಅಭಿನಂದನೆಗಳು.

ನಮ್ಮ ಗುಂಪಿಗೆ ಇನ್ನಿಬ್ಬ ಗೆಳೆಯರು ಬಂದು ಸೇರಿರುತ್ತಾರೆ. ನಮ್ಮ ಚೀಫ್ ಸ್ಕೌಟು ಕಮಿಷ್ನರವರಾದ ಶ್ರೀ|| ಶಂಕರನಾರಾಯಣರಾಯರು ನಮ್ಮ ಜಿಲ್ಲಾ ನ್ಯಾಯಾಧೀಶರಾಗಿ ಬಂದಿರುತ್ತಾರೆ. ಸ್ಕೌಟುಗಳಿಗೆ ಇದೊಂದು ಹೆಮ್ಮೆಯ ಸಂಗತಿಯೇ ಸರಿ. ಶ್ರೀ|| ಅನಂತ ರಾವ್‌ರವರು ತುಮಕೂರಿನ ರತ್ನವಾಗಿ ಶ್ರಮಪಟ್ಟವರು. ಇವರು ನಮ್ಮ ಜಿಲಾ ಧಿಪತಿಗಳಾಗಿ ಬಂದಿರುತ್ತಾರೆ. ಈ ಹೊಸ ಗೆಳೆಯರಿಂದ ನಮ್ಮೂರಿನಲ್ಲಿ ಸ್ಕೌಟು ಚಳುವಳಿಯು ಮುಂದುವರಿಯುವುದರಲ್ಲಿ ಸಂದೇಹವೇ ಇಲ್ಲ. ಇವರುಗಳಿಗೆ ನಮ್ಮ ಸುಸ್ವಾಗತ.

ಸಂತೋಷಕೂಟಗಳು.

ಶ್ರೀ ರಾಮನಾರ್ಥರವರಿಗೂ, ಶ್ರೀ|| ಶಂಕರನಾರಾಯಣರಾಯರಿಗೂ ಸ್ಕೌಟುಗಳು ಮರ್ಯಾದಾರ್ಥವಾಗಿ ಸಂತೋಷಕೂಟಗಳನ್ನು ಏರ್ಪಡಿಸಿರುತ್ತಾರೆ. ಈ ಅಥಿತಿಗಳಿಗೆ ನಾವುಗಳು ಮಾಡುವ ಸತ್ಕಾರವು ಅವರು ಮಾಡಿರುವ ಸಹಾಯಕ್ಕೆ ಅತ್ಯಲ್ಪವಾದ ಬಹುಮಾನವೆಂದೆನ್ನಬೇಕು.

ಶ್ರೀ|| ಎ. ವಿ. ರಾಮನಾರ್ಥರವರು.

ವಿಮರ್ಶೆಗಾಗಿ ಬಂದವುಗಳು.

೧. ಉರ್ದು ಸ್ಕೌಟು ಗೀತೆಗಳು :
ವೆ|| ಟಿ. ಎಸ್. ಶಿವಣ್ಣ, ಸಿಟಿ ಕಾಲೇಜ್, ಹೈದರಾಬಾದ್ ಡಕ್ಕನ್.

೨. ಸತ್ಯಾಗ್ರಹ :
ವೆ|| ಅ. ಸರ್ವಾಭಟ್ಟ, ಕೃಷ್ಣಕಂಪನಿ, ಬೆಂಗಳೂರು.

೩. ಮಧುರೆ ಮಠದ ಮಿಷನರಿಗಳು :
ವಿಶ್ವಕರ್ನಾಟಕ ಪ್ರಕಟನಾಲಯ, ಬೆಂಗಳೂರು.

೪. ಕುರಾ ೧|೪ ಭಾಗ ದೀರ್ಘದಾರ ಸೆನೂಜ, ಬೆಂಗಳೂರು.

(ವಿಮರ್ಶೆ ಯಥಾ ಸಾವಕಾಶ).

ಲಭಬೆಲೆ! ಅತ್ಯುತ್ತಮತರಹ ಫೌಂಟ್‌ಪೆನ್‌ಗಳು!! ತರಿಸಿ ಪರೀಕ್ಷಿಸಿರಿ!!

ವರಲ್ಡ್‌ವಂಡರ್ ಪೌಂಟ್‌ಪೆನ್ 1 ಕ್ಕೆ	3-0-0	5. ಬ್ಲಾಕ್‌ಬರ್ಡ್ ಫೌಂಟ್‌ಪೆನ್ 1ಕ್ಕೆ	3-8-0 ಮತ್ತು 3-12-0
ಡಿಟೋನಮೂನೆ ಸ್ಕ್ರೂಕ್ಯಾಪಿರುವ ಪೆನ್ 1ಕ್ಕೆ	3-8-0	6. "ವಾಟರ್‌ಮನ್" ಫೌಂಟ್‌ಪೆನ್ 1 ಕ್ಕೆ	8-8 0
ಹಾರ್ಡ್‌ವೇರ್ ಫೌಂಟ್‌ಪೆನ್ 1 ಕ್ಕೆ	3- 0-0	7. "ವಾಟರ್‌ಮನ್" ಸೆಲ್ಫ್‌ಫಿಲಿಂಗ್ ಫೌಂಟ್‌ಪೆನ್ 1 ಕ್ಕೆ	12- 0-0
"ಸ್ವಾನ್" ಫೌಂಟ್‌ಪೆನ್ 1 ಕ್ಕೆ	7- 0-0	8. "ವಾಟರ್‌ಮನ್" ಸೇಫ್ಟಿ ಫೌಂಟ್‌ಪೆನ್ 1 ಕ್ಕೆ	11- 0-0

ಇನ್ನೂ ಅನೇಕತರಹ ಕಡಮೆಕ್ರಯದ ಪೆನ್‌ಗಳು ನಮ್ಮಲ್ಲಿ ದೊರೆಯುತ್ತವೆ. 6 ಸ್ಟೈ ಸ್ಟಾಂಪ್ ರವಾನಿಸಿ ನಮ್ಮ ಕ್ಯಾಟಲಾಗ್ ತರಿಸಿನೋಡಿರಿ.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು, ಮೈಸೂರು.

THE MYSORE SCOUT

"Mysore Scout" (An English Monthly)
OFFICIAL ORGAN
OF THE BOY SCOUTS OF MYSORE.
The Manager,
Tippu Sultan's Palace Fort Bangalore City.

ಸುಬೋಧ [ಮಾಸಪತ್ರಿಕೆ

ವಾರ್ಷಿಕ ಚಂದಾ: ೨—೦—೦, (ಅಂಚೇ ವೆಚ್ಚ ಸೇರಿ)

ಸುಬೋಧ ಪ್ರಕಟನಾಲಯ,
ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

PHYSICAL CULTURE

6th Edition, Revised & Enlarged.

in two annas for postage only. But otherwise the Book is Free.

Prof —M. V. KRISHNA RAO,
Post Basavangudi,
Bangalore City.

ಕರ್ನಾಟಕ ಸ್ಕೌಟ್ ಮಾಸಪತ್ರಿಕೆ.

ವಾರ್ಷಿಕ ಚಂದಾ ೧—೮—೦.

ಮ್ಯಾನೇಜರ್
ಕರ್ನಾಟಕ ಸ್ಕೌಟ್, ಧಾರವಾಡ.

'ಮೈಸೂರು ಮಕ್ಕಳು' ಚಿತ್ರಮಾಲೆ
(Mysore Makkalu Pictorial)
1927-1928

ನುಣುಪಾದ ಕಾಗದದ ಮೇಲೆ ಎರಡು ರಂಗುಗಳಲ್ಲಿ ಮೈಸೂರು ಮಕ್ಕಳ ಚಿತ್ರಗಳನ್ನು ಮುದ್ರಿಸಿ ಪುಸ್ತಕರೂಪದಲ್ಲಿ ಹೊರಡಿಸಲಾಗಿದೆ.

ಹೊಸ ವರ್ಷಕ್ಕಾಗಿ ಮಕ್ಕಳಿಗೆ ಈ ಪುಸ್ತಕವನ್ನು ಉಡುಗೆರೆಯಾಗಿ ಕೊಡಿಸಲು ಅನುಕೂಲವಾಗಿದೆ. ತಮ್ಮ ದೇಶ, ತಮ್ಮ ಜನವೆಂಬ ಸ್ವಾಭಿಮಾನವು ಮಕ್ಕಳಿಗಿರಬೇಕಾದರೆ ಇದೇ ಉಪಾಯ.

ನಮ್ಮ ಚಂದಾದಾರರಿಗೆ ಮಾತ್ರ ೦-೬-೦, ಇತರರಿಗೆ ೦-೮-೦
ವಿ.ಪಿ. ಖರ್ಚು ಪ್ರತ್ಯೇಕ. ವಿ.ಪಿ. ಆಪೇಕ್ಷಿಸುವವರು ೩ ಆಣೆ ಸ್ಟಾಂಪನ್ನು ಕಳುಹಿಸಬೇಕು. ಮೈಸೂರುಮಕ್ಕಳು ಆಫೀಸು, ಮೈಸೂರು.

ದೇವಭೂಜ. (ಮಾಸಪತ್ರಿಕೆ)

ವಾರ್ಷಿಕಚಂದಾ ೧—೪—೦
ವಿ. ಪಿ. ಮೂಲಕ ೧—೮—೦
ವಿಳಾಸ:—**"ದೇವಭೂಜ" ಆಫೀಸ,**
ಪೋಸ್ಟ್ ರೋಣ, ಡಿ|| ಧಾರವಾಡ.

ಉದಯಭಾರತ (ಮಾಸಪತ್ರಿಕೆ)

ವಾರ್ಷಿಚಂದಾ ವಿಶೇಷಾಂಕ ಸಹಿತ ೨—೦—೦
" ವಿಶೇಷಾಂಕ ರಹಿತ ೧—೮—೦
ಉದಯಭಾರತ ಕಾರ್ಯಾಲಯ,
ಕೊಡಿಯಾಲ್ ಬೈಲ್, ಮಂಗಳೂರು.

ರಂಗಭೂಮಿ (ಮಾಸಪತ್ರಿಕೆ.)

ನಾಟಕದ ವಿಚಾರವಾಗಿ ಏನು ತಿಳಿಯಬೇಕೆಂದರೂ ಇದನ್ನು ಓದಿದರೆ ಸಾಕು. ಪ್ರತಿ ತಿಂಗಳಿನಲ್ಲಿಯೂ ಮೂರು ಬಣ್ಣಗಳ ಚಿತ್ರವು ಬರುತ್ತದೆ. ಸುಪ್ರಸಿದ್ಧರ ಲೇಖನಗಳನ್ನು ಒಳಗೊಂಡಿರುತ್ತದೆ

ವಾರ್ಷಿಕಚಂದ ೩—೮—೦.

ವ್ಯವಸ್ಥಾಪಕ,
ರಂಗಭೂಮಿ ಕಾರ್ಯಾಲಯ, ಬೆಂಗಳೂರು ಸಿಟಿ.

ಜೀವನಾಧಾರ ಡಿಪೋ ಇವರ ಮೂರು ರತ್ನಗಳು

೧. ಜೀವನಾಧಾರ

ಸಣ್ಣ ಬಾಟ್ಲಿ 0—12—0 ದೊಡ್ಡ ಬಾಟ್ಲಿ 1—8—0 ವಿ. ಪಿ. ಚಾರ್ಜು ಪ್ರತ್ಯೇಕ.

೨೬-೧೦-೨೭ ಬೊಮ್ಮಗಟ್ಟ.

ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಅನೇಕ ವ್ಯಾಧಿಗಳಿಗೆ ಉಪಯೋಗಿಸಿದ್ದೇನೆ. ಮತ್ತು ಅದು ಗುಣಕೊಡುವ ವಿಷಯದಲ್ಲಿ ತುಂಬಾ ತೃಪ್ತಿಹೊಂದಿದ್ದೇನೆ. ನಿಜವಾಗಿ ಅದು ಉತ್ಕೃಷ್ಟ ಔಷಧವಾಗಿರುತ್ತದೆ. ಮತ್ತು ಅದು ಜಗತ್ತಿಗೆ ಒಂದು ಲಾಭವೇ ಆಗಿರುತ್ತದೆ. ಮೈಸೂರು ಪ್ರದರ್ಶನದಲ್ಲಿ ಜೀವನಾಧಾರವು ಬಹುಮಾನದ ಇನಾಮನ್ನು ಹೊಂದಿದ್ದನ್ನು ತಿಳಿಸಲು ಅತ್ಯಂತ ಸಂತೋಷಪಡುತ್ತೇನೆ. ಜೀವನಾಧಾರದ ಒಂದು ಸೀಸೆಯು ಪ್ರತಿಯೊಂದು ಮನೆಯಲ್ಲಿ ಇಡುವುದಕ್ಕೆ ನಾನು ಉಪದೇಶಮಾಡುವೆನು. ಕಠಿಣ ಪ್ರಸಂಗದಲ್ಲಿ ಒಬ್ಬ ಡಾಕ್ಟರನಂತೆ ಉಪಯೋಗಬೀಳುತ್ತದೆ.

ಬಿ. ಸ್ವ. ರಾಮಚಂದ್ರರಾವ್,
ಜೇರಮನ್, ಗ್ರಾಮಸಂಚಾಯಿತ.

ನನ್ನ ಕುದುರೆಯು ಮೈಗೀ ಎಂಬ ತ್ವಚರೋಗದಿಂದ ಪೀಡಿತವಾಗಿತ್ತು. ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಕಳೆದ ೧೫ ದಿವಸಗಳಿಂದ ಉಪಯೋಗಿಸುತ್ತಿರುವೆನು. ಮತ್ತು ಬಹಳೇ ಗುಣಕೊಟ್ಟಿರುವುದು.

೨-೧೧-೨೭,
ಮೈಸೂರು.

ಸಿದ್ಧರಾಜ ಅರಸು.
ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್.

೨. ಗಜಕರ್ಣದ ತೈಲ.

ಬಾಟ್ಲಿ ೧ ಕ್ಕೆ 0 12 0 ಪ್ಯಾಕಿಂಗ್ ಪೋಸ್ಟೇಜ್ ಪ್ರತ್ಯೇಕ.

ಧಾರವಾಡ, ೧೦-೨-೨೮.

ನಾನು ನಿಮ್ಮ ಗಜಕರ್ಣದ ತೈಲವನ್ನು ತಲೆಯಲ್ಲಿ ಕೂದಲುಗಳು ಉದರಿರುವದಕ್ಕೆ (Pach of baldness) ಉಪಯೋಗಿಸುತ್ತಿದ್ದೇನೆ. ಅದು ಈಗಾಗಲೇ ಬಹಳ ಗುಣಕೊಟ್ಟಿರುವುದು. ಕಾರಣ ಈ ಪತ್ರಮುಟ್ಟಿದ ಕೂಡ್ಲೆ 2 ಬಾಟ್ಲಿ ಗಜಕರ್ಣದ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

ರಾಮರಾವ್ ಎನ್. ದೇಸಾಯಿ.

ಅನೇಕರು ಅನುಭವಿಸುತ್ತಿರುವ ನವೆ, ಗಜಕರ್ಣ, ಹುಳಕಡ್ಡಿ, ಕಜ್ಜಿ, ಉಗುರುಸುತ್ತು; ಹಳೇ ಇಸಬು, ಕತ್ತಿ ಘಾಯ, ಮತ್ತು ಎಲ್ಲಾ ತರಹದ ಚರ್ಮವ್ಯಾಧಿಗಳಿಗೆ ಗಜಕರ್ಣದ ತೈಲವನ್ನು ಹಚ್ಚಿದ 2-3 ದಿನಗಳಲ್ಲಿ ಗುಣಮಾಡಿಕೊಳ್ಳಬಹುದು, ಇದರಲ್ಲಿ ಮುಖ್ಯವಾದ ಗುಣವೇನೆಂದರೆ, ಗಾಯ ಅಥವಾ ಹುಣ್ಣಿನಿಂದ ಬರುವ ಕಲೆಗಳನ್ನು ತೆಗೆದುಹಾಕಿ ಪುನಃ ಮೊದಲಿನ ಚರ್ಮದ ಬಣ್ಣಕ್ಕೆ ತರುವುದು.

೩. ಶತಮೂಲಿಕಾ ಸಮ್ಮೇಳನ ಭೃಂಗಾಮಲಕ ತೈಲ.

ಬಾಟ್ಲಿ ೧ಕ್ಕೆ 0 ೬ 0. ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

ಈ ತೈಲವು ಆಯುರ್ವೇದ ಶಾಸ್ತ್ರೋಕ್ತವಾದ ಶತಮೂಲಿಕಾಸಂಗ್ರಹವನ್ನು ಪಾಶ್ಚಾತ್ಯ ರಸಾಯನಶಾಸ್ತ್ರ ರೀತ್ಯಾ (Latest Scientific Process) ಶುದ್ಧಿಯಾದ ತೈಲದಲ್ಲಿ ಸಕ್ವಮಾಡಿ ವನಸ್ಪತಿ ದ್ರವ್ಯಗಳ ಪ್ರತಿಯೊಂದು ಗುಣಾಂಶವನ್ನೂ ಭಾವನೆಮಾಡಿ ತಯಾರಿಸಿದೆ. ಇದನ್ನು ಪ್ರತಿದಿನವೂ ತಲೆಗೆ ಲೇಪಿಸುವುದರಿಂದ ಜ್ಞಾಪಕಶಕ್ತಿಯು ಅಭಿವೃದ್ಧಿಯಾಗಿ ಬುದ್ಧಿಭ್ರಮೆಯು ನಾಶವಾಗುತ್ತದೆ. ನೇತ್ರವ್ಯಾಧಿಗಳು ಗುಣವಾಗಿ ಕಣ್ಣುಗಳಿಗೂ, ಮುಖಕ್ಕೂ ಕಾಂತಿಯು ಬರುವುದು.

ಮೈಸೂರು ಬ್ರಾಂಚ್—ಇಲವಾಲ ರೋಡು.

ಜೀವನಾಧಾರ ಡಿಪೋ, ಹುಬ್ಬಳ್ಳಿ.

"ಮೈಸೂರು ಸ್ಕೌಟ್" ನ ಕನ್ನಡಭಾಗವು ಇದರೊಡನೆ ಸಮಾವಿಷ್ಟವಾಗಿದೆ.

ಮೈಸೂರು ಮಕ್ಕಳು

॥ ಓದುವ ಹೆಣ್ಣುಳು ಗಂಡುಗಳುಲಿವರು, ಹರುಷವಬೀರುತ ಓಡ್ಯಾಡಿ ॥
॥ ನಾಲ್ಕಡಿ ಕೃಷ್ಣನ ಕೊಂಡಾಡಿ ॥

೨ನೆಯ ವರ್ಷ.] ವಿಭವ ಸಂ॥ ಡ ಪುಷ್ಯ ಹುಣ್ಣಿಮೆ—ಜನವರಿ ೧೯೨೯ [೧೬ನೆಯ ಹೆಜ್ಜೆ.

ಮೈಸೂರು ಸ್ಕೌಟುಮಂಡಳಿಯ ಕನ್ನಡ ಮಾಸಪತ್ರಿಕೆ.

ಒಳಗಡೆ ಏನಿದೆ?

೧. ಮೈಸೂರು ಮಕ್ಕಳು ಚಿತ್ರಪರಿಚಯ—ನವಾಬ್ ಟೀಪುಸುಲ್ತಾನ್
೨. ಮೈಸೂರು ಮಕ್ಕಳ ಜೀವನಚರಿತ್ರೆ—ನವಾಬ್ ಟೀಪುಸುಲ್ತಾನ್.
೩. ವಿಲಾಯತಿಯಿಂದ ಇಬ್ಬರು ಹಿರಿಯಣ್ಣಂದಿರು ಬರೆದ ಕಾಗದಗಳು.
೪. ಕಥೆಗಳ ಕಟ್ಟು—ಮಯೂರಧ್ವಜ.
೫. ಮೈಸೂರು ಚರಿತ್ರೆಯ ಕಥೆಗಳು—ಲೆ॥ ಬಿ. ನಾ. ರಾ.
೬. ಕಬ್‌ಗಳೊಡನೆ ನಮ್ಮದೊಂದು ಹರಟೆ.
ಕಬ್‌ಗಳು ಕಲಿಯಬೇಕಾದುದು.
೭. ಹಿರಿಯಣ್ಣಂದಿರಿಗಾಗಿ.
೮. ಸ್ಕೌಟುತತ್ವ—ಗುಂಪಿನ ವರದಿ—ಒಗಟುಗಳು.
೯. ಬಿಡಿನುಡಿಗಳು.
೧೦. ನಮ್ಮ ನಾಯಕರ ಸಂದೇಶ.
೧೧. ಗೃಹಶಿಕ್ಷಣ.
೧೨. ಸ್ಕೌಟು ಸುದ್ದಿಗಳು—ವಿಮರ್ಶೆ—ಸ್ವೀಕಾರ.

ಇದರೊಡನೆ ನಮ್ಮ ಹಿರಿಯ ಮತ್ತು ಕಿರಿಯ ನಾಯಕರುಗಳ ಚಿತ್ರವನ್ನು ಪುರವಣಿಯಾಗಿ ಕಳುಹಿಸಿದೆ

ಸಂಪಾದಕರು :
ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ.
ಆರ್. ಕೆ. ಲಕ್ಕೂರ್.

ವಾರ್ಷಿಕಚಂದಾ ೧—೦—೦
(ಆಂಚೆಹಾಸಲು ವಿನಾ)
ಸ್ಕೂಲು ಮತ್ತು ವಾಚನಾಲಯಗಳಿಗೆ ರೂ. ೨.

ಮೈಸೂರು ಮಕ್ಕಳು ಆಫೀಸ್,
ಮೈಸೂರು.

JOIN
THE EAST & WEST CORESPONDENCE & EXCHANGE CLUB.

MEMBERS GET THE BENIFIT OF THE EAST & WEST JOURNAL.

For Particulars Write to :—

The Director,
H. L. SAXENA J. P. S.
Parade, Cawnpore (U. P.)

SCHOOL FOLK (A Monthly Magazine)

Subscription Rs. 1—8—0 Per year.

Manager,
SCHOOL FOLK, Tumkur.

ನಿಮಗೆ ಉತ್ತಮರಾದ ವೈದ್ಯರು ಬೇಕಾದರೆ—ಔಷಧಿಗಳಿಗಾಗಿ ಸೂರಾರು ರೂಪಾಯಿಗಳು ಸುರಿಯುತ್ತಿದ್ದರೆ ಇನ್ನು ಮುಂದೆ ಹಾಗೆ ಮಾಡದೆ **ಆರೋಗ್ಯಚಂದ್ರಿಕೆಗೆ** ಚಂದಾದಾರರಾಗಿ.

ವಾ|| ಚಂ|| ೧—೮—೦

323, ತಂಬುಚೆಟ್ಟಿ ಬೀದಿ, ಮದ್ರಾಸ್.

THE EASTERN HERALD.

The only Psychic, Astrological, Vedanti & Occult, Journal in India.
Annual Subscription Rs. 2.

Editor,
THE EASTERN HERALD,
Vizianagaram City, (B. N. Ry.)

ಕಾದಂಬರೀಸಂಗ್ರಹ (ಮಾಸಪತ್ರಿಕೆ)

ವಾ|| ಚಂದಾ ೧—೦—೦

ಕಾದಂಬರೀಸಂಗ್ರಹ ಆಫೀಸ್, ಚಾಮರಾಜನಗರ

ಪರಮಾರ್ಥ ಚಂದ್ರೋದಯ
(ಮಾಸಪತ್ರಿಕೆ)

ಸಂಪಾದಕ—ದೇವರಾಯದುರ್ಗದ ದಾಸಕೂಟಸಭಾ ಕಾರ್ಯದರ್ಶಿ ಪರಮಪ್ರಿಯ ಸುಬ್ಬರಾಯದಾಸ.

ವಾ|| ಚಂ|| ಅಂಚೆವೆಚ್ಚ ಸೇರಿ ರೂ. ೧-೬-೦

ಪರಮಾರ್ಥ ಚಂದ್ರೋದಯ ಕಾರ್ಯಾಲಯ,
ಏಶ್ವೇಶ್ವರಪುರ, ಬೆಂಗಳೂರು ಸಿಟಿ

EFFECTIVE MEDICINES

CAN BE HAD FROM ME

	Rs.	A.
Leprosy Emulsion Red	7	8
Tonic Pills (100 Pills)	4	8
Infantile Convulsions	3	12
Piles Ointment or Powder, Wind killing Oil, Emanagogue Pill, Ague Syrup	2	8
Headache Remedy, Leucoderma and Ringworm Powder White Leprosy, Guine Worm Paste	1	14
Digestive Pills 100 Pills for indigestion Jundice Powder Hair-dye	1	9
Tooth Powder	0	5
Diarrhoea & Cholera Dispeller, Cough Pills Ear Drops, Scropion Sting Remedy, Dysentry Mixture	1	0
Fever Dispeller, Drops; Pills for influenza, Infant Protector, Cough Syrup for Asthma; Eye Drops, Hair Eestare, Sarso Dyne (best Blood Purifier), Lime Syrups, Worm Powder, Oil Pepper Mints, Ringworm Cakes 10 ...	1	4
Headache Powders	0	10
Pepper Mint Essence; Essence of Camphor Ointment Pudina and Anisi, Ringworm Ointment ...	0	8
Tonic Pills No. 2 for opium habit & Spleen Tonic	2	

Packing and Postage Extra.

Dr. GOPINATH KRISHNAJI KSHATRIYA, GIRGAON POST, BOMBAY.

ಮೈಸೂರು ಮಕ್ಕಳು

ಮೈಸೂರು ಹುಲಿ.

ಟಿಪ್ಪೂ ಸುಲ್ತಾನ್.

'ಮೈಸೂರು ಹುಲಿ'—ಟಿಪ್ಪುಸುಲ್ತಾನ್.

ಹೋದ ತಿಂಗಳಲ್ಲಿ ನವಾಬ ಹೈದರಾಲಿಯನ್ನು ಕುರಿತು ಕೆಲವು ಸಂಗತಿಗಳನ್ನು ತಿಳಿಸಿದೆನು. ಈ ಸಲ ಆ ಹೈದರಾಲಿಯ ಮಗನಾದ ಟಿಪ್ಪುಸುಲ್ತಾನನ ವಿಷಯವಾಗಿ ತಿಳಿಸುವೆನು.

ಹೈದರನು ಸತ್ತಾಗ ಟಿಪ್ಪುವು ಮಂಗಳೂರಿನಲ್ಲಿ ಯುದ್ಧಮಾಡುತ್ತಿದ್ದನು. ತಂದೆಯು ಸತ್ತ ವರ್ತಮಾನವನ್ನು ಕೇಳಿದ ಕೂಡಲೇ ಅಲ್ಲಿಂದ ಬಂದು ರಾಜ್ಯವನ್ನಾಳಲು ಪ್ರಾರಂಭಿಸಿದನು. ಹೈದರನಿಗೆ ಬಾಲ್ಯದಲ್ಲಿ ಸುಖವೆಂಬುದು ಸ್ವಲ್ಪವೂ ಇರಲಿಲ್ಲ. ಟಿಪ್ಪುವಿಗಾದರೋ ಬಾಲ್ಯದಿಂದಲೂ ರಾಜ ಸುಖವು ಇದ್ದಿತು. ಅಲ್ಲದೆ ಹೈದರನಿಗೆ ಓದು ಬರಹ ಬರುತ್ತಿರಲಿಲ್ಲ. ಓದಿಲ್ಲದವರ ಬಾಳು ಒಳ್ಳೆಯದಲ್ಲವೆಂದು ತಿಳಿದು ಹೈದರನು ತನ್ನ ಮಗನಿಗೆ ಅಸಾಧಾರಣವಾದ ಒಳ್ಳೆಯ ವಿದ್ಯೆಯನ್ನು ಹೇಳಿಸಿದ್ದನು.

ಓದು ಬರಹವು ಮಾತ್ರವಲ್ಲದೆ ಕುದುರೆ ಸವಾರಿಮಾಡುವುದು, ಈಜುವುದು ಮುಂತಾದವುಗಳನ್ನು ಟಿಪ್ಪುವು ಬಹಳ ಚೆನ್ನಾಗಿ ತಿಳಿದಿದ್ದನು. ರಾಜ್ಯಾಡಳಿತವೂ ಇವನಿಗೆ ಚನ್ನಾಗಿ ಗೊತ್ತಿತ್ತು. ಆದರೆ ಟಿಪ್ಪುವನ್ನು ಯಾವಾಗಲೂ ಜನರು ಚಾಣ್ಣಪಿಸಿಕೊಳ್ಳುತ್ತಿರುವುದು ಅವನ ಅಗಾಧವಾದ ಧೈರ್ಯಕ್ಕೋಸ್ಕರ. ಎಂತಹ ಆಪತ್ತಿಗಾದರೂ ಹೆದರದೆ ಎದೆಗೊಟ್ಟು ನಿಲ್ಲುತ್ತಿದ್ದನು. ಇವನ ಅನೇಕ ಜಯಗಳಿಗೆ ಈ ಅಸಾಧಾರಣವಾದ ಧೈರ್ಯವೇ ಕಾರಣ. ಇವನ ಧೈರ್ಯವನ್ನು ನೋಡಿ ಚರಿತ್ರಕಾರರು ಇವನಿಗೆ 'ಮೈಸೂರು ಹುಲಿ' ಎಂದು ಹೆಸರು ಕಟ್ಟಿದ್ದಾರೆ.

ಇವನಿಗೆ ತನ್ನ ಮತದಮೇಲೆ ತುಂಬಾ ವಿಶ್ವಾಸವಿತ್ತು. ಪರಮತದವರನ್ನು ಇವನು ವಿಶೇಷವಾಗಿ ದ್ವೇಷಿಸುತ್ತಿದ್ದನೆಂದು ಕೆಲವರು ಹೇಳುತ್ತಾರೆ. ಆದರೆ ಒಂದು ವಿಶೇಷವಾದ ಸಂಗತಿಯು ಏನೆಂದರೆ, ಇವನು ಮಹಮ್ಮದೀಯನಾದರೂ ಹಿಂದೂ ದೇವರುಗಳಲ್ಲಿ ಒಂದು ವಿಧವಾದ ಭಕ್ತಿಯನ್ನಿಟ್ಟುಕೊಂಡಿದ್ದನು. ಅನೇಕ ಕಡೆಗಳಲ್ಲಿ ಹಿಂದೂ ದೇವಾಲಯಗಳನ್ನು ಇವನು ಕೆಡಹಿದ್ದರೂ, ಶ್ರೀರಂಗಪಟ್ಟಣ, ನಂಜನಗೂಡು ಮುಂತಾದ ಸ್ಥಳಗಳಲ್ಲಿರುವ ದೇವಸ್ಥಾನಗಳಿಗೆ ವಿಶೇಷವಾಗಿ ಸಂರಕ್ಷಣೆ ಮಾಡುತ್ತಿದ್ದನೆಂದು ತಿಳಿಯ ಬಂದಿದೆ. ಅಲ್ಲದೆ ಇವನ ಅರಮನೆಗಳ ಹತ್ತಿರದಲ್ಲೆಲ್ಲಾ ದೇವರ ಗುಡಿಗಳಿವೆ!

ಟಿಪ್ಪುವಿಗೆ ತನ್ನ ರಾಜ್ಯದಲ್ಲಿ ಎಲ್ಲರೂ ಯೋಗ್ಯರಾಗಿಯೂ, ಸಂತೋಷದಿಂದ ಕೂಡಿದವರಾಗಿಯೂ, ನೆಮ್ಮದಿಯಾಗಿಯೂ ಇರಬೇಕೆಂಬ ಅಭಿಲಾಷೆಯು ಬಹಳವಿತ್ತು. ಸೀರಿಸ ಸರಬರಾಜು, ಪಟ್ಟಣದಲ್ಲಿ ವಾಸಕ್ಕೆ ಅನುಕೂಲತೆ ಇವುಗಳಿಗೆ ತುಂಬಾ ಗಮನವನ್ನು ಕೊಟ್ಟಿದ್ದನು. ಈಗ ಕೃಷ್ಣರಾಜಸಾಗರವೆಂದು ಹೆಸರುವಾಸಿಯಾಗಿರುವ ಕನ್ನಂಬಾಡಿ ಕಟ್ಟೆಯನ್ನು ನೀವು ಯಾರಾದರೂ ನೋಡುವುದಕ್ಕೆ ಹೋಗಿದ್ದಿರಾ? ಹಾಗೆ ಹೋದವರೆಲ್ಲರೂ ಅಲ್ಲಿರುವ ಒಂದು ಶಾಸನವನ್ನು ನೋಡದಿರಲಾರಿರಿ. ಆ ಶಾಸನವನ್ನು ಪಾರ್ಸಿ ಭಾಷೆಯಲ್ಲಿ ಕಲ್ಲಿನಲ್ಲಿ ಕೆತ್ತಿದ್ದಾರೆ. ಅದು ಟಿಪ್ಪು ಕೆತ್ತಿಸಿದ್ದು. ಅದನ್ನು ಓದಿದರೆ, ಈ ಗಿರುವ ಕನ್ನಂಬಾಡಿ ಕಟ್ಟೆಯನ್ನು ಕಟ್ಟಲು ಟಿಪ್ಪುವೇ ಯೋಚಿಸಿ ಪ್ರಾರಂಭಿಸಿದ್ದಂತೆ ತೋರುತ್ತದೆ. ಅಲ್ಲದೆ ಆ ಶಾಸನದಲ್ಲಿ ಇನ್ನೂ ಒಂದಿರುವುದೇನೆಂದರೆ—ಈ ಕೆರೆಯಿಂದ ರೈತರಿಗೆ ಅನುಕೂಲವಾದರೆ ಅದಕ್ಕೋಸ್ಕರ ಕಂದಾಯವನ್ನು ಹೆಚ್ಚಿಸಿ ಅವರಿಗೆ ತೊಂದರೆಯನ್ನುಂಟುಮಾಡಲಾಗದು. ನೋಡಿದಿರಾ ಟಿಪ್ಪುವಿನ ಧರ್ಮಬುದ್ಧಿಯನ್ನು.

ಟಿಪ್ಪುವಿಗೆ ಪರಮ ಶತ್ರುಗಳೆಂದರೆ ಇಂಗ್ಲೀಷಿನವರು. ಅವರೊಡನೆ ಹೋರಾಡಿ ಗೆಲ್ಲಬೇಕೆಂದು ಮನಸ್ಸುಮಾಡಿ ಫ್ರೆಂಚು ಸರದಾರ ಸಹಾಯದಿಂದ ತನ್ನ ಸೈನಿಕರನ್ನು ತರಬೇತು ಮಾಡಿಸಿದ್ದನು ಅಲ್ಲದೆ ಕೆಲವುಸಲ ಇಂಗ್ಲೀಷರನ್ನು ಸೋಲಿಸಿಯೂ ಇದ್ದನು.

ಟಿಪ್ಪುವು ಕೆಲವು ಸುಂದರವಾದ ಕಟ್ಟಡಗಳನ್ನು ಕಟ್ಟಿಸಿರುವನು. ಶ್ರೀರಂಗಪಟ್ಟಣದಲ್ಲಿರುವ "ದರಿಯಾ ದೌಲತ ಬಾಗ್" ಎಂಬ ಮನೋಹರವಾದ ಉದ್ಯಾನವನವನ್ನು ಅವನೇ ಮಾಡಿಸಿ ಅದರೊಳಗಿರುವ ಸುಂದರವಾದ ಮಹಲನ್ನು ಅವನೇ ಕಟ್ಟಿಸಿದನು. ಆ ಊರಲ್ಲಿರುವ ಮಸೀದಿಯನ್ನು ನೋಡಿದರೆ ಎಷ್ಟು ಸೊಗಸಾಗಿ ಕಾಣುವುದು. ಅದಕ್ಕಿಂತಲೂ ಇವನೇ ಕಟ್ಟಿಸಿ ತಯಾರಿಸಿದ್ದ "ಗುಂಬಜ್" ಎಂಬ ಗೋರಿಯು ಬಹಳ ಚಂದವಾಗಿದೆ. ಆ ಊರಿನಲ್ಲಿರುವ ತೂಗುವ ಕಮಾನನ್ನು ದೇಶ ವಿದೇಶದವರೆಲ್ಲರೂ, ನೋಡಿ ಆಶ್ಚರ್ಯಪಟ್ಟಿರುವರು. ಶ್ರೀರಂಗಪಟ್ಟಣದಲ್ಲಿ ನಾವಿಕರ ಶಾಲೆಯೊಂದೂ ಇತ್ತಂತೆ!

ಇವನು ಹೀಗೆ ಮುಂದಕ್ಕೆ ಬಂದುದನ್ನು ನೋಡಿ ಸಹಿಸಲಾರದೆ ಇಂಗ್ಲಿಷರೂ, ನಿಜಾಮನೂ ೧೭೯೯ ರಲ್ಲಿ, ಅಂದರೆ ಈಗ್ಗೆ ೧೨೦ ವರ್ಷಗಳಹಿಂದೆ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದರು. ೪೦ ದಿನಗಳವರೆಗೆ ಕೋಟೆಯ ಗೋಡೆಯನ್ನು ಒಡೆದರು. ಆ ಮೇಲೆ ಅಲ್ಲಿಯೇ ಪೈದಿಯಾಗಿದ್ದು ಗುಟ್ಟನ್ನೆಲ್ಲಾ ತಿಳಿದಿದ್ದ ಜೇರ್ಡನೆಂಬ ಅಧಿಕಾರಿಯ ಕೈಕೆಳಗೆ ಶತ್ರುಸೈನ್ಯವು ಕೋಟೆಯೊಳಕ್ಕೆ ನುಗ್ಗಿತು. ಆಗ ಟಿಪ್ಪುವು ಊಟಮಾಡುತ್ತ ಕುಳಿತಿದ್ದನಂತೆ. ಹಾಗೆಯೇ ಎದ್ದು ಕತ್ತಿಯನ್ನು ಹಿಡಿದುಕೊಂಡು ಯುದ್ಧಕ್ಕೆ ಬಂದನಂತೆ. ಆವತ್ತೇ ಸಾಯಂಕಾಲ ಯುದ್ಧಮಾಡುತ್ತಲೇ ಟಿಪ್ಪುವು ಸತ್ತನು. ಆಗ ಅಕಾಸ್ಮಾತ್ತಾಗಿ ಎಲ್ಲೆಲ್ಲಿಯೂ ಕತ್ತಲೆಯಾಯಿತಂತೆ. ಮೋಡವಿಲ್ಲದೆಯೇ ಸಿಡಿಲು ಬಡಿಯಿತು. ಕ್ಷಣಕಾಲದಲ್ಲಿ ಭಯಂಕರವಾದ ಮಳೆಯೂ ಬಿತ್ತು.

ಎಂತಹ ಕಷ್ಟದಲ್ಲಿಯೂ ಎದೆಗುಂದದೆ ಧೈರ್ಯದಿಂದ ಕೆಲಸಮಾಡುವವನೇ ಮನುಷ್ಯನೆನಿಸಿಕೊಳ್ಳುತ್ತಾನೆಂದು ಟಿಪ್ಪುವಿನ ಜೀವನ ಚರಿತ್ರೆಯಿಂದ ತಿಳಿದುಕೊಳ್ಳಬಹುದು.

ಸ್ಕೌಟುಗಳಿಗೂ ಟಿಪ್ಪುವಿಗೂ ಒಂದು ಸಂಬಂಧ ಏನೆಂದರೆ ಬೆಂಗಳೂರಿನ ಸ್ಕೌಟು ಆಫೀಸು ಟೀಪುವಿನ ಅರಮನೆಯಲ್ಲಿದೆ!

ವಿಲಾಯಿತಿಯಿಂದ ಇಬ್ಬರು ಅಣ್ಣಂದಿರು ಬರೆದ ಪತ್ರಗಳು.

೨೦, ಕ್ಯಾವೆಂಡಿಷ್ ರಸ್ತೆ, ಲೀಡ್ಸ್,
೨ ನೆ ಜನವರಿ ೨೯.

ತಮ್ಮಾ,

ನಿನಗೊಂದು ಪತ್ರವನ್ನು ಬರೆಯಬೇಕೆಂದು 'ಮೈಸೂರು ಮಕ್ಕಳಿನ' ಸಂಪಾದಕರು ನನಗೆ ಬರೆದಿರುತ್ತಾರೆ. ಇದ್ದುದರಲ್ಲಿ ಪುರ ಸೊತ್ತು ಮಾಡಿಕೊಂಡು ಬರೆದಿದ್ದೇನೆ.

ನಾನು ಹಡಗಿನಲ್ಲಿ ಪ್ರಯಾಣಮಾಡಿದುದು ಇದೇ ಮೊದಲು. ಆದರೆ ಪ್ರಯಾಣದಲ್ಲಿ ನನಗೆ ಬೇಸರವಾಗಲಿಲ್ಲ. ಏಕೆಂದರೆ ನನಗೆ ಕೆಲ ವರು ಒಳ್ಳೆಯ ಜೊತೆಗಾರರು ಇದ್ದರು.

ಬೊಂಬಾಯಿನಿಂದ ಹೊರಟವರು ಏಡನ್ನಿನಲ್ಲಿ ಇಳಿದೆವು. ಈ ಊರಿನಲ್ಲಿ ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಒಂದು ದೊಡ್ಡ ಕೆರೆ ಯಿದೆ. ನಮ್ಮ ಸರ್ ಎಂ. ವಿಶ್ವೇಶ್ವರಯ್ಯನವರೇ ಅದನ್ನು ಕಟ್ಟಿಸಿದರಂತೆ. ಈ ಊರಲ್ಲಿ ಒಂಟೆಗಳೇ ಹೊರೆಗಳನ್ನು ಹೊರುವ ಪ್ರಾಣಿಗಳು!

ಅಲ್ಲಿಂದ ಹೊರಟವರು ಪೋರ್ಟ್ ಸೇಡ್ ಎಂಬಲ್ಲಿಗೆ ಬಂದೆವು. ಇಲ್ಲಿ ನೋಡತಕ್ಕದು ಏನೂ ಇಲ್ಲ. ಇಲ್ಲಿ ರಸ್ತೆಗಳ ಮೇಲೆ ಮರಳನ್ನು ಹರಡಿರುತ್ತಾರೆ. ಇಲ್ಲಿ ತಮಾಷೆ ಏನೆಂದರೆ ಹೇಸರುಕತ್ತೆಗಳು ಟ್ರಾಂ ಗಾಡಿಗಳನ್ನು ಎಳೆಯುತ್ತವೆ.

ಮಾಲ್ಟ ಎಂಬಲ್ಲಿ ನಾವು ಇಳಿದಿದ್ದೆವು. ಅದೊಂದು ಸೊಗಸಾದ ದ್ವೀಪ. ಇಲ್ಲಿ ಸೈನ್ಯದ ಒಂದು ತುಕುಡಿಯನ್ನಿಟ್ಟಿದ್ದಾರೆ.

ಮಾರ್ಸೇಲ್ಸಿನಲ್ಲಿ ಬಹು ಪುರಾತನವಾದ ರೋಮನ್ ಕ್ಯಾಥೋ ಲಿಕ್ ದೇವಸ್ಥಾನವನ್ನು ನೋಡುವುದಕ್ಕೆ ಹೋಗಿದ್ದೆವು. ಈ ಕಟ್ಟಡದ ಸೆಲಗಟ್ಟನ್ನು ನಿಂತು ಹಾಕಿಸಿದವನು ನೆಪೋಲಿಯನ್. ಇಲ್ಲಿ ಆ ನೆಪೋ ಲಿಯನ್ನು ಕುಳಿತುಕೊಳ್ಳುತ್ತಿದ್ದ ಒಂದು ದೊಡ್ಡ ಕುರ್ಚಿ ಇದೆ. ಇಲ್ಲಿಯ ಜನರಲ್ಲಿ, ಆ ಕುರ್ಚಿಯಲ್ಲಿ ಕುಳಿತರೆ ಒಳ್ಳೆಯದಾಗುವುದೆಂಬ ನಂಬಿಕೆಯಿದೆ.

ಆದರೆ ನಾನು ನೋಡಿರುವ ಅತಿ ರಮ್ಯವಾದ ಉದ್ಯಾನವೆಂದರೆ ಐರ್ಲಂಡಿನಲ್ಲಿ ಡಬ್ಲಿನ್ ನಗರದಲ್ಲಿರುವುದು. ಪ್ರಪಂಚದಲ್ಲೆಲ್ಲಾ ಅತಿ ಸುಸ್ಸೋಹರವಾದುದೂ ಅತಿ ವಿಶಾಲವಾದುದೂ ಚಿಕಾಗೋನಗರದಲ್ಲಿ ದೆಯಂತೆ. ಈ ಡಬ್ಲಿನ್ನಿನಲ್ಲಿರುವುದು ಇದಕ್ಕೆ ಎರಡನೆಯದು. ಇದರ ಸುತ್ತಳತೆ ಎಂಟು ಮೈಲಿ. ಈ ಉದ್ಯಾನದಲ್ಲಿ ಅಲ್ಲಲ್ಲಿ ಚಿಕ್ಕ ಚಿಕ್ಕ ಸರೋ ವರಗಳೂ ಜಲಪಾತಗಳೂ ಇವೆ.

ಮುಂದಿನಸಲ ಈ ಊರಿನ ಮಕ್ಕಳ ವಿಚಾರವಾಗಿ ಬರೆಯುತ್ತೇನೆ. ಇಂಗ್ಲಿಷಾಡುವ ಭಾಷೆಯನ್ನು ತಿಳಿದುಕೊಳ್ಳುವುದೇ ಕಷ್ಟ. ಆದರಲ್ಲಿಯೂ ಈ ಇಂಗ್ಲೀಷ್ ಮಕ್ಕಳ ಭಾಷೆಯು ಇನ್ನೂ ಕಷ್ಟ.

ಇತಿ, ನಿನ್ನ ಹಿರಿಯಣ್ಣ,
ಸಿ. ರಂಗಾಚಾರ್.

೧೧೩, ಗೋವರ್ ರಸ್ತೆ, ಲಂಡನ್.
೩೭ ನೆ ಡಿಸೆಂಬರು ೨೯.

ಮಕ್ಕಳಿರಾ!

ನಿಮಗೊಂದು ಪತ್ರವನ್ನು ಬರೆಯುತ್ತೇನೆಂದು, ನಿಮ್ಮ "ಮೈಸೂರು ಮಕ್ಕಳ" ಸಂಪಾದಕರಿಗೆ ನಾನು ಹೇಳಿದ್ದೆ. ಆವರೋ ಸಿಕ್ಕಿದರೆ ನಾಕು ಎಂತ ಬಿಡಲೇ ಇಲ್ಲ. ಆದುದರಿಂದ ಸಧ್ಯಕ್ಕೆ ನಾಲ್ಕು ಪಂಚ್ತಿಗಳನ್ನು ಮಾತ್ರ ಬರೆದಿರುತ್ತೇನೆ.

ಏನು? ನಿಮ್ಮ ಆ ಪುಟ್ಟ ('ಮೈಸೂರು ಮಕ್ಕಳು') ನಿಗೆ ಆಗಲೆ ಒಂದು ನರ್ಷವಾಯಿತಂತೆ! ಬಹಳ ಸಂತೋಷ. ಆ ಪುಟ್ಟನು ದೀರ್ಘ ಕಾಲ ನಿಮ್ಮೆಲ್ಲರ ಒಡನಾಡಿಯಾಗಿ ಬದುಕಿ ಬಾಳಲಿ. "ಶತಮಾನಂ ಭವತಿ ಶತಾಯುಃ....." ಆ ನಿಮ್ಮ ಪುಟ್ಟನಿಗೆ ಆರತಿಮಾಡಿ ಅನಲಕ್ಕಿ ಉಂಡೆಯನ್ನೂ ಎಣ್ಣೆ ಚಕ್ಕುಲಿಯನ್ನೂ ಸಂಪಾದಕರು ಹಂಚಿದಾಗ ನಾನು ಅಲ್ಲಿರಲಿಲ್ಲವಲ್ಲಾ ಎಂತ ವ್ಯಸನವಾಗಿದೆ. (ವ್ಯಸನಪಡಬೇಕಾ ಗಿಲ್ಲ, ಶಾಸ್ತ್ರಿಗಳೇ! ಅಲ್ಲಿಗೇ ಕಳುಹಿಸುತ್ತೇವೆ.—ಸಂ.)

ಏನು ನಮ್ಮ ಮೈಸೂರಿನಲ್ಲಿ ಈಗ ವಾಯುಗುಣವು ಬಹಳ ಮನೋಹರವಾಗಿದೆಯಂತ ಕಾಣುತ್ತದೆ. ಸೊಗಸಾದ ಬಿಸಿಲೂ ಗಾಳಿ, ರಾತ್ರಿಯಲ್ಲಿ ಚಂದನಾದ ಬೆಳದಿಂಗಳೂ ಇವೆಲ್ಲಾ ಇರಬೇಕು. ಇಲ್ಲಿ—ಆ ಮಾತೇ ಬೇರೆ. ಪ್ರಪಂಚದಲ್ಲಿ ಹೀಗೂ ಉಂಟೆ ಅಂತ ಅನ್ನಿಸುತ್ತೆ. ಈ ಚಳಿ, ಈ ಮಳೆ ಎಲ್ಲಕ್ಕೂ ಹೆಚ್ಚಾಗಿ ಈ ಮಂಜು ಇನ್ನೆಲ್ಲಿಯೂ ಇಲ್ಲವೆಂತ ಕಾಣುತ್ತದೆ. ಹೊರಗೆ ಹೋಗುವುದಕ್ಕೇ ಮನಸ್ಸಾಗುವು ದಿಲ್ಲ. ಬೆಚ್ಚಗೆ ಹೊದ್ದುಕೊಂಡು ಒಳಗೇ ಇರೋಣವೆನ್ನಿಸುತ್ತದೆ. ಆದರೆ ಆದೆಲ್ಲಿ ಸಾಧ್ಯ! ಒಳ್ಳೇ ಮಧ್ಯಾನ್ಹ ೧೨ ಗಂಟೆ ಹೊತ್ತಿನಲ್ಲಿ ನೋಡ ಬೇಕು! ಎಲ್ಲಿ ನೋಡಿದರೂ ಕತ್ತಲೆ. ಮನೆಯ ಒಳಗೆ ಮನೆಯ ಹೊರಗೆ, ರಸ್ತೆಯಲ್ಲಿ, ಎಲ್ಲಿ ನೋಡಿದರೂ ದೀಪಗಳನ್ನು ಹೊತ್ತಿಸಿಕೊಂಡಿದ್ದಾರೆ. ಈ ಊರಿನವರಿಗೆ ದೀಪದ ಖರ್ಚು ಬಹಳ—ಪಾಪ!

ಈ ಚಳಿಗಾಲವು ಹೇಗಿದೆಯೆಂಬುದನ್ನು ಎಷ್ಟು ವರ್ಣನೆಮಾಡಿ ದರೂ ತಿಳಿಯುವುದಿಲ್ಲ. ನಮ್ಮಲ್ಲಿ ಯಾವ ಕಾಲಕ್ಕೂ ಹೋಲಿಸಲಾಗು ವುದಿಲ್ಲ. ನಿಮ್ಮಲ್ಲಿ ಕೆಲವರು ಸಿನಿಮಾದಲ್ಲಿ ತೆರೆಯ ಮೇಲೆ ನೋಡಿರ ಬೇಕು—ಹಾಗೆ ಇರುತ್ತದೆ. ವೋಸ್ಟಿಗೆ ಹೊತ್ತಾಯಿತು. ಆದ್ದರಿಂದ ನಾಕುಮಾಡುತ್ತೇನೆ. ಯಾಕೆಂದರೆ, ಇವತ್ತು ತಪ್ಪಿದರೆ ಕೆಲವು ದಿನ ಕಾಯಬೇಕು. ಮುಂದಿನ ಸಲ ಇಲ್ಲಿಯ ಬಾಲಕರ ವಿಚಾರವಾಗಿ ಬರೆ ಯುತ್ತೇನೆ.

ಇತಿ, ಹಿರಿಯಣ್ಣ 'ಕಂಠೀರವ'
(ಕೆ. ಎಸ್. ವೆಂಕಟಸುಬ್ಬಾಶಾಸ್ತ್ರಿ.)

ಕಥೆಗಳ ಕಟ್ಟು.

(ಕನಕದ ಕುಂಚಿ)

೧೪ ಮಯೂರಧ್ವಜ

ದಾನಶೂರನಾದ ಇನ್ನೊಬ್ಬ ಮಹನೀಯನು ನಮ್ಮ ದೇಶದಲ್ಲಿ ಪೂರ್ವಕಾಲದಲ್ಲಿ ಇದ್ದನು. ಇವನು ಶೂರನಾದ ರಾಜನಾಗಿ ಪ್ರಜೆಗಳನ್ನು ತನ್ನ ಮಕ್ಕಳಂತೆ ನೋಡುತ್ತಿದ್ದನು. ದಾನದಲ್ಲಿ ಇವನಂತಹವರು ಭೂಮಿಯಮೇಲೆಯೇ ಇಲ್ಲವೆಂದು ಜನರು ಆಡಿಕೊಳ್ಳುತ್ತಿದ್ದರು. ಇವನ ಹೆಸರು ಮಯೂರಧ್ವಜನೆಂದು. ಇವನಿಗೆ ತಾಮ್ರಧ್ವಜನೆಂಬ ಒಬ್ಬ ಮಗನಿದ್ದನು. ತಾಮ್ರಧ್ವಜನೂ ತಂದೆಯಂತೆಯೇ ಬಹಳ ಒಳ್ಳೆಯವನೂ ಶೂರನೂ ಆಗಿದ್ದನು.

ಈ ಸಂದರ್ಭದಲ್ಲಿ, ಧರ್ಮರಾಜನು ಅಶ್ವಮೇಧವೆಂಬ ಯಾಗವನ್ನು ಮಾಡಬೇಕೆಂದು ಮನಸ್ಸುಮಾಡಿಕೊಂಡನು. ಅಶ್ವಮೇಧನೆಂದರೆ, ಒಂದು ಕುದುರೆಯನ್ನು ಯಾರು ಯಾಗಮಾಡುವರೋ ಅವರು ದೇಶದಲ್ಲಿ ಬಿಟ್ಟು ಬಿಡುವರು. ಆ ಕುದುರೆಯು ಹೋದ ಕಡೆಯಲ್ಲೆಲ್ಲಾ ಅದನ್ನು ಹಿಂಬಾಲಿಸಿಯೇ ಈ ರಾಜನ ಸೈನ್ಯವು ಹೋಗುತ್ತಿರುವುದು. ಆಗ ಯಾರಾದರೂ ಆ ಕುದುರೆಯನ್ನು ಹಿಡಿದು ಕಟ್ಟಿಬಿಟ್ಟರೆ ಅವರೊಡನೆ ಯುದ್ಧಮಾಡಿ ಅದನ್ನು ಬಿಡಿಸಿಕೊಳ್ಳಬೇಕು. ಆ ಕುದುರೆ ಪುನಃ ತಮ್ಮ ದೇಶಕ್ಕೆ ಬಂದ ಮೇಲೆ ಯಾಗವನ್ನು ಪೂರ್ತಿಮಾಡುತ್ತಿದ್ದರು.

ಧರ್ಮರಾಜನು ಬಿಟ್ಟ ಕುದುರೆಯು ಅಲ್ಲಲ್ಲಿ ಅಲೆಯುತ್ತಾ ಮಯೂರಧ್ವಜನ ದೇಶಕ್ಕೆ ಬಂದಿತು. ಆಗ ಅದನ್ನು ತಾಮ್ರಧ್ವಜನು ಕಟ್ಟಿಹಾಕಿದನು. ಕೂಡಲೆ ಆ ಕುದುರೆ ಕಾವಲಿಗಾಗಿ ಬಂದಿದ್ದ ಅರ್ಜುನನಿಗೂ ತಾಮ್ರಧ್ವಜನಿಗೂ ಯುದ್ಧವು ಪ್ರಾರಂಭವಾಯಿತು. ತಾಮ್ರಧ್ವಜನು ಅರ್ಜುನನ್ನು ಸೋಲಿಸಿದನು. ಆಗ ಅರ್ಜುನನಿಗೆ ಏನುಮಾಡುವುದಕ್ಕೂ ತೋರಲಿಲ್ಲ. ಕುದುರೆಯನ್ನು ಹೇಗಾದರೂ ಮಾಡಿ ತೆಗೆದುಕೊಂಡು ಹೋಗಬೇಕಾಗಿದ್ದಿತು. ಆಗ ಅರ್ಜುನನ ಜೊತೆಯಲ್ಲಿ ಬಂದಿದ್ದ ಕೃಷ್ಣನು ಮುದುಕನಂತೆ ವೇಷವನ್ನು ಹಾಕಿಕೊಂಡನು. ಅರ್ಜುನನು ಬ್ರಹ್ಮಚಾರಿಯಂತೆ ವೇಷವನ್ನು ಹಾಕಿಕೊಂಡು ತಾನು ಆ ವೃದ್ಧನ ಶಿಷ್ಯನೆಂದು ಹೇಳಿಕೊಂಡನು. ಇಬ್ಬರೂ ಮಯೂರಧ್ವಜನ ಆಸ್ಥಾನಕ್ಕೆ ಹೋದರು.

ಮಯೂರಧ್ವಜನಾದರೋ ಇವರನ್ನು ಕಂಡೊಡನೆಯೇ ಬೇಕಾದಷ್ಟು ಉಪಚಾರವನ್ನು ಮಾಡಿ ಏನಾಗಬೇಕೆಂದು ಕೇಳಿದನು. ಆಗ "ಅಯ್ಯಾ ಧೂರೆಯೆ! ನಾನು, ನನ್ನ ಮಗನ ಮತ್ತು ಈ ಶಿಷ್ಯನ ಜೊತೆಯಲ್ಲಿ ಬರುತ್ತಿದ್ದಾಗ ಬಂದು ಸಿಂಹವು ನನ್ನ ಮಗನನ್ನು ಹಿಡಿದು ಕೊಂಡಿತು. ಆಗ ನಾನು ಮಗನನ್ನು ಬಿಟ್ಟುಬಿಡೆಂದು ಬೇಡಿಕೊಳ್ಳಲು ಆ ಸಿಂಹವು, ಮಯೂರಧ್ವಜನ ದೇಹದ ಬಲಭಾಗದ ಅರ್ಧವನ್ನು ತಂದುಕೊಟ್ಟರೆ ಬಿಡುವೆನೆಂದು ಹೇಳಿತು. ಆದುದರಿಂದ ನಾನು ನಿನ್ನ ಬಲ ಭಾಗದ ಅರ್ಧವನ್ನು ಬೇಡುತ್ತೇನೆ" ಎಂದನು.

ಅದನ್ನು ಕೇಳಿ ಮಯೂರಧ್ವಜನು ಸ್ವಲ್ಪವೂ ವ್ಯಸನಪಡದೆ ಆಗ ಬಹುದೆಂದನು. ಅವನ ಹೆಂಡತಿಯೂ ಮಗನೂ ಎಷ್ಟೋ ಪ್ರಯತ್ನ ಪಟ್ಟರು. ತಾವೇ ಮಯೂರಧ್ವಜನ ಬದಲಾಗಿ ಬಲಿಯಾಗಬೇಕೆಂದರು. ಆದರೆ ಕೃಷ್ಣನು ಅದಕ್ಕೆ ಒಡಂಬಡದಿರಲು, ಆ ಮಯೂರಧ್ವಜನ ಹೆಂಡತಿಯೂ ಮಗನೂ ಗರಗಸವನ್ನು ತಂದು, ಆ ರಾಜನ ದೇಹವನ್ನು ಸಮನಾಗಿ ಕೊಯ್ಯಲು ಪ್ರಾರಂಭಿಸಿದರು. ಆ ರಾಜನಾದರೋ ಸ್ವಲ್ಪವೂ ವ್ಯಸನಪಡದೇ ಸಂತೋಷದಿಂದ ಇದ್ದನು. ಏಕೆಂದರೆ, ತನ್ನ ದೇಹವು ಪರೋಪಕಾರದಲ್ಲಿ ಉಪಯೋಗವಾಗುತ್ತಿದೆಯೆಂದು ಅವನು ತೃಪ್ತನಾಗಿದ್ದನು ನೋಡಿದಿರಾ! ಅವನಂತಹನೆಂಬುದನ್ನು?

ಹಾಗೆ ಕೊಯ್ಯುತ್ತಿರುವಾಗ ಆ ರಾಜನ ಎಡಗಣ್ಣಿನಿಂದ ಒಂದು ಹನಿ ನೀರು ಬಿತ್ತು. ಆಗ ಕೃಷ್ಣನು 'ಅಯ್ಯಾ! ಅಳುತ್ತಾ ದಾನಮಾಡುವುದಾದರೆ, ಬೇಡ' ಎಂದನು. ಆಗ ರಾಜನು 'ಅಯ್ಯಾ! ಬ್ರಾಹ್ಮಣನೇ! ಈ ಎಡಭಾಗವು ಉಪಯೋಗವಾಗಲಿಲ್ಲವಲ್ಲ ಎಂದು ಅಳುತ್ತಿದ್ದೆ, ಅಷ್ಟೆ. ಬಲಭಾಗವೇನೋ ಪರೋಪಕಾರದಲ್ಲಿ ನೆರವಾಯಿತು.' ಎಂದನು. ಅದನ್ನು ಕೇಳಿ ಕೃಷ್ಣನು ಅತಿ ಸಂತೋಷದಿಂದ ತನ್ನ ನಿಜರೂಪನ್ನು ತೋರಿಸಿ, ತಾನು ಬಂದ ಕೆಲಸವನ್ನು ತಿಳಿಸಿದನು. ಆಗ ರಾಜನಾದರೋ ಸ್ವಾಮಿಯು ಪ್ರತ್ಯಕ್ಷನಾದುದನ್ನು ಕಂಡು ಸಂತೋಷದಿಂದ, "ಸ್ವಾಮಿಯೇ! ಇದುವರೆಗೆ ನಾನು ಈ ದೇಹದ ಸಹಾಯದಿಂದ 'ಕೃಷ್ಣಾರ್ಪಣ' ವೆಂದು ಅನೇಕ ದಾನಗಳನ್ನು ಕೊಟ್ಟಿರುವೆನು. ಆದರೆ ಅವೆಲ್ಲಕ್ಕಿಂತಲೂ ನಾನು ಈಗ ಕೊಡಬೇಕೆಂದಿದ್ದ ದಾನವು ಶ್ರೇಷ್ಠವಾದುದು. ಯಾಕೆಂದರೆ ಸಾಕ್ಷಾತ್ತಾಗಿ ನೀನೇ ಬಂದು ದಾನವನ್ನು ಕೇಳಿದೆ. ದೇವನೇ! ನಾನು ನಿನ್ನ ಕೃಪೆಯನ್ನು ವರ್ಣಿಸಲಾರೆ" ಎಂದನು.

ಆಗ ಕೃಷ್ಣನು ಆ ರಾಜನ ಪರೋಪಕಾರ ಬುದ್ಧಿಯನ್ನು ಕಂಡು ತನ್ನ ದಿವ್ಯಕೈಗಳಿಂದ ರಾಜನ ತಲೆಯನ್ನು ಮುಟ್ಟಿದನು. ಕೂಡಲೆ ಆ ಭಾಗವಾದ ದೇಹವು ಸರಿಯಾಯಿತು. ರಾಜನು ಕೃಷ್ಣನನ್ನು ನಮಸ್ಕರಿಸಿ ಯಾಗದ ಕುದುರೆಯನ್ನು ಕೊಟ್ಟು ಮಗನನ್ನು ಪರಮಾತ್ಮ ಸೇವೆಯಲ್ಲಿ ಕಳುಹಿಸಿದನು.

ನೋಡಿದಿರಾ! ಎಂತಹ ಪ್ರಖ್ಯಾತ ಪುರುಷರು ನಮ್ಮ ದೇಶದಲ್ಲಿದ್ದರು. ನೀವೆಲ್ಲರೂ ಅವರಂತೆಯೇ ಆಗಬೇಕಲ್ಲವೆ? ಮಕ್ಕಳಿರಾ!

ಮೈಸೂರು ಚರಿತ್ರೆಯ ಕಥೆಗಳು.

ಪ್ರಸಿದ್ಧರಾದ ಇಬ್ಬರು ಅಣ್ಣತಮ್ಮಂದಿರು.

(ಹಿಂದಿನ ಸಂಚಿಕೆಯಿಂದ ಮುಂದುವರದಿದೆ).

ಯದುರಾಯರಿಗೆ ಒಳ್ಳೆಯದಾದುದು.

ಯದುರಾಯರ ಸಾಹಸವು ರಾಣಿದೇವಾಜಮ್ಮಣ್ಣಿಯವರಿಗೆ ತಿಳಿಯಿತು. ನಾಯಕನ ಕಾಟವು ತಪ್ಪಿತು. ಅವರಿಗೂ ಅವರ ಮಗಳಿಗೂ ಬಹಳ ಸಂತೋಷವಾಯಿತು. ಯದುರಾಯರನ್ನು ಮರ್ಯಾದೆಯಿಂದ ಅರಮನೆಗೆ ಕರೆದು ತಂದರು. ಅಲ್ಲಿ ಅವರಿಗೆ ದಿವ್ಯ ಔತಣವನ್ನು ಮಾಡಿಸಿ ವಸ್ತ್ರಗಳನ್ನೂ ಆಭರಣಗಳನ್ನೂ ಒಪ್ಪಿಸಿದರು.

ಯದುರಾಯರು ನೋಡುವುದಕ್ಕೆ ಚೆನ್ನಾಗಿದ್ದರು. ಶೂರರೂ ಆಗಿದ್ದರು. ದೊಡ್ಡ ವಂಶದವರು. ಅವರಿಗೆ ರೂಪವತಿಯೂ ಗುಣವತಿಯೂ ಆದ ತಮ್ಮ ಮಗಳನ್ನು ಕೊಡುವುದಾಗಿ ದೇವಾಜಮ್ಮಣ್ಣಿಯವರು ಹೇಳಿ ಕಳುಹಿಸಿದರು. ಯದುರಾಯರು ಒಪ್ಪಿದರು. ಅದರಂತೆ ಶುಭದಿನದಲ್ಲಿ ಮದುವೆಯು ಚೆನ್ನಾಗಿ ನಡೆಯಿತು. ಕೆಂಚಲಗೂಡಿನ ನಂಜರಾಜಯ್ಯನವರು ರಾಜಕುಮಾರಿಯನ್ನು ಧಾರೆಯೆರೆದುಕೊಟ್ಟರು.

ದೇವಾಜಮ್ಮಣ್ಣಿಯವರಿಗೆ ಗಂಡುಮಕ್ಕಳಿಲ್ಲವಷ್ಟೆ. ಹದನಾಡನ್ನು ಯದುರಾಯರಿಗೆ ಕೊಟ್ಟರು. ಕಾರುಗಹಳ್ಳಿಯೂ ಇವರಿಗೆ ಸೇರಿತು. ರಾಯರು ಹದಿನಾಡನ್ನು ಬಿಟ್ಟು ಮೈಸೂರಿನಲ್ಲೇ ನಿಂತರು. ಚಿಕ್ಕ ಚಿಕ್ಕ ಪಾಳೆಯಗಾರರನ್ನು ಜಯಿಸಿ ರಾಜ್ಯವನ್ನು ಹೆಚ್ಚಿಸಿದರು. ಧರ್ಮದಿಂದ ಆಳಿದರು.

ಶ್ರೀ ಚಾಮುಂಡೇಶ್ವರಿಯನ್ನೂ ನಂಜನಗೂಡಿನ ನಂಜುಂಡೇಶ್ವರನನ್ನೂ ಪೂಜಿಸುತ್ತಿದ್ದರು. ಮೈಸೂರು ದೊರೆಗಳು ಒಡೆಯರೆಂಬ ಹೆಸರನ್ನು ಇಟ್ಟುಕೊಳ್ಳಬೇಕೆಂದು ಜಂಗಮ ಗುರುಗಳು ಕೇಳಿಕೊಂಡರು. ಅದರಂತೆ ಯದುರಾಯರ ನಂತರ ಬಂದ ಮೈಸೂರು ದೊರೆಗಳಿಗೆ ಒಡೆಯರೆಂಬ ಹೆಸರಾಯಿತು.

ಯದುರಾಯರೂ ಅವರ ಪತ್ನಿಯವರೂ ಒಂದು ಸಾರಿ ಶ್ರೀ ಚಾಮುಂಡೇಶ್ವರಿಯಲ್ಲಿ ವರವನ್ನು ಕೇಳಿಕೊಂಡರು. "ಮಹಾತಾಯೇ ನೀನು ಭಕ್ತರು ಬೇಡಿದುದನ್ನು ಕೊಡುವೆ. ನಮ್ಮ ಸಂತಾನವು ಬೆಳೆಯುವಹಾಗೆ ಕರುಣಿಸು. ನಿನ್ನ ಅನುಗ್ರಹದಿಂದ ಗಂಡುಮಕ್ಕಳಾದರೆ ನಿನ್ನ ಸನ್ನಿಧಿಯಲ್ಲಿ ತೊಟ್ಟಿಲು ಹಾಕಿಸುವೆವು. ಎಂದು ಬೇಡಿಕೊಂಡರು.

ದೇವಿಯ ದಯೆಯಿಂದ ಇಬ್ಬರು ಮಕ್ಕಳಾದರು. ಮೊದಲನೆಯವರು ಹಿರಿಯ ಬೆಟ್ಟದ ಚಾಮರಾಜ ಒಡೆಯರು. ಎರಡನೆಯವರು ಚಾಮಒಡೆಯರು. ಚಾಮುಂಡಿ ಬೆಟ್ಟದ ಮೇಲೆ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಮುಂದಿರುವ ಸಂಪಿಗೆಯ ಮರಕ್ಕೆ ತೊಟ್ಟಿಲನ್ನು ಕಟ್ಟಿಸಿ ಅದರಲ್ಲಿ ಮಗುವನ್ನು ಮಲಗಿಸಿ ತೂಗಿ ತಮ್ಮ ಹರಕೆಯನ್ನು ಒಪ್ಪಿಸಿದರು.

ಕೆಂಚಲಗೂಡಿನ ನಂಜರಾಜಯ್ಯನವರೂ ಇದ್ದರು. ಅವರು ಬಹಳ ಮುದುಕರಾಗಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಅವರು ಯದುರಾಯರಿಗೆ ಮಾವನವರ ಕಡೆ ಸಂಬಂಧಿ. ಮದುವೆಯಲ್ಲಿ ಧಾರೆಯೆರದು ಕೊಟ್ಟಿದ್ದರು. ಆದುದರಿಂದ ಅವರ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿಯೂ, ಮುದುಕರನ್ನು ಆದರಿಸುವುದಕ್ಕಾಗಿಯೂ ತಮ್ಮ ಎರಡನೆಯ ಮಕ್ಕಳು ಚಾಮ ಒಡೆಯರನ್ನು ಕೆಂಚಲಗೂಡಿಗೆ ಕಳುಹಿಸಿದರು.

ಆಮೇಲೆ ಹಿರಿಯಬೆಟ್ಟದ ಚಾಮರಾಜ ಒಡೆಯರು ದೊರತನಕ್ಕೆ ಬಂದರು. ಇವರೂ, ಇವರ ಅನಂತರ ಆಳಿದ ರಾಜರೂ ಅನೇಕ ಪಾಳೆಯಗಾರರನ್ನೂ ಚಿಕ್ಕ ಚಿಕ್ಕ ರಾಜರುಗಳನ್ನೂ ಜಯಿಸಿ ರಾಜ್ಯವನ್ನು ವಿಸ್ತರಿಸುತ್ತಾ ಬಂದರು. ಕೊನೆಗೆ ಮೈಸೂರು ರಾಜ್ಯವು ದೊಡ್ಡದಾಯಿತು.

ಮೈಸೂರು ದೊರೆಗಳಿಗೆಲ್ಲಾ ಯದುರಾಯರೇ ಮೂಲಪುರುಷರು.

ಬಿ. ನಾ. ರಾ.



ನಮ್ಮ ಚಿಕ್ಕನಾಯಕರೂ ಅವರ ಸಹೋದರಿಯರೂ

ಕಬ್‌ಗಳು ಕಲಿಯಬೇಕಾದುದು.

ಆರೋಗ್ಯ.

ಮಗೂ—ಹಿಂದಿನ ತಿಂಗಳಲ್ಲಿ ನಿನಗೆ ಹೇಳಿದಂತೆ ನಿನ್ನ ಆರೋಗ್ಯದ ವಿಚಾರವಾಗಿ ನೀನು ತಿಳಿದುಕೊಳ್ಳಬೇಕಾಗಿರುವುದನ್ನು ತಿಳಿಸುತ್ತೇನೆ.

ಸದಾಕಾಲದಲ್ಲಿಯೂ ಮೂಗಿನಲ್ಲಿಯೇ ಉಸಿರನ್ನು ಬಿಡಬೇಕು.

ಯಾವಾಗಲೂ ಮೂಗಿನಲ್ಲಿಯೇ ಏಕೆ? ಬಾಯಿಯಲ್ಲಿ ಯಾತಕ್ಕಾಗಬಾರದು? ನೋಡು ಗಂಟಲಿಗೆ ತಣ್ಣಗಿರುವ ಗಾಳಿಯು ತಗಲಿದಲ್ಲಿ ನಿನಗೆ ನೆಗಡಿಯಾಗುತ್ತದೆ. ಆದ್ದರಿಂದ ನೀನು ಬಾಯಿಯಲ್ಲಿ ಉಸಿರಾಡಬೇಡ. ಥಂಡಿಯಾದ ಗಾಳಿಯು ನಿನ್ನ ಗಂಟಲಿಗೆ ಶೀತವನ್ನುಂಟು ಮಾಡುತ್ತದೆ. ನೀನು ಮೂಗಿನಿಂದ ಉಸಿರಾಡಿದಲ್ಲಿ ನಿನ್ನ ಗಂಟಲಿಗೆ ಬಿಸಿಯಾದ ಗಾಳಿಯೇ ಬಂದು ಶೀತವು ಉಂಟಾಗುವುದಿಲ್ಲ.

ಇಷ್ಟೇ ಅಲ್ಲ. ಗಾಳಿಯಲ್ಲಿ ನಿನ್ನ ಕಣ್ಣಿಗೆ ಕಾಣದಂತಹ ಸಣ್ಣ ಸಣ್ಣ ಕ್ರಿಮಿಗಳಿವೆ. ಅವುಗಳು ನಿನ್ನ ಬಾಯಿಯಲ್ಲಿ ಸುಖವಾಗಿ ಹೋಗಬಲ್ಲವು. ಮೂಗಿನಲ್ಲಿ ಜಿಗಿಯಾಗಿರುವ ದ್ರವವಿರುವುದರಿಂದಲೂ, ಸಣ್ಣ ಸಣ್ಣ ಕೂದಲುಗಳಿರುವುದರಿಂದಲೂ ಈ ಕ್ರಿಮಿಗಳು ಒಳಗೆ ಹೋಗಲಾಗುವುದೇ ಇಲ್ಲ. ಇವುಗಳು ಒಳಗೆ ಹೋಗದಿದ್ದಲ್ಲಿ ನೀನು ಯಾವ ಖಾಯಿಲೆಗಳನ್ನೂ ಅನುಭವಿಸುವುದಿಲ್ಲ.

ನೀನು ಧೂಳಿನಲ್ಲಿ ಕೆಲಸಮಾಡುವಾಗ ಬಾಯಿಯನ್ನು ಬಟ್ಟೆ ಕೊಂಡಿದ್ದರೆ ನಿನಗೆ ಬೇಗಲೇ ದಾಹವುಂಟಾಗುತ್ತದೆ. ಬಾಯಿಯನ್ನು ಮುಚ್ಚಿಕೊಂಡು ಮೂಗಿನಲ್ಲಿ ಉಸಿರು ಬಿಟ್ಟಲ್ಲಿ ನಿನಗೆ ಆಯಾಸವು ಬೇಗನೇ ಆಗಲಾರದು, ಧೂಳನ್ನೂ ಸಹ ತಿನ್ನಬೇಕಾಗುವುದಿಲ್ಲ.

ಅಂಗಗಳಲ್ಲಿ ಒಂದೊಂದಕ್ಕೂ ಒಂದೊಂದು ಕೆಲಸವು ಏರ್ಪಡಿಸಲ್ಪಟ್ಟಿದೆ ಆಹಾರವನ್ನು ತಿನ್ನಲು ದೇವರು ಬಾಯನ್ನು ಕೊಟ್ಟಿರುತ್ತಾನೆ, ಉಸಿರು ಬಿಡುವುದಕ್ಕಲ್ಲ ಉಸಿರುಬಿಡುವುದಕ್ಕಾಗಿಯೇ ಮೂಗು ಇರುತ್ತದೆ.

ಅಮೇರಿಕಾ ದೇಶದ ಕಾಡುಜನರು ತಮ್ಮ ಮಕ್ಕಳ ಬಾಯನ್ನು ಸದಾಕಾಲದಲ್ಲಿಯೂ ಕಟ್ಟಿಯೇ ಇರುತ್ತಾರೆ (ಊಟಮಾಡುವಾಗ ಮಾತ್ರವಲ್ಲ) ಇದರಿಂದ ಮಕ್ಕಳು ಮೂಗಿನಲ್ಲಿಯೇ ಉಸಿರು ಬಿಡುವುದನ್ನು ಅಭ್ಯಾಸಮಾಡುವುದಲ್ಲದೆ ಗೂರಕೆಯನ್ನೂ ಹಾಕುವುದಿಲ್ಲ. ಇದರಿಂದ ಇವರು ಶತ್ರುಗಳಿಂದ ಬಚ್ಚಿಟ್ಟುಕೊಂಡಿರುವಾಗ ಯಾವ ಅಪಾಯವೂ ಉಂಟಾಗುವುದಿಲ್ಲ ಗೂರಕೆಯನ್ನು ಹಾಕುವವರು ಬಾಯಿಯಲ್ಲಿ ಉಸಿರಾಡುತ್ತಾರೆಂದು ತಿಳಿ.

ಕಬ್‌ಗಳೊಡನೆ ನಮ್ಮದೊಂದು ಹರಟೆ.

ಮೂರ್ತಿ ಚಿಕ್ಕದಾದರೇನು?

ನಮ್ಮ ದೇಶದ ಉತ್ತರದಲ್ಲಿ ಪಂಜಾಬ್ ದೇಶವಿರುವುದು ನೀವು ತಿಳಿದಿರುತ್ತೀರಿ. ಅಲ್ಲಿ ಸಿಕ್ಖರು ಗೂರಕಾಜನರೂ ಇದ್ದಾರೆ. ಅಲ್ಲಿನ ಸೈನ್ಯದಲ್ಲಿ ಇವರೇ ಇರುತ್ತಾರೆ. ಗೂರಕಾಜನರು ಆಕಾರದಲ್ಲಿ ಚಿಕ್ಕವರು. ಆದರೇನು ಇವರ ಕೀರ್ತಿಯು ಹೆಚ್ಚಾಗಿಯೇ ಇದೆ. ಪ್ರಪಂಚದಲ್ಲೆಲ್ಲಾ ಇವರಷ್ಟು ಧೈರ್ಯಸ್ಥರೇ ಇಲ್ಲ. ಮೊನ್ನಿನ ದೊಡ್ಡ ಯುದ್ಧದಲ್ಲಿ ಇವರು ಬಹಳ ಸಾಹಸಕಾರ್ಯಗಳನ್ನು ಮಾಡಿರುತ್ತಾರೆ. ಅಂದರೆ ಚಿಕ್ಕವರಾದಾಗ್ಯೂ ಇವರ ಧೈರ್ಯವು ದೊಡ್ಡದೇ!

ನೀವುಗಳು ಚಿಕ್ಕವರಾದಾಗ್ಯೂ, ದೊಡ್ಡ ಹುಡುಗರಂತೆ ನೀವುಗಳು ಧೈರ್ಯಸ್ಥರಾಗಬಹುದು. ಜಪಾನ್‌ದೇಶದವರೂ ನೋಡುವುದಕ್ಕೆ ಕುಳ್ಳಾಗಿದ್ದರೂ ಅವರು ಇತರ ದೇಶದವರಿಗೆ ಯಾವ್ದರಲ್ಲಿಯೂ ಕಮ್ಮಿಯಾಗಿಲ್ಲ. ಏತಕ್ಕೆಂದರೆ ಅವರಿಗೆ ಒಂದು ಗುಟ್ಟು ತಿಳಿದಿದೆ. ಆ ಗುಟ್ಟು ಏನೆಂದರೆ—ಸರಿಯಾದ ಆಹಾರವನ್ನು ತಿನ್ನುವುದು, ಸದಾ ಶುಚಿಯಾಗಿರುವುದು, ವ್ಯಾಯಾಮವನ್ನು ಬಿಡದೇ ಮಾಡುವುದು, ಸದಾಕಾಲದಲ್ಲಿಯೂ (ಕಬ್‌ಗಳಂತೆ) ನಗುತ್ತಿರುವುದೂ, ಸಿಟ್ಟಾಗದಿರುವುದು,—ಇವ್ರಗಳಿಂದ ಅವರು ಆಕಾರದಲ್ಲಿ ಚಿಕ್ಕವರಾದಾಗ್ಯೂ ಭೀಮಸಂತಿರುವ ಜನರಂತೆಯೇ ಬಲವುಳ್ಳವರಾಗಿರುತ್ತಾರೆ.

ನೀವುಗಳೂ ಸಹ ಅವರಂತೆಯೇ ಏತಕ್ಕೆ ಮಾಡಬಾರದು? ನಾ ಮುಂದಿನ ಹರಟೆಯಲ್ಲಿ ಈ ಗುಟ್ಟನ್ನು ಎಶದಪಡಿಸುತ್ತೇನೆ.

(ದಿನಕೊಂದೂ—ಉಪಕಾರ ನೀ—ಮಾ—ಡು)

ಹಿರಿಯಣ್ಣಂದಿರಿಗಾಗಿ.

ಅಂಕ ೮

ಎರಡನೆಯ ತಾರೆಯ ಕೆಲಸಗಳು.

ನಿಮ್ಮ ಹಳೆಯ ಬಾಲಕರು ಹೊಸಬರೊಡನೆ ಮೊದಲನೆಯ ತಾರೆಯ ಕೆಲಸಗಳನ್ನು ಮತ್ತೆ ಪುನಃ ಜ್ಞಾಪಿಸಿಕೊಳ್ಳುವುದೂ ಅಲ್ಲದೆ ಹೊಸದಾಗಿ ಎರಡನೆಯ ತಾರೆಯ ಕೆಲಸಗಳನ್ನು ಕಲಿಯಬೇಕು. ಹಳಬರಿಗಾಗಿಯೇ ವಾರಕ್ಕೆ ಒಂದು ಗಂಟೆಯಷ್ಟು ಕಾಲವನ್ನಾದರೂ ಮೀಸಲಾಗಿಡಬೇಕು. ಹೊಸಬಾಲಕರನ್ನು ನಿಮ್ಮ ಸಹೋದ್ಯೋಗಿಯಾದ ಹಿರಿಯಣ್ಣನು ನೋಡಿಕೊಳ್ಳಬಹುದು. ಸಹೋದ್ಯೋಗಿಯು ಇಲ್ಲವಿದ್ದರೆ ಬಾಲಕರ ನಾಯಕನೇ ನೋಡಿಕೊಳ್ಳಬಹುದು.

ಎರಡನೇ ವರ್ಜಿಯ ಕೆಲಸಗಳನ್ನು ಹಿರಿಯಣ್ಣನು ಹೇಳಿಕೊಡಬೇಕಾಗಿದ್ದರೂ, ಅದರಲ್ಲಿ ಹೆಚ್ಚು ಅಭ್ಯಾಸವನ್ನು ಬಾಲಕರೇ ಸ್ವತಃ ಮಾಡಿಕೊಳ್ಳಬೇಕೆಂಬುದನ್ನು ಹೇಳುತ್ತಾ ಇರಬೇಕು. ಎರಡನೇ ತಾರೆಯನ್ನು ಬಾಲಕನು ಕಷ್ಟಪಟ್ಟು ತಾನಾಗಿಯೇ ಸಂಪಾದಿಸಬೇಕು. ಎರಡನೇ ತಾರೆಯನ್ನು ಎಲ್ಲರೂ ಸಿಕ್ಕಕಾಲದಲ್ಲಿ ನ್ಯಾರಂಭಿಸಿದರೂ ಸಿಕ್ಕ ಕಾಲದಲ್ಲಿಯೇ ಸಂಪಾದಿಸಲಾರರು. ಏಕೆಂದರೆ ಬಾಲಕರು ತಾವಾಗಿಯೇ ಮಾಡಬೇಕಾದ ಕೆಲಸಗಳು ಅತಿಯಾಗಿವೆ. ಪ್ರತಿ ಒಬ್ಬನ ಉತ್ಸಾಹದಲ್ಲಿಯೂ ಕ್ರಿಯಾಶಕ್ತಿಯಲ್ಲಿಯೂ ವ್ಯತ್ಯಾಸವಿರುತ್ತದೆ ಎಲ್ಲರಿಗಿಂತಲೂ ಮುಂಚೆಯೇ ತಾರೆಯನ್ನು ಸಂಪಾದಿಸಿದವನು ಹಿಂದುಳಿದ್ದವನಿಗೆ ಉದಾಹರಣೆಯಾಗಿರುತ್ತಾನೆ.

ಎರಡನೇ ತಾರೆಗೆ ಕಲಿಯಬೇಕಾದವುಗಳಲ್ಲಿ :—

ಸಿಗ್ನಲಿಂಗ್—ಬಾವುಟಗಳಿಂದ ಸಮಫ್ಲೋರ್ ಸಂಜ್ಞೆಯಲ್ಲಿ ಕಲಿಯಬೇಕು. ಆದರೆ ಮೊರ್ಸ್‌ಪದ್ಧತಿಯು ಕಲಿಯಲು ಕಷ್ಟವಾಗಿದ್ದಾಗ್ಯೂ ಉಪಯೋಗದಲ್ಲಿ ಹೆಚ್ಚು ಅನುಕೂಲವುಳ್ಳದ್ದಾಗಿದೆ. ಕಬ್‌ಗಳಾದಾಗಲೇ ಇದನ್ನು ಚೆನ್ನಾಗಿ ಕಲಿತದ್ದೇ ಆದರೆ ಮುಂದಕ್ಕೆ ಸ್ಕೌಟುಗಳಾದಾಗ ಬಹಳ ಬೇಗನೇ ಮಹರಾಜಾ ಸ್ಕೌಟುಗಳು ಆಗಬಹುದು. ಗುಂಪು ದೊಡ್ಡದಾಗಿದ್ದಲ್ಲಿ ಸಿಗ್ನಲಿಂಗ್ ಕಲಿಸಲು ಕಷ್ಟವಾಗಬಹುದು. ಆದರೆ ಮೊದಲಿನ ಹನ್ನೆರಡು ಬಾಲಕರನ್ನು ಸಿಗ್ನಲಿಂಗಿನಲ್ಲಿ ಚೆನ್ನಾಗಿ ಯಾತಕ್ಕೆ ಕಲಿಸಬಾರದೋ ನನಗೆ ತಿಳಿಯಲಿಲ್ಲ. ಈ ಬಾಲಕರುಗಳೇ ಮುಖ್ಯವಾದ ನಾಯಕರಾಗುವುದರಿಂದ ಇತರ ಬಾಲಕರಿಗೆ ಇವರು ಕಲಿಸಬಹುದು. ಪಾರ್ಸಿನಲ್ಲಿ ಸರಿಯಾದ ಶಿಕ್ಷಣವು ಸಿಕ್ಕಲ್ಲಿ ಬಾಲಕರು ಅದನ್ನು ಮರೆಯುವುದಕ್ಕೆ ಸಾಧ್ಯವೇ ಇಲ್ಲ. ಸಿಮಫ್ಲೋರ್ ಕಲಿಯುವುದೂ ಸುಲಭ, ಮರೆಯುವುದೂ ಸುಲಭ. ಸಿಮಫ್ಲೋರ್ ಆಗಲೀ ಮೊರ್ಸ್ ಆಗಲೀ ಪ್ರಾರಂಭದಿಂದಲೂ ಬಾವುಟಗಳೊಡನೆಯೇ ಕಲಿಯುವುದು ಉತ್ತಮ ಪ್ರತಿ ಒಂದು ಆರರ ಗುಂಪಿಗೂ ಒಂದು ಜೊತೆ ಬಾವುಟಗಳಿರುವುದು ಅತ್ಯವಶ್ಯಕ.

ದಿಕ್ಕುಗಳು—ಕಾಗದದ ಮೇಲೆ ಗುರ್ತಿಸಿ ಎಂಟು ದಿಕ್ಕುಗಳನ್ನೂ ತೋರಿಸಿಕೊಡಿ. ನಂತರ ದಿಕ್ಕುಗಳನ್ನು ಅಂಗಳದಲ್ಲಿ ತೋರಿಸಿ, ನಂತರ ಆಟಗಳ ಮೂಲಕವೇ ಇವುಗಳನ್ನು ಕಲಿಸಿಬೇಕು. ಇದನ್ನು ಕಲಿಸಿದನಂತರ ಕೆಲವು ಕಾಲ, ಅಂದರೆ ಸ್ವಲ್ಪವೂ ತಪ್ಪಿಲ್ಲದೇ ತಿಳಿಯುವವರಿಗೂ, ಹೊರದೇಶದಲ್ಲಿ ಹೋದಾಗ ಕೇಳುತ್ತಿರಬೇಕು. ಅಲ್ಲದೇ ಉತ್ತರ ಮುಖವಿಟ್ಟುಂದ ದಿಕ್ಕುಗಳನ್ನು ತಿಳಿಯುವ ರೀತಿಯನ್ನು ಕಲಿಸಬೇಕು.

ಕಾಯಶೌಶ್ರೀಗೌರಿ—ದೇವರಿಗೆ ಭಕ್ತಿಯನ್ನು ತೋರ್ಪಡಿಸುವಂತೆಯೇ ಶ್ರೀಮನ್ಮಹಾರಾಜರವರಲ್ಲಿ ನಮ್ಮ ಭಕ್ತಿಯನ್ನು ತೋರ್ಪಡಿಸಬೇಕು ಅದಕ್ಕಾಗಿಯೇ ಕಾಯಶೌಶ್ರೀಗೌರಿಯನ್ನು ಹೇಳುವುದು. ಆಗ ಸಮ್ಯತೆಯಿಂದ ಎಲರ್ಟ್‌ನಲ್ಲಿ ನಿಲ್ಲಬೇಕು. ಮರ್ಯಾದೆಯಿಂದ ನಡಿಯಬೇಕೆಂದೂ ಹೇಳಬೇಕು.



ಸೇವಾಸಮಿತಿಯ ಕಬ್‌ಗಳು.

ಸ್ಕೌಟು ತತ್ವ.

("ದುಗ್ಗಾಣಿಯು ಬಹು ಕೆಟ್ಟದ್ದಣ್ಣ" ಎಂಬಂತೆ).

ಸ್ಕೌಟು ನಾವಾಗಬೇಕಣ್ಣ | ನಮ್ಮ |
ಸ್ಕೌಟಿನ ತತ್ವವ ತಿಳಿಯಬೇಕಣ್ಣಾ ||ಪ||
ಕಾಕಿಬಟ್ಟೆಯು ತಾನು ಸ್ಕೌಟಲ್ಲ | ಒಳ್ಳೆ |
ಷೋಕಿನಿಂಚರಿವುದು ಸ್ಕೌಟಲ್ಲವಣ್ಣಾ ||
ಕಾಕಿಬಟ್ಟೆಯ ಹಾಕಿ ಷೋಕಿಮಾಡುತಲಿರ್ದು |
ಲೋಕಕ್ಕೆ ಉಪಕಾರಮಾಡಬೇಕಣ್ಣಾ ||೧||
ದೊಣ್ಣೆ ಕೈಲಿದ್ದರೆ ಸ್ಕೌಟಲ್ಲ | ಒಲು |
ಸನ್ನೆ ಮಾಡುವಜಾಣ ಸ್ಕೌಟಲ್ಲವಣ್ಣಾ ||
ದೊಣ್ಣೆ ಕೈಯಲಿ ಹಿಡಿದು ಸನ್ನೆಯಮಾಡುತ್ತ |
ನನ್ನಿಯಿಂದಲಿ ದೇಶ ಸೇವೆಮಾಡಣ್ಣಾ ||೨||
ಕಾಡಲ್ಲಿ ತಿರುಗಬೇಕಣ್ಣ | ನಮ್ಮ |
ರೂಢಿಗೋಡೆಯನಸ್ನು ಒಲಿಸಬೇಕಣ್ಣಾ ||
ಕಾಡುಮೇಡನು ತಿರುಗಿ ಸಾಧನೆಯನುಮಾಡಿ |
ರೂಢಿಯೊಳಗೆ ಧೀರರಾಗಬೇಕಣ್ಣಾ ||೩||
ದೇಹದಂಡನೆಯ ಮಾಡಣ್ಣಾ | ಮಾಯಾ |
ಮೋಹವೆಂದೆಂಬುದು ಮದಕರಿಯಣ್ಣಾ ||
ಸಾಹಸದಿಂದಲೀ ಮದಕರಿಯನು ಕೊಲ್ಲ |
ಸಿಂಹದ ಮರಿಯು ನಾವಾಗಬೇಕಣ್ಣಾ ||೪||
ಈಶ ಶೇವೆಯು ರಾಜ ಶೇವೆಯು | ನಮ್ಮ |
ದೇಶ ಶೇವೆಯು ನಮ್ಮ ನಿಜತತ್ವವಣ್ಣಾ ||
ಸಾಸಿರದಸಹಸ್ರ ತೇಜದೊಳ್ ಮೆರೆಯುವ |
ಮೈಸೂರು ಮಕ್ಕಳ್ಗೆ ಸಿರಿಯು ನೋಡಣ್ಣಾ ||೫||

ಡಿ. ಗಿಡ್ಡಬಸಪ್ಪ, (ಹಿರಿಯಣ್ಣ.)

ಒಗಟುಗಳು.

(1) ಸಂದುಗೊಂದಿನ ಗೊಂಬೆ, ಸರಪಳಿಯ ಗೊಂಬೆ, ಸರಸೆ ದಿಂದಜೆದರೆ ಯುದ್ಧಸುತ್ತದು ಗೊಂಬೆ?

(2) ಎಷ್ಟಮಂದಿ ಸಿದರೂ ಒಗ್ಗದ ಕುದುರೆ?

(3) ದೇಹವೆಲ್ಲ ಕಣ್ಣು ದೇವನಾಯಕನಲ್ಲ
ನರನನೋಲೆಯೇರಿ ನಡೆವುದಿಲ್ಲ |
ಪ್ರಾಣಿಯಲ್ಲವು ತಾನು ಪ್ರಾಣಿಯಕೊಲ್ವುದು
ಭಾವವೇಸಿದಕ್ಕೆ ಭಾವನಂಟ ||

(4) ಕುಂಬಾರನು ಮಾಡದ ಮಡಿಕೆ, ಅಗಸನೊಗೆಯದ ಮಡಿ, ಸೂರ್ಯನು ನೋಡದ ಗಂಗೆ?

(5) ತನ್ನನ್ನು ತಾನೇ ನುಂಗಿ ಕಡೆಗೆ ಮಾಯವಾಗುವುದು?

(6) ಎಮ್ಮೆಗಳು ಮಲಗಿದರೆ ಹಗ್ಗಗಳು ಓಡಿಹೋಗುವುವು?

(7) ಕಾಲು ಮೇಲೆ ಮರ, ಮರದ ಮೇಲೆ ಬಳ್ಳಿಗಳು, ಬಳ್ಳಿಗಳ ಮೇಲೆ ಬೆರಳು?

(8) ಅಂಬಾರಂಬಾರಪ್ಪಣ, ಕೆಳಕ್ಕೆಬಿದ್ದರೆ ತುಪ್ಪಣ್ಣ, ಸುಲಿದು ನೋಡಿದರೆ ಕೆಂಪಣ್ಣ?

(9) ತಲೆಯಿಲ್ಲ, ನಡುವಿಲ್ಲ, ಕೈಗಳಿದ್ದರೂ ಬೆರಳಿಲ್ಲ?

(10) ಹಸರುಬೆತ್ತದಕೋಲು ಹಿಡಿಯುವನೆ? ಜಾಣ |
ಮುತ್ತುಗದಹೂವು ಮುಡಿಯುವನೆ? ಜಾಣ |
ಕೆಂಬಟ್ಟಿನೀರು ಕುಡಿಯುವನೆ? ಜಾಣ |
ಇದು ಹೇಳಬಲ್ಲ ಜಾಣನಿಗೆ ಅಂದಿಲ್ಲ.

(11) ಹತ್ತುಸಾವಿರ ಕಣ್ಣು ನೆತ್ತಿಲಾದರ ಬಾಲ |
ಹುತ್ತಿನಹುಳವ ಹಿಡಿದಹುದು ಕಪಿಜನರ |
ಮೊತ್ತವು ಹೇಳಲಿ ಸರ್ವಜ್ಞ.

(12) ಕರಿಯಮಂಚದ ಮೇಲೆ ಹಾಕುವ ಹಾಸಿಗೆ ತೆಗೆಯುವ ಹಾಸಿಗೆ.

ಕಳುಹಿಸಿದ್ದು ಕಬ್. ಎಂ. ಸೀತಾರಾಮಯ್ಯ,
ಮಳವಳ್ಳಿ.

ಗುಂಪುಗಳ ವರದಿಗಳು.

ಶ್ರೀರಾಮದಳ-ದೊಡ್ಡಬಳ್ಳಾಪುರ.

ಈ ದಳವು ಕಳೆದ ಎರಡುವರ್ಷಗಳಿಂದಲೂ ಕೆಲಸವನ್ನು ದಕ್ಷತೆಯಿಂದ ನಡಿಸುತ್ತಿದೆ. 36 ಸ್ಕೌಟುಗಳಿದ್ದಾರೆ. ಇದಕ್ಕೆ ಸೇರಿದ ಒಂದು ಕಬ್ ಗುಂಪುಸಹ ಇದೆ. ಈ ದಳದಲ್ಲಿ ಒಂದು ಪುಸ್ತಕ ಭಂಡಾರವಿದೆ. ಅದರಲ್ಲಿ 130 ಪುಸ್ತಕಗಳಿವೆ. ಈ ದಳದವರು ದೊಡ್ಡಮನುಷ್ಯರು ಬಂದಾಗಲೂ, ದೇವರ ಉತ್ಸವ ಸಮಯದಲ್ಲೂ, ರಾಜಭಕ್ತಿ ಪ್ರದರ್ಶನ ಕಾಲದಲ್ಲಿಯೂ ಕೆಲಸಗಳನ್ನು ಮಾಡಿರುತ್ತಾರೆ. ಈ ದಳದ ಅಧ್ಯಕ್ಷರಾದ ಮ॥ ರಾ॥ ಕೊಂಗಾಡಿಯಪ್ಪನವರ ಸಹಾಯದಿಂದಲೂ ಅವರ ಪ್ರೋತ್ಸಾಹದಿಂದಲೂ ಈ ಗುಂಪು ಮುಂದು ವರಿಯುತ್ತಿದೆ. ಟಿ. ವಿ. ರಾಮಸ್ವಾಮಿಯು ಎಂಬ ಒಬ್ಬ ನಮ್ಮ ಸ್ಕೌಟು ಅವನ ಹಿರಿಯಣ್ಣನೂ ಸಹ ನಾಗರಕೆರೆಯಲ್ಲಿ ಬದ್ದು ಪ್ರಾಣಬಿಡುತ್ತಿದ್ದ ಒಬ್ಬ ಮಹಮ್ಮದೀಯ ಹೆಂಗಸನ್ನೂ ಒಬ್ಬ ಬಾಲಕನನ್ನೂ ಪ್ರಥಮ ಸಹಾಯದಿಂದ ಬದುಕಿಸಿದರು. ಸಂಘದವರು ಟಿ. ವಿ. ರಾಮಸ್ವಾಮಿಗೆ ನರಸಿಂಹರಾಜ ಸಹಾಸ ಪದಕವನ್ನು ಕೊಟ್ಟಿರುತ್ತಾರೆ. ಈ ದಳದವರು ಪ್ರತಿ ಶುಕ್ರವಾರವೂ ದಳದ ಕೊಣೆಯಲ್ಲಿ ಭಜನೆಯನ್ನು ಮಾಡುತ್ತಾರೆ.

ಗುಂಪಿನ ಚಿಕ್ಕಹಿರಿಯಣ್ಣ, A. S. M.

ಮೈಸೂರು ಸ್ಕೌಟ್

ದೇಶಾಭಿಮಾನ.

"ಸ್ಕೌಟು ಪದ್ಧತಿಯಲ್ಲಿ ದೇಶಾಭಿಮಾನಕ್ಕೆ ಎಷ್ಟು ಆಸ್ಪದವನ್ನು ಕೊಟ್ಟಿರುವಿರಿ" ಎಂದು ಮೊನ್ನೆ ಒಬ್ಬರು ಕೇಳಿದರು. ಇನ್ನೊಬ್ಬರು ಹೇಳಿದರು:—ಸ್ಕೌಟು ಪದ್ಧತಿಯು ಖಂಡಿತವಾಗಿಯೂ ನಮ್ಮ ನಾಡಿಗೆ ಅನ್ವಯಿಸಲಾರದು. ಪ್ರಾಯಶಃ ಯೂರೋಪಿನಲ್ಲಿ ಅನ್ವಯಿಸಬಹುದು. ಹೀಗೆ ಇನ್ನೂ ಅನೇಕ ವಿಧವಾದ ಪ್ರಶಂಸೆಗಳನ್ನು ಕೇಳಿದಿರುವರಾರು?

* * * *

ಯಾರ ಮನಸ್ಸಿನಲ್ಲಾದರೂ ಎಳ್ಳಷ್ಟು ಸಂಶಯವಿದ್ದರೂ ಅದನ್ನು ಹೋಗಲಾಡಿಸಿಕೊಳ್ಳಬೇಕು. ಸ್ಕೌಟು ಖಂಡಿತವಾಗಿಯೂ, ಕಾಯವಾಚ ಮನಸಾ ತಾಯ್ನಾಡ ಮಗನು. ಸ್ಕೌಟಲ್ಲದ ತನ್ನ ಭ್ರಾತೃವಿನಂತೆ ತಾನೂ ಉಜ್ವಲದೇಶಭಕ್ತನು.

* * * *

ದೇಶಭಕ್ತನಾದೊಬ್ಬ ಮನುಷ್ಯನು ಯಾವದೋ ಒಂದು ರೀತಿಯಲ್ಲಿ ವರ್ತಿಸುತ್ತಿರಬಹುದು. ಅನೇಕ ಕಾರಣಗಳಿಂದಲೂ ಅವಕಾಶಗಳಿಂದಲೂ ಅವನ ದೇಶಾಭಿಮಾನವು ಹೊರಹೊಮ್ಮಿ ಪ್ರಪಂಚವನ್ನೇ ಬೆರಗುಮಾಡಿರಬಹುದು. ಅದನ್ನಾತ್ರಕ್ಕೆ ಆ ಮಹನೀಯನಂತೆ ಸರ್ವವಿಧದಲ್ಲಿಯೂ ಯಾವನು ವರ್ತಿಸುತ್ತಿರುವುದಿಲ್ಲವೋ ಅವನು ದೇಶಹಿತೈಷಿಯಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

* * * *

ಸುಪ್ರಸಿದ್ಧನಾದೊಬ್ಬ ದೇಶಭಕ್ತನು ನನ್ನಲ್ಲಿ, ಒಂದುವಿಧವಾಗಿ ಕೇಶವನ್ನು ತ್ಯಾಗಮಾಡಿಕೊಂಡಿರುವನು. ಅವನು ಯಾವಾಗಲೂ ಖಂಡಿಗಲ್ಲಿನ ಹೊಗೆಬತ್ತಿಯನ್ನೇ ಸೇವಿಸುವುದು. ಅಂದ ಮೇಲೆ ಯಾವನು ಆ ರೀತಿ ಕೇಶವನ್ನು ತ್ಯಾಗಮಾಡಿಕೊಂಡಿಲ್ಲವೋ ಆ ರೀತಿ ಖಂಡಿಗಲ್ಲಿನ ಹೊಗೆಬತ್ತಿಯನ್ನು ಸೇವಿಸುವುದಿಲ್ಲವೋ ಅಂತಹವನು ಪರಮನೀಚ, ನೀಚಶ್ರೇಷ್ಠನೆಂದು ಯಾರಾದರೂ ಹೇಳಿದರೆ—ಹೇಳಿದರೆ—ಹುಂ! ಏನು ನೋಡಿದರೆ ಗೊತ್ತಾಗುತ್ತೆ.

* * * *

ಸ್ಕೌಟರಲ್ಲಿ ಕೆಲವರು ಖಾದಿ ವಸ್ತ್ರಗಳನ್ನು ತೊಡದಿರಬಹುದು. ಕೆಲವರು ಹಿಂದಿಯನ್ನು ಕಲಿಯದಿರಬಹುದು. ಅವರ ದಳದಲ್ಲಿ ಹಿಂದೀ ಕಾರ್ಯಾಚರಣೆಯನ್ನೂ ದೇಶಿ ಗರಡಿಯನ್ನೂ ಮಾಡಿಸದಿರಬಹುದು. ಅವರು ಊರಿನಲ್ಲಿ ಕೆಲವರು ಕೆಲ ಸಮಯಗಳಲ್ಲಿ ವರ್ತಿಸುವಂತೆ ವರ್ತಿಸದಿರಬಹುದು. ಆದರೂ ಅವರು ಉಜ್ವಲದೇಶಾಭಿಮಾನಿಗಳಲ್ಲವೆಂದು ಹೇಗೆ ತಾನೇ ಹೇಳಲು ಸಾಧ್ಯ?

* * * *

ದೇಶಾಭಿಮಾನಕ್ಕೆ ಮುಖ್ಯವಾದ ಹೆಗ್ಗುರುತುಗಳೆಂದರೆ, ಈ ಬರಿಯ ವಸ್ತ್ರಗಳೇ ಆಗಲಿ, ಕವಾಯಿತಿನ ಭಾಷೆಯೇ ಆಗಲಿ ಅಥವಾ ಸಮಯಾಸಮಯವರಿಯದೆ ಅಧಿಕಾರಿವರ್ಗದಮೇಲೆ ದಾಳಿಯಿಡುವುದೇ ಆಗಲಿ ಎಂಬುದಾಗಿ ಯಾರೂ ಹೇಳಲಾರರು. ಮದ್ರಾಸು ಕಾಂಗ್ರೆಸಿಗೆ ಬಂಗಾಳಿಯರವರು ಒಬ್ಬರು ಬಂದಿದ್ದರು. ಅವರು ಯಾವುದೋ ಯಂತ್ರದ ವ್ಯಾಪಾರಿಗಳಂತೆ. ನಾನು ಮೊದಲು ನೋಡಿದಾಗ ಖಾದಿಯಲ್ಲಿದ್ದರು. ಅಂದೇ ಸಾಯಂಕಾಲ ನೋಡಿದಾಗ ಪರದೇಶಿ ವಸ್ತ್ರಗಳನ್ನು ತೊಟ್ಟಿದ್ದರು. 'ಏನ್ರಿ' ಎಂದು ಕೇಳಿದ್ದಕ್ಕೆ, 'ನೋಡಿ, ನಮ್ಮ ವ್ಯಾಪಾರಕ್ಕೊಸ್ಕರ ಈ ವೇಷ ಬೇಕು ಸ್ವಾಮಿ' ಎಂದರು. ದೇಶಾಭಿಮಾನಕ್ಕೆ ಹೆಗ್ಗುರುತೆಂದರೆ—ಎಂದರೆ—ದೇಶದಲ್ಲಿ ಅಭಿಮಾನ! ಇನ್ನೇನು ಹೇಳುವುದಕ್ಕಾದೀತು?

* * * *

ಯಾವ ಸ್ಕೌಟನೇ ಆಗಲಿ ತನ್ನ ತಾಯ್ನಾಡ ಮೇಲೆ ಪೂರ್ಣ ಅಭಿಮಾನವಿಲ್ಲದವನಾದರೆ ಅವನನ್ನು ಕಂಡು ಅವನ ಭ್ರಾತೃಗಳೆಲ್ಲರೂ ಘೋರವಾದ ಅಸಹಾನದಿಂದಲೂ ನಾಚಿಕೆಯಿಂದಲೂ ತಲೆಯನ್ನು ತಗ್ಗಿಸಿಕೊಳ್ಳುವರು!

ಲೊ! ಇವನ್ಯಾರು ಗೊತ್ತೇ—ಇವನು ಕಬ್ ರಾಮುಕಣೋ. ಮೊನ್ನೆ ಒಬ್ಬರ ಪ್ರಾಣ ಉಳಿಸಿದಕಣೋ! ಇವನಿಗೆ ಬಹಳ ಜಂಭ ಅಂತ ಕಾಣಿಸುತ್ತೆ ಅಲ್ಲವೆ? ಅದಕ್ಕೇ ಏನೋ ಇವನು ಚಡ್ಡಿಯ ಜೋಬಿನಲ್ಲಿ ಕೈಹಾಕಿಕೊಂಡು ಜೋರಾಗಿ ನಿಂತಿರುವುದು? ಇರಬಹುದಪ್ಪ ನಂಗೊತ್ತಿಲ್ಲ ಅವನ್ನೇ ಕೇಳಬೇಕು.

ನಮ್ಮ ನಾಯಕರಾದ ಶ್ರೀಮದ್ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರವರು ಮೈಸೂರು ಜಿಲ್ಲಾ ಸ್ಕೌಟುಸಂಸ್ಥೆಯ ವರದಿಗೆ ದಯಪಾಲಿಸಿದ ಉತ್ತರದ ಸಾರಾಂಶ.

ಮೈಸೂರು ನಗರದ ಸ್ಕೌಟುಸಪ್ತಾಹ ಸಮಾರಂಭದಲ್ಲಿ ಕಳೆದ ಮೂರುಸಲದಿಂದಲೂ ನಾನು ಅಧ್ಯಕ್ಷನಾಗಿದ್ದುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಚಳುವಳಿಯು ಬಹಳವಾಗಿ ಮುಂದುವರಿದಿದೆ. ಆದ ಕಾರಣದಿಂದ ನಿಮ್ಮ ಜಿಲ್ಲಾ ಮತ್ತು ನಗರದ ಸ್ಕೌಟು ಸಂಸ್ಥೆಯ ಅಧಿಕಾರದಲ್ಲಿ ಈ ನಗರದ ಸ್ಕೌಟುಸಂಸ್ಥೆಯವರ ವರದಿಯು ಒಳಗೊಂ ಕಾರಣ ಈ ಸುವ್ಯವಸ್ಥಿತವಾದ ಕಾರ್ಯಸಾಧನೆಗೆ ಡಿರುವ ಕಾರ್ಯಸಾಧನೆಗಳನ್ನು ನೋಡಿದರೆ ಈ ನಮ್ಮ ಘನವಾದ ಚಳುವಳಿಯಲ್ಲಿ ಸ್ವಾರ್ಥರಹಿತರಾಗಿಯೂ ಪರಸ್ಪರ ಸಹಾಯಕರಾಗಿಯೂ ಜನರು ಕೆಲಸ ಮಾಡಿ ದರೆ ಎಂತಹ ಉತ್ಕೃಷ್ಟತೆಯನ್ನು ಸಂಪಾದಿಸಬಹುದೆಂ ಬುದು ವ್ಯಕ್ತವಾಗುತ್ತದೆ. ಜಿಲ್ಲಾ ಸ್ಕೌಟುಸಂಸ್ಥೆಯು ಧನಸಹಾಯದಿಂದ ಸ್ಕೌಟು ಮತ್ತು ಕಬ್ ಶಿಕ್ಷಕರ ಶಿಕ್ಷಣಶಿಬಿರಗಳನ್ನು ಆಗಮಾಡಿಸಿರುವುದಲ್ಲದೆ, ಐದು ಸಹಸ್ರ ರೂಪಾಯಿಗಳ ಮೂಲಧನವನ್ನು ಶೇಖರಿಸಿದೆ ಯೆಂದು ತಿಳಿದು ಸಂತೋಷವಾಗುತ್ತದೆ. ಬೇಡರಹಳ್ಳಿ ಯನ್ನು ಮೂಲಶಿಬಿರವನ್ನಾಗಿ ಮಾಡಲು ಅಲ್ಲೊಂದು ವಿಶ್ರಾಂತಿಮಂದಿರವನ್ನೂ ಸಿಹಿನೀರಿನ ಭಾವಿಯನ್ನೂ ಅಲ್ಪಕಾಲದಲ್ಲಿ ಕಟ್ಟಿಸಿರು ವುದು ನಿಮ್ಮಂತಹ ಖಾಸಗೀಒಸರ ಸಂಸ್ಥೆಗೆ ಅತಿ ಗೌರವಾಸ್ಪದವಾದುದು.

ಕಬ್‌ಗಳೂ, ಸ್ಕೌಟುಗಳೂ, ರೋವರುಗಳೂ ಹೆಚ್ಚುಹೆಚ್ಚಾಗಿ ನಮ್ಮ ಚಳುವಳಿಗೆತ್ತೆ ಬರುತ್ತಿದ್ದಾರೆಂಬುದನ್ನು ನೋಡಿದರೆ ಚಳುವಳಿಯು ಅಭಿವೃದ್ಧಿಯಲ್ಲಿದೆಯೆಂಬುದು ವ್ಯಕ್ತವಾಗುತ್ತದೆ. ಅಲ್ಲದೆ ವ್ಯಕ್ತಿಶಃ ಪ್ರತಿ ಸ್ಕೌಟನೂ ಯೋಗ್ಯನಾಗಿರಬೇಕೆಂದೂ ಆದ ಲ್ಲದೆ ಕಾಲಕ್ರಮದಲ್ಲಿ ಆತನೂ ಸಮಾಜದಲ್ಲಿ ಯೋಗ್ಯನಾದವನೆನಿಸಬ್ಬನಾಗಬೇಕೆಂದೂ ಅಭಿಲಾಷೆಪಟ್ಟು ನೀವುಗಳು ಕೆಲಸಮಾಡುತ್ತಿರು ವುದು ಸ್ತೋತ್ರಾರ್ಹವೇ ಸರಿ. ನಮ್ಮ ಧ್ಯೇಯವನ್ನು ಸಾಧ್ಯವನ್ನಾಗಿ ಮಾಡಿಕೊಳ್ಳಲು ನಾವೂ ಇನ್ನೂ ಬಹಳ ಪ್ರಯತ್ನಪಡಬೇಕೆಂ ಬುದೇನೋ ಸರಿ, ಆದರೆ ಅಂತಹ ಪ್ರಯತ್ನಗಳಲ್ಲಿ ಪ್ರತಿಯೊಬ್ಬನೂ ನಮ್ಮ ವಾಗ್ದಾನಗಳನ್ನೂ ಕಾಯಿದೆಗಳನ್ನೂ ಮರೆಯದಿರಬೇಕೆಂ ಬುದೇ ನನ್ನ ಅಭಿಲಾಷೆ.

ಈ ಸಮಯದಲ್ಲಿ ಬಾಲಚಮೂಗಳಿಗೆ ಕೆಲವು ಬುದ್ಧಿವಾದದ ಮಾತುಗಳನ್ನೂ, ನೆರೆದಿರುವ ಉಳಿದ ಮಹನೀಯರಲ್ಲಿ ಕೇಳ್ವಕೆಯು ನಾಲ್ಕು ಮಾತುಗಳನ್ನೂ ಆಡಿದಲ್ಲಿ ಇದು ಸಭ್ಯತೆಯನ್ನು ಮೀರಲಾರದು. ನ್ಯಾಯದಿಂದ ಸಮಕಟ್ಟು ಪಡೆದ ಅಧಿಕಾರಿಸಂಸ್ಥೆಗೆ ಸ್ವಾಮಿ ಭಕ್ತಿಯನ್ನು ತೋರಿಸುವುದರಿಂದಲೇ ಯಾವುದಾದರೂ ಸಂಘವೊಂದು ಉಳಿದಿರುವುದು ಅಲ್ಲದೆ, ಹಾಗೆ ಕಟ್ಟು ಮೀರದ ನಡವಳಿಕೆ ಗಳೇ ನಮ್ಮ ನುಂದಿನ ಕಾರ್ಯಕ್ಷೇತ್ರದ ಏಜಯದ ಸೆಲೆಗಟ್ಟುಗಳು. ಆದುದರಿಂದಲೇ ಪ್ರತಿಯೊಬ್ಬ ಸ್ಕೌಟನೂ ಅವನ ವಾಗ್ದಾನದ ಮೂರನೆಯ ಭಾಗವನ್ನು ಮರೆಯದೇ ಸ್ಕೌಟುಕಾಯಿದೆಗೆ ಅನುಸಾರನಾಗಿ ನಡೆದುಕೊಳ್ಳಬೇಕೆಂಬುದೇ ಪ್ರತಿಯೊಬ್ಬ ಸ್ಕೌಟಿಗೂ ನಾನು ಹೇಳುವ ಬುದ್ಧಿಮಾತುಗಳು. ಸ್ಕೌಟುಶಿಕ್ಷಣವೆಂದರೆ, ಬಾಲಕರು ಯೋಗ್ಯವಾದ ರೀತಿಯಲ್ಲಿ ನಡೆದು, ಕಲೆತು, ಯೋಗ್ಯರೂ ದೃಢಾಂಗರೂ ಹರ್ಷಚಿತ್ತರೂ ಆದ ತಾಯ್ನಾಡಿನ ಪುಕ್ಕಳಾಗುವಂತೆ ಮಾಡುವ ಶಿಕ್ಷಣವೆಂದು ನೀವು ತಿಳಿಯಬೇಕು. ಆದುದರಿಂದ ಇಲ್ಲಿ ನೆರೆದಿರುವ ಮತ್ತು ಇಲ್ಲಿ ಇರದಿರುವ ಮಹನೀಯರೆಲ್ಲರೂ ಸೌಹಾರ್ದದಿಂದ ನಮ್ಮ ಪ್ರಯತ್ನಗಳನ್ನು ತಿಳಿದು, ಈ ಕಾರ್ಯಸಾಧನೆಗೆ ಸಹಕಾರಿಗಳಾಗಬೇಕೆಂದು ನಾನು ಪ್ರಾರ್ಥಿಸುತ್ತೇನೆ. ನಮ್ಮೆಲ್ಲರ ಧ್ಯೇಯವೇನೆಂದರೆ ಇಂದಿನ ಬಾಲಕನನ್ನು, "ಕಾಯದಲ್ಲಿ ದೃಢಾಂಗ ನನ್ನಾಗಿಯೂ, ಮನಶ್ಶಕ್ತಿಯಲ್ಲಿ ತೀಕ್ಷ್ಣಜ್ಞನನ್ನಾಗಿಯೂ ಮತ್ತು ನಡತೆಯಲ್ಲಿ ಧರ್ಮತತ್ಪರನನ್ನಾಗಿಯೂ" ಮಾಡಬೇಕೆಂಬುದೇ!

ಈ ಸಪ್ತಾಹದಲ್ಲಿ ಪಂಥ್ಯಗಳಲ್ಲಿ ಗೆದ್ದವರಿಗೆಲ್ಲಾ ನಾನು ಹರ್ಷವನ್ನು ಸೂಚಿಸುತ್ತೇನೆ. ಮತ್ತು ಪ್ರತಿಯೊಬ್ಬರಿಗೂ ಈ ಹೊಸವರ್ಷದಲ್ಲಿ ಸ್ಕೌಟುಕ್ರಮಾಚರಣೆಯೂ ಅದರ ಸಂತೋಷವೂ ಉಂಟಾಗಲೆಂದು ಹಾರೈಸುತ್ತೇನೆ.

ಗೃಹಶಿಕ್ಷಣ.

(ಅಮೇರಿಕಾದೇಶದ ಕಿಂಡರ್‌ಗಾರ್ಟನ್ ಸಂಘದವರಿಂದ.)

"ಮಕ್ಕಳಸ್ಕೂಲು ಮನೇಲಲ್ವೇ"—ಗುಂಡೂ.

"ಮಗುವೇ ಮನುಜನಿಗೆ ತಂದೆ" ಎಂಬುದಾಗಿ ಸುಪ್ರಸಿದ್ಧ ಕವಿಯೊಬ್ಬನು ಸಾರಿರುವನು. ಅದರ ಅರ್ಥವೂ ಸುಲಭವಾಗಿಯೇ ಇದೆ. ಬಾಲ್ಯದಲ್ಲಿ ಕಲಿತದ್ದೇ ಯೌವನ ವೃದ್ಧಾಪ್ಯದಲ್ಲಿಯೂ ನಮ್ಮನ್ನು ಅನುಸರಿಸಿ ಒರುತ್ತದೆ. ಆದುದರಿಂದಲೇ 'ಗಿಡವಾಗಿಯೇ ಬಗ್ಗಬೇಕೆಂದು, ಹಿರಿಯರು ಹೇಳಿರುವದು. ಅಂದಬಳಿಕ, ಬಾಲ್ಯದಲ್ಲಿಯೇ ಮುಂದಿನ ಜೀವನದ ಬೀಜವನ್ನು ಬಾಲಕನ ಮನಸ್ಸಿನಲ್ಲಿ ಬಿತ್ತಬೇಕು. ಕೆಲವರಿಗೆ ಬಂದು ತಪ್ಪು ಅಭಿಪ್ರಾಯವು ಬಂದಿರುತ್ತದೆ. ಅವೇನೆಂದರೆ 'ಬಾಲಕರ ವಿದ್ಯಾಭ್ಯಾಸವು ಅವರು ಪಾಠಶಾಲೆಗೆ ಸೇರಿದಮೇಲೆ ಪ್ರಾರಂಭವಾಗುವುದೆಂದು, ಅದು ಶುದ್ಧ ತಪ್ಪು ತಿಳುವಳಿಕೆಯೆಂದು ನಾವು ಪುನಃ ಪುನಃ ಹೇಳಬೇಕಾಗಿಲ್ಲವು. ಹಾಗಾದರೆ ಪಾಠಶಾಲೆಗೆ ಹೋಗುವುದಕ್ಕೆ ಪೂರ್ವದಲ್ಲಿ ಬಾಲಕರ ಶಿಕ್ಷಣವು ಮನೆಯಲ್ಲಿ ನಡೆಯಬೇಕೆಂದಾಯಿತು. ಆ ಶಿಕ್ಷಣವೇ ಗೃಹಶಿಕ್ಷಣವು.—

* * *

ನಮ್ಮ ನಾಗಮ್ಮನಿಗೆ ಎಲ್ಲರಲ್ಲಿಯೂ ತಪ್ಪು ಹುಡುಕುವುದೆಂದರೆ ಒಳ್ಳೆಯ ಸಂತೋಷವೆಂದು ಕಾಣುತ್ತದೆ. ಅವಳ ಸ್ವಭಾವವೇ ಹಾಗೆ. ಕೆಲವರು ಅಂತಹವರು ಇರುತ್ತಾರಷ್ಟೆ—ಸೊಣದಂತಹವರು. ಅವರ ಹಾಗೆ ಈಗ ನೋಡಿ! ಮನುಷ್ಯನ ಆ ಪಾದ ಮಸ್ತಕ ಪರ್ಯಂತರದಲ್ಲಿ ಎಲ್ಲಿಯೂ ಸೊಣಕ್ಕೆ ಸ್ಥಳ ಸಿಗುವುದಿಲ್ಲವೆ? ಹಾಗಿದ್ದರೂ, ಅದು ಹಾರಿ ಬಂದು ಹುಣ್ಣಿನಮೇಲೆಯೇ ಕುಳಿತುಕೊಳ್ಳುತ್ತದೆ. ನಮ್ಮ ನಾಗಮ್ಮನ ಸ್ವಭಾವವೂ ಹಾಗೆ. ಅವಳ ಅಕ್ಕನ ಮನೆಗೆ (ಎಂದರೆ, ಅವಳ ಯಜಮಾನ ಅಣ್ಣನ ಹೆಂಡತಿಯ ಮನೆಗೆ) ಮೊನ್ನೆ ಹೋಗಿದ್ದಳು. ಅಲ್ಲಿಯೋ ರಂಗಮ್ಮನವರು. (ಎಂದರೆ ನಾಗಮ್ಮನ ಅಕ್ಕ) ಯಾವಾಗಲೂ ಏನಾದರೂ ಕೆಲಸದಲ್ಲಿಯೇ ಇರುತ್ತಿದ್ದರು. ಒಟ್ಟಿ ಹೊಲಿಯುತ್ತಿದ್ದುದನ್ನು ಬಿಟ್ಟು ಅವರು, "ಓಹೋ! ನಾಗೂ, ಬಾರೇ ಏನು ಒಳ್ಳೆ ಅಪರೂಪವಾಗಿ ಬಿಟ್ಟೆಯಲ್ಲ. ಮಗು ಹುಷಾರಾಗಿ ಇದೆಯೇನೇ? ಲೋ! ರಾಜು-ಬಾಪ್ಪ, ಲ್ಲಿ-ಲ್ಲಿ-ಲ್ಲಿ-ಲ್ಲಿ" ಎಂದು ಮಗುವನ್ನು ಎತ್ತಿಕೊಂಡು, "ಏಕೆ ನಾರಾಯಣ ಬರಲಿಲ್ಲವಲ್ಲ?" ಎಂದರು.

ನಾಗಮ್ಮ—ಸಾಕಮ್ಮ ಈ ಸಾಲದ್ದಕ್ಕೆ ನಾರಾಯಣನನ್ನು ಬೇರೆ ಕರಕೊಂಡು ಬರಬೇಕಾಗಿತ್ತು. ನೋಡಿ, ಮುಂಡೇಗಂಡನಿಗೆ ಬಂದು ಸರ್ವ ವಯಸ್ಸಾದರೂ ಏನೂ ಬರುವದಿಲ್ಲವಲ್ಲ ಅಂದ್ರೆ! ಶುದ್ಧ ಮಂಕನಾಗಿದ್ದಾನೆ. ನಿಮ್ಮ ಮಗೂ ನೋಡಿ ಲೋ! ಕಿಟ್ಟು, ಬಾಮ್ಮ. ಏನು ಮಾಡುತ್ತಿದ್ದೀ? ಅದು ಏನೋ ರಂಪ? ಅಲ್ಲಿ ನೋಡಿ, ಅಕ್ಕ, ನೀವು ನೋಡಲೇ ಇಲ್ಲವೇನೋ—ಆ ಡಬ್ಬಿ ಆ ಬೊಂಬೆ ಎಲ್ಲಾ ಒಡೆದುಹಾಕಿಬಿಡುತ್ತಾನೆ. ಪಾಪ! ಬೊಂಬೆ ಎಷ್ಟು ಚನ್ನಾಗಿದೆ ಅಂದ್ರೆ! ಅನ್ಯಾಯವಾಗಿ ಹಾಳಾಗಿಹೋಗುತ್ತದೆಯಲ್ಲ. ನಮ್ಮಲ್ಲೂ ಹಾಗೆ ಆಯಿತು. ಅವತ್ತು ಆ ಗಾಜಿನ ಹನುಮಂತನನ್ನು ಕೊಂಡುಕೊಂಡಲಿಲ್ಲವೇ? ಅದನ್ನು ನೋಡಿ ಆ ನಮ್ಮ ಮನೆ ವೃಗ, ನಾರಾಯಣ, ರಥೋತ್ಸವನಾಡುತ್ತೇನೆಂದು ಹೇಳಿ ಒಡೆದುಹಾಕಿಬಿಟ್ಟ. ಬಲವಾಗಿ ನಾಲ್ಕು ಕೊಟ್ಟೆ. ಈಗ ನೋಡಿ ತೆಪ್ಪಗಾಗಿದ್ದಾನೆ.

ರಂಗಮ್ಮ—ಸರಿ, ಕಣೆ, ಬಹಳ ಬುದ್ಧಿವಂತಳು ನೀನು. ಮಕ್ಕಳು ಆಡಿದರೆ ಹೊಡೆದೆಯೋ? ನೋಡು, ಹೇಳುತ್ತೇನೆ ಕೇಳು, ನಿಮ್ಮ ನಾರಾಯಣ ಹೀಗಾಗಿರುವುದಕ್ಕೆ ನೀನೇ ಕಾರಣ. ಮಕ್ಕಳಲ್ಲಿ ಒಂದು ವಯಸ್ಸಿನಲ್ಲಿ 'ನಿರ್ಮಾಣಾಕಾಂಕ್ಷೆ' ಯು ಉತ್ಪನ್ನವಾಗಿರುತ್ತದೆ. ಆ ಸಮಯದಲ್ಲಿ ಏನನ್ನಾದರೂ ನಿರ್ಮಿಸಬೇಕು, ಸೃಷ್ಟಿಸಬೇಕು, ಎಂಬುದಾಗಿ ಮಕ್ಕಳ ಮನಸ್ಸಿನಲ್ಲಿ ಒಂದು ಆಕಾಂಕ್ಷೆಯು ಹುಟ್ಟುತ್ತದೆ. ಆ ಸಮಯದಲ್ಲಿ ಆ ಆಕಾಂಕ್ಷೆಯು ಪೂರ್ಣವಾಗುವಂತೆ ತಂದೆತಾಯಿಗಳು ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಏಕೆಂದರೆ, ಆ ಆಕಾಂಕ್ಷೆಗಳೇ ಒಲಿತು, ಮುಂದೆ ಆ ಮಕ್ಕಳ ಪುರೋಭಿವೃದ್ಧಿಗೆ ಸಹಕಾರಿಗಳಾಗಿ ನಿಲ್ಲುವುವು.

ನಾಗಮ್ಮ:—ಸರಿ, ಹಾಗಾದರೆ ಮಕ್ಕಳು ಮಾಡಿದ್ದೆಲ್ಲಾ ಮಾಫಿ—ನಿಮ್ಮ ಮಾತಿನಂತೆ ಆದರೆ.

ರಂಗಮ್ಮ:—ಹಾಗಲ್ಲ ಮಕ್ಕಳಿಗೆ ಮುಂದೆ ಅನುಕೂಲವಾಗುವಂತೆಯೂ ಮುಂದೆ ಹಾನಿಯಾಗುವಂತೆಯೂ ಕೆಲವು ವಿಚಾರಗಳಿರಬಹುದು. ಅಂತಹ ಸಮಯಗಳಲ್ಲಿ ಯುಕ್ತಾಯುಕ್ತ ವಿಚಾರಗಳನ್ನು ತಿಳಿದು ಮಕ್ಕಳನ್ನು ಶಿಕ್ಷಿಸಿವುದೂ ಒಳ್ಳೆಯದೆ. ನಾಕು—ಈ ವಿಚಾರಗಳನ್ನು ನನ್ನನ್ನು ಕೇಳಿ ತಿಳಿಯಬೇಕೇ? ನಿಮ್ಮ ಯಜಮಾನರು ತಿಳಿಯದವರೇನು? ಮಕ್ಕಳ ಶಿಕ್ಷಣದಲ್ಲಿ ಇಂಗ್ಲಿಷಿನವರು ವಿಶೇಷವಾಗಿ ಪುಸ್ತಕಗಳನ್ನು ಬರೆದಿದ್ದಾರೆ. ಅಂದರೆ ನಮ್ಮಲ್ಲಿ ಏನೂ ಇರಲಿಲ್ಲವೆಂತಲ್ಲ.

ನಾಗಮ್ಮ.—ಸರಿ, ಅದೆಲ್ಲಕ್ಕಿಂತಲೂ, ಆಗಾಗ್ಗೆ ನಿಮ್ಮಲ್ಲಿಗೆ ಬಂದು ಹೋಗುತ್ತಿರುವುದೇ ಒಳ್ಳೆಯದೆಂದು ತೋರುತ್ತದೆ.

ಸುದ್ದಿಗಳು.

ನಮ್ಮ ನಾಯಕರ ಹಾರೈಕೆ.

ಮೈಸೂರು ದೇಶದ ಹಿರಿಯಣ್ಣಂದಿರನ್ನು ಅಭಿನಂದಿಸಲು ತಮ್ಮ ಚಿತ್ರಪಠದಿಂದಲೂ, ತಮ್ಮ ಹಾರೈಕೆಯಿಂದಲೂ, ಒಳಗೊಂಡ ಒಂದು ಅಭಿನಂದನಪತ್ರಿಕೆಯನ್ನು, ನಮ್ಮ ನಾಯಕರು ಅವರೆಲ್ಲರಿಗೂ ಕಳುಹಿಸಿರುತ್ತಾರೆ. ಇದರಿಂದ ಪ್ರತಿಯೊಬ್ಬರಿಗೂ ಉತ್ತೇಜನವು ಸಿಗದೆ ಇರಲಾರದು. ನಮ್ಮ ನಾಯಕರ ಹಾರೈಕೆಗೆ ಉತ್ತರರೂಪದಲ್ಲಿ ಹಿರಿಯಣ್ಣಂದಿರು **ನಾವ್-ಸಾ-ಸಾ-ಮಾ**-ಎಂದು ಹೇಳುತ್ತಾರೆ.

ನಮ್ಮ ಪತ್ರಿಕೆಯ ಪುರವಣಿ.

ನಮ್ಮ ಹಿರಿಯ ಮತ್ತು ಕಿರಿಯ ನಾಯಕರುಗಳ ಚಿತ್ರವನ್ನು ಎರಡು ರಂಗುಗಳಲ್ಲಿ ನುಣುಪಾದ ಕಾಗದದಮೇಲೆ ಮುದ್ರಿಸಿ ನಮ್ಮ ಚಂದಾದಾರರಿಗೆ ಇಂಗ್ಲೀಷರ ಹೊಸವರ್ಷದ ಉಡುಗೆರೆಗಾಗಿ ಕೊಟ್ಟಿರುತ್ತೇವೆ. ಇತರರಿಗೆ ಇದರ ಬೆಲೆ ೧ ಆಣೆ. ಹೆಚ್ಚು ಪ್ರತಿಗಳನ್ನು ಕೋರತಕ್ಕವರು ಹಣವನ್ನು ಮುಂಗಡವಾಗಿ ಕಳುಹಿಸಿ ತರಿಸಿಕೊಳ್ಳಬಹುದು. ಏಕಕಾಲದಲ್ಲಿ 12 ಪ್ರತಿಗಳಿಗಿಂತ ಹೆಚ್ಚಾಗಿ ತರಿಸಿಕೊಳ್ಳುವವರಿಗೆ ಸೇಕಡ 25 ರಂತೆ ರಿಯಾಯಿತಿಯು ತೋರಿಸಲಾಗುವುದು.

ಇಂಗ್ಲೆಂಡಿನಲ್ಲಿ ಜಾಂಬೋರಿ.

ಇಂಗ್ಲೆಂಡಿನಲ್ಲಿ ನಡೆಯುವ ಜಾಂಬೋರಿಯಲ್ಲಿ ಭಾಗ ತೆಗೆದುಕೊಳ್ಳಲು ಮೈಸೂರಿನಿಂದ ಆರು ಜನ ಸ್ಕೌಟುಗಳನ್ನೂ ಅವರಿಗೊಬ್ಬ ನಾಯಕನನ್ನೂ ಸಹ ಕಳುಹಿಸಬೇಕೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆ. ಅಂತಹ ಪ್ರತಿಯೊಬ್ಬರಿಗೂ ಬೇಕಿನ ಸ್ವಲ್ಪ ಭಾಗವನ್ನು, ಅಂದರೆ 750 ರೂಪಾಯಿಗಳನ್ನು ಮಾರದಷ್ಟು, ಸರ್ಕಾರದವರು ಕೊಡಲು ಒಪ್ಪಿರುತ್ತಾರೆ. ಬಾಕಿ 1250 ರೂಪಾಯಿಗಳನ್ನು ಹಾಕಿಕೊಂಡು ಹೋಗಲು ಅನುಕೂಲವಿರುವರು ಸ್ಕೌಟು ಕಮಿಷ್ನರವರಿಗೆ ಬರೆದುಕೊಂಡು ಇತರ ಶರತ್ತುಗಳನ್ನು ತಿಳಿದುಕೊಳ್ಳಬಹುದು.

ಭರತಖಂಡದಲ್ಲಿ ಸ್ಕೌಟುಗಳು ಹೆಚ್ಚಾದರು.

ಇಂಗ್ಲೆಂಡಿನ ಸ್ಕೌಟುಸಂಘದ ೨೧ ನೆಯ ವಾರ್ಷೀಕೋತ್ಸವದಲ್ಲಿ ಅಧ್ಯಕ್ಷತೆಯನ್ನು ವಹಿಸಿದ ಸರ್ . ರಾಬರ್ಟ್ ಬೇಡೆ ಪವೆಲರವರು ಹೇಳಿದುದೇನೆಂದರೆ ಪ್ರಪಂಚದಲ್ಲೆಲ್ಲಾ 1,800,000 ಸ್ಕೌಟುಗಳಿದ್ದಾರೆ. ಅವರಲ್ಲಿ ಬ್ರಿಟಿಷ್ ಸಾಮ್ರಾಜ್ಯದಲ್ಲಿಯೇ 654,000 ಸ್ಕೌಟುಗಳಿರುವರು. ಭರತಖಂಡದಲ್ಲಿಯೇ ಈ ವರ್ಷದಲ್ಲಿ 28,000 ಬಾಲಕರು ಸ್ಕೌಟುಗಳಾದರು

[ಸಂಖ್ಯೆಯು ಹೆಚ್ಚಿದರೇನು ? ಸ್ಕೌಟುನಿಯಮಕ್ಕೆ ತಕ್ಕಂತೆ ನಡೆಯುವವರೆಷ್ಟು ಜನ ? ಬಾಲಕರಲ್ಲಿ ಸೌಹಾರ್ದವು ಹೆಚ್ಚಿರುವುದೆ ? ಬಾಲಕರು ಸ್ಕೌಟುಗಳಾಗುವುದಕ್ಕೆ ಪೂರ್ವದಲ್ಲಿದ್ದಂತೆಯೇ ಇದ್ದಾರೆಯೇ ಸ್ಕೌಟುಪದ್ಧತಿಯಿಂದ ಒಳ್ಳೆಯಮಾರ್ಗಕ್ಕೆ ಬಂದಿರುತ್ತಾರೆಯೇ ಎಂಬ ಅಂಶವನ್ನು ತಿಳಿಯಲಪೇಕ್ಷಿಸುತ್ತೇವೆ, ಸಂ ಮೈ ಮ.]

ಪತ್ರವ್ಯವಹಾರ ಸಂಘ.

ನಮ್ಮ ದೇಶದಲ್ಲಿರುವ ಸ್ಕೌಟುಗಳಿಗೂ, ಇತರ ದೇಶದಲ್ಲಿರುವವರಿಗೂ ಸ್ನೇಹಭಾವವು ಬೆಳೆಯಬಹುದಾದ ಅನೇಕ ವಿಧಾನಗಳಲ್ಲಿ ಪರಸ್ಪರ ಪತ್ರವ್ಯವಹಾರವು ಒಂದು. ಇಂತಹದೊಂದು ಸಂಘವನ್ನು ಸ್ಥಾಪಿಸಬೇಕೆಂದು ಅನೇಕರು ಹೇಳುತ್ತಿದ್ದಕಾರಣ ಇದೊಂದು ಹೊಸ ಕೆಲಸಕ್ಕೆ ಕೈಹಾಕಿರುತ್ತೇವೆ. ರಕ್ಷಾಪತ್ರದ 3 ನೇ ಪೇಜಿನಲ್ಲಿರುವ ಚೀಟಿಯನ್ನು ತುಂಬಿ ಕಳುಹಿಸಿದಲ್ಲಿ ನಿಮಗೆ ಬೇಕಾಗಿರುವ ದೇಶದಲ್ಲಿನ ಸ್ನೇಹಿತನೊಬ್ಬನನ್ನು ನಿಮಗೆ ಗೊತ್ತುಮಾಡಿಕೊಡಲು ಪ್ರಯತ್ನಪಡುತ್ತೇವೆ. ಈ ಚೀಟಿಯನ್ನು ತುಂಬಿ ಕಳುಹಿಸುವಾಗ ನಿಮ್ಮ ಮುಂದಿನ ಸ್ನೇಹಿತನಿಗೆ ಒಂದು ಕಾಗದವನ್ನು ಇಂಗ್ಲೀಷಿನಲ್ಲಿ ಬರೆದು ನಾಲ್ಕಾಣೆಯ ಸ್ಟ್ಯಾಂಪನ್ನು ನಮಗೆ ರವಾನಿಸಬೇಕು. ಇನ್ನು ಎರಡು ತಿಂಗಳೆಯಲ್ಲಿ ನಿಮ್ಮ ವಿಳಾಸಕ್ಕೆ ನಿಮ್ಮ ಹೊಸ ಸ್ನೇಹಿತನು ತಾನಾಗಿಯೇ ನಿಮ್ಮ ಕಾಗದಕ್ಕೆ ಉತ್ತರವನ್ನು ಕೊಡುವನು. ನಮ್ಮ ಪತ್ರಿಕೆಯಲ್ಲಿರುವ ಚೀಟಿಯನ್ನು ಉಪಯೋಗಿಸಲ್ಪಡದಿದ್ದರೆ ನಾವು ನಿಮ್ಮ ಪತ್ರಕ್ಕೆ ಗಣನೆಯನ್ನು ಕೊಡುವುದಿಲ್ಲ. ನಿಮ್ಮ ಸ್ನೇಹಿತನು ಎಂತಹವನಾಗಿರಬೇಕೆಂಬುದನ್ನು ನೆರಿಯಾಗಿ ಬೇರೆ ಕಾಗದದಮೇಲೆ ತಿಳಿಸಬೇಕು ಬಾಲಕರು ಸಾಧಾರಣವಾಗಿ ತಲೆಚೀಟಿಗಳ ಸಂಗ್ರಹದಲ್ಲಿಯೂ, ಚಿತ್ರಪಠಗಳ ಸಂಗ್ರಹದಲ್ಲಿಯೂ, ದೇಶಾಚಾರಗಳನ್ನು ತಿಳಿಯುವುದರಲ್ಲಿಯೂ, ಪತ್ರವ್ಯವಹಾರವನ್ನು ನಡೆಸಬಹುದು. ಪತ್ರವ್ಯವಹಾರವು ಇಂಗ್ಲೀಷಿನಲ್ಲಿಯೇ ಇರಬೇಕು

ಪುತ್ತೂರು—ಕರ್ನಾಟಕಕೇಸರಿ.
ಬಬಲೇಶ್ವರ—ಕರ್ನಾಟಕ ಸಂಜೀವನ.
ಮಂಗಳೂರು—ಕನ್ನಡ ಸಹಕಾರಿ.
ಬೆಂಗಳೂರು—ದೇಶೀಯ ವಿದ್ಯಾಶಾಲಾಪತ್ರಿಕೆ.
ಪ್ರಯಾಗ—ಸೇವಾ (ಹಿಂದಿ)

ಪುಸ್ತಕಗಳು.

ಮೈಸೂರು ಸಂಸ್ಥಾನದ ಚರಿತ್ರೆಯನ್ನೊಳಗೊಂಡ ಎರಡು ಭಾಗದ ಪುಸ್ತಕಗಳನ್ನು ಹುಬ್ಬೂರಾ ಸೆಕ್ರೆಟರಿಯವರು ನಮ್ಮ ಕಾರ್ಯಾಲಯಕ್ಕೆ ಕಳುಹಿಸಿರುವ್ರದಕ್ಕಾಗಿ ಅವರಿಗೆ ನಮ್ಮ ವಂದನೆಗಳು.

ಕ್ಯಾಲೆಂಡರುಗಳು.

ಪುಸ್ತಕ ವ್ಯಾಪಾರಿಗಳಾದ ಕೆ. ಏ. ರಾಮಶೆಟ್ಟರು ತಮ್ಮ ಎರಡು ತರಹದ ಕ್ಯಾಲೆಂಡರುಗಳನ್ನು ಆದರದಿಂದ ಕಳುಹಿಸಿರುತ್ತಾರೆ. ಒಂದು ನಾನಾ ಬಣ್ಣಗಳಿಂದಕೂಡಿದೆ. ಮತ್ತೊಂದು ನಮ್ಮ ಯುವರಾಜಕುಮಾರರ ಚಿತ್ರವನ್ನು ಒಳಗೊಂಡಿದೆ. ಅಂದವಾಗಿರುವ ಈ ಕ್ಯಾಲೆಂಡರುಗಳನ್ನು ಕಳುಹಿಸಿದಕ್ಕಾಗಿ ನಮ್ಮ ವಂದನೆಗಳು.

ಇಲ್ಲಿನ ಕಾಗದ ವ್ಯಾಪಾರಿಗಳಾದ ಶ್ರೀ|| ಆರ್. ಕೃಷ್ಣಸ್ವಾಮಿಯವರು ತಮ್ಮ ತಾರೀಖಿನ ಪುಸ್ತಕವನ್ನು ಕಳುಹಿಸುದುದಕ್ಕಾಗಿ ಅವರಿಗೂ ನಮ್ಮ ವಂದನೆಗಳು.

ಮೈಸೂರು ಮಕ್ಕಳು

ಸುಲಭಬಲ!

ಅತ್ಯುತ್ತಮತರಹ ಫೌಂಟೆಪೆಗಳು !!

ತರಿಸಿ ಪರೀಕ್ಷಿಸಿರಿ !!

1. ವರಲ್ಡ್‌ವಂಡರ್ ಫೌಂಟೆಪೆ 1ಕ್ಕೆ 3-0-0
2. ಡಿಟೋನಮೂನೆ ಸ್ಕೂಲ್‌ಕ್ಯಾಪಿರುಪ ಪೆ 1ಕ್ಕೆ 3-8-0
3. ಹಾರ್ಡ್‌ಪೇರ್ ಫೌಂಟೆಪೆ 1 ಕ್ಕೆ 3- 0-0
4. "ಸ್ಪಾರ್ಕ್" ಫೌಂಟೆಪೆ 1 ಕ್ಕೆ 7- 0-0
5. ಬ್ಲಾಕ್‌ಬರ್ಡ್ ಫೌಂಟೆಪೆ 1ಕ್ಕೆ 3-8-0 ಮತ್ತು 3-12-0
6. "ವಾಟರ್‌ಮನ್" ಫೌಂಟೆಪೆ 1 ಕ್ಕೆ 8- 8-0
7. "ವಾಟರ್‌ಮನ್" ಸೆಲ್ಫ್‌ಫಿಲಿಂಗ್ ಫೌಂಟೆಪೆ 1 ಕ್ಕೆ 12- 0-0
8. "ವಾಟರ್‌ಮನ್" ಸೇಫ್ಟಿ ಫೌಂಟೆಪೆ 1 ಕ್ಕೆ 11- 0-0

ಇನ್ನೂ ಅನೇಕತರಹ ಕಡಮೆಕ್ರಯದ ಪೆಗಳು ನಮಲಿ ದೊರೆಯುತ್ತವೆ. 6ಪೈ ಸ್ಟಾಂಪ್ ರವಾನಿಸಿ ನಮ್ಮ ಕ್ಯಾಟಲಾಗ್ ತರಿಸಿಸೋಡಿರಿ.

— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಕಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು, ಮೈಸೂರು.

ಕರ್ನಾಟಕ ಸ್ಕೌಟ್ ಮಾಸಪತ್ರಿಕೆ.

ವಾರ್ಷಿಕ ಚಂದಾ ೧—೮—೦.

ಮ್ಯಾನೇಜರ್,
ಕರ್ನಾಟಕ ಸ್ಕೌಟ್, ಧಾರವಾಡ.

ಉದಯಭಾರತ (ಮಾಸಪತ್ರಿಕೆ)

ವಾರ್ಷಿಚಂದಾ ವಿಶೇಷಾಂಕ ಸಹಿತ ೨—೦—೦
" ವಿಶೇಷಾಂಕ ರಹಿತ ೧—೮—೦

ಉದಯಭಾರತ ಕಾರ್ಯಾಲಯ,
ಕೊಡಿಯಾಲ್ ಬೈಲ್, ಮಂಗಳೂರು.

ಮೈಸೂರು ಮಕ್ಕಳು ಪತ್ರವ್ಯವಹಾರ ಸಂಘ.

ನಮ್ಮ ಸಂಘಕ್ಕೆ ನನ್ನನ್ನು ಸೇರಿಸಿಕ್ಕೊಂಡು.....
ದೇಶದಲ್ಲಿ ಯಾವನಾದರೂ ಒಬ್ಬ ಸ್ನೇಹಿತನನ್ನು ಮಾಡಿಕೊಡಿಬೇಕು.
ಇದಕ್ಕೆ ತಗಲತಕ್ಕ ಖರ್ಚಿಗಾಗಿ ೪ ಆಣೆ ಸ್ಟಾಂಪುಗಳನ್ನು ಕಳುಹಿಸಿ
ದ್ದೇನೆ.

ಹೆಸರು.....

ವಿಳಾಸ.....

.....

ನನಗೆ.....ದರಲ್ಲಿ ಇಷ್ಟವಿದೆ. ಗುರ್ತಿಲ್ಲದ ಆ ಸ್ನೇಹಿತನಿಗೆ ನನ್ನ ಮೊದಲಿನ ಕಾಗದವನ್ನು ಇಂಗ್ಲೀಷಿನಲ್ಲಿ ಬರೆದು ಇದರೊಡನೆ ಕಳುಹಿಸಿರುತ್ತೇನೆ. ನನಗೆ ಎಂತಹ ಸ್ನೇಹಿತನು ಬೇಕಾಗಿದೆ ಎಂಬುದನ್ನು ನಾನು ಬೇರೆಯ ಕಾಗದದಲ್ಲಿ ಬರೆದಿರುತ್ತೇನೆ. ನನ್ನ ಪತ್ರವ್ಯವಹಾರದಲ್ಲಿ ನನ್ನ ದೇಶದ ಮತ್ತು ನನ್ನ ಮರ್ಯಾದೆಯನ್ನು ಕಾಪಾಡುತ್ತೇನೆ.

ಮೈಸೂರು ಮಕ್ಕಳು' ಚಿತ್ರಮಾಲೆ
(Mysore Makkalu Pictorial)
1927–1928

ಸುಣ್ಣವಾದ ಕಾಗದದ ಮೇಲೆ ಎರಡು ರಂಗುಗಳಲ್ಲಿ ಮೈಸೂರು ಮಕ್ಕಳ ಚಿತ್ರಗಳನ್ನು ಮುದ್ರಿಸಿ ಪುಸ್ತಕರೂಪದಲ್ಲಿ ಹೊರಡಿಸಲಾಗಿದೆ. ಹೊಸ ವರ್ಷಕ್ಕಾಗಿ ಮಕ್ಕಳಿಗೆ ಈ ಪುಸ್ತಕವನ್ನು ಉಡುಗೆರೆಯಾಗಿ ಕೊಡಲು ಅನುಕೂಲವಾಗಿದೆ. ತಮ್ಮ ದೇಶ, ತಮ್ಮ ಜನವೆಂಬ ಸ್ವಾಭಿಮಾನವು ಮಕ್ಕಳಿಗಿರಬೇಕಾದರೆ ಇದೇ ಉಪಾಯ.

ನಮ್ಮ ಚಂದಾದಾರರಿಗೆ ಮಾತ್ರ ೦-೬-೦, ಇತರರಿಗೆ ೦-೮-೦ ವಿ.ಪಿ. ಖರ್ಚು ಪ್ರತ್ಯೇಕ. ವಿ.ಪಿ. ಅಪೇಕ್ಷಿಸುವವರು ೩ ಆಣೆ ಸ್ಟಾಂಪನ್ನು ಕಳುಹಿಸಬೇಕು.

ಮೈಸೂರುಮಕ್ಕಳು ಆಫೀಸು, ಮೈಸೂರು.

ದೇವಭೂಜ. (ಮಾಸಪತ್ರಿಕೆ)

ವಾರ್ಷಿಕಚಂದಾ ೧—೪—೦
ವಿ. ಪಿ. ಮೂಲಕ ೧—೮—೦
ವಿಳಾಸ:—"ದೇವಭೂಜ" ಆಫೀಸು,
ಪೋಸ್ಟ ರೋಣ, ಡಿ|| ಧಾರವಾಡ.

ರಂಗಭೂಮಿ (ಮಾಸಪತ್ರಿಕೆ.)

ನಾಟಕದ ವಿಚಾರವಾಗಿ ಏನು ತಿಳಿಯಬೇಕೆಂದರೂ ಇದನ್ನು ಓದಿದರೆ ಸಾಕು. ಪ್ರತಿ ತಿಂಗಳಿನಲ್ಲಿಯೂ ಮೂರು ಬಣ್ಣಗಳ ಚಿತ್ರವು ಬರುತ್ತದೆ. ಸುಪ್ರಸಿದ್ಧರ ಲೇಖನಗಳನ್ನು ಒಳಗೊಂಡಿರುತ್ತದೆ.

ವಾರ್ಷಿಕಚಂದ ೩—೮—೦.

ವ್ಯವಸ್ಥಾಪಕ,
ರಂಗಭೂಮಿ ಕಾರ್ಯಾಲಯ, ಬೆಂಗಳೂರು ಸಿಟಿ.

ಜೀವನಾಧಾರ ಡಿಪೋ ೫ವರ ಮೂರು ರತ್ನಗಳು

೧. ಜೀವನಾಧಾರ

ಸಣ್ಣ ಬಾಟ್ಲಿ 0—12—0 ದೊಡ್ಡ ಬಾಟ್ಲಿ 1—8—0 ವಿ. ಪಿ. ಚಾರ್ಜು ಪ್ರತ್ಯೇಕ.

೨೬-೧೧-೨೭ ಬೆಂಗಳೂರು.

ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಅನೇಕ ವ್ಯಾಧಿಗಳಿಗೆ ಉಪಯೋಗಿಸಿದ್ದೇನೆ. ಮತ್ತು ಅದು ಗುಣಕೊಡುವ ವಿಷಯದಲ್ಲಿ ತುಂಬಾ ತೃಪ್ತಿ ಹೊಂದಿದ್ದೇನೆ. ನಿಜವಾಗಿ ಅದು ಉತ್ಕೃಷ್ಟ ಔಷಧವಿರುತ್ತದೆ. ಮತ್ತು ಅದು ಜಗತ್ತಿಗೆ ಒಂದು ಲಾಭವೇ ಆಗಿರುತ್ತದೆ. ಮೈಸೂರು ಪ್ರದರ್ಶನದಲ್ಲಿ ಜೀವನಾಧಾರವು ಬಹುಮಾನದ ಇನಾಮನ್ನು ಹೊಂದಿದ್ದನ್ನು ತಿಳಿಸಲು ಆತ್ಯಂತ ಸಂತೋಷಪಡುತ್ತೇನೆ. ಜೀವನಾಧಾರದ ಒಂದು ಸೀಸೆಯು ಪ್ರತಿಯೊಂದು ಮನೆಯಲ್ಲಿ ಇಡುವುದಕ್ಕೆ ನಾನು ಉಪದೇಶಮಾಡುವೆನು. ಕಠಿಣ ಪ್ರಸಂಗದಲ್ಲಿ ಒಬ್ಬ ಡಾಕ್ಟರನಂತೆ ಉಪಯೋಗಬೇಳುತ್ತದೆ.

ಬಿ. ಎಚ್. ರಾಮಚಂದ್ರರಾವ್,
ಚೇರಮನ್, ಗ್ರಾಮಪಂಚಾಯಿತ.

ನನ್ನ ಕುದುರೆಯು ಮೈಗೀ ಎಂಬ ತ್ವಚರೋಗದಿಂದ ಪೀಡಿತವಾಗಿತ್ತು. ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಕಳೆದ ೧೫ ದಿವಸಗಳಿಂದ ಉಪಯೋಗಿಸುತ್ತಿರುವೆನು. ಮತ್ತು ಬಹಳೇ ಗುಣಕೊಟ್ಟಿರುವುದು.

೨-೧೧-೨೭,
ಮೈಸೂರು.

ಸಿದ್ಧರಾಜ ಅರಸು.
ಅಸಿಸ್ಟೆಂಟ್ ಸೂಪರಿಂಟಿಂಡೆಂಟ್ ಆಫ್ ಪೋಲೀಸ್.

೨. ಗಜಕರ್ಣದ ತೈಲ.

ಬಾಟ್ಲಿ ೧ ಕ್ಕೆ 0 12 0 ಪ್ಯಾಕಿಂಗ್ ಪೋಸ್ಟೇಜ್ ಪ್ರತ್ಯೇಕ.

ಧಾರವಾಡ, ೧೦-೨-೨೮.

ನಾನು ನಿಮ್ಮ ಗಜಕರ್ಣದ ತೈಲವನ್ನು ತಲೆಯಲ್ಲಿ ಕೂದಲುಗಳು ಉದರಿರುವದಕ್ಕೆ (Pach of baldness) ಉಪಯೋಗಿಸುತ್ತಿದ್ದೇನೆ. ಅದು ಈಗಾಗಲೇ ಬಹಳ ಗುಣಕೊಟ್ಟಿರುವುದು. ಕಾರಣ ಈ ಪತ್ರಮುಟ್ಟಿದ ಕೂಡ್ಲೆ 2 ಬಾಟ್ಲಿ ಗಜಕರ್ಣದ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

ರಾಮರಾವ್ ಎನ್. ದೇಸಾಯಿ.

ಅನೇಕರು ಅನುಭವಿಸುತ್ತಿರುವ ನವೆ, ಗಜಕರ್ಣ, ಹುಳಕಡ್ಡಿ, ಕಜ್ಜಿ, ಉಗುರುಸುತ್ತು; ಹಳೇ ಇಸಬು, ಕತ್ತಿ ಘಾಯ, ಮತ್ತು ಎಲ್ಲಾ ತರಹದ ಚರ್ಮವ್ಯಾಧಿಗಳಿಗೆ ಗಜಕರ್ಣದ ತೈಲವನ್ನು ಹಚ್ಚಿದ 2-3 ದಿನಗಳಲ್ಲಿ ಗುಣಮಾಡಿಕೊಳ್ಳಬಹುದು. ಇದರಲ್ಲಿ ಮುಖ್ಯವಾದ ಗುಣವೇನೆಂದರೆ, ಗಾಯ ಅಥವಾ ಹುಣ್ಣಿನಿಂದ ಬರುವ ಕಲೆಗಳನ್ನು ತೆಗೆದುಹಾಕಿ ಪುನಃ ಮೊದಲಿನ ಚರ್ಮದ ಬಣ್ಣಕ್ಕೆ ತರುವುದು.

೩. ಶತಮೂಲಿಕಾ ಸಮ್ಮೇಳನ ಭೃಂಗಾಮಲಕ ತೈಲ.

ಬಾಟ್ಲಿ 1ಕ್ಕೆ 0 8 0. ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

ಈ ತೈಲವು ಆಯುರ್ವೇದ ಶಾಸ್ತ್ರೋಕ್ತವಾದ ಶತಮೂಲಿಕಾಸಂಗ್ರಹವನ್ನು ಪಾಶ್ಚಾತ್ಯ ರಸಾಯನಶಾಸ್ತ್ರ ರೀತ್ಯಾ (Latest scientific Process) ಶುದ್ಧಿಯಾದ ತೈಲದಲ್ಲಿ ಪಕ್ವಮಾಡಿ ವನಸ್ಪತಿ ದ್ರವ್ಯಗಳ ಪ್ರತಿಯೊಂದು ಗುಣಾಂಶವನ್ನೂ ಭಾವನೆಮಾಡಿ ತಯಾರಿಸಿದೆ. ಇದನ್ನು ಪ್ರತಿದಿನವೂ ತಲೆಗೆ ಲೇಪಿಸುವುದರಿಂದ ಜ್ಞಾನಪಕಶಕ್ತಿಯು ಅಭಿವೃದ್ಧಿಯಾಗಿ ಬುದ್ಧಿಭ್ರಮೆಯು ನಾಶವಾಗುತ್ತದೆ. ನೇತ್ರವ್ಯಾಧಿಗಳು ಗುಣವಾಗಿ ಕಣ್ಣುಗಳಿಗೂ, ಮುಖಕ್ಕೂ ಕಾಂತಿಯು ಬರುವುದು.

ಮೈಸೂರು ಬ್ರಾಂಚ್—ಇಲವಾಲ ರೋಡು.

ಜೀವನಾಧಾರ ಡಿಪೋ, ಹುಬ್ಬಳ್ಳಿ.

"ಮೈಸೂರು ಸ್ಕೌಟ್" ನ ಕನ್ನಡಭಾಗವು ಇದರೊಡನೆ ಸಮಾವಿಷ್ಟವಾಗಿದೆ.

ಮೈಸೂರು ಮಕ್ಕಳು

॥ ಓದುವ ಹೆಣ್ಗಳು ಗಂಡುಗಳುಳಿವರು, ಹರುಷವಬೀರುತ ಓಡ್ಯಾಡಿ ॥
॥ ನಾಲ್ಮಡಿ ಕೃಷ್ಣನ ಕೊಂಡಾಡಿ ॥

೨ನೆಯ ವರ್ಷ.] ವಿಭವ ಸಂ॥ ಧ ಮಾಘದ ಹುಣ್ಣಿವೆ—ಫೆಬ್ರುವರಿ ೧೯೨೯ [೧೭ನೆಯ ಹೆಜ್ಜೆ.

ಮೈಸೂರು ಸ್ಕೌಟುಮಂಡಳಿಯ ಕನ್ನಡ ಮಾಸಪತ್ರಿಕೆ.

ಒಳಗಡೆ ಏನಿದೆ?

೧ ಮೈಸೂರು ಮಕ್ಕಳು ಚಿತ್ರಪರಿಚಯ—
ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್.
೨ ಮೈಸೂರು ಮಕ್ಕಳ ಜೀವನಚರಿತ್ರೆ—
ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್
೩ ಕರ್ನಾಟಕದ ಏಕೀಕರಣ
೪ ಕಥೆಗಳ ಕಟ್ಟು
೫ ಮೈಸೂರು ಮಕ್ಕಳ ಎದೆಯು—ಲೆ॥ ಮು ವೆಂಕಟಕೃಷ್ಣಪ್ಪ.
೬ ಕಬ್‌ಗಳು ಕಲಿಯಬೇಕಾದುದು.
ಕಬ್‌ಗಳೊಡನೆ ನಮ್ಮದೊಂದು ಹರಟೆ.
೭ ಹಿರಿಯಣ್ಣಂದಿರಿಗಾಗಿ.
೮ ಆಟದ ಬೈಲು
೯ ಬಿಡಿನುಡಿಗಳು.
೧೦ ವಿದೇಶಗಳಲ್ಲಿನ ಸ್ಕೌಟು ವಿಷಯಗಳು—ಒಗಟುಗಳು ಇತ್ಯಾದಿ.
೧೧ ಗೃಹಶಿಕ್ಷಣ.
೧೨ ಸ್ಕೌಟು ಸುದ್ದಿಗಳು—ವಿಮರ್ಶೆ—ಸ್ವೀಕಾರ
ಅಲ್ಲಲ್ಲಿ ಕೆಲಕೆಲವು

ಸಂಪಾದಕರು.
ಎನ್ ಎಸ್. ನಾರಾಯಣಶಾಸ್ತ್ರಿ, ಎಂ.ಎ.
ಆರ್. ಕೆ. ಲಕ್ಕೂರ್.

ವಾರ್ಷಿಕಚಂದಾ ೧—೦—೦
(ಅಂಚೆಹಾಸಲು ವಿನಾ)
ಸ್ಕೂಲು ಮತ್ತು ವಾಚನಾಲಯ
ಗಳಿಗೆ ರೂ. ೨.

ಮೈಸೂರು ಮಕ್ಕಳು ಆಫೀಸ್,
ಮೈಸೂರು.

ಸ್ಯಾಂಪಲ್] ಉತ್ತಮ ಮಸಿಚೀಟಿಗಳು

ನೀಲಿ ಕಪ್ಪು ಕೆಂಪು ಜಾಂಬಳಿ ಮಸಿಚೀಟಿಗಳು.

ಈ ಕಂಪನಿಯ ಮಸಿಯು ಸುಶಿಕ್ಷಿತಜನರಿಂದ ಶಿಫಾರಸ ಪಡೆದು ಮೆಡಲುಗಳನ್ನು ಸಂಪಾದಿಸಿರುತ್ತದೆ.

ದರಗಳು.

೧೦೦ ಚೀಟಿಗೆ	೦—೮—೦
೫೦೦ ,,	೨—೮—೦
೧೦೦೦ ,,	೪—೨—೦

೧೦೦ ತೊಲಾ ಪಾಕೆಟುಗಳಿಗೆ ೨೦—೦—೦

ಒಮ್ಮೆಲೇ ೧೦ ಪಾವಿರ ಚೀಟಿಗಳನ್ನು ತರಿಸುವವರಿಗೆ ಪ್ರತಿ ಒಂದು ಚೀಟಿಯಮೇಲೆ ಅವರ ಹೆಸರು ಛಾಪಿಸಿ ರೇಲ್ವೆಪ್ಪಾರ್ಸಿಲೋರಿಯಿಂದ ಮಾಲು ರವಾನಿಸುತ್ತೇವೆ.

ಕರ್ನಾಟಕ ಇಂಕ ಕಂಪನಿ,

ಬಾಗಲಕೋಟೆ.

THE EASTERN HERALD.

The only Psychic, Astrological, Vedantic & Occult, Journal in India.
Annual Subscription Rs 2.

Editor,
THE EASTERN HERALD,
Vizianagaram City, (B. N. Ry

ಕಾದಂಬರೀಸಂಗ್ರಹ (ಮಾಸಪತ್ರಿಕೆ)

ವಾ|| ಚಂದಾ ೧—೦—೦

ಕಾದಂಬರೀಸಂಗ್ರಹ ಆಫೀಸ್, ಚಾಮರಾಜನಗ

ಪರಮಾರ್ಥ ಚಂದ್ರೋದಯ

(ಮಾಸಪತ್ರಿಕೆ)

ಸಂಪಾದಕ—ದೇವರಾಯದುರ್ಗದ ದಾಸಕೂಟಸಭಾ ಕಾರ್ಯದರ್ಶಿ ಪರಮಪ್ರಿಯ ಸುಬ್ಬರಾಯದಾಸ.

ವಾ|| ಚಂ|| ಅಂಚೆವೆಚ್ಚ ಸೇರಿ ರೂ. ೧-೬-೦

ಪರಮಾರ್ಥ ಚಂದ್ರೋದಯ ಕಾರ್ಯಾಲಯ,
ಏಶ್ವೇಶ್ವರಪುರ, ಬೆಂಗಳೂರು ಸಿ

EFFECTIVE MEDICINES

CAN BE HAI FROM ME

	Rs	A
Leprosy Emulsion Red	7	8
Tonic Pills (100 Pills)	4	8
Infantile Convulsions	3	12
Piles Ointment or Powder, Wind killing Oil, Emamagogue Pill, Ague Syrup	2	8
Headache Remedy, Leucoderma and Ringworm Powder, White Leprosy, Guine Worm Paste	1	14
Digestive Pills 100 Pills for indigestion; Jundice Powder, Hair-dye	1	9
Tooth Powder ...	0	5
Diarrohœa & Cholera Dispeller, Cough Pills, Ear Drops, Scropion Sting Remedy, Dysentry Mixture	1	0

	Rs.
Fever Dispeller, Drops; Pills for influenza, Infant Protector, Cough Syrup for Asthma; Eye Drops, Hair Eestare, Sarso Dyne (best Blood Purifier), Lime Syrups, Worm Powder, Oil Pepper Mints, Ringworm Cakes 10 ..	1
Headache Powders	0 1
Pepper Mint Essence; Essence of Camphor Ointment Pudina and Anisi, Ringworm Ointment	0
Tonic Pills No. 2 for opium habit & Spleen Tonic ...	2

Packing and Postage Extra.

Dr. GOPINATH KRISHNAJI KSHATRIYA, GIRGAON POST, BOMBAY.

ಮೈಸೂರು ಮಕ್ಕಳು

ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರವರ ಬಾಲ್ಯಾವಸ್ಥೆ.

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರು

ನಮ್ಮ ಈಗಿನ ದೊರೆಯು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರು ಇವರ ಅಜ್ಜಂದಿರು ಶ್ರೀ ಮುಮ್ಮುಡಿ ಕೃಷ್ಣರಾಜ ಒಡೆಯರು. ಇವರು ನಮ್ಮ ಮೈಸೂರು ದೇಶದ ಅರಸುಗಳಲ್ಲೆಲ್ಲಾ ಹೆಸರುವಾಸಿಯಾದವರು. ಇವರಿಂದ ದೇಶಕ್ಕೆ ಅನೇಕ ಉಪಕಾರಗಳಾಗಿವೆ. ಈಗಿರುವ ಅನೇಕ ಸೌಕರ್ಯಗಳಿಗೆ ಇವರು ಮಾಡಿದ ಉಪಕಾರಗಳೇ ಕಾರಣಗಳು.

ನಿಮ್ಮಲ್ಲಿ ಕೆಲವರು ಶ್ರೀರಂಗಪಟ್ಟಣವನ್ನು ನೋಡಿರಬಹುದು. ಅಲ್ಲಿ ಶ್ರೀರಂಗನಾಥಸ್ವಾಮಿಯ ದೇವಸ್ಥಾನದ ಎದಿರುಭಾಗದಲ್ಲಿ ಒಂದು ಚಿಕ್ಕಮನೆಯನ್ನು ಕಟ್ಟಿ ಅದರೊಳಗೆ ಒಂದು ಕಲ್ಲನ್ನಿಟ್ಟಿರುವರು. ಇದು ಶ್ರೀಮುಮ್ಮಡಿ ಕೃಷ್ಣಭೂಪತಿಗಳು ಹುಟ್ಟಿದ ಸ್ಥಳವಂತೆ. ಇಲ್ಲಿ ಈಗ್ಗೆ ಸುಮಾರು 135 ವರ್ಷಗಳ ಹಿಂದೆ ಮುಮ್ಮುಡಿ ಕೃಷ್ಣಭೂಪತಿಗಳು ಹುಟ್ಟಿದರು. ಇವರ ತಂದೆಗಳು ಪ್ರಖ್ಯಾತರಾದ ಖಾಸಾ ಚಾಮರಾಜ ಒಡೆಯರವರು. ಇವರ ತಾಯಿಯು ಕೆಂಪು ನಂಜಮ್ಮಣ್ಣಿಯವರು. ಚಾಮರಾಜ ಒಡೆಯರು ಶ್ರೀಕಂಠೇಶ್ವರಸ್ವಾಮಿಯನ್ನು ಕುರಿತು ವಿಶೇಷವಾಗಿ ತಪಸ್ಸುಮಾಡಿ ಮುಮ್ಮುಡಿ ಕೃಷ್ಣಭೂಪತಿಗಳನ್ನು ಪಡೆದರಂತೆ! ಆದುದರಿಂದಲೇ ಕೃಷ್ಣಭೂಪತಿಗಳಿಗೆ ಮೊದಲು ನಂಜರಾಜ ಒಡೆಯರೆಂಬ ಹೆಸರಿಟ್ಟಿದ್ದರು. ಆ ಮೇಲೆ ಇವರು ಪಟ್ಟಾಭಿಷಿಕ್ತರಾದಾಗ ಹೆಸರನ್ನು ಕೃಷ್ಣರಾಜರೆಂದು ಬದಲಾಯಿಸಿದರು.

ಇವರು ಬಾಲಕರಿಗಿದ್ದಾಗ ಟಿಪ್ಪುಸುಲ್ತಾನನು ಮೈಸೂರು ಸಂಸ್ಥಾನದ ಸರ್ವಾಧಿಕಾರಿಯಾಗಿದ್ದನು. ಮೈಸೂರಿನ ರಾಜಮನೆತನದವರನ್ನು ಮೂಲೆಗುಟ್ಟು ತನ್ನ ಮನಸ್ಸುಬಂದಂತೆ ಕಾರ್ಯವನ್ನು ಮಾಡುತ್ತಿದ್ದನು. ಇವನ ದುಷ್ಟತನವನ್ನು ನೋಡಿ ಸಹಿಸಲಾರದೆ ಚಾಮರಾಜ ಒಡೆಯರು ಇಂಗ್ಲೀಷರ ಸಹಾಯವನ್ನು ಬೇಡಿದ್ದರು. ಆದರೆ ಅಷ್ಟರಲ್ಲಿಗೆ ಅವರೇ ಮೃತರಾದರು. ಆಗ ಈ ಚಿಕ್ಕ ಬಾಲಕರಾದ ರಾಜಕುಮಾರರನ್ನು ಸಾಕುವ ಭಾರವನ್ನು ಅಜ್ಜಿಯಾದ ಮಹಾರಾಣಿ ಶ್ರೀ ಲಕ್ಷ್ಮಮ್ಮಣ್ಣಿಯವರ ಮೇಲೆ ಬಿತ್ತು. ಅವರು ಬಹಳ ಜಾಗರೂಕತೆಯಿಂದಲೂ ಪ್ರೇಮದಿಂದಲೂ ಇವರನ್ನು ಸಾಕಿದರು.

ಮೇಲ್ಕಾರಣ ಕೃಷ್ಣರಾಜರಿಗೆ ಇನ್ನೂ ೧೦ ವರ್ಷ ವಯಸ್ಸು ಪೂರ್ತಿಯೇ ಆಗಿದ್ದಾಗ, ಇಂಗ್ಲೀಷರು ಶ್ರೀರಂಗಪಟ್ಟಣವನ್ನು ಹಿಡಿದು, ಟಿಪ್ಪುವನ್ನು ಸಂಹರಿಸಿದರು. ಆಗ ರಾಜಮನೆತನದವರೆಲ್ಲಾ ಶ್ರೀರಂಗಪಟ್ಟಣದ ಅರಮನೆಯಲ್ಲಿಯೇ ಇದ್ದರು. ಇಂಗ್ಲೀಷರವರು ಅವರನ್ನೆಲ್ಲಾ ಮೈಸೂರಿಗೆ ಕರೆದುಕೊಂಡು ಒಂದು ಇಲ್ಲಿದ್ದ ಸಜರ್‌ಬಾದ್ ಅರಮನೆಯಲ್ಲಿ ಇರಿಸಿದರು. ಅಲ್ಲದೆ ರಾಣಿಯವರನ್ನು ಭೇಟಿಯಾಗಿ ಚಿಕ್ಕ ದೊರೆಗಳಿಗೆ ಪಟ್ಟಕಟ್ಟುವುದಕ್ಕೆ ಒಪ್ಪಿ ಲಕ್ಷ್ಮೀರಮಣಸ್ವಾಮಿಯ ದೇವಸ್ಥಾನದಲ್ಲಿ ಕೃಷ್ಣರಾಜರಿಗೆ ಪಟ್ಟವನ್ನು ಕಟ್ಟಿದರು.

ಆ ಮೇಲೆ ಆಗಿನಕಾಲಕ್ಕೆ ತಕ್ಕಹಾಗೆ ರಾಜರು ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. ಇವರ ವಿದ್ಯೆಯು ಅಪಾರವಾದುದು. ವೈದ್ಯ, ಗಣಿತ, ಜ್ಯೋತಿಷ್ಯ ಮುಂತಾದ ಶಾಸ್ತ್ರಗಳೂ ಕನ್ನಡ, ಮರಾಠಿ, ಉರ್ದು, ಪರ್ಷಿಯನ್ ಮತ್ತು ಹಿಂದಿ ಭಾಷೆಗಳೂ, ಈಜುವುದು, ಕುದುರೆಸವಾರಿ, ಕತ್ತಿವರಸೆ, ಗರಡಿಸಾಧನೆ ಮುಂತಾದ ವಿದ್ಯೆಗಳೂ ಬರುತ್ತಿದ್ದವು. ಇವರಿಗೆ ವಿದ್ಯೆಯಮೇಲೆ ತುಂಬಾ ಆಸಕ್ತಿ ಇತ್ತು. ಇವರು ಪ್ರವೃದ್ಧರಾದಮೇಲೆ ಅನೇಕ ಜನ ವಿದ್ವಾಂಸರು ಇವರ ಆಸ್ಥಾನದಲ್ಲಿದ್ದರು.

ಇವರಿಗೆ ದಾನಧರ್ಮದಲ್ಲಿ ಬಹಳ ಆಸಕ್ತಿಯಿತ್ತು. ಮುಸಲ್ಮಾನರ ಕಾಲದಲ್ಲಿ ನಾಶವಾಗಿದ್ದ ದೇವಸ್ಥಾನಾದಿಗಳನ್ನು ಉದ್ಧಾರಮಾಡಿದರು. ಹೊಸದಾಗಿ ಎಷ್ಟೋ ದೇವಸ್ಥಾನಗಳನ್ನು ಕಟ್ಟಿದ್ದರು. ತಮ್ಮ ದೇಶದಲ್ಲೆಲ್ಲಾ ಎರಡಾವೃತ್ತಿ ಸಂಚಾರಮಾಡಿದರು. ನಮ್ಮ ದೇಶದಲ್ಲೆಲ್ಲಾ ಮೊದಲನೆಯ ಇಂಗ್ಲಿಷ್ ಶಾಲೆಯನ್ನು ಇವರು ಪ್ರಾರಂಭಿಸಿದರು. ಅಲ್ಲದೆ ಮೊದಲನೆಯ ಕೋರ್ಟು ಆದುದು ಇವರ ಕಾಲದಲ್ಲಿ. ಮೊದಲನೆಯ ಆಸ್ಪತ್ರೆಯು ಪ್ರಾರಂಭವಾದುದೂ ಇವರ ಕಾಲದಲ್ಲಿಯೇ! ಮೊದಲನೆಯ ಭಾಷಪತ್ರಿಕೆಯೂ ಇವಾಗಲೇ ಆದುದು. ತನ್ನ ಪ್ರಜೆಗಳು, ತನ್ನ ದೇಶ ಇವು ಅತಿ ನಮ್ಮದಿಯಿಂದಿರಬೇಕೆಂದು ಬೇಕಾದಷ್ಟು ಪ್ರಯತ್ನಪಟ್ಟರು. ಅಲ್ಲದೆ ರಾಜಧಾನಿಯಾದ ಮೈಸೂರು ನಗರವು ಲಕ್ಷಣವಾಗಿರಬೇಕೆಂದು ಸೊಗಸಾದ ಜಗನ್ಮೋಹನಬಂಗ್ಲೆ, ಲೋಕರಂಜನಮಹಲು, ಮೊದಲಿದ್ದ ಅರಮನೆ ಇವನ್ನೆಲ್ಲಾ ಕಟ್ಟಿಸಿದರು. ಇವರ ಕಾಲದಲ್ಲಿಯೇ ದೇಶವೂ ಸರಿಯಾದ ಸ್ಥಿತಿಯಲ್ಲಿ ಏಳಿಗೆ ಸಲ್ಲಟ್ಟು ಸರ್ಕಾರದ ಆಡಳಿತವು ಸರಿಯಾದ ರೀತಿಯಲ್ಲಿ ನಿರ್ವಹಣೆಯಾಯಿತು.

ಹೀಗಿರುವಾಗ ಕೆಲವರು ಪುಂಡರು ದಂಗೆ ಎದ್ದರು. ಅದನ್ನು ಅಡಗಿಸಲು ಧೊರೆಗಳು ಸ್ವತಃ ತಾವೇ ಹೋಗಿದ್ದರು. ಆಗ ಇಂಗ್ಲೀಷರವರು ರಾಜ್ಯಭಾರ ಸರಿಯಾಗಿ ನಡೆಯಲಿಲ್ಲವೆಂದು ತಾವೇ ವಹಿಸಿಕೊಂಡಿದ್ದರು. ಹೀಗೆ ಇಂಗ್ಲೀಷರು ಕಾರುಬಾರು ನಡೆಯಿಸುತ್ತಿದ್ದಾಗ ಧೊರೆಗಳು ರಾಜ್ಯವನ್ನು ವಾಪಸುಕೊಡಬೇಕೆಂದು ಇಂಗ್ಲೆಂಡಿಗೆ ಅರ್ಜಿಹಾಕಿ ಹೋಡಾಡುತ್ತಿದ್ದರು. ಈ ಸಮಯದಲ್ಲಿಯೇ ತಮಗೆ ಸ್ವಂತ ಪುತ್ರನಿಲ್ಲದುದರಿಂದ ಚಾಮರಾಜ ಒಡೆಯರೆಂಬ ಬಾಲಕರನ್ನು ಸ್ವೀಕಾರಮಾಡಿದರು. ಕೊನೆಗೆ ಇಂಗ್ಲೀಷರು ರಾಜ್ಯವನ್ನು ಹಿಂತಿರುಗಿ ಕೊಟ್ಟರು. ಆದರೆ ಆಗಾಗಲೇ ವೃದ್ಧರಾಗಿದ್ದ ದೊರೆಗಳು ತಮ್ಮ 74 ನೆಯ ವಯಸ್ಸಿನಲ್ಲಿ ಕಾಲಧೀನರಾದರು.

ಧೊರೆಗಳು ಒರೆದಿರುವ ಪುಸ್ತಕಗಳು ಬಹಳ ಮನೋಹರವಾಗಿವೆ. ಅವರ ಚರಿತ್ರೆಯು ಆಶ್ಚರ್ಯವಾಗಿದೆ. ಅವರ ಜೀವನವು ಉತ್ತೇಜಕಾರಿಯಾಗಿದೆ. ಅಂತಹ ರಾಜರನ್ನು ಪಡೆದಿದ್ದ ನಮ್ಮ ತಾಯ್ನಾಡು ಎಷ್ಟು ಧನ್ಯಳೋ!

ನಾವೆಲ್ಲರೂ ಒಂದೆ!

"ಕರ್ನಾಟಕ ಏಕೀಕರಣ"
೨೨—೨—೨೯

ಮಗೂ,

ನಾವೆಲ್ಲರೂ ಇರುವ ದೇಶವು ಮೈಸೂರು. ನಾವೆಲ್ಲರೂ ಮಾತಾಡುವ ಭಾಷೆಯು ಕನ್ನಡವು. ಆದರೆ ಕನ್ನಡವನ್ನು ಆಡುವವರು ಮೈಸೂರಿನಲ್ಲಿ ಮಾತ್ರವೇ ಇಲ್ಲ. ಮದ್ರಾಸುಆಧಿಪತ್ಯದಲ್ಲಿ ಕೆಲವು ಪ್ರಾಂತ್ಯಗಳಲ್ಲಿಯೂ, ಬೊಂಬಾಯಿಆಧಿಪತ್ಯದಲ್ಲಿ ಕೆಲವು ಕಡೆಗಳಲ್ಲಿಯೂ, ಹೈದರಾಬಾದು ಸಂಸ್ಥಾನದಲ್ಲಿ ಕೆಲವು ಪಟ್ಟಣಗಳಲ್ಲಿಯೂ ಕನ್ನಡವನ್ನೇ ಭಾಷೆಯನ್ನಾಗಿ ಉಪಯೋಗಿಸುತ್ತಾರೆ. ಇವರೆಲ್ಲರೂ ಕನ್ನಡಿಗರು—ನೀವೂ ಕನ್ನಡಿಗರು. ನಾವೆಲ್ಲರೂ ಒಂದೇ !

ಈಗ ನೋಡು, ಮಗು, ಒಂದು ಮನೆಯಿದೆಯಪ್ಪ. ಅದರಲ್ಲಿ ತಂದೆ ತಾಯಿ, ಮಕ್ಕಳು, ಅಣ್ಣತಮ್ಮಂದಿರು, ಅಕ್ಕತಂಗಿಯರು ಹೀಗೆ ಎಂಟು ಜನರು ಇರುತ್ತಾರೆ. ಅವರೆಲ್ಲರಿಗೂ ಒಬ್ಬೊಬ್ಬರಿಗೆ ಒಂದೊಂದು ಚಿಕ್ಕಾಸುಸೆಯಿರುತ್ತದೆ. ಹಾಗೆ ಅವರು ಬೇರೆಬೇರೆಯಾಗಿದ್ದರೂ ಅವರೆಲ್ಲರೂ ಒಂದೇ ಅಲ್ಲವೆ? ಅಲ್ಲದೆ ನಿಮ್ಮ ಚಿಕಪ್ಪನ ಮನೆಯವರು ಬೇರೆ ಊರಲ್ಲಿರಬಹುದು. ನೀನು ಬೇರೆ ಊರಲ್ಲಿರಬಹುದು. ಆದರೆ ನಿಮ್ಮ ಮನೆಯವರೂ ಅವರ ಮನೆಯವರೂ ಒಂದೆ.

ಜನರು ಒಂದೆಯಾಗಿರಬೇಕಾದರೆ—ಅವರೆಲ್ಲರೂ ಒಂದೇಮತದವರಾಗಿರಬೇಕಾಗಿಲ್ಲ. ಅವರೆಲ್ಲರೂ ಒಬ್ಬನೇ ರಾಜನ ಕೆಳಗಿರಬೇಕಾಗಿಲ್ಲ. ಒಂದು ಮನೆಯವರು ಬೇರೆ ಬೇರೆ ತರಹದ ಬಟ್ಟೆಯನ್ನು ಹಾಕಿಕೊಳ್ಳುವಂತೆ! ಆದರೆ ಅವರೆಲ್ಲರೂ ಒಂದೇ ಎಂತ ಕಾಣಬೇಕಾದರೆ, ಅವರ ಮನಸ್ಸುಗಳು ಒಂದಾಗಿರಬೇಕು. ಪೂರ್ತಿದಿಂದಲೂ ಆ ಜನರೆಲ್ಲರೂ ಒಂದೇ ಜಾತಿಯವರಾಗಿರಬೇಕು. ಅವರ ಪೂರ್ವಿಕರೂ ಸಹ ಒಟ್ಟಿಗೆ ಸೇರಿದವರಾಗಿರಬೇಕು. ಮುಖ್ಯವಾಗಿ ಅವರೆಲ್ಲರಿಗೂ ಸೇರಿದ ವಿಷಯಗಳಿರಬೇಕು.

ಈಗ ಕನ್ನಡಿಗರು ಯಾರು ಯಾರು ಎಂದು ಕೇಳಿದರೆ ಕನ್ನಡ ಜನರೆಲ್ಲರೂ ನಾವು ನಾವು ಎಂದು ಹೇಳುತ್ತಾರೆ. ನಮ್ಮ ಭಾಷೆಯಲ್ಲಿ ಅನೇಕ ಪುಸ್ತಕಗಳಿವೆಯಲ್ಲ—ಅವುಗಳಲ್ಲಿ ಅನೇಕವನ್ನು ಮೈಸೂರಿನಲ್ಲಿ ಇರುವಂಥ ಕನ್ನಡಿಗರು ಬರೆದಿರುವರು. ನಮ್ಮ ವಿಷಯಗಳನ್ನೂ ನಮ್ಮ ಪುಸ್ತಕಗಳನ್ನೂ ಅವರು ಓದಿ ಸಂತೋಷಪಡುವರು. ಅಲ್ಲದೆ ಒಂದು ಮುಖ್ಯವಿಷಯ, ಮಗು. ಏಕೆಂದರೆ—ನಮ್ಮದು ಎಂದು ನಾವು ಹೆಮ್ಮೆ ಪಡುವ ಅನೇಕ ವಿಷಯಗಳಿವೆಯಲ್ಲ—ಯಾವುದು ಎನ್ನುತ್ತಿ? ಪ್ರಸಿದ್ಧವಾದ ಗ್ರಂಥಗಳು, ಜೈಮಿನಿಭಾರತ, ಪಂಪನ ರಾಮಾಯಣ, ರನ್ನನ ಗದಾಯುದ್ಧ ಇವೇ ಮುಂತಾದವು, ಪ್ರಸಿದ್ಧವಾದ ಕಟ್ಟಡಗಳು ಬೇಲೂರು ಸೋಮನಾಥಪುರಗುಡಿಗಳು, ಎಲ್ಲೋರ ಅಜಂತದ ಗುಹೆಗಳು, ಇವೇ ಮುಂತಾದವು; ಪ್ರಸಿದ್ಧವಾದ ನಗರಗಳು, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಬಿಜಾಪುರ, ಬೆಳಗಾಂವ, ಮುಂತಾದವು; ಹಳೆಯರಾಜಧಾನಿಗಳು, ಹಂಪೆ (ವಿಜಯನಗರ), ಬನವಾಸಿ, ಬಾದಾಮಿ, ಕಲ್ಯಾಣ ಇವೇ ಮುಂತಾದವು;—ಈ ವಿಷಯಗಳೆಲ್ಲ ನಮ್ಮದು ಹೇಗೋ ಹಾಗೇ ಉಳಿದ ಕನ್ನಡಿಗರದೂ ಹೌದು. ನಾವು ಹೇಗೆ ಇವೆಲ್ಲ ನಮ್ಮದು ಎಂದು ಹೆಮ್ಮೆ ಪಡುತ್ತೇವೋ ಹಾಗೇ ಅವರೂ ಪಡುವರು. ಆದುದರಿಂದಲೇ ನಮ್ಮದು ಯಾವುದೋ ಅವರದೂ ಆದೇ.

ಹೀಗಿರುವಾಗ ಕಾರಣಾಂತರಗಳಿಂದ ಅವರು ನಾವು ಸ್ವಲ್ಪ ಬೇರೆಯಾಗಿದ್ದೇವೆ. ಯಾಕೆಂದರೆ ನಮ್ಮನಮ್ಮನ್ನಾಳುವ ಪ್ರಭುಗಳು ಬೇರೆಬೇರೆಯವರು. ಕನ್ನಡಿಗರ ರಾಜರೆಂದರೆ ಈಗ ಮೂವರು. ನಮ್ಮನ್ನಾಳುವ ಶ್ರೀಮಸ್ಮಹಾರಾಜರು, ಹೈದರಾಬಾದಿನ ನೈಜಾಮರು, ಮತ್ತು ಬ್ರಿಟಿಷ್ ಸರ್ಕಾರದವರು. ಒಂದೇ ಮನೆಯವರು ವಿಭಾಗಮಾಡಿಕೊಂಡು ಬೇರೆಬೇರೆ ಇರುವಂತೆ ಆಗಿದೆ. ಆದರೇನು ನಾವೆಲ್ಲರೂ ಒಂದೆ. ರಾಜ್ಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಬಿಟ್ಟು ಉಳಿದಿರುವುದರಲ್ಲಿ ನಾವೆಲ್ಲ ಒಂದೇ

ಆದುದರಿಂದ ನಿಮ್ಮ ಸಹೋದರರು ಮೈಸೂರಿನಾಚೆಯೂ ಇದ್ದಾರೆಂಬುದನ್ನು ಮರೆಯಬಾರದು. ಹೀಗೆ ಚದರಿಹೋಗಿರುವ ಕನ್ನಡಿಗರನ್ನು ಯಾವುದಾದರೊಂದು ರೀತಿಯಲ್ಲಿ ಬಿಟ್ಟು ಸೇರಿಸಬೇಕೆಂದು ಕೆಲವರು ಮಹನೀಯರು ಹೊರಟಿರುವರು. ಇವತ್ತಿನದಿನದಲ್ಲಿ ಕರ್ನಾಟಕದಲ್ಲಿ ಎಲ್ಲೆಲ್ಲೂ ಸಭೆಗಳು ಸೇರಿ, ಕನ್ನಡಿಗರನ್ನು ಒಟ್ಟುಮಾಡಲು ಪ್ರಯತ್ನಪಡುತ್ತಿವೆ. ಅತಿ ಬಾಗ್ರತೆಯಲ್ಲಿ ಈ ಆಶೆಯು ಪೂರ್ಣವಾಗಬೇಕೆಂಬುದೇ ನಮ್ಮೆಲ್ಲರ ಅಭಿಲಾಷೆ.

ಶ್ರೀಕೃಷ್ಣಭೂಪತಿಗಳು

ಕಥೆಗಳ ಕಟ್ಟು.

(ಕನಕದ ಹುಂಜ)

೧೫. ಶುನಶ್ಶೇಫ.

ಲೋಕದಲ್ಲೆಲ್ಲಾ ಹೆಸರುವಾಸಿಯಾಗಿರುವವನು ಹರಿಶ್ಚಂದ್ರ ಚಕ್ರವರ್ತಿಯು. ಆ ಹರಿಶ್ಚಂದ್ರರಾಜನ ರಾಜ್ಯದಲ್ಲಿ ಬಹಳ ಭಯಂಕರವಾದ ಒಂದು ಕ್ಷಾಮವು ಬಂತು. ಜನರು ಅನ್ನಾಹಾರಗಳಿಲ್ಲದೆ ಸಾವಿರಗಟ್ಟಲೆ ಸಾಯುತ್ತಿದ್ದರು: ಕಡೆಗೆ ಮೃಗಪಕ್ಷಿಗಳಿಗೂ ಕೂಡ ಕುಡಿಯಲು ನೀರುಸಹಾ ಇಲ್ಲದೆ ಪ್ರಾಣಬಿಟ್ಟವು. ಹರಿಶ್ಚಂದ್ರರಾಜನಿಗೆ ತುಂಬಾ ಸಂಕಟವಾಯಿತು. ಏನುಮಾಡುವುದಕ್ಕೂ ತೋರದೆ ಕುಲಗುರುಗಳಾದ ವಸಿಷ್ಠರನ್ನು ಕರೆಯಿಸಿ ಏನುಮಾಡಬೇಕೆಂದು ಕೇಳಿದನು. ಆಗ ವಸಿಷ್ಠರು, "ಅಶ್ವಮೇಧಯಾಗವನ್ನು ಮಾಡಬೇಕೆಂದು ನೀನು ಯೋಚನೆಯನ್ನು ಮಾಡಿ ಯಾಗಪಶುವನ್ನು ಬಿಟ್ಟಿ, ಆದರೆ ಆ ಯಾಗಪಶುವು ತಪ್ಪಿಸಿಕೊಂಡುಹೋಗಿರುವುದರಿಂದ ಯಾಗವು ಪೂರ್ಣವಾಗಲಾರದು. ಯಾಗವು ಪೂರ್ಣವಾಗುವವರೆಗೂ ಈ ಉಪದ್ರವು ದೇಶದಿಂದ ಹೋಗುವುದಿಲ್ಲ. ಈಗ ಉಪಾಯವೇನೆಂದರೆ, ಯಾಗಪಶುವಿಗೆ ಬದಲಾಗಿ ಮನುಷ್ಯನನ್ನು ಪಶುವನ್ನಾಗಿ ಮಾಡಿ ಯಾಗ ಮಾಡಬಹುದು" ಎಂದರು.

ಆಗ ಹರಿಶ್ಚಂದ್ರನು ಯಾಗಪಶುವಾಗಲು ಅನುಕೂಲನಾಗಿರುವ ಮನುಷ್ಯನನ್ನು ಹುಡುಕುತ್ತಾ ಹೋದನು. ಆಗ ಒಂದಾನೊಂದು ಅರಣ್ಯದಲ್ಲಿ ಋಚೀಕನೆಂಬ ಋಷಿಯು ವಾಸಮಾಡಿಕೊಂಡಿದ್ದನು. ಆ ಋಚೀಕನಿಗೆ ಕ್ರೂರವಾದ ಬಡತನವು ಇತ್ತು. ಅವನಿಗೆ ಮೂರುಜನ ಗಂಡುಮಕ್ಕಳಿದ್ದರು. ಹರಿಶ್ಚಂದ್ರನು ಆ ಋಷಿಯ ಬಳಿಗೆ ಬಂದು, "ಎಲೈ ಋಷಿಯೆ! ನನ್ನ ರಾಜ್ಯದಲ್ಲಿ ಬಹಳ ಘೋರವಾದ ಕ್ಷಾಮವು ಬಂದಿರುತ್ತದೆ. ಆ ಕ್ಷಾಮನಿವಾರಣೆಗಾಗಿ ನಾನು ಯಾಗಮಾಡಬೇಕೆಂದಿರುವೆನು. ಯಾಗಪಶುವು ತಪ್ಪಿಸಿಕೊಂಡಿರುವುದು. ಆದುದರಿಂದ ಯಾವನಾದರೂ ಒಬ್ಬ ಮನುಷ್ಯನನ್ನು ಪಶುವಿಗೆ ಒದಲಾಗಿ ತೆಗೆದುಕೊಂಡು ಹೋಗಬೇಕು. ಆದುದರಿಂದ ದಯೆಯಿಟ್ಟು ನಿನ್ನ ಮಕ್ಕಳಲ್ಲಿ ಒಬ್ಬನನ್ನು ನನಗೆ ಕೊಟ್ಟು ಪುಣ್ಯವನ್ನು ಕಟ್ಟಿಕೊ. ನಿನಗೆ ಬೇಕಾದಷ್ಟು ಹಣಕಾಸುಗಳನ್ನು ನಾನು ಕೊಡುತ್ತೇನೆ" ಎಂದನು.

ಆಗ ಋಷಿಯು ಮಕ್ಕಳನ್ನು ಕರೆದು "ಅಪ್ಪಾ ಮಕ್ಕಳಿರಾ ಹರಿಶ್ಚಂದ್ರಮಹಾರಾಜನು ಹೇಳುವುದನ್ನು ಕೇಳಿದಿರಾ? ನಿಮ್ಮಲ್ಲಿ ಯಾರುಬೇಕಾದರೂ ಅವನೊಡನೆ ಹೋಗಬಹುದಾಗಿದ್ದಿತು. ಆದರೆ ಹಿರಿಯವನು ನನಗೆ ಗತಿಯನ್ನು ಕಾಣಿಸಬೇಕು" ಎಂದನು. ಆಗ ಋಷಿಪತ್ನಿಯು, "ಕಿರಿಯವನು ನನಗೆ ಬೇಕಾದವನು. ನಾನು ಅವನನ್ನು ಬಹಳ ಪ್ರೀತಿಯಿಂದ ಸಾಕಿರುವೆನು. ಅವನನ್ನು ಕೊಡಲಾಗುವುದಿಲ್ಲ" ಎಂದು ಹೇಳಿದಳು. ಅದನ್ನು ನೋಡಿ ಬಾಲಕನಾದರೂ ಪರೋಪಕಾರದಲ್ಲಿ ಬಹಳ ಆಸೆಯಿಟ್ಟ ನಡುವಿನ ಮಗನಾದ ಶುನಶ್ಶೇಫನೆಂಬ ಹುಡುಗನು "ಅಪ್ಪಾ! ನಾನು ಹೋಗುವೆನು. ನನ್ನ ಅಣ್ಣನೂ ತಮ್ಮನೂ ನಿನಗೂ ಅಮ್ಮನಿಗೂ ಸೇವೆಮಾಡಿಕೊಂಡಿರಲಿ! ನಾನು ಸತ್ತರೂ ದೇಶಕ್ಕೆ ಒಳ್ಳೆಯದು ಆಗುವುದರಿಂದ ನಾನು ಹೋಗುತ್ತೇನೆ. ಈ ದೇಹವು ಎಂದಾದರೂ ಒಂದು ದಿನ ಹೋಗತಕ್ಕದ್ದು. ಅದು ಈಗಲೇ ಪರೋಪಕಾರಕ್ಕೋಸ್ಕರವಾಗಿ ಹೋಗಲಿ" ಎಂದನು. ಆ ಮಾತನ್ನು ಕೇಳಿ ಹರಿಶ್ಚಂದ್ರನು ಅವನ ಕ್ರಯವನ್ನು ಕೊಟ್ಟು ಶುನಶ್ಶೇಫನನ್ನು ಕರೆದುಕೊಂಡು ಊರಿಗೆ ಹಿಂತಿರುಗಿದನು.

ದಾರಿಯಲ್ಲಿ ವಿಶ್ವಾಮಿತ್ರರ ಆಶ್ರಮವು ಸಿಕ್ಕಿತು. ಅಲ್ಲಿ ಸಾಯಂಕಾಲವಾದುದರಿಂದ, ಅಲ್ಲಿಯೇ ಇದ್ದು ಬೆಳಿಗ್ಗೆ ಊರಿಗೆ ಹೋಗಬೇಕೆಂದು ಹರಿಶ್ಚಂದ್ರನೂ ಶುನಶ್ಶೇಫನೂ ನಿಂತರು. ವಿಶ್ವಾಮಿತ್ರನು ಇವನನ್ನು ಗೌರವದಿಂದ ಬರಮಾಡಿಕೊಂಡು ಈ ಹುಡುಗನು ಯಾರೆಂದು ಕೇಳಿದರು. ಆಗ ಶುನಶ್ಶೇಫನು ತನ್ನ ಕಥೆಯನ್ನೆಲ್ಲಾ ಹೇಳಿದನು. ಅದನ್ನು ಕೇಳಿ ವಿಶ್ವಾಮಿತ್ರರಿಗೆ ಬಹಳ ಆಶ್ಚರ್ಯವಾಯಿತು. ಇನ್ನೂ ಚಿಕ್ಕವಯಸ್ಸಿನ ಹುಡುಗ. ಈಗಾಗಲೇ ಇಂತಹ ಧರ್ಮಬುದ್ಧಿ ಬಿಡಿದೆ ಎಂದು ಅವರು ಬಹಳ ಆಶ್ಚರ್ಯಪಟ್ಟು, ಆ ಬಾಲಕನಮೇಲೆ ದಯೆಯುಳ್ಳವರಾಗಿ ಒಂದು ಮಂತ್ರವನ್ನು ಹೇಳಿಕೊಟ್ಟರು. ಆ ಮಂತ್ರದ ಬಲದಿಂದ ಅವನು ಗೆಲ್ಲುವನೆಂಬುದಾಗಿಯೂ ಹೇಳಿದರು.

ಮರುದಿನ ಹರಿಶ್ಚಂದ್ರನು ಶುನಶ್ಶೇಫನೊಂದಿಗೆ ತನ್ನ ರಾಜಧಾನಿಗೆ ಬಂದನು. ಕೂಡಲೆ ಯಾಗವನ್ನು ಪ್ರಾರಂಭಮಾಡಿ, ಯಾಗ ಕಂಭಕ್ಕೆ ಈ ಶುನಶ್ಶೇಫನನ್ನು ಕಟ್ಟಿದರು. ಪಾಪ! ಆ ಹುಡುಗನಿಗೆ ಎಷ್ಟು ಭಯವಾಗಿರಬೇಕೆಂದು ನೀವು ಯೋಚಿಸುತ್ತಿರಬಹುದು, ಆದರೆ ಅವನಿಗೆ ಸ್ವಲ್ಪವೂ ಭಯವಾಗಲಿಲ್ಲ. ಅದರೆ ಇನ್ನು ಯಾರಿಗಾದರೂ ಭಯವಾಗದಿರುತ್ತಿರಲಿಲ್ಲ. ಯಾಕೆಂದರೆ ಆ ಕಂಭಕ್ಕೇ ಪಶುವನ್ನು ಕಟ್ಟಿ ಆದರ ಕುತ್ತಿಗೆಯನ್ನು ಕಡಿದುಹಾಕಿಬಿಡುತ್ತಿದ್ದರು. ಆದರೆ ಶುನಶ್ಶೇಫನಾದರೋ ತನ್ನ ದೇಹದಿಂದ ದೇಶಕ್ಕೇ ಉಪಕಾರವಾಗುವುದಲ್ಲಾ ಎಂದು ಸಂತೋಷದಿಂದ ನಿಂತಿದ್ದನು. ಯಾಗವೆಲ್ಲಾ ಆಗಿ ಪಶುವನ್ನು ಕೊಲ್ಲುವ ಕಾಲ ಬಂತು. ಆಗ ಕತ್ತಿಯನ್ನು ಹಿಡಿದು ಇವನನ್ನು ಕೊಲ್ಲಲು ಹತ್ತಿರ ಬಂದರು. ಬೇರೆ ಯಾವಬಾಲಕನಾದರೂ ಕಿರಿಚಿಕೊಂಡು ಓಡಿಹೋಗುತ್ತಿದ್ದನು.

ಆಗ ಶುನಶ್ಶೇಫನು ವಿಶ್ವಾಮಿತ್ರ ಋಷಿಗಳು ಹೇಳಿಕೊಟ್ಟಿದ್ದ ಮಂತ್ರವನ್ನು ಜಪಿಸುತ್ತಾ ಕಣ್ಣು ಮುಚ್ಚಿಕೊಂಡು ಕೈಯನ್ನು ಮುಗಿದುಕೊಂಡು ನಿಂತನು. ಆ ಮಂತ್ರಪ್ರಭಾವದಿಂದ ಸಕಲ ದೇವತೆಗಳೂ ಪ್ರತ್ಯಕ್ಷರಾದರು. ಯಾಗದಿಂದ ತಾವು ತೃಪ್ತರಾದೆವೆಂದೂ, ಪಶುವನ್ನು ಕೊಲ್ಲಬಾರದೆಂದೂ ಹೇಳಿದರು. ಅಲ್ಲದೆ, ದೇಶದಲ್ಲಿ ಕ್ಷಾಮವು ಹೋಗಿ ಸುಭಿಕ್ಷವುಂಟಾಗುವಂತೆ ಹರಸಿ ಅಂತರ್ಧಾನವಾದರು. ಆಗ ಜನರು ಆಶ್ಚರ್ಯದಿಂದ ಆ ಬಾಲಕನನ್ನು ಕೊಂಡಾಡಿ ಅವನನ್ನು ಬಿಚ್ಚಿದರು. ಹರಿಶ್ಚಂದ್ರನಾದರೋ ಸಂತೋಷದಿಂದ ಶುನಶ್ಶೇಫನಿಗೆ ಬೇಕಾದ ಐಶ್ವರ್ಯವನ್ನು ಕೊಟ್ಟು ಸತ್ಕರಿಸಿದನು.

ಮೈಸೂರ ಮಕ್ಕಳ ಎದೆಯು.

ಅದ್ಭುತದ ಶಿಲ್ಪಿತನ ಕಛಿವ್ಯದ್ಧಿಯಿತ್ತಂಥ
ಭೂಪ**ಗಂಗರ**ಭವ್ಯ ಮನೆನಮ್ಮದು !
ಕಪ್ಪಣದಕಡ್ಡಿಯೊಂ ದೇಕಡಿತದಲಿ ಹುಲಿಯ
ಹೊಯ್ದ **ಹೊಯ್ಸಳನ** ಹಿರಿಎದೆ ನಮ್ಮದು !
ಪರಗಳ್ಳಿಂ ಬಂದು ಏರರಾಜ್ಯವಕಟ್ಟಿ
ಧರೆಯನಾಳಿದ **ಹಕ್ಕ**ನೆದೆ ನಮ್ಮದು !
ಕ್ರೂರಪಾಳೆಯಗಾರ ನಾರ್ಭಟನನಿರಿದು ಮೈ-
ಸೂರ ರಾಜ್ಯವ ಗೈದ ನೆದೆನಮ್ಮದು !
ಕರ್ನಾಟಕದ ಶಿಲ್ಪಿ ಯೆದೆನನ್ನಮ್ಮದು !
ಕರ್ನಾಟಕದ ಏರರೆದೆ ನಮ್ಮದು !
ಒನ್ನಿರೈ, ಮೈಸೂರ ಮಕ್ಕಳೇ ! ಮುಂದಕ್ಕೆ
ಒನ್ನಿ ! ಹಾಡಿರಿ ! ಜಯವ್ರ ನಾಡಿಗಕ್ಕೆ !
ದೈವ ಭಕ್ತಿಯ ಬಲದಿ ನಾ ವಿಷವನಮೃತದೊಲು
ಸೇವಿಸಿದ **ರಾಜೊಡೆಯ** ರೆದೆ ನಮ್ಮದು !
ಜಕೆದವನ ಗರುವವನು ಮುರಿದ ಮೈಸೂರರಸ
ಕಂಠೀರವರ ಕಿಚ್ಚೆದೆ ನಮ್ಮದು !
ದುಷ್ಟಜನಗಳವುಟ್ಟಿ ಶಿಷ್ಟರಾಜ್ಯವಕಟ್ಟಿ-
ದಂಥ **ಚಿಕ್ಕದೇವ**ರೆನೆಯಮೆ ನಮ್ಮದು !
ಯುಕ್ತಿಯಲಿ ಸುಹಂಕಾಷ್ಟ್ರ ಶಕ್ತಿಯನುಗೆಲ್ದಂಥ
ಏರ **ದೊಡ್ಡಯ್ಯ**ನೆದೆ ಯೆದೆನಮ್ಮದು !
ಏರಾದಿ ಏರರೆದೆಗಳು ನಮ್ಮವು !
ಚಾರುತರ ಕವಿಗಳೆದೆಗಳು ನಮ್ಮವು !
ಒನ್ನಿರೈ, ಮೈಸೂರ ಮಕ್ಕಳೇ ! ಮುಂದಕ್ಕೆ
ಒನ್ನಿ ! ಹಾಡಿರಿ ! ಜಯವ್ರ ನಾಡಿಗಕ್ಕೆ !
ಬಡತನದೆ ಬೆಳೆದರೂ ಹಿಡಿದಕಾರ್ಯವಗೆಲ್ದ
ಪೊಡವೀಶ **ಹೈದರನ** ಎದೆ ನಮ್ಮದು !
ಗಡಗಟ್ಟಿ ರಿವುಗಳೆದೆ ಯೊಡೆಪಂತೆ ಗರ್ಜಿಸಿದ
ಮೈಸೂರ ಹುಲಿ **ಟೀಪು**ವೆದೆ ನಮ್ಮದು !
ನಾಡಿನ ಕ್ಲೇಶವೇ ನಮ್ಮಕ್ಲೇಶ ವೆನುತ್ತೆ
ರಾಜ್ಯವಾಳಿದ **ಕೃಷ್ಣ**ರೆದೆ ನಮ್ಮದು !
ಬಂಕಕ್ಕೆ ಮೈಸೂರ ಪ್ರಜಾಸ್ಥಿತಿಯನೆ ತೋರ್ದ
ಶ್ರೀ **ಚಾಮನೃಪ**ರ ನೆ ಒದೆ ನಮ್ಮದು !
ನಮ್ಮೆಲ್ಲರೊಡೆಯನು ನಮ್ಮನಾಡೀಶ್ವರನು
ನಾಲ್ವಡಿಯ ಶ್ರೀಕೃಷ್ಣರೆದೆ ನಮ್ಮದು !
ಒನ್ನಿರೈ ! ಮೈಸೂರ ಮಕ್ಕಳೇ ! ಮುಂದಕ್ಕೆ
ಒನ್ನಿ ! ಹಾಡಿರಿ ! ಜಯವು ನಾಡಿಗಕ್ಕೆ !

ಮು. ವೆಂಕಟಕೃಷ್ಣಪ್ಪ, ಬಾಗೇವಲ್ಲಿ.

[ದೇಶಾಭಿಮಾನವನ್ನು ಕೊಡುವಂತಹ ಪದ್ಯಗಳು ನಮ್ಮಲ್ಲಿ ತೀರ ಕಡಿಮೆ. ಮು|| ವೆಂಕಟಕೃಷ್ಣಪ್ಪನವರು ಈ ಪದ್ಯವನ್ನು ಬರೆದು ಮುಂದಿನ ಜನಾಂಗದವರನ್ನು ತಮ್ಮ ಋಣಿಗಳನ್ನಾಗಿ ಮಾಡಿಕೊಂಡಿರುತ್ತಾರೆ. ಇದನ್ನು ಮೊದಲನೆಯ ಸಲ ಓದಿದಾಗ " Hearts of oak " ಎಂಬ ಇಂಗ್ಲೀಷಿನ ಪದ್ಯವು ಜ್ಞಾಪಕಕ್ಕೆ ಬಂದಿತು. ಇಂತಹ ಇತರ ಪದ್ಯಗಳನ್ನು ಬರೆದು ನಮ್ಮಲ್ಲಿಗೆ ಆಗಾಗ್ಗೆ ಕಳಿಸುತ್ತಾರೆಂದು ನಂಬುತ್ತೇವೆ. ಅಂಥ ಪದ್ಯಗಳಿಗೆ ನಮ್ಮಲ್ಲಿ ಯಾವಾಗಲೂ ಸ್ಥಳಸಂಕೋಚವಿರುವುದಿಲ್ಲ. ಸಂ, ಮೈ, ಮು.]

ಲೇ! ಸೌಟ್‌ಗೋಳ್ನ ನೋಡಾಕೋಗ್ತಿನ್ನಿ, ಬರ್ತೀಯೇನ್ಲಾ!! ಹುಂ!!!

[" ಅಬ್ಬಬ್ಬಾ ನಮ್ಮಪ್ಪ " ಎಂಬಂತೆ ಎಂಬಂತೆ.]

ಬಾರೆಲೇ ಬೀರಣ್ಣ ' ಸೌಟುಗೋಳು ಬಂದವ್ರೆ '
ಡೇರಗೀರ ಹಾಕವ್ರೆ (ಸರ್ಕೀಬೈಲ್) ಬಂಗ್ಲಿಮುಂದೆ ||ಪ||

ಮ್ಯಾಗಳಮನೇ ಮೂಗಣ್ಣ | ತ್ಯಾಗದಕಟ್ಟೆ ತಿಮ್ಮಣ್ಣ |
ಶ್ಯಾಗಲೀ ಏಗೋಳಮನಿ ' ಹೈಕಳ್ನ ಕರ್ಕೊಂಡು ||೧||

ಅಲ್ಲೀಗೆ ಹೋದಮ್ಯಾಲೆ ' ಗಲಾಟೆಮಾಡೀರಿ |
ಯಲ್ಲಾರು ಸೇರ್ಕೊಂಡು ' ನಲ್ಲೀಯ ಮುರದ್ದಾರು ||೨||

ದಂಬೂಕ ಬಂದೂಕ ತಂದವ್ರೆ ದಾರಿದಾರಿ ನೋಡುತಾರೆ '
ಕೆಂಬೂತ ಬೆಳವನ್ನ ' ಕಕ್ಕಾಬಿಕ್ಕಿ ಮಾಡ್ತಾರೆ ||೩||

ದಿಸ್ಸು ಬುಸ್ಸು ಹಾಕವ್ರೆ ದೊಣ್ಣೇಯ ಹಿಡಿದವ್ರೆ |
ಪುರ್ಸತ್ತಿಲ್ಲಾದ್ಹಂಗೆ ಕಸರತ್ತು ಮಾಡುತಾರೆ ||೪||

ಸೌಟ್ಗಳೆಲ್ಲಾ ಸುತ್ಕೊಂಡು ಸಂಗೀತ ಹಾಡ್ಕೊಂಡು '
ಬೌಟಾದ ಮುಂದೆ ನಿಂತು ಬೌಟರ್ನು ಆಸ್ತುತಾರೆ ||೫||

ಏನ್ಕೇಳ್ತೆ ಏನ್ಕೇಳ್ಬೆ ಅವರ್ತಾವೊ ಸ್ನಾಣಾವ |
ತಿನ್ನಿ ಮುನ್ನಿಹೊಳೆ ಮುಳ್ಗಿ ಮೂಕಿಡ್ಕೊಂಡೇಳ್ತಾರೆ ||೬||

(ನರಸಿಮ್ಮಾಚಾರರಂತೆ ಸೊರಬಾದ) ಮೇಟ್ರಂತೆ |
ವರಸೀವಮಾತುಗಳಿಂದ ಬಲ್ತುಮಾಸಿ ಮಾಡ್ತಾರಂತೆ ||೭||

ಸಾಂಕ್ಯಾಲ ಆಗುತ್ಲು ಸಂಜೆಊಟ ಮಾಡ್ಕೊಂಡು |
ಬೆಂಕ್ಯಾವುಂದೆ ಕೂತ್ಕೊಂಡು ಬಲ್ತುಮಾಸಿ ಮಾಡುತಾರೆ ||೮||

ಸಂತೋಸದಿಂದವರು ಏನೇನೊ ಆಟವಾಡಿ |
ಕಂತಂಗೆ ನಿಂತಂಗೆ ತಪ್ಪೀರು ತೆಗೆಯುತಾರೆ ||೯||

ಸಿಳ್ಳೇಯ ಹಾಕ್ತಾರಂತೆ ಕಳ್ಳರ್ನ ಹಿಡೀತಾರಂತೆ |
ಹಳ್ಳೀಗೌಡ್ನ ಕಂಡ್ರೆ ಬಲ್ಚಿರೂತಿ ಮಾಡ್ತಾರಂತೆ ||೧೦||

ಡಿ. ಗಿಡ್ಡಬಸಪ್ಪ.

ಕಬ್‌ಗಳು ಕಲಿಯಬೇಕಾದುದು.

ಆರೋಗ್ಯ.

ನಿನ್ನ ಉಗುರುಗಳು.

ನೀನು ಆಡುವಾಗಲೂ, ಕೆಲಸಮಾಡುವಾಗಲೂ, ನಿನ್ನ ಉಗುರುಗಳಲ್ಲಿ ಕಶ್ಮಲವು ಸೇರುತ್ತದೆ. ನಿನ್ನ ಕೈಗಳನ್ನು ತೊಳೆಯುವುದರಿಂದಲೂ ಆಗಾಗ್ಗೆ ನಿನ್ನ ಉಗುರುಗಳನ್ನು ಕತ್ತರಿಸುವುದರಿಂದಲೂ ಆ ಕಶ್ಮಲವನ್ನು ತೆಗೆದುಹಾಕುತ್ತಿರಬಹುದು.

ಆ ಕಶ್ಮಲದಲ್ಲಿ ನಿನ್ನ ಕಣ್ಣಿಗೆ ಕಾಣದಂತಹ ಸಾವಿರಾರು ಕ್ರಿಮಿಗಳಿವೆ. ಅವುಗಳು ನಿನ್ನ ಆಹಾರದೊಡನೆ ಹೊಟ್ಟೆಗೆ ಹೋಗಿ ನಿನ್ನನ್ನು ರೋಗಿಷ್ಟನನ್ನಾಗಿ ಮಾಡುವುವು.

ಆದರೆ ಉಗುರುಗಳನ್ನು ತೆಗೆಯಬೇಕೆಂದು ಹಲ್ಲಿನಿಂದ ಕಡಿಯಬೇಡ!

ನಿನ್ನ ಹಲ್ಲುಗಳು.

ನೀನು ತಿನ್ನುವ ಆಹಾರವು, ನಿನ್ನ ದೇಹಕ್ಕೆ ಬಲವುಂಟಾಗಲೆಂದು ಆ ಆಹಾರವು ನಿನ್ನ ದೇಹದಲ್ಲಿ ಚೆನ್ನಾಗಿ ಜೀರ್ಣವಾಗಿ ರಕ್ತವನ್ನು ಹೆಚ್ಚಿಸುತ್ತದೆ. ಅಂದರೆ ಆಹಾರವು ಜೀರ್ಣವಾಗಬೇಕಾದುದು ಮುಖ್ಯವಾದುದು. ಅದಕ್ಕೆ ಎರವಾಗತಕ್ಕವುಗಳಲ್ಲಿ ನಿನ್ನ ಹಲ್ಲುಗಳು ಮೊದಲನೆಯವು. ನಿನ್ನ ಹಲ್ಲುಗಳು ಸರಿಯಾಗಿ ಕೆಲಸಮಾಡಿದಲ್ಲದೆ ನೀನು ತಿನ್ನುವ ಆಹಾರವು ಜೀರ್ಣವಾಗಲಾರದು. ಹಲ್ಲುಗಳು ಗಟ್ಟಿಯಾಗಿರಬೇಕು. ನಿನ್ನ ಹಲ್ಲುಗಳು ಸದಾಕಾಲದಲ್ಲಿಯೂ ಶುಭ್ರವಾಗಿರಬೇಕು. ಹಾಗಿದ್ದರೆ ತಾನೇ ನಿನ್ನ ಹಲ್ಲುಗಳು ಗಟ್ಟಿಯಾಗಿರುತ್ತವೆ. ಹಲ್ಲುಗಳು ಶುಭ್ರವಿಲ್ಲದೆ ಕಶ್ಮಲವುಳ್ಳವುಗಳಾಗಿದ್ದರೆ, ಹಲ್ಲುನೋವುಂಟಾಗುತ್ತದೆ. ನಮ್ಮ ಪೂರ್ವಿಕರು ಬೇವಿನ ಕಡ್ಡಿಯನ್ನು ಹಲ್ಲುಜ್ಜುವುದಕ್ಕೆಂದು ಉಪಯೋಗಿಸುತ್ತಿದ್ದರು. ಅದರಿಂದ ಅವರ ಹಲ್ಲುಗಳು ಬಿಗಿಯಾಗಿರುತ್ತಿದ್ದವು. ನೀವುಗಳೂ ಅದೇರೀತಿಯೇ ಮಾಡುತ್ತೀರೆಂದು ತಿಳಿಯುತ್ತೇನೆ

ನಿನ್ನ ಪಾದಗಳು.

ನಿನ್ನ ಪಾದಗಳನ್ನು ಯಾವಾಗಲೂ (ಆಗಿಂದಾಗ್ಗೆ) ಶುಚಿಯಾಗುಟ್ಟಿಕೊಂಡಿರಬೇಕು. ಕಾಲಿಗೆ ಮಟ್ಟುಗಳನ್ನು ಧರಿಸುವುದು ಒಳ್ಳೆಯದು ಏಕಂದರೆ ಧೂಳಿನಲ್ಲಿರುವ ಕ್ರಿಮಿಗಳು ನಿನ್ನ ದೇಹದಲ್ಲಿ ಸೇರಲಾರವು ಮುಟ್ಟುಗಳನ್ನಾಗಲಿ, ಬೂಟುಗಳನ್ನು ಹಾಕಿಕೊಂಡಾಗ ಮೊಳೆಗಳು ಎದ್ದರೆ ಅದನ್ನು ಹುಷಾರಾಗಿ ಒಡೆದುಬಿಡಬೇಡ. ಒಂದು ಸೂಜಿಯನ್ನು ಬೆಂಕಿಯಲ್ಲಿ ಕಾಸಿ (ಇದರಿಂದ ಕ್ರಿಮಿಗಳು ಸತ್ತುಹೋಗುತ್ತವೆ) ಆ ಹೂಪ್ಪಳದಲ್ಲಿ ಸಣ್ಣದಾದ ರಂಧ್ರವನ್ನು ಮಾಡಿ ನೀರನ್ನು ಹೊರಗೆ ತಗೆ

ಹೊಪ್ಪಳವು ಸಿಕ್ಕಬೇಕಾದರೆ ನಿನ್ನ ಪಾದಕ್ಕೆ ಮೆಟ್ಟು ಒಹಳ ಬಿಗಿಯಾಗಿದೆ ಎಂದು ತಿಳಿ.

ಕಬ್‌ಗಳೊಡನೆ ನಮ್ಮದೊಂದು ಹರಟೆ.

ಹಿಂದೆ ಹೇಳಿದಂತೆ ನೀನು ಬಲಿಷ್ಟನಾಗಿರಬೇಕಾದರೆ ನಿನ್ನ ದೇಹಕ್ಕೆ ರಕ್ತಪುಷ್ಟಿಯಿರಬೇಕು. ಅದಕ್ಕೆ ಸರಿಯಾದ ಆಹಾರವಿರಬೇಕು ಹೊಟ್ಟೆಯಲ್ಲಿರುವ ಕಶ್ಮಲಗಳನ್ನು ಆಗಿಂದಾಗ್ಗೆ ತೆಗೆದುಹಾಕಬೇಕು. ಸದಾಕಾಲದಲ್ಲಿಯೂ ಶುಚಿಯಾದ ಗಾಳಿಯನ್ನು ಸೇವಿಸು ಮೂಗಿನಿಂದಲೇ ಉಸಿರುಬಿಡುವುದನ್ನು ಮರೆಯಬೇಡ. ವ್ಯಾಯಾಮವನ್ನು ಮಾಡುತ್ತಲೇ ಇರಬೇಕು. ಅದಕ್ಕೆ ತಕ್ಕ ಆಟಗಳನ್ನು ಹಿರಿಯಣ್ಣನೇ ಹೇಳಿಕೊಡುತ್ತಾನೆ.

ಚಂಡಿ ಹುಡುಗರು— ಒಳ್ಳೆ ಹುಡುಗರು.

ನಮ್ಮಲ್ಲಿ ಎರಡು ತರಹ ಹುಡುಗರಿರುತ್ತಾರೆ. ಚೆಂಡಿ ಹುಡುಗರೆಂದರೆ, ಊಟಕ್ಕೆನೂತ್ರ ಹಾಜರಿದ್ದು—ಕೆಲಸಕ್ಕೆ ಪಾಲುಮಾರಿಕೆಯುಳ್ಳವರು. ಒಳ್ಳೆಯ ಹುಡುಗರು ಕೆಲಸಕ್ಕೂ ಊಟಕ್ಕೂ ಸದಾಕಾಲದಲ್ಲಿಯೂ ಹಾಜರಿರುವವರು.

ಕಬ್‌ಗಳು ಈ ಎರಡನೆ ಗುಂಪಿನವರೇ ಆಗಿರಬೇಕು. ಚಂಡಿಹಿಡಿಯುವ ಬಾಲಕರು ಸದಾಕಾಲದಲ್ಲಿಯೂ ಗಲಾಟೆಯನ್ನು ಮಾಡುತ್ತಾ ಇತರರನ್ನು ಪೀಡಿಸುತ್ತಾರೆ. ಎಲ್ಲೆಲ್ಲಿಯೂ ಓಡಾಡುತ್ತಾ "ಫೋಲಿ" ಗಳೆನಿಸುಕೊಳ್ಳುತ್ತಾರೆ. ಎಲ್ಲೆಲ್ಲಿಯೂ ಕಸಗಳನ್ನು ಹಾಕುತ್ತಾ ಮೂಡರಂತಿರುತ್ತಾರೆ.

ಒಳ್ಳೆ ಹುಡುಗರು ಸದಾಕಾಲದಲ್ಲಿಯೂ ಅಮ್ಮನಿಗೆ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಾರೆ. ಇತರರಿಗೂ ಸಹಾಯವಾಡುತ್ತಾರೆ. ಮನೆಕೆಲಸದ ಸಣ್ಣ ಕೆಲಸಗಳೆಲ್ಲವೂ ಇವರು ತಿಳಿದಿರುತ್ತಾರೆ. ನೀವುಗಳು ಈ ಗುಂಪಿಗೆ ಸೇರಬೇಕೆಂದಿದ್ದರೆ ಒಲೆಯನ್ನು ಹೊತ್ತಿಡುವುದು, ಸಮಯಒಂದಾಗ ಒಂದೆರಡು ಲೋಟ ಗಂಜಿ, ಕಾಫಿ, ಟೀ, ಮುಂತಾದವುಗಳನ್ನು ಮಾಡುವುದನ್ನು ಕಲಿಯುವುದು, ಬೆಂಕಿಯಿಂದ ಸುಟ್ಟಗಾಯಗಳನ್ನು ಉಪಚರಿಸುವುದು; ಬಟ್ಟೆಗಳನ್ನು ಮಡಿಸುವುದು, ಒಗೆಯುವುದು, ಮನೆಯನ್ನು ಚೊಕ್ಕಟವಾಗಿಡುವುದು, ಗಂಟೆಯನ್ನು ತಿಳಿದು ಹೇಳುವುದು, ದಿಕ್ಕುಗಳನ್ನು ತಿಳಿಯುವುದು, ಸಣ್ಣ ಪುಟ್ಟ ವ್ಯಾಪಾರವನ್ನು ಮಾಡಿಕೊಂಡು ಬರುವುದು ಇತ್ಯಾದಿ.

ಚೈನಾದೇಶದ ಸ್ಕೌಟುಗಳು ಕ್ಯಾಂಪಿನಲ್ಲಿರುವುದು,

ಆಟದ ಬೈಲು.

೨೧. ಚೆಂಡನ್ನುರುಳಿಸುವ ಆಟ.

ಗುಂಪಿನವರೆಲ್ಲರೂ ಸುತ್ತಲೂ ಕೈಗಳನ್ನು ಹಿಡಿದು ನಿಲ್ಲಬೇಕು. ಮಧ್ಯದಲ್ಲಿ ದೊಡ್ಡದೊಂದು ಚೆಂಡಿರುತ್ತದೆ. ಬಾಲಕರೆಲ್ಲರೂ ಸೇರಿ ಒಬ್ಬನನ್ನು ಆ ಚಂಡಿನಕಡೆಗೆ ಎಳೆಯುತ್ತಾರೆ. ಅವನು ಆ ಚೆಂಡಿನ ಮೇಲೆ ಹಾರಬೇಕು. ಹಾರುವಾಗ ಚೆಂಡನ್ನುರಿಳಿಸಿದರೆ ಅವನು ಗುಂಪಿನಿಂದ ಹೊರಕ್ಕೆ ಹೋಗಬೇಕಾಗುತ್ತದೆ. ಹೀಗೆ ಗುಂಪಿನಿಂದ ಬಬ್ಬೊಬ್ಬರು ಕಮ್ಮಿಯಾದಹಾಗೆಲ್ಲಾ ಆಟವು ತೀಕ್ಷ್ಣವಾಗುತ್ತಿರುತ್ತದೆ. ಕಡೆಗೆ ಇಬ್ಬರು ಉಳಿಯುವರು. ಇವರಿಬ್ಬರಲ್ಲಿ ಒಬ್ಬನು ಆ ಚೆಂಡುನ್ನುರಿಳಿಸಿದನೆಂದರೆ ಉಳಿದವನೇ ಗೆದ್ದಂತೆ.

೨೨. ಪಹರೆಯವನ ಆಟ.

ಆರಾರು ಜನರಂತೆ ಎರಡು ಗುಂಪುಗಳಿವೆ. ಒಂದು ಗುಂಪಿನವರು ಕೆಂಪುವಸ್ತ್ರಗಳನ್ನು ಜೇಬಿನಲ್ಲಿ ಸಿಗಿಸಿಕೊಂಡಿರುತ್ತಾರೆ. ಮತ್ತೊಂದು ಗುಂಪಿನವರು ನೀಲಿಯವಸ್ತ್ರಗಳನ್ನು ಇಟ್ಟುಕೊಂಡಿರುತ್ತಾರೆ. ಎಲ್ಲರಿಗೂ ಕಾಣುವಂತಿರುವ ಸ್ಥಳದಲ್ಲಿ ಕೆಂಪುಗುಂಪಿನ ಒಬ್ಬನು ಪಹರೆಕೊಡುತ್ತಿರುತ್ತಾನೆ. ಕೆಂಪುಗುಂಪಿನ ಇತರರು ಮುಚ್ಚಿಟ್ಟುಕೊಂಡಿರುತ್ತಾ; ಇವನನ್ನು ನೋಡಬೇಕೆಂದು ಸದ್ದಿಲ್ಲದೇ ಬರುತ್ತಿರುವ ನೀಲಿಯ ಗುಂಪಿನವರಲ್ಲಿದ್ದ ವಸ್ತ್ರಗಳನ್ನು ತೆಗೆದುಕೊಂಡು ಅವರನ್ನು "ಕೊಲ್ಲ" ಬೇಕೆಂದು ಎಣಿಸುತ್ತಿರುವರು. "ಸತ್ತವನು" ಹಿರಿಯಣ್ಣನ ಬಳಿಹೊರಟು ಹೋಗಬೇಕು. ಪಹರೆಯವನ ಎದೆಯಮೇಲೆ ಒಂದು ರಟ್ಟಿರುತ್ತದೆ. ಅದರಮೇಲೆ ಒಂದು ಸಂಜ್ಞೆಯು ಇರುತ್ತದೆ. ಇಂತಹ ಆರು ರಟ್ಟುಗಳು ಅವನಲ್ಲಿರುತ್ತದೆ. ಒಂದು ಸಂಜ್ಞೆಯ ರಟ್ಟು ಹತ್ತುಸಲ ತಿರಗುವವರಿಗೆ ಇರಬೇಕು. ನಂತರ ಬೇರೊಂದನ್ನು ಹಾಕಿಕೊಳ್ಳಬೇಕು. ಹೀಗೆ ಆರು ರಟ್ಟುಗಳನ್ನೂ ಉಪಯೋಗಿಸಿದನಂತರ ಅವನು ಹಿರಿಯಣ್ಣನ ಹತ್ತಿರ ಹೋಗಬೇಕು. ಈ ಮಧ್ಯೆ ಅವನ ಶತ್ರುಗಳು ಅವನ ಎದೆಯಮೇಲಿರುವ ಸಂಜ್ಞೆಗಳನ್ನೆಲ್ಲಾ ಗುರ್ತು ಹಚ್ಚಿಕೊಂಡಿರತ್ತಾರೆ. ಆ ಸಂದರ್ಭದಲ್ಲಿಯೇ ಇವನ ಕಡೆಯವರು ಅವರನ್ನು "ಕೊಂದು" ಸಂಜ್ಞೆಯನ್ನು ಒರೆದುಕೊಳ್ಳದಂತೆ ಮಾಡಬೇಕು. ನಂತರ ನೀಲಿಯವರು ಪಹರೆಮಾಡಬೇಕು. ಕೆಂಪಿನವರು ಆ ಸಂಜ್ಞೆಗಳನ್ನು ತಿಳಿಯಲು ಪ್ರಯತ್ನಪಡಬೇಕು. ಎಲ್ಲವೂ ಹಿಂದಿನಂತೆಯೇ ನಡೆಯುತ್ತದೆ. ಆಟವು ಮುಗಿಯೆಂದರೆ ಹಿರಿಯಣ್ಣನು ಪ್ರತಿ ಒಂದು ಗುಂಪಿನಲ್ಲಿ ಸತ್ತವರೆಷ್ಟು? ಎಷ್ಟು ಸಂಜ್ಞೆಗಳು ಸರಿಯಾಗಿವೆ ಎಂಬುದನ್ನು ನೋಡಿ ಗೆದ್ದವರ್ಯಾರೆಂದು ಹೇಳುತ್ತಾನೆ.

ಕೆಳಗೆ ಕಂಡ ಸಂಜ್ಞೆಗಳಂಥವುಗಳನ್ನು ಉಪಯೋಗಿಸಬಹುದು.

ಕೆಂಪಿನವರ ಸಂಜ್ಞೆಗಳು.—+, Z, M, V, =, E.

ನೀಲಿಯವರ ,, A, ⊡, X, K, L, T.

ಹಿಂದಿನ ತಿಂಗಳ ಒಗಟುಗಳಿಗೆ ಉತ್ತರ.

೧. ಜೇಳು.
೨. ಜಗಲಿ.
೩. ಬಲೆ.
೪. ತೆಂಗಿನಕಾಯಿ.
೫. ಮೇಣದಬತ್ತಿ.
೬. ಏಣಿ.
೭. ಹುಣಸೇಗೋಟು.
೮. ಅಂಗಿ.
೯. ಹಸರುಹಾವನ್ನು ಯಾರೂ ಹಿಡಿಯಲಾರರು. ಕೆಂಡವನ್ನು ಯಾರೂ ಮುಡಿಯಲಾರರು. ರಕ್ತವನ್ನು ಯಾರೂ ಕುಡಿಯರು.
೧೦. ನವಿಲು.
೧೧. ಕಾವಲಿ, ದೋಸೆ.

ಉತ್ತರಗಳನ್ನು ಕಳುಹಿಸಿದವರು:—

೧. ಕಬ್, ಕೆ. ಆರ್. ವಿದ್ಯಾಶಂಕರ, ಮೈಸೂರು.
೨. ಕಬ್, ಎ. ಎಸ್. ಶಿವಮೂರ್ತಿ, ಚಿಕ್ಕಿಎಸ್ಟೇಟ್.

ಇದು ಏನು? ಇವರಾರು?

(1) ಭೂತೇಶನೊರದಿಂದ ಪುಟ್ಟಿದವನ ಪೆಸರೇನು?
(2) ತಲೆ ನಾಲ್ಕುಳ್ಳವನ ತಮ್ಮನಾರು?
(3) ಪುಷ್ಪಸಾರಗಳಿಂದ ಪುಟ್ಟಿದಾ ರಸವೇನು?
(4) ಶಂಭುಕೃಷ್ಣಿಗೆ ಕೊಟ್ಟ ಶರವದೇನು?
(5) ಕಣ್ಣುಸಾಸಿರ ಉಳ್ಳವನ ಕಂದನ ಸತಿಯಾರು?
(6) ತಿಥಿನಾಲ್ಕನೆಯ ದೇವನಾರು?
(7) ಇಬ್ಬನಿಯ ಗರ್ಭದಲಿ ಇದ್ದವಳ ಪೆಸರೇನು?
(8) ಆಕೆಯಾ ಪತಿಯಾದ ಅತನಾರು?

ವಿನೋದತರಂಗಿಣಿ.

(ನಗುವ ಕಂದನಿಂದ.)

ಸುಬ್ಬು.—ಕಡೆಗೂ ಕಾಲಿಟ್ಟೇ ಇಟ್ಟಿಯಲ್ಲಪ್ಪಾ. ಸಾಸು ಆಗಲೇ ಹೇಳಲಿಲ್ಲವೇ ನೀನು ಇಡುತ್ತೀಯೆಂತ.

ರಾಮು.—ಕಾಲಿಟ್ಟೇ! ಏನೋ ಹೀಗಂತಿ! ನಾನೆಲ್ಲೋ ಕಾಲಿಟ್ಟೇ?

ಸುಬ್ಬು.—ಎಲ್ಲೇ! ನಿನ್ನ ಬೂಟ್ಸಿನಲ್ಲಿ

ಉಪಾಧ್ಯಾಯ.—೭೦೦ ವರ್ಷಗಳ ಹಿಂದೆ ಏನಾಯಿತು?

ಶಿಷ್ಯ.—ನನಗೆ ಹೇಗೆ ಗೊತ್ತಿರಬೇಕು ಸಾರ್ ನನಗಿನ್ನೂ ಏಳೇ ವರ್ಷ.

ನ್ಯಾಯಾಧೀಶ.—ನೀನು ನನ್ನ ಮುಂದೆ ಬಂದು ನಿಂತಿರುವುದು ಇದು ಇಪ್ಪತ್ತನೆಯ ಸಲ. ಇತಃಪರ ನಾನು ನಿನ್ನ ಮುಖವನ್ನು ಖಂಡಿತವಾಗಿ ನೋಡುವುದಿಲ್ಲ.

ತಪ್ಪಿತಸ್ಥ:—ಮಹಾಸ್ವಾಮಿ, ಹಾಗಾದರೆ ತಮಗೇನು ವಿಶ್ರಾಂತಿಯ ಕಾಲವು ಸಮಿಾಪಿಸಿದೆಯೋ!

ಮೈಸೂರು ಸ್ಕೌಟ್

ರ್ಯಾಲಿಗಳು.

"ಚಿಕ್ಕದೊಂದು ರ್ಯಾಲಿ ಮಾಡ್ಸೀ ಸಾರ್. ಎರಡು ಟನ್ ದೂದ್‌ಫೇಡ ಇಲ್ಲಿದ್ರೆ ಒಂದೇ ಟ್ಟ ಸಾಳು ಸಾರ್." ಗುಂಡೂ.

* * * *

ರ್ಯಾಲಿಗಳು ಎಲ್ಲೆಲ್ಲಿಯೂ ನಡೆಯುತ್ತಿವೆಯಷ್ಟೆ. ಸ್ಕೌಟುದಳ ವಿದ್ದೆಡೆಯಲ್ಲೆಲ್ಲ ರ್ಯಾಲಿ ಆಗುವುದು ಉಂಟೇ ಉಂಟು. ರ್ಯಾಲಿ ಎಂದರೆ ಒಟ್ಟು ಸೇರುವುದು ಎಂದೊಂದು ಅರ್ಥವಾಗುತ್ತದೆ. ಅಂದರೆ ಆ ಸಮಯದಲ್ಲಿ ಸ್ಕೌಟುಗಳೆಲ್ಲಾ ಒಟ್ಟು ಸೇರುತ್ತಾರೆ. ಅಂತಹದೊಂದು ಸಮಾರಂಭಕ್ಕೆ ರ್ಯಾಲಿ ಎಂತ ಕರೆಯುತ್ತಾರೆ.

* * * *

ಕೆಲವು ಸ್ಥಳಗಳಲ್ಲಿ ನೋಡಿದ್ದೇನೆ. ರ್ಯಾಲಿ ಎಂತ ಜನ ಸೇರುತ್ತಾರೆ. ನೋಡುವುದಕ್ಕೆ ಬಂದಿರುವವರಿಗಿಂತ ಸ್ಕೌಟುಗಳೇ ಹೆಚ್ಚಿರುತ್ತಾರೆ. ಆದರೂ ಗಲಾಟೆ ಏನೂ ಕಡಿಮೆ ಇರುವುದಿಲ್ಲ. ಸ್ಕೌಟಾದ ಮಾತ್ರಕ್ಕೆ ಮನುಷ್ಯನಲ್ಲವೆ ?

* * *

ಮೊನ್ನೆ ಒಂದೂರಿನಲ್ಲಿ ರ್ಯಾಲಿ ಆಯಿತು. ನನಗೂ ಬರಬೇಕೆಂದು ಒರೆದಿದ್ದರು. ಹೋಗಿದ್ದೆ ರ್ಯಾಲಿ ಎಂದರೆ ಸಾಧಾರಣದಿನಕ್ಕಿಂತಲೂ ಉತ್ಸಾಹದಿಂದಲೂ ಗಾಂಭೀರ್ಯದಿಂದಲೂ ಸ್ಕೌಟುಗಳು ಒಂದಿರುತ್ತಾರೆಂತ ಇದ್ದೆ. ಆ ಊರಿನ ಸ್ಕೌಟು ಚಳುವಳಿಯ ಬೆಳವಣಿಗೆಗೆ ಅಂದು ಒರೆಹಚ್ಚುವರೆಂದು ಭಾವಿಸಿದ್ದೆ. ಆ ಚಳುವಳಿಯ ಉತ್ಕೃಷ್ಟಾಂಶಗಳೇ ನಾದರೂ ಇದ್ದರೆ ಪ್ರೇಕ್ಷಕರಿಗೆ ಅದು ಮನಸ್ಸಿಗೆ ಹಿಡಿಯುವಂತೆ ದೃಶ್ಯಗಳನ್ನೇರ್ಪಾಡುಮಾಡುತ್ತಾರೆಂದು ನಂಬಿದ್ದೆ. ಆದರೆ ಅದೆಲ್ಲಾ ಸುಳ್ಳಾಯಿತು. ನನಗೆ ಸಂಪೂರ್ಣ ಆಶಾಭಂಗವಾಯಿತು.

* * * *

ರಂಗಸ್ಥಳದಲ್ಲಿ ಸಾಕ್ಷಾತ್ ಮೈಸೂರು ಧ್ವಜವನ್ನು ನೆಟ್ಟಿದ್ದಾರೆ. ಊರಿನ ಅಗ್ರಗಣ್ಯರಲ್ಲೊಬ್ಬರು ಅಂದು ಅಗ್ರಾಸನಾಧಿಪತಿಗಳಾಗಿದ್ದಾರೆ. ಊರಿನವರು ಅನೇಕರು ತಮ್ಮ ಎಳೆಯರು ಎಷ್ಟು ಮುಂದುವರಿದಿರುವರೆಂದು ನೋಡುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ಯಾವನೊಬ್ಬ ಸ್ಕೌಟಾದರೂ (ಅವನು ಸ್ಕೌಟುಮಾಸ್ಟರೇ ಆಗಿರಲಿ, ಕಮ್ಮಿಷನರೇ ಆಗಿರಲಿ) ಸಭ್ಯರೀತಿಯಲ್ಲಿ ವರ್ತಿಸದಿದ್ದರೆ ಅದು ಎಷ್ಟು ಘೋರವಾದ ಅಪಮಾನವು !

* * * *

ಹೀಗಿದ್ದರೂ ಅಹೊತ್ತು ಬಂದವರಲ್ಲಿ ನೋಡಬೇಕು—ಅನೇಕರು ಬೊಕ್ಕತಲೆಯಲ್ಲಿ ಬಂದಿದ್ದರು. ಅವರಿಗೆ ತಮ್ಮ ಕೇಶಕೀರ್ತಿಯನ್ನು ಪ್ರಸ್ಫುರಿಸಬೇಕೆಂಬ ಆಶೆಯೇನೋ ! ಕೆಲವರು ಆವರದೇ ಬೇರೆಯಾದ—ಸಮರೂಪವಲ್ಲ—ವಿರೂಪದಲ್ಲಿ ಒಂದಿದ್ದರು. ಪಾಪ ! ಕೆಲವರು ಅಹೊತ್ತೇ ಅಗಸರವನಿಗೆ ಇರುವ ಸಮರೂಪವನ್ನು ಒಗೆಯಲು ಕೊಟ್ಟಿರುತ್ತಾರೆ. ಅಂತೂ ಒಟ್ಟಿನಮೇಲೆ—ಎಲ್ಲವೂ ಸ್ವಲ್ಪ ದೊಂಬಿ.

* * * *

ರ್ಯಾಲಿಯು—ಸ್ಕೌಟು ಯಾವನೋ ಅವನನ್ನು ಪರೀಕ್ಷಿಸುವ ಸಮಯವು. (ಅಂದರೆ ಸ್ಕೌಟು ಯಾವಾಗಲೂ ಅಂತಹ ಪರೀಕ್ಷೆಗೆ ಸಿದ್ಧನಾಗಿಯೇ ಇರುವನು. ರ್ಯಾಲಿಯಲ್ಲಿ ಇನ್ನೂ ಸ್ವಲ್ಪ ಹಾಗೆ) ನಮ್ಮ ಧ್ಯೇಯವು ಮೂರ್ತಿಮತ್ತಾಗಿ ಎದುರಿಗಿರುವಂತಹ ಸಮಯ. ನಮ್ಮ ಭ್ರಾತೃಗಳೂ, ಹಿರಿಯರೂ, ಗುರುಗಳೂ ಎದುರಿಗಿರುವ ಸಮಯ. ಇಂತಹ ಸಮಯದಲ್ಲಿ ನಾವೆಷ್ಟು ಸಭ್ಯರಾಗಿದ್ದಲ್ಲಿ ಅಷ್ಟಷ್ಟೂ ಯೋಗ್ಯವು.

ನಂಗೊತ್ತಿಲ್ಲಾ ! ನಿವ್ವೇಳಿ.

ನಾಯಿ ಕೊಡೆಯನ್ನು ಬಿಸಿಲಿನಲ್ಲಿ ಉಪಯೋಗಿಸಬೇಕೋ,
ಮಳೆಯಲ್ಲಿ ಉಪಯೋಗಿಸಬೇಕೋ !

ವಿದೇಶದಲ್ಲಿನ ಸ್ಕೌಟು ಸಂಗತಿಗಳು.

ಬೇಡ್ ಪವೆಲರವರು.

ಇದೇ ತಿಂಗಳು ೨೨ನೇ ತಾರೀಖಿನ ದಿವಸ ಪ್ರಪಂಚದಲ್ಲೆಲ್ಲಾ ಹರಡಿರುವ ಸ್ಕೌಟು ಸಂಸ್ಥೆಯ ಪ್ರಮುಖನಾದ ಸರ್ ರಾಬರ್ಟ್ ಬೇಡ್ ಪವೆಲರವರ ಮತ್ತು ಅವರ ಪತ್ನಿಯವರ ವರ್ದಂತಿಯು ಅನೇಕ ಕಡೆಗಳಲ್ಲಿ ವಿಜೃಂಭಣೆಯಿಂದ ನಡೆದಿರುತ್ತದೆ. ಹಿಂದಿನವರ್ಷ ಇದೇ ತಿಂಗಳ ಸಂಚಿಕೆಯಲ್ಲಿ ಅವರ ಜೀವನಚರಿತ್ರೆಯನ್ನು ಕೊಟ್ಟಿದ್ದೆವು. ಲಂಡನ್‌ನಲ್ಲಿ ಮೊನ್ನೆ ತಾನೆ ನಡೆದ ವಿದ್ಯಾರ್ಥಿಗಳ ಕೈಕೆಲಸದ ಪ್ರದರ್ಶನದಲ್ಲಿ ಅಪ್ಪಣೆಕೊಟ್ಟ ಅವರ ಭಾಷಣವನ್ನು ಇಲ್ಲಿ ಕೊಟ್ಟಿರುತ್ತೇವೆ.

"ನಿಮ್ಮ ದೇಶವು ಇತರ ದೇಶಗಳ ಹಿಂದೆ ಬೀಳದಂತೆ ನೋಡಿಕೊಳ್ಳುವುದು ನಿಮ್ಮ ಧ್ಯೇಯವಾಗಿರಬೇಕು. ನಿಮ್ಮಲ್ಲಿರುವ ಪಾಲುಮಾರಿಕೆಯನ್ನು ಬಿಡಿ. ಹಾಗೆಮಾಡಿದರೆ ತಾನೆ ಕಷ್ಟತರವಾದ ಇತರ ಕೆಲಸಗಳನ್ನು ಸುಲಭಸಾಧ್ಯವಾಗಿ ಮಾಡಿಕೊಳ್ಳಬಹುದು. ಇಂತಹ ಕೈಕೆಲಸಗಳನ್ನು ಮಾಡುವುದರಿಂದ, ಇತರರನ್ನು ಸಂತೋಷಪಡಿಸುತ್ತೀರೆಂಬುದನ್ನು ತಿಳಿಯಿರಿ. ಆದರೆ ನಿಮ್ಮ ಕೆಲಸವು ಚೆನ್ನಾಗಿರಬೇಕು. ಅಲ್ಲದೆ ಅದರಲ್ಲಿ ನಿಮಗೆ ಶ್ರದ್ಧೆಯು ಇರಬೇಕೆಂಬುದು ಮಾತ್ರ ಮರೆಯಬೇಡಿ. ನೀವುಗಳು ಚಿಕ್ಕವರು. ಚಿಕ್ಕವರ ಯೋಗ್ಯತೆಗೆ ತಕ್ಕಂತೆ ಪ್ರಪಂಚದಲ್ಲಿ ಸುಖವೂ ಶಾಂತಿಯೂ ನೆಲೆಸುವುದಕ್ಕೆ ಪ್ರಯತ್ನಿಸಬೇಕು. ಇಲ್ಲಿರುವ ಅನೇಕ ಕೈಕೆಲಸಗಳನ್ನು ನೋಡಿರುತ್ತೇನೆ. ಅವುಗಳನ್ನು ನೀವುಗಳೂ ನಿಮ್ಮ ಗೆಳೆಯರೂ ಮಾಡಿರುವಿರೆಂಬುದನ್ನು ತಿಳಿದು ಸಂತೋಷಪಡುತ್ತೇನೆ.

"ಅಮೆರಿಕಾದೇಶದಲ್ಲಿ ನಡೆದ ಒಂದು ಪ್ರದರ್ಶನದಲ್ಲಿ ಒಬ್ಬ ಬಾಲಕನು ಒಂದು ಮಾದರಿ ಸೇತುವೆಯನ್ನು ಕಟ್ಟಿದ್ದನು. ಅದನ್ನು ನೋಡಿದ ಅನೇಕ ಇಂಜನಿಯರುಗಳು ಅವನಿಗೆ ಒಂದು ಬಹುಮಾನ ಪದಕವನ್ನು ಕೊಟ್ಟರು. ಇಂಜನಿಯರುಗಳಿಗೆ ತಿಳಿಯದ ಅನೇಕ ವಿಷಯಗಳು ಆ ಸೇತುವೆಯ ಕಟ್ಟಡದಲ್ಲಿ ಕಾಣಬರುತ್ತಿದ್ದುವು.

"ಒಬ್ಬ ಜರ್ಮನಿಯ ಬಾಲಕನು ರಾಗಮಾಲನ್ನು ಕಂಡುಹಿಡಿದನು. ಮೊದಲನೆಯ ರಾಗಮಾಲನ್ನು ಜೋಡಿಸಲು ಪ್ರಯತ್ನಪಡುತ್ತಿದ್ದಾಗ ಅವನ ತಂದೆಯು ಸಿಟ್ಟಾಗಿ ಅವನನ್ನು ಮನೆಯಿಂದ ಓಡಿಸಿದನು. ಆ ಬಾಲಕನು ಅಟ್ಟದ ಮೇಲೆ ಕೂತುಕೊಂಡು ತಂದೆಗೆ ಕಾಣದಂತೆ ಮೊದಲನೆಯ ರಾಗಮಾಲನ್ನು ಜೋಡಿಸಿದನು. ಪ್ರತಿವರ್ಷದಲ್ಲಿಯೂ ಹದಿನೈದುಕೋಟಿ ಅಂತಹ ರಾಗಮಾಲುಗಳು ಪ್ರಪಂಚದ ನಾನಾಕಡೆಗಳಲ್ಲಿ ಮಾರಲ್ಪಡುತ್ತಿವೆ.

"ಆದುದರಿಂದ ಬಾಲಕರಾಗಿರುವ ನೀವುಗಳೂ ಸಹ ಪ್ರಪಂಚಕ್ಕೇ ಅನುಕೂಲವಾಗುವಂತಹ ಅನೇಕ ಕೆಲಸಗಳನ್ನು ಮಾಡಬಹುದು. ನಿಮ್ಮಲ್ಲಿ ಅಂತಹ ಶಕ್ತಿಯು ಅಡಗಿಕೊಂಡಿರುತ್ತದೆ."

ಅಲ್ಬ್ ಹೇಗ್‌ರವರೂ ಸ್ಕೌಟು ಚಳವಳಿಯು.

ಮೊನ್ನೆ ನಡೆದ ಘೋರಯುದ್ಧದಲ್ಲಿ ಇಂಗ್ಲೀಷರ ಮುಖ್ಯ ಸೇನಾಧಿಪತಿಯಾದ ಅಲ್ಬ್ ಹೇಗರವರು ಈಗ್ಗೆ ಕೆಲವು ತಿಂಗಳ ಕೆಳಗೆ ಮೃತರಾದರು. ಅವರು ಸಾಯುವುದಕ್ಕೆ ಕೆಲವು ವಾರಗಳ ಪೂರ್ವದಲ್ಲಿ ಒಂದು ಸ್ಕೌಟು ಪ್ರದರ್ಶನಕ್ಕೆ ಹೋಗಿದ್ದರು. ಆ ಸಂದರ್ಭದಲ್ಲಿ ಸ್ಕೌಟುಗಳಿಂದ ದೇಶಕ್ಕೆ ಎಷ್ಟು ಉಪಕಾರವಾಗಬಹುದೆಂಬುದನ್ನು ನೋಡಿ ತಿಳಿದುಕೊಂಡರು. ತಮ್ಮ ಹೆಸರಿನಲ್ಲಿ ಒಂದು ಸ್ಕೌಟು ಮತ್ತು ಗೈಡ್ (ಹೆಣ್ಣುಹುಡಿಗಿಯರಿಗಾಗಿ) ಗುಂಪನ್ನು ನಡೆಸಬೇಕೆಂದೂ ತಮ್ಮ ಪತ್ನಿಯವರು ಆ ಗುಂಪಿಗೆ ಪೋಷಕರಾಗಿರಬೇಕೆಂದೂ, ತಮ್ಮ ಮಗನೂ, ಮಗಳೂ ಆ ಗುಂಪಿನಲ್ಲಿ ಸ್ಕೌಟು ಮತ್ತು ಗೈಡುಗಳಾಗಬೇಕೆಂದೂ ಅವರ ಅವಸಾನಕಾಲವು ಸಮೀಪಿಸಿದಾಗ ತಮ್ಮ ಉಯಿಲಿನಲ್ಲಿ ಬರೆಸಿದರು. ಸ್ತುತ್ಯ.

ಜಾಂಬೋರಿ.

ಇಂಗ್ಲೆಂಡಿನ ಜಾಂಬೋರಿಯ ಕೆಲಸಗಳು ಬಹಳ ಬೇಗಬೇಗನೆ ಸಾಗುತ್ತಿವೆ. ಇನ್ನೂ ಹೆಚ್ಚು ವರ್ತಮಾನಗಳು ಹೊರಬಿದ್ದಿವೆ. 30,000 ಸಾವಿರ ಬಾಲಕರಿಗಿಂತ ಹೆಚ್ಚು ಜನಗಳಿಗೆ ಸ್ಥಳವಿಲ್ಲ. ಅಂದರೆ 15 ಸಾವಿರ ಬಾಲಕರು ಹೊರಗಿನವರು, 15 ಸಾವಿರ ಬಾಲಕರು ಇಂಗ್ಲೆಂಡಿನವರು ಎಂದು ಎಣಿಸಲ್ಪಟ್ಟಿದೆ. ಅಮೆರಿಕಾದೇಶದಿಂದ ಸಾವಿರಕ್ಕೆ ಕಮ್ಮಿ ಇಲ್ಲದೆ ಬರುವುದಾಗಿ ಊಹಿಸಲ್ಪಟ್ಟಿದೆ. ಅಲ್ಲಿಗೆ ಹೋಗಲು ಶಕ್ತನಾದ ಪ್ರತಿ ಒಬ್ಬ ಸ್ಕೌಟಿಗೂ ಅನುಕೂಲವಾಗಲೆಂದು ಸಂಘ್ಯಗಳನ್ನು ವಜಾ ಮಾಡಲಾಗಿದೆ. ಸ್ಕೌಟು ಗುಂಪುಗಳು ಕ್ಯಾಂಪುಮಾಡುವ ರೀತಿಯಲ್ಲಿಯೇ ಅಲ್ಲಿಯೂ ವರ್ಸಡಿಸಿರುತ್ತಾರೆ. ಕ್ಯಾಂಪಿಗೆ ಸಂಬಂಧಪಟ್ಟ ಎಲ್ಲಾ ಪದಾರ್ಥಗಳನ್ನೂ ಬಾಲಕರೇ ತಂದುಕೊಳ್ಳಬೇಕು. ಅಡಿಗೆಗೆ ಬೇಕಾದ ಆಹಾರ ಸಾಮಗ್ರಿಯಗಳನ್ನು ಮಾತ್ರ ಜಾಂಬೋರಿಯವರು ಕೊಡುತ್ತಾರೆ. ನಿಮ್ಮ ಅಡಿಗೆಯನ್ನು ನೀವೇ ಮಾಡಿಕೊಳ್ಳಬೇಕು! ಇದರಿಂದ ಒಂದೊಂದು ದೇಶದವರೂ ಮತ್ತೊಬ್ಬರ ಅಡಿಗೆವಿಧಾನಗಳನ್ನು ತಿಳಿಯಬಹುದು!

ಜಾಂಬೋರಿಯು ಒಂದು ಪ್ರದರ್ಶನವಲ್ಲ. ಅದು ಬಾಲಕರ ಗುಂಪು. ಅಲ್ಲಲ್ಲಿ ಬಾಲಕರು ತಮ್ಮತಮ್ಮಲ್ಲಿ ತಮಗೆ ಅಭಿರುಚಿ ಇರುವ ವಿಚಾರಗಳ ಚರ್ಚೆಗೂ ಪ್ರದರ್ಶನಕ್ಕೂ ಸಮಯವನ್ನು ಕಲ್ಪಿಸಲಾಗಿದೆ. ಕ್ಯಾಂಪು ಮುಗಿಯಿತೆಂದರೆ ಸುತ್ತಮುತ್ತಲಿರುವ ನೋಟಗಳನ್ನು ನೋಡಲು ಅನುಕೂಲಗಳನ್ನು ಕಲ್ಪಿಸಿರುತ್ತಾರೆ. ಕ್ಯಾಂಪಿನಲ್ಲಿಯೂ, ನೋಟವನ್ನು ನೋಡಲು ಕರದುಕೊಂಡುಹೋದಾಗಲೂ, ಪ್ರತಿ ಒಬ್ಬರಿಗೂ ದಿನಕ್ಕೆ ರೂ. ೨-೮-೦ ಖರ್ಚಿರುತ್ತದೆ. ಬಾಲಕನ ಸ್ವಂತ ಖರ್ಚನ್ನು ಬಿಟ್ಟು ಇತರ ಖರ್ಚು ಇನ್ಯಾವುದೂ ಇರುವುದಿಲ್ಲ. ಕ್ಯಾಂಪು ಮಾಡುವುದಕ್ಕೂ, ಮತ್ತು ನೋಟವನ್ನು ನೋಡುವುದಕ್ಕೂ, ಒಟ್ಟು ಹದಿನೈದು ದಿನಗಳಾಗುತ್ತದೆ.

ಗೃಹಶಿಕ್ಷಣ.

"ಮಕ್ಕಳಸ್ಕೂಲು ಮನೇಲಲ್ವೇ ?—ಗುಂಡೂ" ಕಾಲಕ್ಕನುಸರಿಸಿ ಕೆಲಸಮಾಡುವುದು.

ಹೋದ ಸಂಚಿಕೆಯಲ್ಲಿ ಎಳೆಯರಾಗಿದ್ದಾಗ ಕಲಿತಿರುವುದು ಕಡೆಯವರೆಗೂ ಬರುವುದೆಂದು ಹೇಳಿರುವೆನ್ರ. ಬಾಲಕರಾಗಿರುವಾಗ ಮಕ್ಕಳ ಮನಸ್ಸನ್ನು ಸರಿಯಾದ ಮಾರ್ಗಗಳಲ್ಲಿ ಉಪಯೋಸಲು ಕಲಿಸಿ ಸ್ವಭಾವಸಿದ್ಧವಾದ ಕೆಲವು ಆಕಾಂಕ್ಷೆಗಳನ್ನು ಒಲಿಯುವಂತೆ ಮಾಡಿದ್ದೇಯಾದರೆ ಬಾಲಕರು ಯೋಗ್ಯರಾಗಲು ಸಂದೇಹವಿಲ್ಲ. ಬಾಲ್ಯವು ಬೆಳೆಯುವಕಾಲ. ಈ ಬೆಳವಣಿಗೆಯು ಶಿಶುವಾಗಿರುವಾಗಲೇ ಪ್ರಾರಂಭವಾಗಿರುವುದರಿಂದ. ಈ ಬೆಳವಣಿಗೆಗೆ ಅನುಕೂಲವಾದ ಅಭ್ಯಾಸಮಾರ್ಗದಲ್ಲಿ ಶಿಶುಗಳನ್ನು ತಿದ್ದಬೇಕು. ಅಂದರೆ ಶಿಶುವಿಗೆ—(ಸ್ಕೂಲು) ಶಾಲೆಗೆ ಸೇರಿಸುವುದಕ್ಕೆ ಮುಂಚಯೇ ಒಂದು ವಿಧವಾದ ವಿದ್ಯಾಸವು ಪ್ರಾರಂಭವಾಗಬೇಕು. ಇದೇ ಗೃಹಶಿಕ್ಷಣ.

ಕಾಲಕ್ಕನುಸರಿಸಿ ಅಲಸಮಾಡುವುದು ಒಂದು ಅತಿ ಮುಖ್ಯವಾದ ಗುಣವು. ಜೀವಮಾಸದಲ್ಲಿ ಯಾವಾಗಲೂ, ಎಲ್ಲ ಕೆಲಸಗಳಲ್ಲಿಯೂ ಸಹಾಯಕವಾಗಿ ಬರುವಗುಣವು. ಚರಿತ್ರೆಗಳನ್ನು ನೋಡಿದರೆ ಗೊತ್ತಾಗುತ್ತದೆ—ಕಾಲಕ್ಕನುಸರಿಸಿ ಕೆಲಸಮಾಡುವ ಅಭ್ಯಾಸವು ಇದ್ದುದರಿಂದ ಅನೇಕ ಜನಾಂಗಗಳ ಭವಿಷ್ಯತ್ತು ಸ್ಥಿರಪಟ್ಟುಹೋಯಿತು. ನೆಪೋಲಿಯನ್ ಮಹಾಪ್ರಭುವು ಹೇಳುತ್ತಿದ್ದಸಂತೆ—"ನಾನು ಕೆಲಸಗಳನ್ನು ಕಾಲಕ್ಕನುಸಾರವಾಗಿ ಮಾಡುತ್ತಿದ್ದುದರಿಂದಲೇ ಈ ಯುದ್ಧಗಳನ್ನು ಗೆದ್ದನು."

ಈ ಮಹಾಗುಣವು ಬಾಲ್ಯದಿಂದ ಅತಿ ಚಿಕ್ಕಕೆಲಸಗಳಲ್ಲಿ ಪ್ರಾರಂಭಸುತ್ತದೆ. ಮಗುವು ಎದ್ದವಡನೆಯೇ ಮುಖವನ್ನು ತೊಳೆದುಕೊಳ್ಳುವುದೂ, ಮಲವಿಸರ್ಜನಾದಿಶುಚಿಕರ್ಮಗಳನ್ನು ಮಾಡುವುದೂ, ಆಮೇಲೆ ಅಲ್ಪಾಹಾರದ ಅಭ್ಯಾಸ ಕೆಲವರಲ್ಲುಂಟು. ಹಾಗೆಯೇ ಉಳಿದ ಎಲ್ಲಾ ಕರ್ಮಗಳಿಗೂ ಅನ್ವಯಿಸುತ್ತದೆ. ವಿದ್ಯಾಭ್ಯಾಸ, ಸ್ನಾನ, ಪೂಜ, ಆಹಾರ, ನಿದ್ರೆ ಇವ್ರಗಳೆಲ್ಲವೂ ಕಾಲಕ್ಕನುಸರಿಸಿ ಮಾಡತಕ್ಕವುಗಳಾಗಿವೆ. ಮಗುವಿಗೆ ಈ ಅಭ್ಯಾಸವನ್ನು ಪ್ರಾರಂಭದಿಂದಲೂ ಕಲಿಯುಲು ಅವಕಾಶವನ್ನು ಕಲ್ಪಿಸಬೇಕು.

* * *

ನಮ್ಮ ಶಂಕರರಾಯರನೆನೆಗೆ ಮೊನ್ನೆ ಹೋಗಿದ್ದೆ. ಅವರತಮ್ಮ ಶೀನೂಗೂ ನನಗೂ ತುಂಬಾ ಕೇವಲ. ಸುಮಾರು ೯ ಘಂಟೆಸಮಯ ಆ ಹೊತ್ತು ನಮಗೆ ೧೦ ಘಂಟೆಗೆ ಪರೀಕ್ಷೆ. ಶೀನೂ ಸ್ನಾನಸಹ ಮಾಡಿರಲಿಲ್ಲ. ಅವಸರದಲ್ಲಿ ಮುಖ ತೊಳೆದುಕೊಂಡಿದ್ದನು ಹಲ್ಲು ಸಹ ಉಜ್ಜಿರಲಿಲ್ಲವೆಂತ ತೋರುತ್ತೆ. ರಾತ್ರಿ ಓದುತ್ತಾ ಕುಳಿತವನು ೧೨ ರ ಮೇಲೆ ೨ ಘಂಟೆಯಾದರೂ ಮಲಗಿಕೊಳ್ಳಲಲ್ಲವಂತೆ. ಅದುದರಿಂದಲೇ ಬೆಳಗ್ಯೆ ಎಂಟೂವರೆಘಂಟೆಗೆ ಎದ್ದಿದ್ದ 'ಸ್ನಾನವನ್ನು ಏಕೆಮಾಡಲಿಲ್ಲವೋ' ಎಂದರೆ, 'ಪರೀಕ್ಷೆ ಒಂದು ಘಂಟೆಗೆ ಪೂರೈಸುತ್ತದೆಯಲ್ಲಾ. ಆ ಮೇಲೆ ಮಧ್ಯಾನ್ಹ ಮನೆಗೆ ಬಂದ ಮೇಲೆ ಮಾಡುತ್ತೇನೆ' ಎಂದು ಹೇಳಿ, ಹಾಗೆಯೇ ಊಟಮಾಡಿ ಶಾಲೆಗೆಬಂದ ಆಮೇಲೆ ಮನೆಗೆ ಬಂದ ಮಧ್ಯಾನ್ಹ ಸುಮಾರು ಮೂರು ಘಂಟೆ ಇರಬಹುದು. ಬಿಸಿಲು ಅಂತ ತಣ್ಣೀರಿನಲ್ಲಿ ಸ್ನಾನಮಾಡಿದ. ಸ್ನಾನಮಾಡಿದವನು ಚಳಿಬಂದು ಮಲಗಿಕೊಂಡ. ೧೫ ದಿನಗಳತನಕ ಪಾಯಿಲೆ ವಾಸಿಯಾಗಲೇ ಇಲ್ಲ.

ಇದೆಲ್ಲಾ ಆದ ಮೇಲೆ ಒಂದು ದಿನ ಪರೀಕ್ಷೆಯ ಫಲಿತಾಂಶ ಗೊತ್ತಾಯಿತು. ಶೀನೂ ಪಾಸಾಗಿರಲಿಲ್ಲ. ಪಾಪ! ಪಾಯಿಲೆಯಲ್ಲಿರುವವನು ಹೋಗಿ ಸ್ವಲ್ಪ ಸಮಾಧಾನಮಾಡೋಣವೆಂದು ಅವರ ಮನೆಗೆ ಹೋದೆ. ಬೆಳಗ್ಯೆ ಸುಮಾರು ೯ ಘಂಟೆ ಸಮಯ ಶೀನೂವಿನ ತಂದೆ ರಾತ್ರೆ ಸಿನೀಮಾಕ್ಕೆ ಹೋಗಿದ್ದರಂತೆ ಎದ್ದಿರಲಿಲ್ಲ. ಅವರು ಎದ್ದಿಲ್ಲವೆಂದು ಪೆಟ್ಟಿಗೆಯಲ್ಲಿದ್ದ ಔಷಧಿಯನ್ನು ಶೀನೂಗೆ ಕೊಟ್ಟಿರಲಿಲ್ಲ. ಡಾಕ್ಟರು ಹೇಳಿದ್ದಂತೆ ಔಷಧಿಯನ್ನು ಬೆಳಗ್ಯೆ ೭ ಘಂಟೆಗೆ ಸರಿಯಾಗಿ ಕೊಡಬೇಕೆಂದು. "ಏನೋ, ಶೀನೂ, ಔಷಧಿ ಸರಿಯಾಗಿ ತೆಗೆದುಕೊಳ್ಳಬೇಕೋ ಬೇಡವೊ" ಎಂದೆ.

ಶೀನು—ಅದಿರಲಿ, ಪರೀಕ್ಷೆಏನಾಯ್ತು ? ನಿನಗೇನೋ ಖಂಡಿತಾ ಆಗಿದೆ.

ನಾನು—ನನಗೆ ಆಯ್ತು. ನೀನು ಪರೀಕ್ಷೆ ಹಿಂದಿನರಾತ್ರಿ ನಿದ್ದೆ ಗೆಡಬಾರದಾಗಿತ್ತು.

ಶೀನು—ಹೌದುಕಣೋ. ಈಗ ಬುದ್ಧಿ ಬಂದಿದೆಯಪ್ಪ. ಏನು ಮಾಡಲಿ ಹೇಳು. ಅಗೋ ಅಲ್ಲಿ ನೋಡು. ಆ ಮಗುವಿದೆಯಲ್ಲ—ಆಲ್ಲಿ ಏನೋ ತಿನ್ನುತ್ತಾ ಇದೆಯಲ್ಲ ಅದು—ಅದಕ್ಕೆ ಇನ್ನೂ ಮುಖ ತೊಳೆಸಿಲ್ಲ. ಕಾಲಕಾಲಕ್ಕೆ ಕೆಲಸಮಾಡುವುದು ನಮ್ಮ ಹಣೆಯಲ್ಲಿ ಬರೆದಿಲ್ಲ ಕಂಡ್ಯ. ನಾನು ಮಗುವಾಗಿದ್ದಾಗ ಆ ಅಭ್ಯಾಸವಿದ್ದಿದ್ದರೆ ನಾನೂ ಸರಿಯಾಗಿ ವ್ಯವಸಾಯಮಾಡಿ ಓದುತ್ತಾ ಇದ್ದೆ. ನನಗೆ ಒಂದೊಂದು ಸಲ ನೋಡಿದರೆ ತಲೆಬೇಜಾರಾಗುತ್ತೆ. ನಾನು ಈ ಅವಸ್ಥೆಗೆ ಬಂದಿರುವುದೂ ಅದರಿಂದಲೇ ಯಾವ ಅಭ್ಯಾಸವಾದರೂ ನಾವು ಮಕ್ಕಳಾದಾಗ ಕಲಿತಿದ್ದರೆ ನಮಗೆ ಅದು ಸೇರವಾಗುತ್ತದೆ ತಾನೇ. ನಮ್ಮ ತಂದೆ ನೋಡು ಇನ್ನೂ ಎದ್ದಿಲ್ಲ.

ನಾನು—ಅವರ ವಿಚಾರ ನಮ—

ಶೀನು—ಛೆ, ಛೆ. ಅವರನ್ನು ನಿಂದಿಸುತ್ತೇನೆಂತಲ್ಲ. ಇರುವ ಸ್ಥಿತಿ ನೋಡು, ಮನೆಯು ಹೀಗಿರುವಾಗ ಮಕ್ಕಳಿಗೇನು ಅಭ್ಯಾಸಗಳಿಗೆ ಅವಕಾಶವಿರುತ್ತದೆ. ಅಲ್ಲವೇ ಕಂಠಿ—, ಮನೆಯೆಂಬುವುದು ಮಕ್ಕಳಿಗೆ ಸ್ಕೂಲುಆಗಿರಬೇಕು. ಅಂದರೆ ಮಕ್ಕಳನ್ನು ಹೋಡಿಬೇಕು ಅಂತಲ್ಲ. ಮಕ್ಕಳು ಒಳ್ಳೆಯ ಅಭ್ಯಾಸಗಳನ್ನು ಕಲಿಯಲು ಅವಕಾಶಗಳಿರಬೇಕು.

ಸ್ಕೌಟು ಸುದ್ದಿಗಳು.

ತುಮಕೂರಿನ ರ್ಯಾಲಿ.

ಸ್ಲೇಗಿನ ಹಾವಳಿಯು ಈಗ ಕಮ್ಮಿ ಯಾಗಿದೆ. ಆದಕ್ಕಾಗಿಯೇ ನಿಲ್ಲಿಸಲ್ಪಟ್ಟಿದ್ದ ರ್ಯಾಲಿಯು ಏಪ್ರಿಲ್ ೧೫ರಿಂದ ೧೯ ರವರೆಗೆ ನಡೆಯುವುದಾಗಿ ರ್ಯಾಲಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಶಿಬಿರಾಗ್ನಿ (Camp Fire) ಯ ಸಮಯದಲ್ಲಿ ವಿನೋದಗಳನ್ನೂ ಸ್ಕೌಟು ಪ್ರದರ್ಶನಗಳನ್ನೂ ತೋರಿಸಲು ಇಷ್ಟವುಳ್ಳವರು ವಿನೋದಗಳ ಮತ್ತು ಪ್ರದರ್ಶನದ ಪಟ್ಟಿಯನ್ನು ಮೈಸೂರು ವೆಲಿಂಗ್ಟ್ಕ್ ಲಾಡ್ಜ್‌ನಲ್ಲಿರುವ ಸ್ಕೌಟ್‌ಆಫೀಸಿಗೆ ತಿಳಿಸಬೇಕು.

ಮೈಸೂರು ಸ್ಕೌಟುಗಳ ಸೈಕಲ್ ಪ್ರವಾಸ.

ನಾಲ್ಕುಜನ ರೋವರುಗಳು ಮೈಸೂರು ದೇಶವನ್ನೆಲ್ಲಾ ಸೈಕಲ್ ಗಳಮೇಲೆಯೇ ಸುತ್ತಿಕ್ಕೊಂಡು ಈಗತಾನೇ ಮೈಸೂರಿಗೆಬಂದು ತಮ್ಮ ಪ್ರವಾಸವನ್ನು ಮುಗಿಸಿರುತ್ತಾರೆ. ಇತರ ಸ್ಕೌಟುಗಳು ಇವರು ಹೋದ ಹೋದ ಕಡೆಯಲ್ಲೆಲ್ಲಾ ಇವರನ್ನು ಆದರಿಸಿದರು. ಅಲ್ಲದೆ ಇವರೂ ಸಹ ಸ್ಕೌಟುಪದ್ಧತಿಯನ್ನು ಕುರಿತು ಉಪನ್ಯಾಸಗಳನ್ನೂ ಸ್ಕೌಟು ಮುಖಂಡರುಗಳು ಕಳುಹಿಸಿದ ಸಂದೇಶಗಳನ್ನೂ ಹೇಳಿ ಸಂಗೀತದಿಂದಲೂ ವಿನೋದಗಳಿಂದಲೂ ಅವರನ್ನೂ ಸಂತೋಷ ಪಡಿಸಿದರು. ನಮ್ಮ ಯುವಕರಲ್ಲಿ ಉತ್ಸಾಹವೂ; ಸಹನೆಯೂ ತಲೆತೋರುತ್ತಿದೆ. ದೇಶವು ಮುಂದು ವರಿಯುತ್ತಿರುವುದಕ್ಕೆ ಇದೊಂದು ಶುಭಸೂಚನೆಯೇ ಸರಿ!

ಸ್ವೀಕಾರ ಮತ್ತು ವಿಮರ್ಶೆ.

ಪತ್ರಿಕೆಗಳ ಸ್ವೀಕಾರ

ಧಾರವಾಡ—ಕನ್ನಡ ಸಹಕಾರೀ ಪತ್ರ

ಬ್ರೋಚಾ—Veer (ಗುಜರಾಥಿ ಸ್ಕೌಟುಪತ್ರಿಕೆ)

ಪುಸ್ತಕಗಳ ವಿಮರ್ಶೆ.

೧. **ಮಗುವಿನ ಕೊಗು** ಲೇ॥ ಶ್ರೀ॥ ಹೊಯ್ಸಳ. ಪ್ರಕಾಶಕರು ಕೃಷ್ಣಕಂಪನಿ. ಒಳೇವೇಟೆ ಬೆಂಗಳೂರು. ಕ್ರಯ ೦-೮-೦.

ಗರಿಭಾರದ (Feather Weight) ಕಾಗದದ ಮೇಲೆ ಅಚ್ಚಾಗಿದೆ. ಅಕ್ಷರಗಳು ಮಕ್ಕಳಿಗೆ ತಕ್ಕಂತೆ ದೊಡ್ಡದಾಗಿವೆ.

ಪಾಶ್ಚಾತ್ಯರ ಬಾಲಕರು ಪುಣ್ಯಪುರುಷರು. ಅವರಿಗಾಗಿ ಅವರ ಎಷ್ಟು ಅನುಕೂಲಗಳನ್ನು ಕಲ್ಪಿಸಿರುತ್ತಾರೆ? ಹಿರಿಯರು ಅವರಿಗಾಗಿ ಎಷ್ಟು ಪುಸ್ತಕಗಳಿವೆ? ಎಷ್ಟು ಆಟದ ಮನೆಗಳಿವೆ? ಬಾಲಕರಿಗೆ ಸಂತೋಷವನ್ನುಂಟುಮಾಡಲು ಪ್ರತಿಯೊಂದು ಕ್ಷಣದಲ್ಲಿಯೂ ಪ್ರಯತ್ನ ಪಡುತ್ತಿದ್ದಾರೆ? ಆದರೆ ನಮ್ಮಲ್ಲಿ ಯಾವ ರೀತಿಯಲ್ಲಿಯೂ ಬಾಲಕರಿಗೆ ಆಟಪಾಟಗಳಲ್ಲಿ ಸುಖವಿಲ್ಲ. ನಮ್ಮ ಬಾಲಕರು ದುಃಖಿಗಳು. ಅಂಥಹವರಿಗಾಗಿ ಈಗ ಪುಸ್ತಕಗಳು ಹೊರಟಿವೆ. ಇಂಗ್ಲೀಷಿನಲ್ಲಿರುವ Nursery Rhymes ನಂತೆಯೇ ಕನ್ನಡದಲ್ಲಿ **ಮಗುವಿನ ಕೊಗನ್ನು** ಬರೆದ ಶ್ರೀ ಹೊಯ್ಸಳರಿಗೂ, ಅದನ್ನು ಪ್ರಕಾಶಪಡಿಸಿದ ಕೃಷ್ಣಕಂಪೆನಿಯವರಿಗೂ ಕರ್ನಾಟಕಸ್ಥರು ಚಿರಋಣಿಗಳಾಗಿರಬೇಕು.

ಆದರೆ ಮಕ್ಕಳಿಗೆ ಚಿತ್ರಗಳು ಅನೇಕವಾಗಿರಬೇಕು. ಮುಂದಿನ ಆವೃತ್ತಿಯಲ್ಲಿ ಚಿತ್ರಗಳನ್ನು ಸೇರಿಸಲು ಪ್ರಕಾಶಕರು ಮರೆಯಬಾರದು. ಬಾಲಕರಿಗಾಗಿ ಹಣವನ್ನು ಖರ್ಚುಮಾಡಬೇಕೆಂದರೆ ನಮ್ಮವರಿಗೆ ಸ್ವಲ್ಪ "ಶಲೆನೋವು" ನಮ್ಮ ಸಮಾಜದವರಿಗೆ ಇದರ ಬೆಲೆಯು ತೀರ ಹೆಚ್ಚೆನ್ನಬೇಕು. ವ್ಯಾಪಾರದೃಷ್ಟಿಯಿಂದ ಇದು ಸರಿಯಲ್ಲವೆಂದು ನಾವು ತಿಳಿದಿರುತ್ತೇವೆ. ಆದರೆ ಮಕ್ಕಳ ಏಳಿಗೆಗಾಗಿ ಕೆಲಸಮಾಡುವವರು ಒಟ್ಟುಸೇರಿ ಖರ್ಚಿಗೆ ತಕ್ಕ ಬೆಲೆಯನ್ನೇ ಹಾಕಿ ಸಾಧ್ಯವಾದಷ್ಟು ಮಕ್ಕಳಪುಸ್ತಕಗಳನ್ನು ಹೊರಡಿಸಬೇಕು. ಹಾಗೆ ಮಾಡಿದಲ್ಲಿ ಪುಸ್ತಕಕ್ಕೆ ತೀರ ಕಡಿಮೆ ಬೆಲೆಯನ್ನು ಇಡಬಹುದು. ಆಗಲಾದರೂ ಮಕ್ಕಳ ಕೈಗೆ ಕೆಲವು ಪುಸ್ತಕಗಳು ಸೇರುತ್ತವೆ.

ಕೆಳಗೆ ಕಂಡ ಪುಸ್ತಕಗಳನ್ನು ನಮ್ಮ ವಾಚನಾಲಯಕ್ಕೆ ಉಚಿತವಾಗಿ ಕೊಟ್ಟ ಬೆಂಗಳೂರಿನ ಕೃಷ್ಣಕಂಪನಿಯವರಿಗೆ ನಮ್ಮ ವಿನಿಯಪೂರ್ವಕವಾದ ವಂದನೆಗಳು—

೨. ಕಳ್ಳರಕೂಟ ಬೆಲೆ 6 ಆಣೆ.
೩. ಮಾತು ಮನೆಯುಕೊಂಡಿತು ಬೆಲೆ 2 ಆಣೆ.
೪. ಸ್ವಾಮಿ ಶ್ರದ್ಧಾನಂದರ ಜೀವನಚರಿತ್ರೆ ಬೆಲೆ 1 ಆಣೆ.
೫. ಸತ್ಯವನ್ನು ಭೋಧಿಸುವವರು ಯಾರು?
೬. ಮೋಹನದಾಸ ಕರಮಚಂದ ಗಾಂಧಿಯವರು
೭. (ನಾಟಕ) ಉಪನ್ಯಾಸ
೮. ಸುಗ್ಗಿಯಕುಣಿತ ಬೆಲೆ 2 ಆಣೆ.
೯. **ಲೀಲೆ**. ಲೇ॥ ಪುಂಡೂರು ಲಕ್ಷ್ಮೀನಾರಾಯಣ ಪುಣಿಂತಾಯ ಬೆಲೆ 1 ಆಣೆ.

ಪುರಂದರದಾಸ, ಕನಕದಾಸ, ಮುಂತಾದ ಪೂರ್ವೀಕರಾದ ಭಕ್ತ ಶಿರೋಮಣಿಗಳು ಭಗವಂತನ **ಲೀಲಾ** ಜಾಲಗಳನ್ನು ವರ್ಣಿಸಿ ನಾಮರರೂ ಮುಕ್ತರಾಗಲು ಮಾರ್ಗವನ್ನು ತೋರಿಸಿಕೊಟ್ಟಿರುತ್ತಾರೆ. ಅವರು ಹಾಕಿದ ತಳಹದಿಯಮೇಲೆ ಸುಂದರವಾದ ಭವನವನ್ನು ಕಟ್ಟಲು ಪ್ರಯತ್ನ ಪಡುತ್ತಿರುವವರಲ್ಲಿ ಶ್ರೀ ಪುಣ್ಣಿಂಜತ್ತಾಯರು. ಶ್ರೀ ಪುಣ್ಣಿಂಜತ್ತಾಯರು ಕವಿಗಳ ಗುಂಪಿನಲ್ಲಿ ಸೇರಿ ಕರ್ನಾಟಕದ ಸೇವೆಯನ್ನು ಮಾಡುತ್ತಾ ಇದ್ದಾರೆ.

ಮಾಯಾ, ಭವ, ದಾನ, ಲೀಲೆಗಳನ್ನು ಸುಲಲಿತವಾದ ಶೈಲಿಯಲ್ಲಿಯೂ ಭಾವಗರ್ಭಿತವಾದ ಕವಿತಾ ಶಕ್ತಿಯಿಂದಲೂ, ವರ್ಣಿಸುವ ಈ ಚಿಕ್ಕ ಪುಸ್ತಕಕ್ಕೆ ನಮ್ಮ ಆತ್ಯಾದರವುಂಟು.

ಮೈಸೂರು ಮಕ್ಕಳು

ಲಭಬೆಲೆ! ಅತ್ಯುತ್ತಮತರಹ ಫೌಂಟ್‌ಪೆಗಳು!! ಸಿ ಪರೀಕ್ಷಿಸಿರಿ!!

ವರಲ್ಡ್‌ವಂಡರ್ ಫೌಂಟ್‌ಪೆನ್ 1 ಕ್ಕೆ	3-0-0	5. ಬ್ಲಾಕ್‌ಬರ್ಡ್ ಫೌಂಟ್‌ಪೆನ್ 1ಕ್ಕೆ 3-8-0 ಮತ್ತು	3-12-0
ಡಿಟೋಸಮೂನೆ ಸ್ಕ್ರೂಕ್ಯಾಪಿರುವ ಪೆನ್	3-8-0	6. "ವಾಟರ್‌ಮನ್" ಫೌಂಟ್‌ಪೆನ್ 1 ಕ್ಕೆ	8- 8-0
ಹಾರ್ಡ್‌ವೇರ್ ಫೌಂಟ್‌ಪೆನ್ 1 ಕ್ಕೆ	3- 0-0	7. "ವಾಟರ್‌ಮನ್" ಸೆಲ್ಫ್‌ಫಿಲಿಂಗ್ ಫೌಂಟ್‌ಪೆನ್ 1 ಕ್ಕೆ	12- 0-0
"ಸ್ಪಾಕ್" ಫೌಂಟ್‌ಪೆನ್ 1 ಕ್ಕೆ	7- 0-0	8. "ವಾಟರ್‌ಮನ್" ಸೇಫ್ಟಿ ಫೌಂಟ್‌ಪೆನ್ 1 ಕ್ಕೆ	11- 0-0

ಇನ್ನೂ ಅನೇಕತರಹ ಕಡಮೆಕ್ಯ ಸ್ಮಲ್ಲಿ ದೊರೆಯುತ್ತವೆ. 6 ಪೈ ಸ್ಟಾಂಪ್ ರವಾನಿಸಿ ನಮ್ಮ ಕ್ಯಾಟಲಾಗ್ ತರಿಸಿನೋಡಿರಿ.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಹಾರ್ಮೋನಿಯಂ ಮತ್ತು ಕಾಶ್ಮೀರ್‌ಶಾಲುಗಳ ವ್ಯಾಪಾರಿಗಳು, ಮೈಸೂರು

ಕರ್ನಾಟಕ ಸ್ಕೌಟ್ ಮಾಸಪತ್ರಿಕೆ

ವಾರ್ಷಿಕ ಚಂದಾ ೧—೮—೦.

ಮ್ಯಾನೇಜರ್
ಕರ್ನಾಟಕ ಸ್ಕೌಟ್, ಧಾರವಾಡ.

ಉದಯಭಾರತ (ಮಾಸಪತ್ರಿಕೆ)

ವಾರ್ಷಿಚಂದಾ ವಿಶೇಷಾಂಕ ಸಹಿತ ೨—೦—೦
,, ವಿಶೇಷಾಂಕ ರಹಿತ ೧—೮—೦

ಉದಯಭಾರತ ಕಾರ್ಯಾಲಯ,
ಕೊಡಿಯಾಲ್ ಬೈಲ್, ಮಂಗಳೂರು.

ಮೈಸೂರು ಮಕ್ಕಳು ಪತ್ರವ್ಯವಹಾರ ಸಂಘ.

ನಿಮ್ಮ ಸಂಘಕ್ಕೆ ನನ್ನನ್ನು ಸೇರಿಸಿಕ್ಕೊಂಡು ..
ದೇಶದಲ್ಲಿ ಯಾವನಾದರೂ ಒಬ್ಬ ಸ್ನೇಹಿತನನ್ನು ಮಾಡಿಕೊಡಿಬೇಕು. ಅದಕ್ಕೆ ತಗಲತಕ್ಕ ಖರ್ಚಿಗಾಗಿ ೪ ಆಣೆ ಸ್ಟಾಂಪುಗಳನ್ನು ಕಳುಹಿಸಿರುತ್ತೇನೆ

ಹೆಸರು . ...

ವಯಸ್ಸು

ವಿಳಾಸ..... .. ..

.. . .

ನಸಗೆ. . . ..ದರಲ್ಲಿ ಇಪ್ಪವಿದೆ ಗುರ್ತಿಲ್ಲದ ಆ ಸ್ನೇಹಿತನಿಗೆ ನನ್ನ ಮೊದಲಿನ ಕಾಗದವನ್ನು ಇಂಗ್ಲೀಷಿನಲ್ಲಿ ಬರೆದು ಇದರೊಡನೆ ಕಳುಹಿಸಿರುತ್ತೇನೆ. ನನಗೆ ಎಂತಹ ಸ್ನೇಹಿತನು ಬೇಕಾಗಿದೆ. ಎಂಬುದನ್ನು ನಾನು ಬೇರೆಯ ಕಾಗದದಲ್ಲಿ ಬರೆದಿರುತ್ತೇನೆ. ನನ್ನ ಪತ್ರವ್ಯವಹಾರದಲ್ಲಿ ನನ್ನ ದೇಶದ ಮತ್ತು ನನ್ನ ಮರ್ಯಾದೆ

'ಮೈಸೂರು ಮಕ್ಕಳು' ಚಿತ್ರಮಾಲೆ
(Mysore Makkalu Pictorial)
1927-1928

ಸುಣ್ಣಪಾದ ಕಾಗದದ ಮೇಲೆ ಎರಡು ರಂಗುಗಳಲ್ಲಿ ಮೈಸೂರು ಮಕ್ಕಳ ಚಿತ್ರಗಳನ್ನು ಮುದ್ರಿಸಿ ಪುಸ್ತಕರೂಪದಲ್ಲಿ ಹೊರಡಿಸಲಾಗಿದೆ.

ಹೊಸ ವರ್ಷಕ್ಕಾಗಿ ಮಕ್ಕಳಿಗೆ ಈ ಪುಸ್ತಕವನ್ನು ಉಡುಗೆರೆಯಾಗಿ ಕೊಡಲು ಅನುಕೂಲವಾಗಿದೆ. ತಮ್ಮ ದೇಶ, ತಮ್ಮ ಜನವೆಂಬ ಸ್ವಾಭಿಮಾನವು ಮಕ್ಕಳಿಗಿರಬೇಕಾದರೆ ಇದೇ ಉಪಾಯ.

ನಮ್ಮ ಚಂದಾದಾರರಿಗೆ ಮಾತ್ರ ೦-೬-೦, ಇತರರಿಗೆ ೦-೮-೦
ವಿ.ಪಿ. ಖರ್ಚು ಪ್ರತ್ಯೇಕ. ವಿ.ಪಿ. ಅಪೇಕ್ಷಿಸುವವರು ೩ ಆಣೆ ಸ್ಟಾಂಪನ್ನು ಕಳುಹಿಸಬೇಕು.

ಮೈಸೂರುಮಕ್ಕಳು ಆಫೀಸು, ಮೈಸೂರು.

ದೇವಭೂಜ. (ಮಾಸಪತ್ರಿಕೆ)

ವಾರ್ಷಿಕಚಂದಾ ೧—೪—೦
ವಿ. ಪಿ. ಮೂಲಕ ೧—೮—೦
ವಿಳಾಸ:—"ದೇವಭೂಜ" ಆಫೀಸ,
ಪೋಸ್ಟ ರೋಣ, ಡಿ|| ಧಾರವಾಡ.

SCHOOL FOLK (A Monthly Magazine)

Subscription Rs. 1—8—0 Per year.

Manager,
SCHOOL FOLK, Tumkur

ಜೀವನಾಧಾರ ಡಿಪೋ ಇವರ ಮೂರು ರತ್ನಗಳು

೧. ಜೀವನಾಧಾರ

ಸಣ್ಣ ಬಾಟ್ಲಿ 0—12—0 ದೊಡ್ಡ ಬಾಟ್ಲಿ 1—8—0 ವಿ. ಪಿ. ಚಾರ್ಜು ಪ್ರತ್ಯೇಕ.

೭೬-೧೦-೨೭ ಬೊಮ್ಮಗಟ್ಟ,

ನಿಮ್ಮ ಜೀವನಾಧಾರವೆಂಬ ಔಷಧವನ್ನು ಅನೇಕ ವ್ಯಾಧಿಗಳಿಗೆ ಉಪಯೋಗಿಸಿದ್ದೇನೆ. ಮತ್ತು ಅದು ಗುಣಕೊಡುವ ವಿಷಯದಲ್ಲಿ ತುಂಬಾ ತೃಪ್ತಿಹೊಂದಿದ್ದೇನೆ. ನಿಜವಾಗಿ ಅದು ಉತ್ಕೃಷ್ಟ ಔಷಧವಾಗಿರುತ್ತದೆ. ಮತ್ತು ಅದು ಜಗತ್ತಿಗೆ ಒಂದು ಲಾಭವೇ ಆಗಿರುತ್ತದೆ. ಮೈಸೂರು ಪ್ರದರ್ಶನದಲ್ಲಿ ಜೀವನಾಧಾರವು ಬಹುಮಾನದ ಇನಾಮನ್ನು ಹೊಂದಿದ್ದನ್ನು ತಿಳಿಸಲು ಅತ್ಯಂತ ಸಂತೋಷಪಡುತ್ತೇನೆ. ಜೀವನಾಧಾರದ ಒಂದು ಸೀಸೆಯು ಪ್ರತಿಯೊಂದು ಮನೆಯಲ್ಲಿ ಇಡುವುದಕ್ಕೆ ನಾನು ಉಪದೇಶಮಾಡುವೆನು. ಕಠಿಣ ಪ್ರಸಂಗದಲ್ಲಿ ಒಬ್ಬ ಡಾಕ್ಟರನಂತೆ ಉಪಯೋಗಬೀಳುತ್ತದೆ.

ಬಿ. ಎಸ್. ರಾಮಚಂದ್ರರಾವ್,
ಜೇರಮನ್, ಗ್ರಾಮಪಂಚಾಯಿತ.

ನನ್ನ ಕುದುರೆಯು ಮೈಗೀ ಎಂಬ ತ್ವಚರೋಗದಿಂದ ಪೀಡಿತವಾಗಿತ್ತು. ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಕಳೆದ ೧೫ ದಿವಸಗಳಿಂದ ಉಪಯೋಗಿಸುತ್ತಿರುವೆನು. ಮತ್ತು ಬಹಳೇ ಗುಣಕೊಟ್ಟಿರುವುದು.

೨-೧೧-೨೭,
ಮೈಸೂರು.

ಸಿದ್ಧರಾಜ ಅರಸು.
ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್.

೨. ಗಜಕರ್ಣದ ತೈಲ.

ಬಾಟ್ಲಿ ೧ ಕ್ಕೆ 0 12 0 ಪ್ಯಾಕಿಂಗ್ ಪೋಸ್ಟೇಜ್ ಪ್ರತ್ಯೇ.

ಧಾರವಾಡ, ೧೦-೨-೨೮.

ನಾನು ನಿಮ್ಮ ಗಜಕರ್ಣದ ತೈಲವನ್ನು ತಲೆಯಲ್ಲಿ ಕೂದಲುಗಳು ಉದುರಿರುವದಕ್ಕೆ (Pach of baldness) ಉಪಯೋಗಿಸುತ್ತಿದ್ದೇನೆ. ಅದು ಈಗಾಗಲೇ ಬಹಳ ಗುಣಕೊಟ್ಟಿರುವುದು. ಕಾರಣ ಈ ಸತ್ರಮುಟ್ಟಿದ ಕೂಡ್ಲೆ 2 ಬಾಟ್ಲಿ ಗಜಕರ್ಣದ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

ರಾಮರಾವ್ ಎನ್. ದೇಸಾಯಿ.

ಅನೇಕರು ಅನುಭವಿಸುತ್ತಿರುವ ನವೆ, ಗಜಕರ್ಣ, ಹುಳಕಡ್ಡಿ, ಕಜ್ಜಿ, ಉಗುರುಸುತ್ತು; ಹಳೇ ಇಸಬು, ಕತ್ತಿ ಘಾಯು, ಮತ್ತು ಎಲ್ಲಾ ತರಹದ ಚರ್ಮವ್ಯಾಧಿಗಳಿಗೆ ಗಜಕರ್ಣದ ತೈಲವನ್ನು ಹಚ್ಚಿದ 2-3 ದಿನಗಳಲ್ಲಿ ಗುಣಮಾಡಿಕೊಳ್ಳಬಹುದು, ಇದರಲ್ಲಿ ಮುಖ್ಯವಾದ ಗುಣವೇನೆಂದರೆ, ಗಾಯ ಅಥವಾ ಹುಣ್ಣಿನಿಂದ ಬರುವ ಕಲೆಗಳನ್ನು ತೆಗೆದುಹಾಕಿ ಪುನಃ ಮೊದಲಿನ ಚರ್ಮದ ಬಣ್ಣಕ್ಕೆ ತರುವುದು.

---

೩. ಶತಮೂಲಿಕಾ ಸಮ್ಮೇಳನ ಭೃಂಗಾಮಲಕ ತೈಲ.

ಬಾಟ್ಲಿ 1ಕ್ಕೆ 0 8 0. ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

ಈ ತೈಲವು ಆಯುರ್ವೇದ ಶಾಸ್ತ್ರೋಕ್ತವಾದ ಶತಮೂಲಿಕಾಸಂಗ್ರಹವನ್ನು ಪಾಶ್ಚಾತ್ಯ ರಸಾಯನಶಾಸ್ತ್ರ ರೀತ್ಯಾ (Latest Scientific Process) ಶುದ್ಧಿಯಾದ ತೈಲದಲ್ಲಿ ಪಕ್ವಮಾಡಿ ವನಸ್ಪತಿ ದ್ರವ್ಯಗಳ ಪ್ರತಿಯೊಂದು ಗುಣಾಂಶವೆನ್ನೂ ಭಾವನೆಮಾಡಿ ತಯಾರಿಸಿದೆ. ಇದನ್ನು ಪ್ರತಿದಿನವೂ ತಲೆಗೆ ಲೇಪಿಸುವುದರಿಂದ ಜ್ಞಾಪಕಶಕ್ತಿಯು ಅಭಿವೃದ್ಧಿಯಾಗಿ ಬುದ್ಧಿಭ್ರಮೆಯು ನಾಶವಾಗುತ್ತದೆ. ನೇತ್ರವ್ಯಾಧಿಗಳು ಗುಣವಾಗಿ ಕಣ್ಣುಗಳಿಗೂ, ಮುಖಕ್ಕೂ ಕಾಂತಿಯು ಬರುವುದು.

ಮೈಸೂರು ಬ್ರಾಂಚ್—ಇಲವಾಲ ರೋಡು.

ಜೀವನಾಧಾರ ಡಿಪೋ, ಹುಬ್ಳಿ.

END

END

END

END

END